AR
215

306

MADRAS GOVERNMENT ORIENTAL MANUSCRIPTS
SERIES No. 31.

ಶ್ರೀ ವಿರುಪರಾಜ ವಿರಚಿತಂ

ತ್ರಿಭುವನ ತಿಲಕಂ

TRIBHUVANA TILAKAM

BY

VIRUPA RĀJA

EDITED BY

T. CHANDRASEKHARAN, M.A., L.T.

Curator, Government Oriental Manuscripts Library, Madras

and the staff of the Library.

(Under the orders of the Government of Madras)

PRINTED BY THE SUPERINTENDENT
GOVERNMENT PRESS
MADRAS
1954

[PRICE, *Rs.* 2-10-0.

MADRAS GOVERNMENT ORIENTAL MANUSCRIPTS
SERIES No. 31.

ಶ್ರೀ ವಿರುಪರಾಜ ವಿರಚಿತಂ

ತ್ರಿಭುವನ ತಿಲಕಂ

TRIBHUVANA TILAKAM

BY

VIRUPA RĀJA

EDITED BY

T. CHANDRASEKHARAN, M.A., L.T.

Curator, Government Oriental Manuscripts Library, Madras

and the staff of the Library.

(*Under the orders of the Government of Madras*)

PRINTED BY THE SUPERINTENDENT
GOVERNMENT PRESS
MADRAS
1954

INTRODUCTION.

Kannada literature is rich in literary works of great merit written by eminent poets. But only a few of them have been published so far. There are still many in public and private libraries which have not seen the light of the day. The Government of Madras have taken steps to publish some of the rare manuscripts preserved in the Government Oriental Manuscripts Library, Madras. The present edition of TRIBHUVANATILAKAM is based on two Manuscripts described under D. Nos. 965 and 966.

Kannada Literature was enriched by poets of repute as well as by kings, princes, and commanders, who were not only patrons of learning but were also great poets. The earliest available work Kavirājamārga was written by King Nṛpatuṅga who says that the Karnāṭaka country extended from the banks of the Godāvari to those of the Kāvēri. The author of the present work Viruparāja was a king of Karnāṭaka in the beginning of the 16th century and from the stanza "ವಿದಿತಂ ಶಾಕಾಬ್ದದೊಳ್ ಸಾಸಿರ ದೊಡವಿದ ನಾನ್ನೂರ ನಾಲ್ವತ್ತರ ಗ್ರೈಕದ" it is understood that he wrote this work in 1524, A.D.

As the very name indicates, Viruparāja was a Vīraśaiva and the topic which he has selected for this work is from the Śaiva literature. He has commenced his work with salutation to Śiva and to Pārvatī, Nandi, Gaṇēśa and Ṣaṇmukha. He has next paid respects to earlier poets, Basava, Cennabasava, Maḍivāla and Padmarasa and also to Kālidāsa and Bāṇa. It may therefore be presumed that he was learned both in Kannada and Sanskrit.

The metre employed in this work is Sāṅgatya which can be understood by all including women. There are, no doubt, a few works in Sāṅgatya metre such as Nēmijinēśa Saṅgati by Maṅgarasa and Bharatēśa Vaibhava by Ratnākaravarṇi. But their number is comparatively small and Tribhuvanatilakam by Viruparāja describing the life of a Śiva Śaraṇa (devotee of Śiva) is a valuable addition to this class of Kannada literature. It is hoped that the Kannada public will receive this publication in a deserving manner and co-operate with the authorities in bringing out from oblivion such works in large numbers.

In this connection, I have to thank Sri V. Hanumanthachar, M.A., L.T., Librarian and Sri K. Krishna Sharma, Vidvān, Pandit of this Library, for preparing the press-copy and correcting the proofs.

My thanks are also due to the Superintendent of the Government Press for printing the book in an efficient manner.

Government Oriental Manuscripts Library, Madras, 26—11—1953. T. CHANDRASEKHARAN, *Curator.*

ಮುನ್ನುಡಿ.

ಅಪಾರವಾದ ಕನ್ನಡ ಸಾಹಿತ್ಯ ಸಾಗರದಲ್ಲಿ ಗ್ರಂಥ ರತ್ನಗಳು ತುಂಬಾ ಇವೆ. ಇವುಗಳಲ್ಲಿ ಕೆಲವು ಗ್ರಂಥ ರತ್ನಗಳು ಮಾತ್ರ ಬೆಳಕಿಗೆ ಬಂದಿವೆ ಆದರೆ ಕನ್ನಡ ಸಾಹಿತ್ಯದ ಸುಗ್ಗಿಯ ಕಾಲದಲ್ಲಿ ಉದ್ದಾಮ ಕವಿಗಳು ತಾಳಪತ್ರಗಳಲ್ಲೇ ಮೂಲ ಮಾತೃಕೆಗಳಾಗಿ ಬರೆದಿಟ್ಟ ಗ್ರಂಥಗಳು ಅಲ್ಲಲ್ಲಿ ಹಸ್ತ ಪ್ರತಿ ಭಂಡಾರಗಳಲ್ಲಿ ಇನ್ನೂ ತೆರೆಯ ಮರೆಯಲ್ಲೇ ಇರುವುವು. ಮದ್ರಾಸು ಸರಕಾರೀ ಪ್ರಾಚ್ಯ ಹಸ್ತ ಪ್ರತಿ ಭಂಡಾರದಲ್ಲಿ ಪರಿಶೀಲಿಸಿದರೆ ಪ್ರಾಚೀನ ಕವಿ ರತ್ನತ್ರಯರೆನಿಸಿದ ಪಂಪ, ಪೊನ್ನ, ರನ್ನರ ಕೃತಿಗಳಿಗೆ ಸರಿಸಮಾನಗಳಾದ ಗದ್ಯ, ಪದ್ಯ, ಹಾಗೂ ಚಂಪೂ ಕಾವ್ಯಗಳು ಕಂಡು ಬರುವುವು. ಕಾಲ ಪುರುಷನ; ಕ್ರಿಮಿ ಕೀಟಗಳ ಕಬಳಕ್ಕೆ ತುತ್ತಾಗಿ ನಮ್ಮ ನಿಧಿಯು ನಷ್ಟವಾಗದಂತೆ ಕಾಪಾಡಿ ಕೊಳ್ಳುವುದು ನಮ್ಮ ಕರ್ತವ್ಯ. ಈ ಉದ್ದೇಶದಿಂದ ಮಾನ್ಯ ಸರಕಾರವು ಇವುಗಳನ್ನು ಸುರಕ್ಷಿತವಾಗಿರಿಸಿ, ಕ್ರಮೇಣ ಪ್ರಕಟಿಸಿ ಹಾಗೂ ನೂತನ ಪ್ರತಿಗಳನ್ನು ಸಹ ಮಾಡಿಸುತ್ತಿರುವುದು ಸುವಿದಿತವಷ್ಟೆ. ಅಂತಹ ಗ್ರಂಥ ರತ್ನಗಳಲ್ಲಿ ಅನ್ಯತಮವಾದ "ತ್ರಿಭುವನತಿಲಕ" ವನ್ನು ಪ್ರಕೃತ ವಾಚಕರ ಮುಂದಿರಿಸಲು ಸಂತೋಷಪಡುವೆವು.

ಕರ್ಣಾಟಕದ ಕವಿಗಳು ಬರೇ ಬರೆಹಗಾರರಾಗಿರದೆ ಕನ್ನಡಬಾವುಟ ವನ್ನೇರಿಸಿದ ಮಾಂಡಲೀಕರು, ರಾಜರು, ಸೈನ್ಯಾಧಿಕಾರಿಗಳು ಹೆಚ್ಚೇಕೆ ರಾಜಾಧಿರಾಜರೂ ಸಾರ್ವಭೌಮರು ಕೂಡ ಆಗಿದ್ದರು. ಪರಿಸ್ಥಿತಿಯು ಹೀಗಿರುತ್ತಾ ಆ ಕಾಲದಲ್ಲಿ ಕನ್ನಡ ಸಾಹಿತ್ಯವು ತನ್ನ ಉಚ್ಛ್ರಾಯ ಸ್ಥಿತಿಗೇರಿತ್ತು; ಕಾವೇರಿಯಿಂದ ಗೋದಾವರಿ ವರಮಿರ್ಪ ನಾಡೆಂದು ಆದಿ ಕವಿಪುಂಗವ ನೃಪತುಂಗನೂ ಒಕ್ಕಣಿಸಿದ್ದನು.

ಕ್ರಿ. ಶ. ಸುಮಾರು 16 ನೆಯ ಶತಮಾನದ ಆದಿಯಲ್ಲಿ ಕರ್ಣಾಟಕದ ಕೇರಳಪ್ರಾಂತದಲ್ಲಿ ರಾಜನಾಗಿದ್ದ ವಿರುಪರಾಜನೆಂಬ ರಾಜಕವಿಯು ಈ ಕಾವ್ಯವನ್ನು (ಸುಮಾರು 1524) ರಚಿಸಿದಂತೆ ಕಾವ್ಯಾಧಾರದಿಂದಲೇ ಹೇಳಬಹುದು: ಕವಿಯು ಈ ರೀತಿಯಾಗಿ ಆ ವಿಚಾರವನ್ನು ಬರೆದಿದ್ದಾನೆ.

> ವಿದಿತಂ ಶಾಕಾಬ್ದದೊಳ್ ಸಾಸಿರದೊದವಿದ ನಾನ್ನೂರ ನಾಲ್ವತ್ತರ ಗ್ರೈ ।
> ಕದ ಸುಪ್ರಮಾಥೀ ಸಂವತ್ಸರದ ಘನ ಶುಭಶ್ಶುದ್ಧ ಪಂಚಮ್ಯುಷಃ ಕಾ ।
> ಲದೊಳುದ್ಯತ್ಕಾವ್ಯ ಬಂಧಂ ನೆಗಳ್ದುದು ವಿರುಪಕ್ಷ್ಮಾಪನಿಂ ಸತ್ಕಲಾ ಕೋ ।
> ವಿದ ರಾಹಾ! ಯೆಂದೆನಲ್ಕೀ ತ್ರಿಭುವನತಿಲಕಂ ನವ್ಯಮಾಚಂದ್ರ ಸೇವ್ಯಂ ॥

ಕವಿಯ ವಂಶ ಪರಂಪರೆಯು ಈ ರೀತಿಯಾಗಿ ಉಲ್ಲೇಖಿಸಲ್ಪಟ್ಟಿದೆ:

ಏಟು ಬೀಡಿನ ಗೋಪ, ಚೋಳರ ಭೀಮ, ಚೋಳ ನಾರಾಯಣ, ಹನ್ನೊಂದು ಬೀಡಿನ ಮಾಂಡಲೀಕ ಗಂಡ ಹೊನ್ನೂರೆ ಬಿರುದಾಂಕ, ಶ್ರೀಕಂಠ ವಂಶಾಬ್ಧಿ ಹಿಮಕರನಾದ ಚಿಕ್ಕ ವಿರುಪಾಕ್ಷನ ಮಗ, ಸಂಗರ ಭೀಮ, ಹೊನ್ನೂರೆಕಾವ, ಏಟುವೀಡಿನ ಗೋಪವೆಸರನು ತಾಳ್ದ ಕಾಮ, ಇವನ ಹೆಂಡತಿ ವೀರಾಂಬೆ, ಮಗ ನಾನಾಕಲಾರಾಮ, ಚೋಳರ ಭೀಮ ಭೋಗನನುಜ ವಿರುಪರಾಜ. (ಕವಿ). ಇದರಿಂದ ತಿಳಿದು ಬರುವುದೇನೆಂದರೆ ಈತನ ವಂಶಪರಂಪರೆಯು, ಸಾಹಸಿಗಳಾದ, ಶೂರಾಗ್ರಣಿ ರಾಜಮನೆತನಕ್ಕೆ ಸೇರಿದ್ದು, ತಮ್ಮ ಭುಜಬಲದಿಂದ ಜೈತ್ರಯಾತ್ರಾ

ಕೋವಿದರಾದ ಈ ಮನೆ ತನದ ರಾಜರು ನೆರೆರಾಯರನ್ನು ಶರಣಾಗತರನ್ನಾಗಿಮಾಡಿ ಸಾರ್ವಭೌಮ ಸಾಮ್ರಾಜ್ಯ ಶಾಹಿಗಳಾಗಿದ್ದರು. ಕವಿಯು ಚೋಳರನ್ನು ಜಯಿಸಿರುವುದಾಗಿಯೂ ಹೊನ್ನೂರೆ ಹಾಗೂ ಸ್ವರ್ಣಪುರ ಸೌಧಾಧಿಷ್ಠಿತ ಚಕ್ರವರ್ತಿಯಾಗಿದ್ದನೆಂದೂ ತಿಳಿಯುವುದು. ಈತನು ಕಲಾವಿದನಾಗಿದ್ದು, ಸುಂದರಾಂಗನೂ ದೃಢಕಾಯನೂ ಆಗಿದ್ದನೆಂದು ಸೂಚಿತವಾಗದಿಲ್ಲ. ಪ್ರಜೆಗಳು ಈತನಲ್ಲಿ ಪ್ರೀತಿ ವಿಶ್ವಾಸವಿಟ್ಟಿದ್ದರೆಂದು ಸುವಿದಿತವಾಗಿದೆ. ವಿರುಪರಾಜನೆಂಬ ತನ್ನ ನಾಮಾಂಕಿತದಿಂದಲೇ ಕವಿಯು ತಾನು ವೀರಶೈವ ಮತದವನೆಂದು ಬೆಟ್ಟೊತ್ತಿ ತೋರಿಸಿದ್ದಾನೆ. ಅಲ್ಲದೆ ಕಥಾ ವಸ್ತುವನ್ನೂ ಉದಾತ್ತ ಶೈವಶರಣ ಸಾಹಿತ್ಯದಿಂದಲೇ ಉದ್ಧರಿಸಿಕೊಂಡು ತನ್ನ ಪ್ರತಿಭಾಬಲದಿಂದ ಪೋಣಿಸಿದ್ದಾನೆ.

ಪ್ರಾರ್ಥನೆಯಲ್ಲೇ "ಶ್ರೀಕರ, ಶುಭಕರ, ಶಂಕರ, ಮುಂತಾಗಿ ಶಿವಸ್ತುತಿಯಿಂದಾರಂಭಿಸಿ ಕ್ರಮೇಣ ಪಾರ್ವತಿ, ನಂದಿ, ಗಣೇಶ, ಷಣ್ಮುಖರನ್ನೂ ಕೊಂಡಾಡಿದ್ದಾನೆ. ಮಾತ್ರವಲ್ಲದೆ ಬಸವ ಚೆನ್ನಬಸವ, ಮಡಿವಾಳ ಕೆರೆಯ ಪದ್ಮರಸರನ್ನೂ ನುತಿಸಿಕೊಂಡಿದ್ದಾನೆ. ಸಂಸ್ಕೃತ ಕವಿರತ್ನರೆನಿಸಿದ ಕಾಳಿದಾಸ, ಬಾಣರನ್ನೂ ಸ್ಮರಿಸಿಕೊಂಡುದರಿಂದ ಉಭಯ ಭಾಷಾವಿದನಿದ್ದರೂ ಇರಬಹುದು. ತನ್ನ ಕೃತಿಯಲ್ಲಿಯೂ ತನ್ನ ಕಾವ್ಯ ವ್ಯಾಸಂಗದ ಪರಿಣಾಮವನ್ನು ತೋರಿಸಿದ್ದಾನೆ. ನಾಗವರ್ಮನು ಛಂದೋಂಬುಧಿಯಲ್ಲಿ ತನ್ನ ಪತ್ನಿಯನ್ನುದ್ದೇಶಿಸಿ ಬರೆದಂತೆ ಈತನೂ "ಕೋಗಿಲೆ ತಳತವಮಾಕಂದವೆಕನ್ನೆ" ಎಂದು ತನ್ನ ಹೆಂಡತಿಯನ್ನುದ್ದೇಶಿಸಿ ಹೇಳಲಾರಂಭಿಸಿದನಲ್ಲದೆ ಅಲ್ಲಲ್ಲಿ ಆಕೆಯನ್ನೇ ಸಂಭೋಧಿಸಿ ಹೇಳಿದಂತೆ ತೋರುವುದು. ಕವಿಯು ಶೃಂಗಾರರಸಿಕನೂ, ಸರಸಸಾಹಿತಿಯೂ ಆಗಿದ್ದುದು ಈ ವಿಧದಿಂದ ಊಹಿಸಲಾಗುವುದಾದರೂ ಕಾವ್ಯದಲ್ಲಿ ವರ್ಣಿಸಿದ ಶೃಂಗಾರರಸದ ಮೇರೆ ನೋಡುವಲ್ಲಿ ಗೌರವ, ಕವಿಮರ್ಯಾದೆಗಳ ಕಡೆಗೆ ಸಾಕಷ್ಟು ಗಮನವಿತ್ತಂತಿದೆ. ತನ್ನ ಕಾವ್ಯವು ಆ ಬಾಲವೃದ್ಧರಿಗೂ ಗ್ರಾಹ್ಯವಾಗಬೇಕೆಂದೇ ಸುಲಭವಾದ ಸಾಂಗತ್ಯ ಪದ್ಯಗಳಲ್ಲಿ ಹೇಳಿರುವನು. ಮಕ್ಕಳು ಸರಾಗವಾಗಿ ಇವುಗಳನ್ನು ಕಂಠಪಾಠ ಮಾಡಬಹುದು, ತಾಯಂದಿರು ಜೋಗುಳ ಹಾಡಲು ಸಹ ಈ ಹಾಡುಗಳನ್ನು ಮೆಚ್ಚಬಹುದು. ಯುವಕಯುವತಿಯರು ರಸಾಸ್ವಾದನೆಗಾಗಿ ಈ ಕಾವ್ಯವನ್ನೋದಿ ಮನವಾರೆ ಮೆಚ್ಚಬಹುದು. ಮುದುಕರು ಇದರಲ್ಲಿ ಅಧ್ಯಾತ್ಮ ವಿಚಾರವನ್ನು ಮನಗಾಣಬಹುದು.

ಈ ರೀತಿ ಸರಳ ಶೈಲಿಯಲ್ಲಿ ಸಕಲ ಜನಾದರಣೀಯವಾಗಿ ಕವಿಯು ಕಬ್ಬವಿದನ್ನು ಬರೆದಿದ್ದಾನೆ. ಸಾಂಗತ್ಯ ಗ್ರಂಥಗಳು ಕನ್ನಡದಲ್ಲಿ ತೀರಾ ವಿರಳವಲ್ಲವಾದರೂ ಧಾರಾಳವಾಗಿವೆಯೆಂದು ಹೇಳುವ ಧೈರ್ಯವಿಲ್ಲ. ಮಂಗರಸನ ನೇಮಿಜಿನೇಶ ಸಂಗತಿಯನ್ನು ಬಿಟ್ಟರೆ ರತ್ನಾಕರ ವರ್ಣಿಯ ಭರತೇಶ ವೈಭವದ ಮಧ್ಯದಲ್ಲಿ ರಾರಾಜಿಸುವ ಸಾಂಗತ್ಯ ಕಾವ್ಯ ರತ್ನವೆಂದರೆ ತ್ರಿಭುವನತಿಲಕವೆನ್ನಬಹುದು.

"ಬೆಳುಳೊಲೆಯದೆ ಮಂಡೆಯಲುಗದೆ ಪುಳಕಾಂಕುರ ಮೊಳೆಯದೆ ಬಾಷ್ಪದಳ್ಗದೆ ।
ಮರುಳೊಪ್ಪಿಸಿ ಕಲೆವಂತರರಹಾ ! ಎನೆ ಇರಲಿದು ತ್ರಿಭುವನತಿಲಕವೆ ॥"

ಎಂದು ಕವಿಯೇ ಕೊಂಡಾಡಿದ್ದಾನೆ.

ಕನ್ನಡಾಂಬೆಗೆ ತಿಲಕ ಪ್ರಾಯವಾದ ಈ ಹಾಡುಗಬ್ಬಕ್ಕೆ ಇದೊಂದು ಅನ್ವರ್ಥ ನಾಮವೆಂದರೂ ಸೂಕ್ತವಾಗದಿರದು.

ರತ್ನಾಕರ ವರ್ಣಿಯು ಜೈನ ಕವಿಯಾದರೆ ಈತನು ಶೈವಕವಿ. ಆತನು ತೀರ್ಥಂಕರನೊಬ್ಬನನ್ನು ಕಥಾನಾಯಕನನ್ನಾಗಿ ಆರಿಸಿದರೆ ಈತನು ಶಿವಭಕ್ತನೆನಿಸಿ ಶಿವನ ಅಂಶ ಸಂಭೂತನೆನಿಸಿದ ಶಿವಶರಣನನ್ನು ಕಥಾನಾಯಕನಾಗಿ ವರ್ಣಿಸಿದ್ದಾನೆ. ಕವೀಂದ್ರರೀರ್ವರೂ ಕಥೆಗೆ ಪ್ರಾಧಾನ್ಯತೆ ಕೊಡದೆ ವರ್ಣನಾ ವೈಖರಿಗೇ ಹೆಚ್ಚಿನ ಶ್ರದ್ಧೆವಹಿಸಿ ಕೊಂಡಂತೆ ಭಾಸವಾಗುವುದು. ಪುರಾಣ ಕಥೆಗಳನ್ನು ತಮ್ಮ ಮತಾನುಸಾರ ಪೋಣಿಸಿ ಬಣ್ಣಿಸುವುದರಲ್ಲಿ ಪಳಗಿದವರಿರುವರು ಈ ಕವಿ ವರ್ಯರು. ರತ್ನಾಕರ ವರ್ಣಿಯು ಎಲ್ಲಾ ಸಂಧಿಗಳಿಗೂ ಔಚಿತ್ಯವನ್ನು ನೋಡಿ ಪ್ರತ್ಯೇಕ ಹೆಸರಿಸಿ, ಆಸ್ಥಾನಸಂಧಿ, ಉಪ್ಪರಿಗೆಸಂಧಿ ಮುಂತಾದ ವಿಭಾಗ ಮಾಡಿದ್ದಾನೆ. ವಿರುಪರಾಜನು ಮಾತ್ರ ಈ ರೀತಿ ಹೆಸರಿಸದೆ ಇಪ್ಪತ್ತೇಳು ಸಂಧಿಗಳಲ್ಲಿ 1575 ಪದ್ಯಗಳಲ್ಲಿ ಕಾವ್ಯವನ್ನು ಮಂಗಳಾತ್ಯ ಗೊಳಿಸಿದ್ದಾನೆ. ಪ್ರತಿ ಸಂಧಿಯ ಕೊನೆಗೆ ಬರುವ ಎರಡು ಪದ್ಯಗಳು ಒಂದೇ ರೀತಿಯವುಗಳಾಗಿ ಮಲ್ಲಿಕಾರ್ಜುನ ಸ್ತುತಿ ಮತ್ತು ಕಾವ್ಯ ಫಲಶ್ರುತಿ ರೂಪದಲ್ಲಿವೆ. ಕೊನೆಯ ಸಂಧಿಯಲ್ಲಿ ಒಂದು ಕಂದ ಪದ್ಯವು ಹಾಡುಗಳ ಸಂಖ್ಯೆಯೆಷ್ಟೆಂಬು ವಿವರಿಸುವುದಿದೆ. ಇನ್ನೊಂದು ವೃತ್ತವು ಆದಿಯಲ್ಲೇ ಸೂಚಿಸಿದಂತೆ ಕವಿಯ ಕಾಲವಿಚಾರಪರವಾಗಿ ಬರೆಯಲ್ಪಟ್ಟದೆ. ಅಂತೂ ಕಾವ್ಯವಿದನ್ನು ಮೂಲ ಮಾತೃಕಾಧಾರದಿಂದ ಯಾವಚ್ಛಕ್ತಿ ಪರಿಷ್ಕರಿಸಿ ಪ್ರಕೃತ ವಾಚಕರ ಹೊತ್ತಗೆಯಾಗಿ ಅರ್ಪಿಸಿ ಹಾರ್ದಿಕ ಸಹಕಾರಕೋರಿದ್ದೇವೆ. ಉಪಸಂಹಾರದಲ್ಲಿ, ಈ ಗ್ರಂಥದ ಮುದ್ರಣ ಪ್ರತಿಯನ್ನು ಸಿದ್ಧಗೊಳಿಸಿ ಮುದ್ರಿತ ಪ್ರತಿಯನ್ನು ಪರಿಶೀಲಿಸಿ ಸಂಪಾದಕನ ಕರ್ತವ್ಯಗಳಲ್ಲಿ ನೆರವಾದ ಶ್ರೀಮಾನ್ ವಿ. ಹನುಮಂತಾಚಾರ್, ಎಂ.ಎ., ಎಲ್.ಟಿ. ವಿದ್ವಾನ್ ಇವರಿಗೂ, ಕನ್ನಡ ಪಂಡಿತರಾದ ಶ್ರೀಮಾನ್ ಕೆ. ಕೃಷ್ಣ ಶರ್ಮಾ, ವಿದ್ವಾನ್ ಇವರಿಗೂ ಕಾರ್ಯದಕ್ಷತೆಗಾಗಿ ನನ್ನ ಹಾರ್ದಿಕ ಅಭಿನಂದನೆಗಳನ್ನು ಈ ಮೂಲಕ ಸಲ್ಲಿಸುತ್ತೇನೆ. ಮಾತ್ರವಲ್ಲದೆ, ಈ ಗ್ರಂಥವನ್ನು ಸಕಾಲದಲ್ಲಿ ಅಂದವಾಗಿ ಅಚ್ಚು ಹಾಕಿಸಿಕೊಟ್ಟ ಸರಕಾರೀ ಮುದ್ರಣಾಲಯದ ಸುಪರಿಂಟೆಂಡೆಂಟರಿಗೂ ನಮ್ಮ ಕೃತಜ್ಞತೆಗಳನ್ನು ಸಲ್ಲಿಸುವೆವು.

ಗವರ್ನ್‌ಮೆಂಟ್ ಓರಿಯಂಟಲ್
ಮಾನ್ಯುಸ್ಕ್ರಿಪ್ಟ್ಸ ಲೈಬ್ರರಿ,
ಮದ್ರಾಸ್-5.

ತಿ. ಚಂದ್ರಶೇಖರನ್,
ಕ್ಯೂರೇಟರ್.

ಶ್ರೀ

ತ್ರಿಭುವನ ತಿಲಕಂ

(ಶ್ರೀ ವಿರುಪರಾಜ ವಿರಚಿತಂ.)

ಕೋಗಿಲೆ ತಳತ ಮಾಕಂದವೆ ಕನ್ನೆ ॥
ಕೋಗಿಲೆ ತಳತ ಮಾಕಂದವೆ ॥ (ಪಲ್ಲ)

ಶ್ರೀಕರ ಶಂಕರ ಶುಭಕರ ವಿಪುಳ ಕೃ । ಪಾಕರ ತರುಣೇಂದು ಶೇಖರ ॥
ನಾಕಾದಿ ಭುವನ ರಕ್ಷಾಕರ ಘನಮಹಿ । ಮಾಕಾರ ಮಲ್ಲಿಕಾರ್ಜುನ ಜಯ ॥ (1)

ಸೋಮಪಂಚಾಸ್ಯ ವೃಷಧ್ವಜ ಹಂಸ ಪು । ಣ್ಯಾಮೃತಾನಂತ ಶುಭಾತ್ಮಕ ॥
ರಾಮಭಸ್ಮಾಕ್ಷರ ಶತಕೋಟಿ ಭಾನು ಲ । ಲಾಮಾಂಗ ಜಯ ಮಲ್ಲಿಕಾರ್ಜುನ ॥ (2)

ಮುಡಿಯೊಳಗಮರಾಪಗೆಯ ತಳೆದು ತೊಡೆ । ಯೆಡೆಯೊಳಗಚಲಸುತೆಯನಾಂತು ॥
ಪೊಡೆಯೊಳಗಖಿಲ ಜಗಂಗಳ ನಿಲಿಸಿದ । ಮೃಡ ಶಾಂತ ಮಲ್ಲಿಕಾರ್ಜುನ ಜಯ ॥ (3)

ಉರುತಪದಿಂದ ಕಾಮಾರಿಯ ಮೆಚ್ಚಿಸಿ । ನೆರೆದು ಸಂತಸದೊಳೋಲಾಡಿಸಿ ॥
ಅರೆವೆಣ್ಣೆನಿಸಿ ಲೋಕಾಧಾರೆಯಾಗಿರ್ಪ । ಗಿರಿರಾಜನಂದನೆ ಜಯ ಜಯ ॥ (4)

ನೋಡಿಯರಿವನ ಕೈನೀಡಿ ಕಳೆಯ ಮಾತ । ನಾಡಿ ಮಂತ್ರವ ಕೃಪೆಯೊಸಕದೆ ॥
ನಾಡೆ ಪರಬ್ರಹ್ಮವನಿತ್ತು ನಿಜದೊಳೋ । ಲಾಡಿಪ ಗುರುವಿಗಾನತನಪ್ಪೆ ॥ (5)

ಸಕಲ ವಿದ್ಯಾಜನಕಗೆ ಶಿವಗಣನಾ । ಯಕಗೆ ಮಹೇಶನಾರಾಧಕಗೆ ॥
ಸುಕೃತರೂಪಿಗೆ ಸರ್ವಜ್ಞಗೆ ದ್ವಿತೀಯ । ಶಂಕರ ನಂದೀಶಗೆ ಶರಣೆಂಬೆ ॥ (6)

ಲಿಂಗನಿಷ್ಠಗೆ ಮಾಯಾರಹಿತಗೆ ನಾಟ್ಯ । ರಂಗ ಸರಸಭರಿತಾಂಗಗೆ ॥
ಭೃಂಗಿಗೆ ವರಶಿವ ಪದವಾಂತು ಮಹಿಮಾ । ಸಂಗಿಗೆ ಸಂತತ ಶರಣೆಂಬೆ ॥ (7)

ರುದ್ರಗೆ ಕರುಣಾ ಸಮುದ್ರಗೆ ಭಕ್ತ ದ । ರಿದ್ರ ಮೇಘಾನಿಲನೆನಿಪಗೆ ॥
ಚಿದ್ರೂಪಗೆ ಪಾಪ ವಿದ್ರಾವಣ ವೀರ । ಭದ್ರಗೆ ನಾನೊಲಿದು ಶರಣೆಂಬೆ ॥ (8)

ತಾರಕ ದನುಜಸಂಹಾರನ ಪ್ರಣವ ವಿ । ಸ್ತಾರನ ಸದ್ಗುಣೋದ್ಧಾರನ ॥
ಶೂರನ ಶೋಭನಾಕಾರನ ಶಿವನಕು । ಮಾರ ಕುಮಾರನ ಬಲಗೊಂಬೆ ॥ (9)

ಭಕ್ತಿಭೂಷಣ ಬಸವೇಶನ ಭಸಿತಸಂ । ಯುಕ್ತ ಭಾಳನ ಮಡಿವಾಳನ ॥
ಮುಕ್ತಿಯಗ್ರದೊಳಿಸೆವ ಚೆನ್ನಬಸವನ । ಲಕ್ಮಾಂಘ್ರಿ ಕಮಲಕಾನತನಪ್ಪೆ ॥ (10)

ಸುರಸರ ಕೆರೆಯಪದ್ಮರಸರ ಶಿವಭಕ್ತಿ । ಭರಿತಭಾವರ ಹರಿದೇವರ ॥
ಪರಸಾಧ್ಯರ ಪಾಲ್ಕುರಿಕೆ ಯಾರಾಧ್ಯರ । ಚರಣಸರೋಜಷಟ್ಪದನಪ್ಪೆ ॥ (11)

ನಿರ್ಮಾಯಗೆ ನಿಗಮಾಂತರಹಸ್ಯಾಸ । ಕ್ತಮರ್ಗೆ ಷಟ್‌ಸ್ಥಳ ಮಾರ್ಗದ ॥
ಸರ್ವಜ್ಞಗೆ ಮಾಯಿದೇವ ಪ್ರಭುವಿಗೆ । ಕೂರ್ಮೆಯಿಂದೆರಗುವೆನನುದಿನ ॥ (12)

ಹಿಂಭವನ ನೊಲಿಸಿದರ ಮೂಜಗದೊಳ । ನಿಂದಭವನ ಕೃಪೆ ಪಡೆದವರ ॥
ಮುಂಭವನ ಮೆಚ್ಚಿ ಪದಪಾದಾಬ್ಜಕೆ । ವಂದಿಪೆ ನಾನತಿ ಮುದದಿಂದೆ ॥ (13)

ಭ್ರಮರ ಸ್ವನಗಾನಯುತ ಕರ್ಣ ಸಾಮಜೋ । ಪಮಮುಖ ತಪ್ತಕಾಂಚನವರ್ಣ ॥
ಕಮನೀಯಪದ ಸಿದ್ಧಿದಾಯಕ ನಿರ್ವಿಘ್ನ । ವಮಾಡು ಕೃತಿಗೆ ವಿನಾಯಕ ॥ (14)

ನುಡಿಗೆ ಮೂಲಾಧಾರೆಯಾದ ಪರ್ಣಪ್ರಭೆ । ಯೊಡಲಾದ ವಿದ್ಯಾರತಿಯಾದ ॥
ನುಡಿವೆಣ್ಣು ಶಿವಕೃತಿ ಯುಸಿರ್ವೆ ಮಾತಿಗೆ ಬೆಂ । ಬಿಡದೆ ಕೊರ್ತನುಕೂಲೆಯಾಗಳಿ ॥ (15)

ಬಲಗೊಂಬೆನಧಿಕ ಪ್ರವೀಣನ ಬಾಣನ । ಕಲೆಗಳಾಸಾರ ಮಯೂರನ ॥
ಸುಲಲಿತ ವಾಕ್ಯಭೂಷಣ ಕಾಳಿದಾಸನ । ಛಲದಂಕನ ರಾಘವಾಂಕನ ॥ (16)

ನವರಸಾಮೃತಪೂರದಿಂದ ಮತಿ ಪ್ರಕಾ । ಶವ ಬೀರುತಗಲದೆ ಚರಿಸುಗೆ ॥
ಶಿವಕವಿ ರಾಜಹಂಸಂಗಳು ಮುದದಿಂ । ದಪೆ ನಿಜ ಹೃದಯ ಪುಷ್ಕರದೊಳು ॥ (17)

ಸಜ್ಜನಸ್ತುತಿಗೆಯ್ಯುಲಾತ್ಮಸ್ತುತಿಯಕ್ಕು । ಮಜ್ಜೀವವವರಾಗಿ ಕುಜನರ ॥
ಲಜ್ಜಿಸಿ ನಿಂದಿಪೊಡಿದು ಪುಣ್ಯಕಥೆ ಪೇಳ । ಲುಜ್ಜುಗಿಪೆನ್ನ ಸತ್ಕೃತಿಯೊಳು ॥ (18)

ಜಲಬಿಂದು ಶುಕ್ತಿಕೆಯೊಳು ಬೀಳೆ ಮುತ್ತಾಗಿ । ಬೆಲೆವಡೆವಂತೆನ್ನ ಬಡನುಡಿ ॥
ಬೆಲೆವಡೆಯದೆ ಮಾಣ್ಪುದೆ ನಿಮ್ಮ ಕಿವಿಸೋಂಕ । ಲೊಲಿದು ಭಾವುಕರವಧರಿಪುದು ॥ (19)

ಉಸಿರ್ವೆ ನಾನಿಮ್ಮ ಬಲ್ಪಿಂದೀ ಕೃತಿಯ ಲಾ । ಲಿಸುಗೆ ತಿದ್ದುಗೆ ಬುಧರೆನ್ನಯಾ ॥
ಜಸವಳಜಸ ನಿಮ್ಮ ಬಿಡದೆ ನಿಖಿಳರು ನಿಂ । ದಿಸದಂತೆ ಸುಜನರಾದರಿಪಂತೆ ॥ (20)

ಈ ಕಬ್ಬ ರಸಿಕಜನದ ಕಿವಿಗಳ ಹಬ್ಬ । ವೀಕಾವ್ಯ ಮಲ್ಲಿಕಾರ್ಜುನ ಸೇವ್ಯ ॥
ಈ ಕಥೆಯಿಹಪರವಡರ್ವ ಸೌಖ್ಯದ ಲತೆ । ಯೀ ಕೃತಿ ವಿಪುಳ ಚಮತ್ಕೃತಿ ॥ (21)

ಇದು ಚರಮಾಂಕ ಭೂವರನ ಚಾರಿತ್ರ ಮೀ । ಲೆದೆಗಾರ ಮನದಾಟದ ಸೂತ್ರ ।
ಸದಮಲಾನಂದ ನಂದನ ಚೈತ್ರ ಶಿವಮಾ । ರ್ಗದೆ ಚರಿಸುವ ಭಕ್ತಜನಮಿತ್ರ ॥ (22)

ಈ ಕಾವ್ಯಮನತಿಶಯದಿಂದೆ ಪೇಳ್ದನ । ನೇಕ ಚಿತ್ರಾರ್ಥ ಭಾವಗಳಿಂದೆ ॥
ಶ್ರೀಕಂಠ ವಂಶವಾರಿಧಿ ಚಂದ್ರನೆನಿಪನಾ । ನಾಕಲಾಪ ವಿರುಪಭೂಪ ॥ (23)

ಕಂತುವಿಗೊರೆ ಮಿಗಿಲೆನಿಪ ವಿರುಪ ಭೂ । ಕಾಂತನ ಮಾನಗನ್ನಳೆನಿಸುವ ॥
ಕಾಂತಿಗುಣಾನ್ವಿತ ಸ್ವಾಂತೆ ನಾನಾಕಲಾ । ವಂತೆ ಬಣ್ಣಿಸಿ ಕೇಳ್ದಳಂತೆಂದು ॥ (24)

ಧರಣಿಯೊಳೆಸೆವೆಳೆಬೀಡಿನ ಗೋಪ ಚೋ । ಳರ ಭೀಮ ಚೋಳ ನಾರಾಯಣ ॥
ಧುರಧೀರ ಹನ್ನೊಂದು ಬೀಡಿನ ಮಂಡಲೀ । ಕರ ಗಂಡ ಹೊನ್ನೂರ ಬಿರುದಾಂಕ ॥ (25)

ಲೋಕವಿನುತ ವೀರವಿತರಣ ನೀತಿ ವಿ । ವೇಕ ಸತ್ಕೀರ್ತಿ ಧರ್ಮಗಳೆಲ್ಲ ॥
ಸಾಕಾರವಡೆದು ಮೋಹನವಾಂತು ರಂಜಿಪ । ಶ್ರೀಕಂಠ ವಂಶಾಬ್ಧಿ ದಿನಮಣಿ ॥ (26)

ವಿಷಮಾಕ್ಷನಲ್ಲದ ವಿರತಾತ್ಮನಲ್ಲದ । ಕುಸುಮಾಯುಧ ವೈರಿಯಲ್ಲದ ॥
ಸ್ವಸತಿಯನಗಲಿ ಜಾನಿಪನಲ್ಲದ ಪೊಸ । ವಸರಾಂತ ಚಿಕ್ಕವಿರೂಪಾಕ್ಷ ॥ (27)

ಗಿರಿಜೆಯ ರತಿಸುಖ ಪರಿಯದೆ ಕಾಮನ । ನುರುಪಿದೆನೆಂದು ವಿರೂಪಾಕ್ಷ ॥
ಕರುಷದೆ ಕಾಮನ ಪಡೆದವೊಲಾ ಚಿಕ್ಕ । ವಿರುಪ ಭೂಪತಿ ಪೆತ್ತ ಕಾಮನ ॥ (28)

ತುಂಗಪರಾಕ್ರಮ ರಿಪುಗಿರಿ ವಜ್ರಾಂಕ । ನಂಗನಾ ಜನಮೀನ ಕೇತನ ॥
ಸಂಗರಭೀಮ ಹೊನ್ನೂರ ಕಾಮ ಚಾಪ ವಿ । ದ್ಯಾಂಗದೆ ಕಳಶಜನೆನಿಸಿರ್ಪ ॥ (29)

ಏಳು ಬೀಡಿನ ರಿಪು ಸೇನಾಮುಖ ತೃಣ । ಜಾಲಮಾಗಿರೆ ಕಂಡು ಪಶುವೆಂದು ॥
ಕಾಳಗದೊಳು ಕಾಯ್ದು ಕಾಮ ತಾಳ್ದೆಸೆದಿರ್ದ । ನೇಳು ಬೀಡಿನ ಗೋಪವೆಸರನು ॥ (30)

ಆ ಕಾಮ ನೃಪನ ಯಶೋವಧುಜಯಸತಿ । ಭೂಕಾಂತೆದಾನಾಂಗನೆಯರು ॥
ಯೇಕವೆನಿಸಿವೀರ ಲಕ್ಷ್ಮಿಯಾದಂತಾತ । ನಾಕಾಂತೆ ವೀರಾಂಬೆ ಯೆಸೆವಳು ॥ (31)

ಆ ಕುಮುದಾಕ್ಷಿ ವೀರಾಂಬಿಕೆ ಯುದರ ರ । ತ್ನಾಕರ ಪೂರ್ಣಸುಧಾಕರ ॥
ಭೂಕಾಂತ ಭೋಗ ನೃಪಾಲಶೇಖರನಾ । ನಾಕಲಾರಾಮ ಚೋಳರ ಭೀಮ ॥ (32)

ಬಿಸದಳೆಯದ ನಿಜಗೇಹ ರಕ್ಷಕನ ಭುಂ । ಜಿಸದ ನಾಲಗೆ ಯೆರಡೆನಿಸದ ॥
ನಿಸದ ಶ್ರುತಿ ಹೀನನಾಗದ ಗುಣಮಣಿ । ಯೆಸೆವ ಭೋಗನನುಜ ವಿರುಪೇಂದ್ರ ॥ (33)

ರೂಪೇಂದ್ರಿಯಂಗಳಲ್ಲೆಂದು ಪೇಳ್ವರ್ಥವ । ನೇಪ್ರಸಿಮಾಡಿ ವಿಶೇಷವ ॥
ರೂಪೇಂದ್ರಿಯಂಗಳಿಂದೆಯ್ದೆ ಮೋಹಿಸುವ ವಿ । ರೂಪಾಕ್ಷನೆನಗೊಂದು ಕಥೆವೇಳ ॥ (34)

ನಿನ್ನಯ ಕಾವ್ಯಕಲಾಪ ಲಾಲಿಸುತಿರ್ದೆ । ಜೊನ್ನವಕ್ಕಿಗೆ ಮುದುವೀವಂತೆ ॥
ಎನ್ನಸುವೆಂಬ ನಲ್ಮೆಯ ಕೂರಲಗಿರ್ಪ । ಹೊನ್ನೂರ ವಿರುಪನಲ್ಗತೆ ವೇಳ ॥ (35)

ಮಂಗಳ ಶ್ರೀಕಾರ ಮಂತ್ರಾದಿಯೋಂಕಾರ । [1]ಲಿಂಗಳ ಕೃತಿ ನಿನ್ನ ಶ್ರುತಿಯೊಳೆ ॥
ಸಾಂಗ ಮಾಗಿರೆ ಕೇಳೆ ಕಥೆ ಯಾವುದಿನ್ನೆರ್ದೆ । ಯಂಗೆಲ್ವ ಮೋಹನ ಜಯಲಕ್ಷ್ಮಿ ॥ (36)

ಅತಿಶಯ ಸಾಮ ಗಾನಾಮೃತ ಸಾರಸಂ । ಗತವಾದ ಸರ್ವಜ್ಞ ಮೂರ್ತಿಯ ॥
ಶ್ರುತಿಗೆ ಭೂಷಣ ಮಾದುದಿಲ್ಲವೆ ಕಂಬಳ । ಶತರಾಗಾಯನವೆನ್ನ ಮನದಾಣ್ಮ ॥ (37)

ಆ ಕುಮುದಾಕ್ಷಿಯ ನುಡಿಗೆ ಸಂತಸವಟ್ಟು । ರಾಕೇಂದು ವದನೆ ಕಲಾನ್ವಿತೆ ॥
ಈ ಕಥೆ ನೀ ಕೇಳ್ವುದೆನೆ ಮನೋರಥವೀವ । ಭೂಕಲ್ಪಭೂಜಗಿಂತೆಂದಳು ॥ (38)

ಕವಿಸೃಷ್ಟಿ ಕಮಲಾಸನ ಸೃಷ್ಟಿಯಂದದಿಂ । ವ್ಯವಹರಿಪುದು ಬೇರೆ ಬೇರಾಗಿ ॥
ಭುವನೊದೊಳಾಕೃತಿ ಸಾರರತ್ನವನೆನ್ನ । ಕಿವಿಗಲಂಕರಿಸು ನಲ್ನುಡಿಗಾರ ॥ (39)

ಆಯುವ ನಿತ್ಯಸಕಲ ಕಾವ್ಯವರಿವನ್ನ । ವಾಯುಪ್ಪುದು ತಾನದರಿಂದೆ ॥
ಆಯಾಸಬಡದಂತೆ ಸಕಲ ಕಾವ್ಯಾರ್ಥಗ । ಳಾಯದಿ ನನಗೊಂದು ಕತೆವೇಳ ॥ (40)

ಎನೆ ನಸು ನಗುತವರುಕ್ತಿಗಳನು ಪೇಳ್ವ । ದನುಚಿತ ನೂತನೋಕ್ತಿಗಳಿಂದ ॥
ಇನಿದೊ ಸರ್ವಂತೊಂದು ಕತೆವೇಳ್ವೆ ಕೇಳ್ಮನೋ । ಜನಮನೋಜಯವೀವ ಮಂತ್ರವೇ ॥ (41)

ಮನದನ್ನನೆ ಕೇಳು ಕಾಲತ್ರಯದ ಕವಿ । ಜನ ಮೀರದೊಂಡಪವಾದಮ ॥
ಘನಶಿವ ಕವಿ "ಬಾಣೋಚ್ಛಿಷ್ಟಂ" ತ್ರಿಭುವನ । ಮೆನಲಾರ್ಗೆಲ್ಲಿಯದು ಯುಕ್ತ ॥

ತ್ರಿಭುವನಂ ಬಾಣೋಚ್ಛಿಷ್ಟ ಮೆಂಬೀ ನುಡಿ । ಶುಭಶಿವ ಕವಿಬಾಣ ಶೇಷವ ॥
ಅಭಯದೆ ಧರಿಸಿ ನಾನೊರೆವೆ ಕೇಳೀ ಕೃತಿ । ತ್ರಿಭುವನತಿಲಕವೆನಿಸುವಂತೆ ॥ (43)

ಇತಿಹಾಸಕೆಣೆಯಾಗಿ ನನ್ನಿವೆತ್ತೆಸೆದಿರ್ಪ । ಕತೆ ಪಿಡಿದಿಹಪರಂಗಳ ನೀವ ॥
ಕೃತಿಯ ಪೇಳುವೆ ಸಂಹಿತತ್ರಯ ಸಾರಸಂ । ಗತಿಯಿಂದೆ ಕೋವಿದ ಜನ ಮೆಚ್ಚೆ ॥ (44)

---

[1] ಲಿಂಗಣ.

ಹಸುಳೆ ಸಲಾಕೆ ಹಿಡಿದು ಮಹತ್ಕಾವ್ಯದೊ । ಳೊಸೆದಾವಲ್ಲಿ ಲಕ್ಷಿಸಲಿಲ್ಲ ॥
ರಸಭಾವ ಚಿತ್ರ ಚಮತ್ಕಾರ ಮಿರ್ಪಂ । ತುಸುರುವೆ ನಾನಿಮ್ಮ ಕಬ್ಬವ ॥ (45)

ವರಕರ್ತೃ ಕರ್ಮ ಕ್ರಿಯಾಂತ ಲಿಂಗ ವಿಭಕ್ತಿ । ಗುರುಪದ ಬಂಧ ನೀತಿ ವಿಭೂತಿ ॥
ಸರಸ ಪ್ರಸಾದ ಪುಣ್ಯಪ್ರದದಿಂದೆ ಶಂ । ಕರ ಭಕ್ತರಂತಿರ್ಪುದೀ ಕಾವ್ಯ ॥ (46)

ಜಾತಿರೂಪಾಲಂಕಾರಸುಗುಣ ಭಾವ । ರೀತಿ ಬನ್ನಣ ಬೆಡಗೊಳ್ನುಡಿ ॥
ಚಾತುರ್ಯ ಮೋಹನ ಕಲಿವಿತ್ತು ನಿನಗೆ ವಿ । ಖ್ಯಾತಿಯಿಂದೆಣೆಯಾದುದೀಕಾವ್ಯ ॥ (47)

ಲಲಿತಭುಜಂಗ ಶಿರೋಮಣಿ ವಿಬುಧ ಸಂ । ಕುಳ ಸೇವ್ಯ ಸುಧೆ ಧರಣೀ ಚಕ್ರ ॥
ತಳೆದ ಭೂಷಣವಾಗೆ ಮತ್ಕೃತಿ **ತ್ರಿಭುವನ** । **ತಿಲಕ**ವೆಸರನಾಂತುದೆಲೆ ಕಾಂತೆ ॥ (48)

ಬೆರಳೊಲೆಯದೆ ಮಂಡೆಯಲುಗದೆ ಪುಳಕಾಂ । ಕುರ ಮೊಳೆಯದೆ ಬಾಷ್ಪದಳೆಯದೆ ॥
ಮರಳೋದಿಸಿ ಕಲೆವಂತರು ಹಾಯೆನ । ದಿರಲಿದು ತ್ರಿಭುವನ ತಿಲಕವೆ ? (49)

ಮೂಲೋಕದ ತಿಲಕವ ನಕ್ಕರು ಮಿಗೆ , ಮೂಲೋಕದಂಗನಾತ್ರಿಲಕವೆ ॥
ಕೇಳಹಪರಸುಖ ಶರನಿಧಿಯೊಳಗೆನ್ನ । ನೋಲಾಡಿಪ ಜೀವನ ಯಂತ್ರ ॥ (50)

ಪಂಚೇಂದ್ರಿಯದ ಮನ ಪೋದಂತೆ ಚಿತ್ಕಲೆ । ಪಂಚಾಕ್ಷರವ ವೇದಿಸಿದಂತೆ ॥
ಪಂಚ ಸುಸ್ಥಾನದೊಳೈಕ್ಯವೊಂದಿದ ಹರಿ । ಸಂಚರ ಮಾಂಕನ ಕತೆ ಕೇಳಾ ॥ (51)

ಆ ಚರ ನೃಪನ ಕತೆಯ ಪೊಸ ಬಗೆಯಿಂದೆ । ಸೂಚಿಪೆ ಸಕಲ ಕಲಾರ್ಥವ ॥
ಯಾಚಿಪರ್ಗೀವಂತೆ ನುಡಿಸಿರಿ ಯುಳ್ಳಾಗ । ಲೇ ಚೌಪದದಿ ಚಾಪದವೀವ ॥ (52)

ಲಲಿತಗಾಯನ ರಸದಿಂದೆ ಮೋಹಿಸುವ ಚೆಂ । ದಳರಡಿ ಗೈಯಿಂದೆ ರಂಜಿಪ ॥
ಎಳೆವೆಂಗಳರಸಿ ಕೇಳ್ಕತೆವೇಳ್ವೆ ಮತ್ತಕೋ । ಕಿಲೆಯೆ ತಳತವಾಕಂಡವೆ ॥ (53)

ಗಿರಿಜೆಯ ಮೆಯ್ಗಂಪಿ ಗೆರಗುವ ತುಂಬಿಯಿಂ । ಚರವಶ್ವ ತರಗಾನ ರಸದೊಳು ॥
ಬೆರೆದು ಕಿವಿಗೆ ರಂಜಿಸೆ ತಲೆಯೊಲೆವ ಶಂ । ಕರ ಶಾಂತ ಮಲ್ಲಿಕಾರ್ಜುನ ಜಯ ॥ (54)

ಚೆರಮ ಶರಣಾಗ್ರಣಿಯ ಕೃತಿಯ ವಿ । ಸ್ತಾರವ ಮಾಳ್ಪರಾದರಿಪರ ॥
ತಾರಾರ್ಕರುಳ್ಳನ್ನೆವರ ಮಲ್ಲಿಕಾರ್ಜುನ । ನೋರಂತೆ ಪಾಲಿಪನೊಲವಿಂದೆ ॥ (55)

(ಮೊದಲನೆಯ ಸಂಧಿ ಸಮಾಪ್ತಂ)

ಎರಡನೆಯ ಸಂಧಿ.

ವಾಸವನಮಿತಪಾದಾಂಬುಜ ಫಣಿಪತಿ । ಭೂಷಣದೋಷ ವಿಭೀಷಣ ॥
ಶ್ರೀಶಪಿತಾಮಹ ನುತಿಪಾತ್ರ ಶಾಂತ ಮ । ಲ್ಲೇಶನೊಲಿದು ಸಲಹುಗೆ ನಮ್ಮ ॥ (1)

ಕಮಲದಲಾಕ್ಷಿ ಕನ್ನಡಿ ಕದಪಿನ ನೀರೆ । ಕುಮುದ ಸುಗಂಧಿ ಕೂರ್ಪಿನ ಪೆಂಪೆ ॥
ಭ್ರಮರಾಳಕಿ ಬಾಲೆ ಚಂದ್ರೋಪಮಾಧರೆ । ಪ್ರಮದೆ ಪೆಣ್ಗಳ ಮಣಿಕತೆಗೇಳ ॥ (2)

ಸಾಧಾರಣ ಚೇತಿತೆಯಲ್ಲ ಸಾಮಾನ್ಯ । ಬೋಧೆಯಲ್ಲಲ್ಪರ ಕಥೆಯಲ್ಲ ॥
ಈ ಧರೆಯೊಳು ರಂಜಿಸುವಂತೆ ಪೇಳ್ವೆನು । ಮಾಧವಚರಣ ಚರಿತ್ರವ ॥ (3)

ಈ ಕತೆಯಾದಿ ವರ್ಣನೆ ಯಾವುದೆನೆ ಮರ್ತ್ಯ । ಲೋಕವ ಪರಿವೇಷ್ಟನಂ ಗೆಯ್ದು ॥
ಶ್ರೀಕರವಾಗಿ ಕಂಗೊಳಸಿರ್ಪುದಮಲ ರ । ತ್ನಾಕರವಧಿಕ ವಿಸ್ತರದಿಂದೆ ॥ (4)

ತನುಜಪೂರ್ಣೇಂದು ಮಗಳು ಲಕ್ಷ್ಮಿ ಜಾಮಾತ । ವನಜದನಾಗಿರಲೆನ್ನಿಂದ ॥
ಘನವಾವುದೆಂದು ಮೈಯೊಲಿದುಬ್ಬಿ ನುಡಿವಂತೆ । ವನಧಿಯ ಕಳಕಳವೆಸೆದುದು ॥ (5)

ತೆರೆಗಳ ಸೀಗುರಿಯಿಂದೆ ತುಷಾರ ಚಾ । ಮರದಿಂದೆ ಜಲಜಾತಪತ್ರದೆ ॥
ಸುರಚಿರಮಣಿವಿಷ್ಟರದಿಂದೆ ಸಿಂಧು ಭೂ । ವರನಂತೆ ಕಣ್ಗೆ ರಾಜಿಸುವುದು ॥ (6)

ಆ ವಾರಿಧಿ ಬಳಸಿದ ಭೂಮಧ್ಯದೊಳೀವೇಳ್ವೆ । ನಮರಾದ್ರಿಯೆಸೆದುದು ॥
ತೀವಿರ್ದ ನೇಸರ್ಜೋಡೆರಾಂತ ಪೊಸಪೊನ್ನ । ದೀವಿಗೆ ಗಂಬವಿದೆಂಬಂತೆ ॥ (7)

ಇಂತೊಪ್ಪುವ ಮೇರುವಿನ ದಕ್ಷಿಣದೊಳ । ತ್ಯಂತ ವೈಭವದಿಂದೆ ಮೆರೆವುದು ,
ಕಾಂತೆ ಕೇಳ್ ಭಾರತವರ್ಷ ಜಂಬುದ್ವೀಪ । ದಂತರಾಳದ ಖಂಡಗಳೊಳು । (8)

ಆ ಭಾರತವರ್ಷದೊಳೆ ನಾನಾ ದೇಶ । ವಾಭದ್ರವಾಗಿ ಕಾಂತೆಸೆದಿರೆ ॥
ವೈಭವದಿಂದವರೊಳಗೆ ರಾಜಿಪುದೆಯ್ದು । ಶೋಭನ ದೇಶ ಕೇರಳ ದೇಶ ॥ (9)

ತರುಣಿಯರಸಿ ಕೇಳಾ ಮಲೆಯಾಳದ । ಪರಿಯ ಬಿತ್ತರಿಪೆನದೆಂತೆನೆ ॥
ಸಿರಿಯಿಕ್ಕೆ ಸಂಪದವೇಳ್ಗೆ ಸಿಂಗರಗಳ । ಶರನಿಧಿಯೆನಿಸಿ ಕಣ್ಗೆಸೆದುದು ॥ (10)

ಪಾವನನದಿಗಳಾಡುಂಬೊಲ ವಿಪುಳ ಧ । ರ್ಮಾವಾಸ ವಿಪುಳ ಪುಣ್ಯದ ಪಕ್ಕೆ ॥
ತೀವಿರ್ದ ಶಿವಭಕ್ತಿಯಾಗಾರ ವಖಿಳ ದೇ । ಶಾವಳಿಗದು ನಾಯಕ ರತ್ನ ॥ (11)

ಮದಕರಿಪುಟ್ಟಿದ ಮಲೆ ದಿವ್ಯರತ್ನ ಪು । ಟ್ಟದ ಗಿರಿ ಮುತ್ತು ಪುಟ್ಟದಪೊಳೆ ॥
ಪುದಿದು ಬಾವನ್ನಪುಟ್ಟದ ವನವೊಂದಿಲ್ಲ । ಚದುರೆ ಕೇಳಾರಾಜ್ಯದಿರವೆಂತೋ ॥ (12)

ಅರೆಗಿಳಿವಿಂಡೆಂಚೆಯಾನೆ ಕತ್ತುರಿಮಿಗ । ಸಾರತರುವಲ್ಲದೆ ನಾಡಾಡಿ ॥
ತರುಮೃಗ ಖಗಮಿಲ್ಲ ಶಿವಧರ್ಮವಲ್ಲ ದಿ । ತರ ಧರ್ಮವಿಲ್ಲವಾನಾಡೊಳು ॥ (13)

ಬೆಳೆವುವು ಶಾಲಿ ಪಾಮರಿಯರ ಪೊಗಸಸಿ । ಪೆಳಗಿ ಗೊಸರುವಿಂದು ಕಾಂತದ ।
ಜಲದಿಂದೆ ದೇವಮಾತೃಕ ನದೀಮಾತೃಕ । ಗೊಳಬಗೆ ಗೊಳದಾನಾಡೊಳು ॥ (14)

ಸರುಣಿಕೇಳ್ಭಂಗ ಪಂಬುಧಿಯೊಳು ವರ್ಣ ಸಂ । ಕರ ಚಿತ್ರದೊಳಗಕ್ರಮಾಚಾರ ।
ಉರಗ ಮಾರ್ಗದೊಳೆಪರಾಭವ ನಾಮ ವ । ತ್ಸರದೊಳಲ್ಲದೆ ಪೆರತರೊಳಿಲ್ಲ ॥ (15)

ಶುಭದಿಂದೆ ಶೃಂಗಾರದಿಂದೆ ಸುಕ್ಷೇಮದಿಂ । ದಭಯದಿಂದಖಿಳ ಧರ್ಮಂಗಳಿಂದೆ ॥
ತ್ರಿಭುವನ ಭರಿತ ಕೀರ್ತಿಯೊಳೆಸೆದಿರ್ಪುದು । ವಿಭವನಿವಾಸ ಕೇರಳದೇಶ ॥ (16)

ಇಂತೆಸೆದಿರ್ಪ ದೇಶದೊಳೆಕಣ್ಗೆಸೆವುದ । ತ್ಯಂತ ಶೋಭನವಾಂತ ಸೊಬಗಿಂದೆ ॥
ಕಾಂತೆ ಮಹೋದಯವೆಂಬ ಪಟ್ಟಣದೊಳ್ಪ । ನಾಂತು ಭೂರಮೆಯ ಭೂಷಣದಂತೆ ॥ (17)

ವನಿತೆ ಕೇಳಾಪುರ ಬಾಹ್ಯದೆ ಸಿಂಗರ । ಬನಮತಿಶಯದೆ ರಂಜಿಸುವುದು ॥
ಧನದನ ಚೈತ್ರರಥದ ಸುರಪನ ನಂ । ದನದೊರೆಮಿಗಿಲೆಂಬ ಪೆಂಪಿಂದೆ ॥ (18)

ಅಳರವದಿಂದೆ ಪುಳಲ್ದಂಪಿನಿಂದೆ ಚೆಂ । ದಳರ್ವಣ್ಣದಿಂದೆ ಮಾಕಂದದ ॥
ಪಳರಸದಿಂದೆ ಪೂಗಂಪಿಂದೆಯಿಂದ್ರಿಯಂ । ಗಳವಶಮಾಡದೆ ವನವನ ॥ (19)

ಅಳಿಗಳೆಳಸವರಲ್ಲಿ ಗಿಳಿ ಚುಂಬಿಸದ ಪಣ್ಣು । ಕಳಕಂಠ ನಿನದವಿಲ್ಲದ ಮಾವು ॥
ಎಳೆಯಂಚೆಯಾಡದ ಕೊಳಗಳಿಲ್ಲೆನಿಸಿ ಕಂ । ಗೊಳಿಸಿದುದಾವನವಸಿಯಳೆ ॥ (20)

ಪೇಳಲದೇನು ಕೋಮಲೆ ನಾಕ ಮರ್ತ್ಯಪಾ । ತಾಳದವರ್ಗೆ ಸುಗಂಧವ ॥
ಕೇಳಿಸಿದಂತೆ ಚಂಪಕ ಮಾಲತಿಮುಡಿ । ವಾಳಗಳಂಬನವೆಸೆದುದು ॥ (21)

ಇಂತೆಸೆದಿರ್ಪ ಸಿಂಗರ ಬನ ಪರಿವೇಶ । ದಂತೆ ಕಂಗೊಳಿಸಿ ಮಧ್ಯದೊಳಿರ್ದು ॥
ಕಾಂತಿವಡೆದು ಪೊಳಲೆಸೆದುದು ನಕ್ಷತ್ರ । ಕಾಂತನಂತಂಬುಜದಳನೇತ್ರೆ ॥ (22)

ಶರಧಿವಡಬಗಳ್ಕಿ ಶರಣುವೊಕ್ಕುದು ಮೇರು । ಗಿರಿಯುನೆಂಬಂತೆ ಪೊಂಗೋಂಟೆಯು ॥
ಪರಿವೃತವಾಗಿ ನಿರ್ಗಾದಿಗೆ ಪೆಂಪಿಗಾ । ಗರವಾಗಿ ಕಣ್ಗೆ ರಾಜಿಸುವುದು ॥ (23)

ಅಂದು ಸುರಾಸುರಬ್ಧಿಯೆಡೆಯೊಳಿಟ್ಟ । ಮಂದರವೆನೆ ಗುಂಪು ಕಡು ಗುಂಪು ।
ಒಂದಾದಗಳ ಬಳಿ ಸಮ್ಮಣಿ ಕೋಟೆಗ । ಳಂದೆಸೆದುದು ಪೊನ್ನ ಪೊಸಕೋಂಟೆ ॥ (24)

ನೀಲದ ಶಶಿಕಾಂತದ ಪೊಸರನ್ನದ । ಲೋಲಾಂಶು ಪುರಗೋಪುರಗಳ ॥
ಮೇಲೆ ಚೆಂಬಿಸಿಲಂತೆ ಚಂದ್ರಿಕೆಯಂತೆ ತ । ಮಾಲದಂತೆಸೆದವಂಗಜನಂಚೆ ॥ (25)

ನಾರಿಕೇಳ್ಕನಕರಾಜಿತ ರೋಹಣಾದ್ರಿಗ । ಳೋರಗೆಯೆನಿಸಿ ಕಣ್ಗೆಸೆವವು ॥
ಚಾರುರತ್ನದ ರಾಜಿತ ಮಿಸುನಿಯ ಸೌಧ । ವೋರಂತೆ ತತ್ಪುರವರದೊಳು ॥ (26)

ಹರಿನೀಲದ ಪಚ್ಚೆಯ ಪವಳದ ಹರ್ಮ್ಯ । ಕಿರಣದೊಬ್ಬುಳಿಯಾಗಿ ಬೆಳಗಲು ॥
ಸುರಧೇನುವೆಂದು ನರ್ತನಗೆಯ್ಯುತಿರ್ಪುದಾ । ಪುರದ ಮಯೂರಗಳಿಲಿಕಾಂತೆ ॥ (27)

ಕತ್ತುರಿಗೆ ಸಾರ ಸಾರಣೆಯಿಂದೆ ಕಟ್ಟಾಣಿ । ಮುತ್ತಿನ ರಂಗವಲ್ಲಿಗಳಿಂದೆ ॥
ಎತ್ತಿದ ಚಿತ್ರಕೇತನದಿಂದ ಪರಿದೊಪ್ಪಿ । ದತ್ತು ಮಂಗಳವಾಗಿ ಪುರವರ ॥ (28)

ವಿಮಲ ವಿದ್ರುಮ ಮೌಕ್ತಿಕದ ರಾಶಿಗಳಂ । ದಮಮನೀರ್ದೆಗೆದ ಮುನ್ನೀರಂತೆ ॥
ರಮಣೀಯ ರತ್ನದಂಗಡಿಗಳಿಂದಾ ಪುರ । ಕಮನೀಯವಾಗಿ ಕಣ್ಗೆಸೆವುದು ॥ (29)

ವಾರಿನಿಧಾನ ವಾರಾಹಭುಜಂಗವ । ವಾರಣವೇಣು ವೈಸಾರಿಣಾ ॥
ನೀರದ ಶಂಖದೊಳೊಗೆದ ಸುಮೌಕ್ತಿಕ । ವೋರಂತೆ ಮೆರೆವುದಾ ಪುರದೊಳು ॥ (30)

ಒರೆಯೊಲಲ್ಲಲ್ಲಿ ಸೂಸಿದ ಪೊನ್ನ ವಾಳಿಗೆ । ಸರಿಯಿಡೆ ಕಿನ್ನರ ರಾಣ್ಮನ ॥
ಉರುಕೋಶವೆಯ್ದದೆಂದತಿಶಯದಿಂ ಚಿನ್ನ । ವಸದರವಸರ ಕಣ್ಗೆಸೆದುವು ॥ (31)

ಪಿರಿದು ದೋಷಾನ್ವಿತ ರಾಜಾಶ್ರಯವೆಂ । ಬರದೆನು ತದನುಳಿದುಡುರಾಜಿ ॥
ಪುರವಿದಮಲರಾಜಯುಕ್ತವೆಂದೊಂದಿದಂ । ತಿರೆ ಕಂಚುವಸರರಾಜಿಪವಳಿ ॥ (32)

ನರಲೋಕವ ತಮ್ಮ ಸಾಮರ್ಥ್ಯದಿಂದೆ ನಿ । ರ್ಜರಲೋಕವೆಂಬಂದದೆ ಮಾಳ್ಪ ॥
ನಿರುಪಮೌಷಧಿಯಿಂದೆ ಗಂದಿಗೆವಸರಗ । ಳ್ಕರಮೆಸೆದಿರ್ಪುದಾ ಪುರದೊಳು ॥ (33)

ಪುರವನಿತೆಯರೆಂತೊ ಷಟ್ಪವಲ್ಲಿಯರು ನಿ । ರ್ಜರ ಸತಿಯರ ಮಿಗೆ ನಗುವರು ॥
ಒರೆವೆ ನದೇನನಾರಿಯರ್ವಾಲೆಗಾರ್ತಿಯ । ರುರಗಾಂಗನೆಯರನು ಮಿಗುವರು ॥ (34)

ಸುರಪತಿತತಿಭೋಗಿವ್ರಜ ವಿಬುಧರ । ಹೊರಳನಿರಂತರಮೆಸೆದಿರೆ ॥
ಪುರವೆಯ್ದೆ [1] ಸೊಗಯಿಸಿದುದು ಮೂರು ಜಗ ಬಂದು । ನೆರೆದಂತೆ ಪೊಂಬಾಳಿ ವೈಯಾಳಿ ॥ (35)

ಪಾರಿವವಿಲ್ಲದುಯ್ಯಾಲೆಗಳಿಲ್ಲದ ರಾಜ । ಕೀರವಿಲ್ಲದ ಸೌವಿಲ್ಲದ ॥
ತೋರಣ ಕನಕ ಘಂಟೆಗಳಿಲ್ಲದ ಸೂಳೆ । ಗೇರಿಗಳಿಲ್ಲ ತತ್ಪುರದೊಳು ॥ (36)

[1] ಸೊರೆಯಿಸಿದುದು ?

ಪೊಸವೇಟೆದ ಬಗೆಯುಲ್ಲದರಿಯ ರಚ್ಚೆ । ಬಿಸಿಲ ಬೇಗೆಯ ತಾಳವೃಂತದೆ ॥
ಮಿಸುಪ ತಂಗಾಳಿಯುಲ್ಲದ ಬಿರುಗಾಳಿಯ । ದೆಸೆಯುರಿಯುರು ಗಣಿಕೆಯರಲ್ಲಿ ॥ (37)

ಅರಸಿ ಕೇಳಮರರ ನಧರಾಮೃತದ ಕಿ । ನ್ನರರ ಗಾನದೆ ನೀಳ್ದ ಪಿಣಿರಲ್ಲಿಂದೆ ॥
ಉರಗರ ನೇತ್ರಾಂಜನದೆ ಸಿದ್ಧರ ಮಿಗೆ । ದೊರೆಗೆಣೆಪುದು ಗಾಣಿಕಜನ ॥ (38)

ಎಳೆವೆಂಗಳು ರಾಜಿಪ ಮುದ್ದು ವೆಂಗಳು । ಚೆಲುವಾಂತ ಪೊಸಜಾಣುವೆಂಗಳು ॥
ಪೊಲೆವೇಟದಿ ಮೋಹಿಪ ಬೆಲೆವೆಣ್ಗಳು । ಸುಳಿವರು ರಾಜಬೀದಿಗಳೊಳು ॥ (39)

ಶರದಭ್ರ ನಿರ್ಝರಾನ್ವಿತ ನೀಲ ಗಿರಿಗಳ । ಪಿರಿದಾವರಿಸಿ ರಂಜಿಸುವಂತೆ ॥
ಸುರಿವ ಮದದ ವಾರಣಗಳ ಸೊದೆವನೆ । ಯರ ಮನೆಯನು ಬಳಸಿರ್ಪವು ॥ (40)

ಬಿಸಿಲ ಬೇಗೆಗೆ ಬೆರ್ಚಿದಿನನ ಹಯಂಗಳು । ಶಶಿಮಂಡಲವ ಪೊಕ್ಕಿರ್ಪಂತೆ ॥
ಪೊಸಪಳುಕಿನ ಮಂದುರದೊಳು ಕಣ್ಗೆರಾ । ಜಿಸುವವು ಜಾತಿ ಹಯಪಗಳು ॥ (41)

ಪರಿಘೆಯ ತೆರೆವೊಯ್ಲುಗಳಿಂದೆ ಪೊಂದಾ । ವರೆಗಳ ರಾಜದಟ್ಟಲದಂತೆ ॥
ಸುರುಚಿರ ನೃಪಭವನವ ಬಳಸಿರ್ಪುದು । ಶಿರಿಯಂದಿ ಪೊಮ್ಮಗಿಲಸ್ಪಿಯಾಳಿ ॥ (42)

ಏನೆಂಬೆನಾಪೊಮ್ಮ ನಿಲಮಧ್ಯದೊಳು ನ । ವೀನ ಸುರತ್ನ ಕೂಟಗಳಿಂದೆ ॥
ತಾನೊಪ್ಪಿತನಿಮಿಷಾದ್ರಿಯ ನಗುವಂದದೆ । ಭೂನಾಥನ ಚೆಲ್ವ ಕರುಮಾಡ ॥ (43)

ಗಿರಿಪತಿಯೋಲಗಕೊಲಿದು ಬಂದು ಕುಲ । ಗಿರಿಗಳ್ ಬಳಸಿ ನಿಂದಿರ್ಪಂತೆ ॥
ಕರುಮಾಡಮನಾವರಿಸಿ ಕಣ್ಗೆಸೆದಿರ್ಪ । ವರಸಿವೆಣ್ಗಳ ಹರ್ಮ್ಯ ನಿಕುರುಂಬ ॥ (44)

ಮಿಸುಪ ಮಜ್ಜನದಡಿಗೆಯ ಸೆಜ್ಜೆಯ ಶಸ್ತ್ರ । ದೆಸೆವ ಭೋಜನವ ಕೊಟ್ಟಾರದ ॥
ವಸುಭಂಡಾರದೆ ಹಾರವ ಮನ ಮಾಡ । ದೆಸೆಯಾದಿಯಾಗಿ ರಂಜಿಪುದಲ್ಲಿ ॥ (45)

ಆ ರಾಜಮಂದಿರ ಕರ್ಣಿಕೆ ಯಿಂದೆ ಶೃಂ । ಗಾರರಸದ ಮಕರಂದವೆ ॥
ವಾರಣಮುದಗಂಧದೆ ಪುರವೆಸೆದುದು । ವಾರಿಜದಂತೆ ವಾರಿಜನೇತ್ರೆ ॥ (46)

ಹರಿಯೆದೆ ಗೋವಳತಿಯರಿಕ್ಕೆಯೆಂದು ತಾ । ವರೆ ಕೆಸರೊಳು ಜನಿಸಿದುದೆಂದು ॥
ಶರಧಿ ವಡಬ ಧಾಮ ಧೂಮವೆಂದವ ಬಿಟ್ಟು । ಪುರದೊಳು ಸಿರಿ ನೆಲಸಿರ್ಪಳು ॥ (47)

ನೆಟ್ಟನೆ ನಾಗಲೋಕದ ಸಿರಿಯಿಂದಿಕ್ಕಿ । ಮೆಟ್ಟಿದುದಮರಾವತಿಯನು ॥
ತೊಟ್ಟನೆ ವಿಭವದೆ ಪಾರಿಸಿ (ತಾ) ನದಿ । ಪಟ್ಟಣದೆಸಕವನೇನೆಂಬೆ ॥ (48)

ಆದರಿಸಂಬುಜಮುಖಿಯಿಂತು ಸಕಲ ಶು । ಭೋದಯವಾದ ವೈಭವದಿಂದೆ ॥
ಮೇದಿನಿಯೊಳಗೆ ತತ್ಪುರವಾಂತುದೆಯ್ದೆ ಮ । ಹೋದಯವೆಂಬ ನಲ್ವೆಸರನು ॥ (49)

ಕಣ್ಗತಿಶಯ ಪುಣ್ಯದಾಕೃತಿರಸನೆಗೆ । ತಣ್ಗದಿರಮರ್ದೆಂಬಂದದೆ ॥
ಜಾಣ್ಗಡಿ ನೋಡೆ ಪೊಗಳೆ ಮಿಗೆ ಗಾಡಿ । ತಣ್ಗೊಳನೆಸೆದುದುದಯಪುರಿ ॥ (50)

ಆ ರಾಜಧಾನಿಗೆರೆಯ ನಪ್ಪನೊಲವಿಂದೆ । ಚೇರಮವೆಸರಾಂತ ಭೂಕಾಂತ ॥
ಧಾರಿಣಿಯೊಳಗಾ ನೃಪಗೆಣೆಯೆನಿಸುವ । ರಾರುಂಟು ಚಂದ್ರ ಬಿಂಬಾನನೆ ॥ (51)

ಕುಲವೆ ಮಹಾಕ್ಷತ್ರಿಯರೊಳಗತಿಶಯ । ಗುಣವವನಮಲಚರಿತ್ರವೆ ॥
ನೆಲದೊಳಗಗ್ಗಳವಾದ ಚಾರಿತ್ರವೆಂ । ದುಲಿವುದವನ ಕೀರ್ತಿಡಂಗುರ ॥ (52)

ನದಿಗಳನಂತವಂಬುಧಿ ಯೊಳಗಾದುವ । ಲ್ಲದೆ ಪೊಳಕೊಂಡವೆ ಮುನ್ನೀರ ॥
ಉದಧಿಯನಂತವನೊಳಕೊಂಡು ಮುಂಬಂ । ದುದು ಚಿತ್ರವವನ ಯಶೋ ನದಿ ॥ (53)

ಥಳಥಳಸುವ ಚಂದ್ರ ಕಾಂತದಾಕರಡಗೆ । ಯೊಳಗಣ ರತ್ನದೀಧಿತಿಯಂತೆ ॥
ನಳನ ಭವಾಂಡದೊಳಗು ಹೊರಗೆನ್ನದೆ । ಬಳಸಿದುದವನೀಶನ ತೇಜ ॥ (54)

ಧರಣಿಪ ಚರಮಖಡ್ಗಧಾರಾ ಜಲಧರ । ಧರೆಯೊಳಗೆರೆಗದ ಮುನ್ನ ॥
ಅರಿಭೂಪರ ದಂತಪಂಕ್ತಿಗಳೆಡೆಯೊಳು । ಭರದೆ ಪುಲ್ಮೊಳೆವುದಚ್ಚರಿಯಂತೆ ॥ (55)

ತರುಣಿ ಕೇಳ್ ಕ್ರಯ ವಿಕ್ರಯದೊಳೇಂ ಕುಶಲನೊ । ಧರಣೀಪತಿ ತನಗಿಲ್ಲದ ॥
ವಿರಿದು ಭಯವನಹಿತರ್ಗಿತ್ತು ಕೊಂಬನು । ಕರಿಯಶ್ವರತ್ನಾದಿಗಳನೊಲ್ದು ॥ (56)

ಕಂತುನಂದನ ನಳಕೂಬರ ಕಾಮ ಜ । ಯಂತರ ಗೆಲ್ವ ಸೌಂದರ್ಯದ ॥
ಕಾಂತಿಪೊಣ್ಮುವ ವಿಮಲಾಕಾರದಿಂದ ಭೂ । ಕಾಂತ ಶಿರೋಮಣಿ ಯೆಸೆದಿರ್ಪ ॥ (57)

ಖ್ಯಾತಿವಡೆದ ಕರಿ ತುರಗ ವರೂಥ ಪ । ದಾತಿಗಳಗಣಿತಮೆಸೆದಿರ್ಪ ॥
ಭೂತಳಾಧಿಪ ನನಂತರ ನಾಳ್ದು ಸು । ನೀತಿಯೊಳಿರ್ಪನಾ ನರನಾಥ ॥ (58)

ಹರುಷದೆ ತನ್ನಿಷ್ಟಲಿಂಗವೆಂದೆನಿಸುವ । ತಿರುವಂಜಿಕಳನಾಥನ ನೊಲ್ದು ॥
ನಿರುಪಮ ಭಕ್ತಿಯೊಳರ್ಚಿಸುತಿರ್ಪ ನಾ । ನರನಾಥನೆಲೆ ಕಂಜವಳನೇತ್ರೆ ॥ (59)

ಗಿರಿಜೆಯು ಮೈಗಂಪಿಗೆರಗುವ ತುಂಬಿ ಯಿಂ । ಚರವಶ್ವತರ ಗಾನರಸದೊಳು ॥
ಬೆರೆದು ಕಿವಿಗೆ ರಂಜಿಸಿ ತಲೆಯೊಲೆವ ಶಂ । ಕರ ಶಾಂತ ಮಲ್ಲಿಕಾರ್ಜುನ ಜಯ ॥ (60)

ಚೇರಮ ಶರಣಾಗ್ರಣಿಯ ಕೃತಿಯ ವಿ । ಸ್ತಾರವ ಮಾಳ್ಪರಾದರಿಪರ ॥
ತಾರಾರ್ಕರುಳ್ಳನ್ನೆವರ ಮಲ್ಲಿಕಾರ್ಜುನ । ನೋರಂತೆ ಪಾಲಿಪನೊಲವಿಂದೆ ॥ (61)

(ಎರಡನೆಯ ಸಂಧಿ ಸಮಾಪ್ತಂ.)

ಮೂರನೆಯ ಸಂಧಿ-

ಆಶುಗಮಿತ್ರಾರ್ಣವೋದ್ಭವ ರವಿ ನೇತ್ರ । ಶೇಷಭೂಷಣ ಸುರನುತಿಪಾತ್ರ ॥
ಆಶಾಂಬರ ತಾರಕಾಂತಕ ಜನಕ ಮ । ಹೇಶ ರಕ್ಷಿಸು ಮಲ್ಲಿಕಾರ್ಜುನ ॥ (1)

ರಸಿಕ ಲಲಾಮ ವಿರುಪ ನಿನ್ನ ಕಾವ್ಯಪ । ರುಷಸೋಂಕೆ ಕುಜನಮನೋಮೋಹ ॥
ವಿಸುನಿಯಾದಪುದೆನೆ ಸುಜನ ಜನದ ಮಾನ । ಸೊಸರುವದೇನಚ್ಚರಿ ಪೇಳೆ ॥ (2)

ಚದುರೆ ಚಕಿತ ಮೃಗಲೋಚನೆ ಚಂದಿರ । ವದನೆ ಚಂಪಕಚಾರು ತರಗಂಧಿ ॥
ಮದಗಜಗಮನೆ ಮಾನಿನಿ ಮಾರನಿಷ್ಪಾರ್ಥ । ಪದಲೆನಿಸುವ ಪೆಣ್ಣೆ ಕತೆಗೇಳ ॥ (3)

ಇಂತಿರುತೊಂದು ದಿವಸದೊಳು ಚರಮ ಭೂ । ಕಾಂತನತ್ಯಂತ ಸಂಭ್ರಮದಿಂದೆ ।
ಕಾಂತೆ ಕೇಳರವಂಜಿಕಳನಾಥನನೆಂದಿ । ನಂತೆ ಪೂಜಿಸ ಪೋಗಲನುವಾದ ॥ (4)

ಪೊರಮಟ್ಟನಂಬುಜ ಸರಸಿಯಿಂ ಕಳಹಂಸ । ಪರಮೆಯಿಂಚರಗೂಡಿನಯದಿಂದೆ ॥
ಪೊರಮಡುವಂತೆ ಶಂಖಧ್ವನಿ ಸಹಿತ ನಾ । ಡೆರೆಯ ಚರಮ ನಿಜ ಸದನವ ॥ (5)

ಮತ್ತವಾರಣದ ಗ್ರಮಣಿ ಪೀಠದೊಳಗೆ ನೃ । ಪೋತ್ತಮನೊಲವಿಂದೆ ಮಂಡಿಸಿ ॥
ಮುತ್ತಿನ ಬೆಳ್ಗೊಡೆಗಳ ಚಮರಂಗಳ । ಮೊತ್ತ ವಿರಾಜಿಸಲೆಲ್ಲೆಂದ ॥ (6)

ವಿವಿಧ ವಿಶೇಷ ವಾಹನಗಳಂದೆತ್ತಿದ । ವಿವಿಧ ಪತಾಕೆಯಿಂದೆಸೆದಿರ್ಪ ॥
ವಿವಿಧ ದೇಶಾಧಿನಾಯಕರ ಗಡಣದಿಂದೆ । ಭುವನೇಶನೊಯ್ಯನೆ ನಡೆತಂದ ॥ (7)

ಬರುತೆ ಬರುತೆ ಕಂಡನು ದೂರದೊಳೆ ತೋರ್ಪ । ತಿರುವಂಜಿಕಳದಧಿನಾಥನ ॥
ಸುರುಚಿರ ಮಣಿ ಗೋಪುರವನಾನಂದದಿಂ । ದರಸನಂಬುಜ ದಳಾಯತನೇತ್ರ ॥ (8)

ಇಳೆಯೊಳು ಪುಣ್ಯದ ಪುಂಜದಾಕಾರವ । ತಳೆದು ಚರಮನ ಸುಬುದ್ಧಿಯ ॥
ಬೆಳಗಿದುದಿಹಪರಂಗಳ ನೆಲೆ ತಿರುವಂಜ । ಕಳನಾಪವರ್ಗಪಾದಪ ಫಲ ॥ (9)

ಕುಸುಮ ಕದಂಬ ಸೌರಭ್ಯದಿಂದಖಿಳ ತಾ । ಪಸರಿರ್ಪ ಪರ್ಣಶಾಲೆಗಳಿಂದ ॥
ಒಸೆದಮೃತವನೀವ ಸುರಧೇನುವಿಂದೆ ಕ । ಣ್ಗೆಸೆದುದಾ ತಿರುವಂಜಿಕಳ ಪೇಳ್ಕೆ ॥ (10)

ಸುರಕುಜಗಳ ಪೆರ್ಮೆಯನಡಗಿಪ ಫಳ । ತರುಗಳ ಕಿನ್ನರ ಮಿಥುನವ ॥
ಸರದಿಂದೆ ಗೆಲುವ ವಿಹಂಗಮ ತತಿಯ ಶೃಂ । ಗರದೊಳಾಕ್ಷೇತ್ರ ಕಣ್ಗೆಸೆದುದು ॥ (11)

ಕಾರ್ಮುಗಿಲಿಂದೆಳೆಮಿಂಚು ಬಳವಂತಿಕ್ಷು । ಕಾರ್ಮುಕಾರಿಯ ಗೋಪುರದೆ ತೋರ್ಪ ॥
ಭರ್ಮಕಳಶ ಕಾಣುತೇರಿರ್ದ ಗಜವನು । ಕೂರ್ಮೆಯಿಂದಿಳದಾನಾ ನರನಾಥ (12)

ಮಡದಿ ಕೇಳ್ಗಜಮನಿಳದು ಚರಮಾಂಕ ಕಾ । ಲ್ನಡೆಯೊಳೆ ಸಾರ್ದನಕ್ಕರೆ ಮಿಗೆ ॥
ಪೊಡವಿಗಚ್ಚರಿಯೆನೆ ಕಣ್ಗೆಡ್ಡವಾಗಿರ್ಪ । ಮೃಡನಿಲಯವ ಪಾಪ ವಿಲಯವ ॥ (13)

ಕರಿಹಯ ಛತ್ರ ಚಾಮರಗಳ ದೂರದೊ । ಳಿರಿಸಿ ಶಿವನ ನೋಳ್ಪ ತವಕದೆ ॥
ಧರಣಿಪರೊಡಗೂಡಿ ಯಗ್ರಸೋಪಾನವ । ಹರುಷ ದೊಳಡರ್ದನಾ ನರನಾಥ ॥ (14)

ಕಂಡನಂತ ಪುಣ್ಯಾಮೃತ ಪೂರ್ಣಕ । ರಂಡನೀಪತಿಯು ಶಿವ ಭವನದ ॥
ಮಂಡನಮೆನಿಸಿ ರಂಜಿಪ ಪರಿಖೆಯ ಚರ । ಮಂಡಲಾಧಿಪ ಭಕ್ತಿಯೆಸಕದೆ ॥ (15)

ಪಲವಣ್ಣದ ನೀರ್ವಕ್ಕಿಯಿಂಚರದಿಂದೆ । ಪೊಳೆವ ಬಲ್ದೆರೆಗಳ ರವದಿಂದೆ ।
ಬಳಸಿದ ನೀರಾಟದಂಗನೆಯರ ಕಾಂಚಿ । ಝಲುಪಿನಿಂದಲು ರಂಜಿಸಿದುದು ॥ (16)

ಪರಿವೃತವಾದ ಪೊಂಗೋಟೆಬಾಗಿಲುಗಳಿಂ । ದುರುತರ ವಜ್ರಕವಾಟದೆ ॥
ವರಮಣಿಮಯದೆ ನಾಲ್ದೆಸೆಗಾಭರಣವಾಗಿ । ಪಿರಿಯ ಗೋಪುರಗಳೊಪ್ಪಿದುವಲ್ಲಿ ॥ (17)

ಬಳಲ್ದು ಖೇಚರರು ವಿಶ್ರಮಿಸಲೆಂದಜನಿಟ್ಟ । ನೆಲೆಯು ತಾವಗವೆನೆ ಚಂಬೊನ್ನ ॥
ಕಳಸವಾಗಸವಾನಾಳರಿಯೆ ನಾಲ್ದೆಸೆಯ ಬಾ । ಗಿಲ ಗೋಪುರಗಳೆಸೆದವಲ್ಲಿ ॥ (18)

ಲೋಕದೊಳರ್ದ ಜಲಂಗಳ ಮಧ್ಯದೆ । ನಾಕಾದ್ರಿ ಕಣ್ಗೆಸೆದಿರ್ಪಂತೆ ।
ಶ್ರೀಕರವಾಗಿರ್ಪುದು ಶಿವ ಭವನವ । ನೇಕ ಸೌಧಂಗಳ ಬಳಸಿಂದೆ ॥ (19)

ಪೊಳೆವ ಪೊಂಗೆಲಸವ ಬಾಗಿಲಿಕ್ಕೆಲದೊಳು । ಮಿಳಿರ್ವ ನಾನಾ ಕೇತನಗಳು ।
ಸಲೆ ಸುರನದಿಯ ತೀರದಲಿ ಸೋಲುವವೆಯ್ದೆ । ಜಲಪಕ್ಕಿಗಳ ಪೊರ್ದಲಿಯದೆ ॥ (20)

ಗಗನಾಂಬು ರಾಶಿ ವೀಚಿಗಳಂತೆ ಸಂಚರಿ । ಪಗಣಿತ ವೃಷಭ ಕೇತನಗಳು ॥
ಅಗಜೆಯಾಣ್ಮನ ಮಂದಿರದ ಮುಂದೆಸೆವವು । ಪೊಗರಾಂತ ಪೊಂಜಗೆ ಮೈಯಳ್ ॥ (21)

ಇಂತು ಸಕಲ ಸಂಭ್ರಮದಿಂದೆ ರಂಜಿಪ । ಕಂತುಹರನ ನಿಜಭವನದ ॥
ಮುಂತಣ ಮಕರ ತೋರಣವ ನೀಕ್ಷಿಸಿ ಭೂ । ಕಾಂತನೈದುವ ಭಕ್ತಿ ಭಾವದೆ ॥ (22)

ಆ ಸಮಯದೆ ಮುರಜಡವ್ರುಡೆ ಡಮರುಗ । ವಾಸ ಮೃದಂಗ ಶಂಖಾನೀಕ ॥
ಆಶಾಂಬರನ ಗೇಹದೊಳೆಸೆದವು ನಿಜ । ಘೋಷಣೆ ತುಂಬಲಜಾಂಡವ ॥ (23)

ಗಿರಿಗುಹೆಗಳೊಳು ಮಾರ್ದನಿ ತಲೆ ಪೊಣ್ಮಿತು । ಬ್ಬರವಾಗಿ ಮೇಘ ನಿರ್ಘೋಷದೆ ॥
ಪರಶಿವ ತಿರುವಂಜಿ ಕಳನಾಥನಿರ್ಪಾ । ಗರದೊಳುಳ್ಳಖಿಳ ಭೇದನವ ॥ (24)

ಇನಕುದುರೆಗಳು ಬೆರ್ಚಲು ದಿಕ್ಕರಿಗಳು । ಘನ ಕರ್ಣಂಗಳನೆಯ್ದು ಬಿರ್ಚಲು ॥
ಕನಕಘಂಟಾರವವೊಗೆದುದು ಶಿವನ ಭ । ವನದೊಳಗಂಬುಜ ನೇತ್ರ ॥ (25)

ಇಂತಪ್ಪ ಶೋಭನ ವಾದನ ರವವೇ । ದಾಂತವೇದ್ಯನ ಸದನದೊಳುಣ್ಮೆ ॥
ಸಂತಸದಿಂದೆ ನಿಜಾಂಘ್ರಿಯ ತೊಳೆದು ಭೂ । ಕಾಂತ ಬಲಂಬರಲನುವಾದ ॥ (26)

ಭೂರಮಣಾವೃತ ಚರಮ ರಾಜೇಂದ್ರ । ತಾರಾಳಿಗೂಡಿ ಸುರಾದ್ರಿಯ ॥
ಕ್ಷೀರಾಬ್ಧಿಸುತ ಬಲಗೊಂಬಂತೆ ಶಿವನಾ । ಗಾರವ ಬಲವಂದ ನೊಲವಿಂದ ॥ (27)

ಜನಪತಿ ಬಲವಂದು ನೊಸಲೊಳು ಕರಯುಗ । ವನಜವನಿಟ್ಟನು ತಾನಾಗಿ ॥
ಘನಮುಕ್ತಿಸತಿಯ ಮನಂಬೊಗುವಂದದೆ । ಮನಸಿಜಾರಿಯ ನಿಳಯವಪೊಕ್ಕ ॥ (28)

ದೂಪವಾಸನೆ ಪಚ್ಚೆ ಕರ್ಪೂರವಳುಕಿನ । ದೀಪಗಳಾ ವೋದವಲರ್ಗಂಪು ॥
ಶ್ರೀಪತ್ರಚಂದನ ಕಳವಾಕ್ಷತಾದಿ ನಾ । ನಾ ಪರಿಮಳ ವಿದ್ರುಮವಂದು ॥ (29)

ತೊಳಗುವ ಪಸುರ್ವಟ್ಟೆಯ ಮೇಲ್ಕಟ್ಟನೊ । ಳ್ಳಳವಟ್ಟ ಪೊಂಗಂಟೆಗಳ ಬಿಂಬ ॥
ಪಳುಕಿನ ರಂಗ ಮಧ್ಯದೊಳು ಪೊಂದಾವರೆ । ಯಲರ ಪೂವಲಿಗಳಂತೆಸೆದವು ॥ (30)

ಕಂಡನುಕ್ಕರುಮಿಗಲರಸನಂದೀಶ್ವರ । ನಂಡವಿಡಿದು ಶೃಂಗಮಧ್ಯದೆ ॥
ಚಂಡಪ್ರಭಾಶತಕೋಟಿತೇಜಗಳೊಂ । ದುಂಡೆಯಾದಂತೆಸೆವಭವನ ॥ (31)

ಕಂಡನುರಗ ಭೂಷಣ ಭವ ನಾಶನ । ಕಂಡಭದ್ರನ ಕಾಲರುದ್ರನ ॥
ಕಂಡನಸಮನೇತ್ರನ ಸಿತಗಾತ್ರನ । ಕಂಡ ಶಾಂತನ ನುಮಾಕಾಂತನ ॥ (32)

ಪೊರೆಯೆತ್ತಿದ ಕುಡಿ ಮಿಂಚಿನ ತಿರುಳನಾ । ದರದಿಂದೆ ಮಸೆದೊಪ್ಪವಿಟ್ಟಂತೆ ॥
ಸುರುಚಿರಕಾಂತಿ ವಿರಾಜಿತರತ್ನ ವಿ । ಷ್ಟಗದೊಳೆಸೆವ ದೇವನ ಕಂಡ ॥ (33)

ತೊಳಪ ಸುರೇಂದ್ರ ಕಾರ್ಮುಕದೆಡೆಯೊಳಗೆ ಕಂ । ಗೊಳಸುವ ತರಣಿ ಮಂಡಲದಂತೆ ॥
ಬೆಳಗುವ ನವರತ್ನಕಲಿತ ಪ್ರಭಾವಳಿ । ಬಳಸಿ ಮಹಾಲಿಂಗವಿರೆ ಕಂಡ ॥ (34)

ಯಕ್ಷಕರ್ದಮದೆ ಪುದಿದ ನವ ಮೌಕ್ತಿಕ । ದಕ್ಷತೆಗಳನಾಂತು ವಜ್ರದ ॥
ನಕ್ಷತ್ರಮಾಲೆಗಳೆಡೆಯೊಳೆಸೆವ ಪಂಚ । ಲಕ್ಷಣಾನ್ವಿತ ಸೋಮನ ಕಂಡ ॥ (35)

ಮಾಲತಿ ಮೊದಲಾದ ಸೌರಭಮಯ ಪುಷ್ಪ ಮಾಲೆಗಳಿಂದೆಳೆ ಮರುಗದ ॥
ಮಾಲೆಗಳಿಂ ಕಾಂತಿಮಯವಾದ ಮಣಿದೂಪ । ಮಾಲೆಗಳಿಂದೀಶಾಧಿಪ ಕಂಡ ॥ (36)

ಕಂಡು ರೋಮಾಂಚ ಕಂಚುಕಿತಾಂಗನಾಗಿ ಭೂ । ಮಂಡಲಾಧಿಪ ಭಕ್ತಿಯೆರಕದೆ ॥
ದಂಡ ಪ್ರಣತನಾಗಿ ಜಯಜಯ ಯೆನುತಲಾ । ಖಂಡಲ ವರದನ ನುತಿಗೆಯ್ದು ॥ (37)

ಜಯ ಜಾತವೃಜಿನರೇನಾಶಾಚಲಪ ವಿ । ಜಯದಯಾಂಬೋಧಿ ಪಾವನ ನಿಧಿ ॥
ಜಯ ಜಯ ನೀಲಲೋಹಿತ ವಿಧು ಸೇವಿತ । ಜಯ ಜಯ ತಿರುವಂಜಿಕಳನಾಥ ॥ (38)

ಜಯ ಜಯ ಹರಹರ ಜಾಹ್ನವೀಧರ ಜಯ । ಜಯ ಪಂಚಮುಖ ಯಕ್ಷಪತಿ ಸಖ ॥
ಜಯಜಯಾಜಾತನೆ ಮೋಕ್ಷ ನಿರ್ಜರ ರಕ್ಷ । ಜಯ ಜಯ ತಿರುವಂಜಿ ಕಳನಾಥ ॥ (39)

ಜಯ ಜಯ ವಾಸವವಂದಿತ ಪದಪದ್ಮ । ಜಯ ಜಯ ಭಕ್ತ ಹೃದಯ ಸದ್ಮ ॥
ಜಯ ಜಯ ಕಾಮ ಜೀಮೂತ ಪ್ರಭಂಜನ । ಜಯ ಜಯ ತಿರುವಂಜಿ ಕಳನಾಥ ॥ (40)

ಬಿಸುಟನ್ಯವಿಷಯ ಕುಸುಮಗಳ ನಿಜಪದ । ಬಿಸರುಹದೌತ್ತಣವುಂಡು ॥
ಒಸೆದಲ್ಲಿಯೆ ತೊಡಗುಗೆಯಲ್ಲಿಯೆ ರಮಿ । ಯಿಸುಗೆನ್ನಮಾನಸ ಮದಭೃಂಗ ॥ (41)

ದೇವೇಶ ನಿಮ್ಮಂಘ್ರಿ ಸರಸಿರುಹದ ಭಕ್ತಿ । ಭಾವದ ನಿಜಸುಖವಲ್ಲದೆ ॥
ಆವರಿಪನ್ಯ ಸುಖಕೆ ಮನವೆರಗದಂ । ತೀವು ಶಾಶ್ವತಪದವಿತ್ತೆನ್ನ ॥ (42)

ಸುರಭಿಚಿಂತಾಮಣಿ ಸಂತಾನಂಗಳಿರೆ । ಬರಡು ಕಂಖರಗಳನಾಶ್ರೈವ ॥
ಮರುಳನಂದದೆ ನಿಮ್ಮ ಪದವಿರೆ ಸಂಸಾರ । ಶರಧಿಯೊಳಾಳ್ದಿರ್ದೆ ಯೆಲೆದೇವ ॥ (43)

ನಿನ್ನ ವಿಮಲ ಪಾದವೆ ನಿಜ ಸಂಪದ । ನಿನ್ನ ನಾಮವೆ ನಿಜಸುಖಧಾಮ ॥
ನಿನ್ನ ನುತಿಪ ಸಮರಸ ಭಕ್ತಿ ನಿಜ ಮುಕ್ತಿ । ನಿನ್ನ ಪೂಜಾವೃದ್ಧಿ ನಿಜಸಿದ್ಧಿ ॥ (44)

ನೀನೆನಗಂಗವು ಪ್ರಾಣವು ಎಲೆ ದೇವ । ನೀನೆನಗಿಷ್ಟ ನೀನೆನಗಾಪ್ತ ॥
ನೀನಲ್ಲದುಳಿದಾದುವ ಬಾಳ್ತೆಗೆಯ್ಯೆನೆಂ । ದಾ ನರನಾಥ ಬಿನ್ನಪಗೆಯ್ದು ॥ (45)

ತರುಣೇಂದುಧರನಂಘ್ರಿ ಸಾಮ್ರಾಜ್ಯದು । ತ್ಕರ್ಷಮದೆಂತೊ ಸೌಭಾಗ್ಯವ ॥
ಧರಣಿಪನಾಕ್ಷಣದೊಳಗೆ ಮೂಡಿದ ಕಂಡಿ । ದರಳ ಬಿಸುಡುವಂತೆ ಬಿಸುಟನು ॥ (46)

ಮಡದಿ ಕೇಳಾ ನೃಪತಿಯ ಚಿತ್ತದ ಬಿಡು । ಗಡೆಯಾರನೆಂತೊ ಮಂತ್ರಿಗಳಾಗ ॥
ಅಡಿವಿಡಿದುರೆ ಬೇಡಿಕೊಳ್ಳಲ್ಕೆಳದೆ । ಪೊಡವಿಯನುಳಿದನಾ ನರನಾಥ ॥ (47)

ಆ ಕ್ಷಣಮಣಿ ಭೂಷಣನುಳಿದು ಮಾಲಾರು । ದ್ರಾಕ್ಷೆಗಳಾಭರಣವ ತೊಟ್ಟ ॥
ಯಕ್ಷಕರ್ದಮವನುಳಿದು ಭಸಿತವನಿಟ್ಟ । ಮೋಕ್ಷಮುದ್ರಾಪರಿವೃತನಾದ ॥ (48)

ಪೊಸತಪ್ಪ ಚಿಂತ್ರಾಂಬರವನುಳಿದು ವಲ್ಲ । ವಸನವನುಟ್ಟ ಕೇರಳಭೂಪ ॥
ವಸುಧೆಯ ಬಿಟ್ಟ ತಪೋಧನ ಚರಿತದಿಂ । ದೆಸೆವನೀಶ್ವರ ಭಕ್ತಿಯುಳ್ಳವಟ್ಟ ॥ (49)

ಅಂಗವಾದುದು ಶಿವಭಕ್ತಿ ಶಿವಸ್ತುತಿ । ಹೊಂಗಿದುದಾತನ ನುಡಿಯೊಳು ॥
ಲಿಂಗದೊಳೆರಕವಾದುದುಮನವವನಂತೆ । ರಂಗದೊಳ್ನವಕಲೆಯೊಗೆದುದು ॥ (50)

ಪೆರತರಿಯದೆ ಸಾತ್ವಿಕೋದಯಮೆರ್ದೆಯೊಳು । ತುರುಗಿ ಪೊಂಪುಳಯೋಗಿದೇಹವ ॥
ಪುರವತಿಶಯದಿಂದ ಪೂಜಿಸುತಿರ್ದ ನಾ । ಪೆರೆದಲೆಯನ ಪಾದಪದ್ಮವ ॥ (51)

ಶಿವ ಗೀತ ಶಾಸ್ತ್ರ ಪುರಾಣಪಾಂಡಿತ್ಯದೆ । ಶಿವಪೂಜೆಯತಿಶಯ ಕೃತ್ಯದೆ ॥
ಶಿವಭಕ್ತ ಜನದ ಸತ್ಸಂಗ ದೌನ್ನತ್ಯದಿಂ । ದವನಿಪ ನಿರ್ದನಾ ಸ್ಥಳದೊಳು ॥ (52)

ಗಿರಿಜೆಯ ಮೆಯ್ಗಂಪಿಗೆರಗುವ ತುಂಬಿಯಿಂ । ಚರವಶ್ವತರಗಾನರಸದೊಳು ॥
ಬೆರೆದು ಕಿವಿಗೆ ರಂಜಿಸೆ ತಲೆಯೊಲೆವ ಶಂ । ಕರ ಶಾಂತಮಲ್ಲಿಕಾರ್ಜುನ ಜಯ ॥ (53)

ಚೇರಮ ಶರಣಾಗ್ರಣಿಯ ಕೃತಿಯ ವಿ । ಸ್ತಾರವ ಮಾಳ್ಪರಾದರಿಪರ ॥
ತಾರಾರ್ಕರುಳ್ಳನ್ನೆವರ ಮಲ್ಲಿಕಾರ್ಜುನ । ನೋರಂತೆ ಪಾಲಿಪ ನೊಲವಿಂದೆ ॥ (54)

(ಮೂರನೆಯ ಸಂಧಿ ಸಮಾಪ್ತಂ.)

ನಾಲ್ಕನೆಯ ಸಂಧಿ-

ಮೆರೆದಲೆಯುವಗೆ ಬಾಂದೊರೆದಳೆದಗೆ ನೇ । ಸರುವಣ್ಣಿಗೆ ಬಿಸುಗಣ್ಣಿಗೆ ॥
ಕರಿಗೊರಲಗೆ ತಲೆಯೊರೆ ಗೊರಲಗೆ ಪದೆ । ದೆರಗುವೆ ಶಾಂತಮಲ್ಲೇಶಗೆ ॥ (1)

ಸದಮಲಾಚಾರ ಶಂಕರಭಕ್ತಿಸಾರ ಕೋ । ವಿದರನ್ನ ವಿರುಪ ಭೂವರ ನಿನ್ನ ॥
ವದನಾಬ್ಜವ ಸಾರ್ದುದರಿಂದೆ ಶಾರದೆ । ಚದುರೆಯೆನಿಸಿರಂಜಿಸಿದಳು ॥ (2)

ವರಮಧುಕರಕುಂತಳ ಕೈರವ ನೇತ್ರ । ಸರಸಿಜಮುಖ ಚಂದನ ಗಂಧಿ ॥
ಸುರುಚಿರಕುಂದವರಸ್ಮಿತೆಲಲಿತಾಂಗಿ । ವಿರಚಿಪೆ ಕೇಳು ಮೊಲ್ಗತೆಯನು ॥ (3)

ಧರಣಿಪರಧಿನಾಯಕಚೇರಮಾಂಕ ನೀ । ಪರಿಯೊಳೆಸೆವುತೊಂದು ದಿವಸದೆ ॥
ತಿರುವಂಜಿಕಳನಾಥನ ಪಾದಪದ್ಮವ । ಹರುಷದೆ ಪೂಜಿಸಲನುವಾದ ॥ (4)

ನಿರ್ಮಲೋದಕದಿಂದೆ ಮಜ್ಜನಂಗೆಯ್ದುದು । ಷ್ಕರ್ಮವಿಚ್ಛೇದನ ಮಂತ್ರದ ॥
ಪೆರ್ಮೆಯಿಂ ಭಸಿತರುದ್ರಾಕ್ಷೆಯ ನಾಂತಿಭ । ಚರ್ಮಧರನ ಪೂಜೆಗನುವಾದ ॥ (5)

ಇಂತುಪವಿತ್ರಾಂಗನಾಗಿ ನಿರ್ಮಳ ಭಕ್ತಿ । ಯಂತರಂಗವ ತೀವೆ ನಲವಿಂದೆ ॥
ಕಂತುಹರನಚರಣಾರವಿಂದವ ಭೂ । ಕಾಂತ ಸಂತಸದೊಳರ್ಚಿಸಿದನು ॥ (6)

ಶ್ರುತಿಸಂಗತ ಮಂತ್ರಾಂಬುವಿನಿಂದೆ ಭೂ । ಪತಿ ನವ ಯಕ್ಷಕರ್ದಮದಿಂದೆ ।
ಅತಿಶಯ ಸೌರಭಾಕ್ಷತೆಯಿಂದೆ ಹಿಮಗಿರಿ । ಸುತೆಯರಸನನರ್ಚಿಸಿದನು । (7)

ಕಳಯಾಗಿರದ ಮಿಗ ತುಳಯದ ಸನೆಯಲ್ಲ । ದೆಲರಲೆಯದ ನಸುಕೊರಗದ ॥
ನೆಳಲು ಬಿಸಿಲುಮಾವರಿಸದ ಪೂಗಳಂ । ದಿಳೆಯಾಣ್ಮಶಿವನನರ್ಚಿಸಿದನು ॥ (8)

ವನಿತೆಕೇಳಗರು ಗುಗ್ಗುಳ ದೂಪಧೂಮದೆ । ಘನಸಾರ ರತ್ನದೀಪಗಳಂದ ॥
ಅನುರಾಗದಿಂದೆ ಬಾಂದೊರೆದಲೆಯನಪಾದ । ವನಜವ ಜನಪನರ್ಚಿಸಿದನು ॥ (9)

ಪರಮಾನ್ನ ಭಕ್ಷ್ಯಶಾಲ್ಯನ್ನಾದಿ ಭೋಜ್ಯವ । ಪರಮಪಾವನ ಮೂರ್ತಿಗುಣವಿತ್ತು ॥
ಸುರುಚಿರ ಕರ್ಪೂರ ಮಿಶ್ರ ತಾಂಬೂಲವ । ಧರಣೀಪಾಲಕನರ್ಪಣೆಗೆಯ್ದು ॥ (10)

ಇಂತೆಸೆವಷ್ಟವಿಧಾರ್ಚನೆಗಳ ಭೂ । ಕಾಂತ ಸದ್ಭಕ್ತಿಯೆಸಕದಿಂದೆ ॥
ಅಂತಕಾಂತಕನ ಪಾದಾರವಿಂದಗಳನ । ತ್ಯಂತಸಂಭ್ರಮದೊಳರ್ಚಿಸುತಿರ್ದ ॥ (11)

ಬೆರಗೊಂದಿದಂಗ ಬೆಳದೆರ್ದೆ ಲಿಂಗದೊ । ಳ್ಕರಿಗೊಂಡು ನಿಂದೆವೆಯಿಡದಕ್ಷಿ ॥
ಬೆರೆಯದ ಭಕ್ತಿ ತೀವಿದ ಭಾವದಿಂದೆ ನಾ । ಡೆರೆಯನೀಶ್ವರ ಪೂಜೆಗೆಯ್ದನು ॥ (12)

ಗಾತ್ರದೊಳಡಿದ ರೋಮಾಂಚನ ನೀಕ್ಷಿಪ । ನೇತ್ರದೊಳೊಗೆದಾನಂದಾಶ್ರು ॥
ಸ್ತೋತ್ರದೊಳ್ತೊದಲು ಗದ್ಗದ ಕಂಠದೊಳು ತೋರೆ । ಧಾತ್ರೀಶನೀಶಾರ್ಚನೆಗೆಯ್ದ ॥ (13)
ಇಂತು ಶಿವಾರ್ಚನೆ ಗೆಯ್ದಕ್ಕರಿಂದೆ ಪೂ । ಜಾಂತದೊಳಾ ಕೇರಳ ಭೂಪ ॥
ಸಂತಸ ಮಿಗೆ ಕಂಡನು ಚೋಳ ಪಾಂಡ್ಯ ಭೂ । ಕಾಂತರ ತನ್ನ ಸನ್ನಿಧಿಯೊಳು ॥ (14)

ಕಂಡಾಗಳಾ ಚೋಳಪಾಂಡ್ಯರು ಭಕ್ತಿ ಕ । ರಂಡೆನ ಮುಕ್ತಿ ವಧೂಟಿಯ ॥
ಗಂಡನ ಕೇರಳೇಂದ್ರನ ಪಾದ ಕಮಲಕೆ । ಮಂಡೆ ಚಾಚಿದ ರಬ್ಜದಳ ನೇತ್ರ ॥ (15)

ಎರಗಿದ ಸಖರ ತೆಗೆದು ತಕ್ಕೈಸಿ ನಾ । ಡೆರೆಯ ನೀವೈಯ್ತಂದ ಕಜ್ಜವ ॥
ಅರಿಪುವುದೆನಗೆ ಬೇಗದೊಳೆನೆ ಮನದೊಳು । ಮರುಗುತ ನೃಪನೊಳಂತೆಂದರು ॥ (16)

ಕೇಳ್ದವು ನೀವು ವೈರಾಗ್ಯದಿಂದುರ್ವಿಯ । ನಾಳ್ದರ ಲೊಲ್ಲದೆಮ್ಮಿದಿರೆಂದು ॥
ಪೇಳ್ದರ ನಂತರ ದೊಡನವರಿಂ ಚಿಂತೆ । ದಾಳ್ದಲ್ಲಿಗೆಳೆತಂದೆವವನೀಶ ॥ (17)

ಪರಚಕ್ರಕ್ಕೆಡೆ ಮಾಡಿ ಧರಿತ್ರಿಯ । ತರುಣಿಯ ಬಾಲ ವೃದ್ಧರನೆಯ್ದೆ ॥
ಅರಸ ಕೇಳ್ಬಿಟ್ಟು ನೀವಿಲ್ಲಿರು ತಿರಲಿನ್ನು । 'ಧರಣಿ ಮತ್ಸ್ಯನ್ಯಾಯ'ವೆನೆ ಕೇಳ್ದು ॥ (18)

ಪಣೆಯೊಳು ಕಣ್ಬಿಡವಂದದೆ ನಿಮ್ಮನಾ । ಗೆಣೆವೆತ್ತನೀ ರಾಜ್ಯಭಾರವ ॥
ಮಣಿಯದೆ ನೀವಾಂತೆನ ಗೊಲ್ದೀವುದು । ತ್ರಿಣಯನ ಮುಕ್ತಿ ಸಾಮ್ರಾಜ್ಯವ ॥ (19)

ಇಳೆಯಾಣ್ಮನಿಂತೆನ್ನ ಲೆಂದರವರು ನೀ । ವಿಳೆಯ ನಾಳ್ದಂತಾಳಲಾರ್ಪೆವೇ ॥
ಪಲದಲೆ ಯುಳ್ಳ ಪನ್ನಗ ತಾಳ್ದ ಲೋಕವ । ನೆಳೆವಾವುಗಳು ತಾಳಲಾರ್ಪವೆ ॥ (20)

ನೀನುಳ್ಳೊಡುಂಟವನಿ ಶ್ರೀಯುಳೊಡೆಗೂಟ । ನೀನುಳ್ಳೊಡೆ ಪಟ್ಟವೆಮಗುಂಟು ॥
ನೀನುಳ್ಳೊಡೆ ಬೆಳ್ಗೊಡೆಯುಂಟು ಜಸವುಂಟು । ನೀನಿಲ್ಲ ದಿರಲೆಲ್ಲಿವಿನಿತೆಲ್ಲ ॥ (21)

ನೀನೆಮ್ಮ ಸಿರಿಗೆ ಸಿಂಗರವೆಮ್ಮ ಮನದಾಣ್ಮ । ನೀನೆಮ್ಮ ಹರಣವಾದುದರಿಂದೆ ॥
ನೀನೆಂಬಿನಂತೆ ಧರೆಯ ಪಾಲಿಪುದೆನೆ । ಭೂನಾಥ ನವರೊಡನಿಂತೆಂದ ॥ (22)

ಅಳವೊಡಲುಡಲುಣ್ಣಲು ಕೊಂಡಾಡಲೇ । ಸುಳವುದೆ ಕಪಿಯ ಕೈಮಾಲೆ ॥
ತಳಲ್ಮಪುದೆಂದು ನೀರ್ದಳವಂದ ವೈಸೆ ನಾ । ನಿಳೆಯ ನಾಳ್ದಲ್ಲು ಮಾಡುವುದೇನು ? (23)

ಸಿರಿಮಳಲೇರಿ ಜವ್ವನ ಮೋಘಧಾಕಾರ । ತರುಣಿಯರೊಲುಮೆ ಬಿಸಿಲ್ದೋರೆ ॥
ಸುರಚಾಪಲಂಗಲೆಂದರಿದಿನಿತುವ ಪರಿ । ಹರಿಪರು ಜಾಣರಸ್ಥಿರವೆಂದು ॥ (24)

ದುಷ್ಟವೆಷ್ಣಾದರೊಂದೆರಡು ದಿವಸಪತಿ । ಬಟ್ಟರನ್ಯರನಾಸೆಗೆಯ್ವಳು ॥
ನಿಟ್ಟಸಲ್ಮನ್ನಾಳ್ದನಗಲದೆ ಭೂಕಾಂತೆ । ತೊಟ್ಟ ನನ್ಯರ್ಗೆ ಕಣ್ಣಿಡುವಳು ॥ (25)

ನೀರ ಬೊಬ್ಬುಳಕೆಯ ಕರ್ಬೊನ್ನೊಳೆ ಕಟ್ಟ । ಯಾರೈಕೆ ಗೆಯ್ವ ಮರುಳನಂತೆ ॥
ಶಾರೀರ ಸೌಖ್ಯವ ನಿಜವೆಂದು ತಿಳವುದು । ಪಾರಮಾರ್ಥವೆ ಬಲ್ಲವರಿಗೆ ॥ (26)

ನೆಲದಿಯಬಲೆಯೊಳು ನೊಣಸಿಲುಕುವವೊಲು । ಸಿಲುಕುವುದೆ ಕರಿಸಿರಿಯೆಂಬ ॥
ಬಲೆಯೊಳಗಳವಾಗಿ ಸಿಲುಕುವವೊಲು । ಸಿಲುಕುವನೆ ಪರಮಜ್ಞಾನಿ ॥ (27)

ಪರಿಕಿಪೊಡಲ್ಪ ಸುಖದ ಸಂಸಾರದೊ । ಳಾರುಸುಖವುಂಟೆಂಬ ನೆರೆಗಾಂಪ ।
ಉರಿಯ ನೆಳಲು ನೀರೊಳರೆ ಕಾಯ್ದಪೆನೆಂಬ । ಮರುಳನ ಗುರುಲಾಗದಿರ್ಪಗೆ ॥ (28)

ನೆಸಿವಿಂದ್ರಿಯ ವಿಷಯಕೆ ಕೂರ್ತು ನಿತ್ಯದೊ । ಳೆಸೆದಾತ್ಮಸುಖವ ನೊಲ್ಲದ ಬಗೆ ॥
ರಸವಾಂತಮಳಸಾರವನುಳದೊನಲಿವೊ । ಲ್ಕಸವನು ಗೃಹಿಸವುದಾಯು ತವಲ್ತೆ ॥ (29)

ಪ್ರತಿದಿನದೊಳು ಬರ್ಪ ನಿದ್ರೆಯೆಚ್ಚರಿಕೆ ಸಂ । ತತ ತನುವಿನ ಸಾವನುದಯವ ॥
ಪ್ರತಿಪಾದಿಸಲದನರಿದಿರ್ದು ಧರ್ಮವ । ನತಿಗಳೆವೆನೆ ರಾಜ್ಯಸುಖಕಾಗಿ ॥ (30)

ಒಡಲಿದೆನ್ನೊಳು ಪುದುವಾಳುತಲಿರ್ದು ಮ । ತ್ತೆಡರೊಳಗಂಜುಪ್ಪುದದರಿಂದೆ ॥
ತೊಡರನು ಪೆರತಾದ ನಿತ್ಯವಸ್ತುಗಳೊಳು । ಮೃಡಭಕ್ತಿ ತಾನೆಡೆಗೊಡಲೆಂದ ॥ (31)

ಎನಲೆಯ್ದೆ ನೊಂದು ಬೆಚ್ಚನೆ ಸುಯ್ದು ಮರುಗಿ ಕಂ । ಬನಿದಂದು ಚಿಂತೆ ಮುಪ್ಪುರಿಗೊಂಡು ॥
ಮನದನುರಾಗವಳಿದು ಚೋಳ ಪಾಂಡ್ಯರು । ಜನಪತಿಯೊಡನಿಂತೆಂದರು ॥ (32)

ನೀವಿಲ್ಲದೆಂತು ಬಾಳ್ವೆವು ಸುಖವಡುವೆವು । ನೀವಿಲ್ಲದೆಂತು ಸೈರಿಸುವೆವು ॥
ನೀವಿಲ್ಲದೆಮಗೀ ರಾಜ್ಯವೇಕೆನ್ನೆಂದು । ಭೂವರ ಗುಸಿರ್ದರಾಯತ ನೇತ್ರ ॥ (33)

ಎಲೆ ಭೂಪತಿಯೆಮ್ಮ ರಕ್ಷಿಪರಾರೆಂದು । ಘಳಿಲನೆ ಮಂತ್ರಿಸಾವಂತರು ॥
ಸಲೆ ಪುರಜನ ಪರಿಜನ ವೆಳ್ತಂದೆಯ್ದಿ । ಹಲುಬಿ ಪುಯ್ಯಲ್ಚಿ ರೋದಿಸಿದರು ॥ (34)

ಈ ಪರಿಯೊಳು ಕರಿಗಂದಿ ಪಂಬಲಿಸುವ । ಕೂಪಾರ ಮಂತ್ರಿಸಾವಂತರ ॥
ಭೂಪತಿ ಕಂಡು ಮನದೊಳೆಯ್ದೆ ಮರುಗುತಿ । ನ್ನೀಪರಿಯೆಂದು ಪೇಃಳಿಂತೆಂದ ॥ (35)

ಶಿವಪೂಜೆಯು ಮಾಡುತ ನಾಡನಾಳ್ವುದು । ವಿವರವೆ ಮುಕ್ತಿ ಸಾಧಕರಿಗೆ ॥
ಪವಣಿಲ್ಲದೆಂದು ನುಡಿಯೆ ಚೋಳ ಪಾಂಡ್ಯ ಭೂ । ಧವರೆಂದ ರಾಚೇರ ನೃಪನೊಳು ॥ (36)

ಮಲಯ ರಾಜೇಂದ್ರ ನುದ್ಭಟಚೋಳಾದಿಗ । ಳಳಿಯ ನಾಳ್ವಹಿತನಿಕಾಯುವ ॥
ಗೆಲಿದು ಸಜ್ಜನರ ಸಲಹುತಿರ್ದು ಮೇಣೀಶ । ನೊಳು ಬೆರಸರೆ ಪೇಳು ನರನಾಥ ॥ (37)

ಅವರ ಮಾತಿಗೆ ಕಿವಿಗಳ ಮುಚ್ಚಿ ನಾವೆತ್ತ । ಲವರೆತ್ತ ಲವರಗಜೇಶನ ।
ಅವತಾರವಗಜೆ ದಾಸರ ದಾಸರ್ನಾವೆನ । ಲವರೆತ್ತ ರೆಂದಧರಣೀಶ ॥ (38)

ಅರಸಕೇಳೀ ಶಿವಭಕ್ತರ ದಾಸದಾ । ಸರದಾ ಸನಾದ ಕಾರಣದಿಂದೆ ॥
ಧರೆಯೊಡೆತನ ನಿನಗಾದುದು ರಕ್ಷಿಸ । ದಿರೆ ಬಿಡೆವೆಂದು ಕಾಲ್ವಿಡಿದರು ॥ (39)

ಎಂದ ಮಾತೆರ್ದೆಗೊಂಡುದು ಪುಸಿಯೀಕಾವ್ಯ । ವೆಂದು ನುಡಿವ ವಾದವರತುದು ॥
ಮುಂದಣ ಬುದ್ಧಿದೋರಿಸದಿರೆ ಗಿರಿಜೇಶ । ನಿಂದೆಗಿಳವೆನೆಂದ ಮನದೊಳು ॥ (40)

ಎನುತಾಗ ಶಿವನಭಿಮುಖನಾಗಿ ಮೈಯಿಕ್ಕಿ । ಜನಪತಿ ಮುಕುಳತಾಂಜಲಿಯಾಗೆ ॥
ಮನಸಿಜ ಮಾನಭಂಗನ ತ್ರಿನೇತ್ರನ । ಧನಪಮಿತ್ರನ ಕೀರ್ತಿಸಿದನು ॥ (41)

ದೇವ ದೇವೇಂದ್ರ ಮುಖ್ಯಾಮರ ವಿಷ್ಣುವಿ । ದ್ರಾವಣ ಶರ್ವ ದಿಗಂಬರ ॥
ಪಾವನ ಚರಿತ ಪನ್ನಗಭೂಷ ಮುನಿಜನ । ಸೇವಿತ ತಿರುವಂಜಿಕಳನಾಥ ॥ (42)

ಎಳೆವೆರೆದಲೆಯ ನಿನ್ನಯ ಪಾದನಳಿನದೊ । ಳೊಳೆಯುವೊಲಾಗಿರಲೆಂತೆನ್ನ ॥
ಅಳಲಿಸುತಿಳೆಯ ನೀನಾಳೆಂಬ ಮೂರ್ಖರ । ಕಳುಪಿ ಸಂತಸದೆ ರಕ್ಷಿಪುದೆಂದ ॥ (43)

ಇಂತು ದೈನ್ಯಾಲಾಪದಿಂದೆ ಬಿನ್ನವಿಪಭೂ । ಕಾಂತನ ನೀಕ್ಷಿಸಿ ಮುದದಿಂದೆ ॥
ಸಂತತ ಕಾರುಣ್ಯಸಿಂಧು ಶಂಕರನತಿ । ಶಾಂತಭವಾಂತಕನಿಂತೆಂದ ॥ (44)

ಧರೆಯನುನ್ನತ ಭುಜದೊಳು ಸಿರಿವೆಣ್ಣ ಪೇ । ರುರದೊಳು ಸಾಮ್ರಾಜ್ಯ ಪಟ್ಟವ ।
ಹರುಷದೆ ನೊಸಲೊಳು ತಳೆದೆನ್ನಾಜ್ಞೆ ಯೊ । ಳಿರಿ ಸುಖದಿಂದೆ ಚೇರಮ ಭೂಪ ॥ (45)

ಎಲೆ ನೃಪ ಮದ್ದಾಸ ಭಾವದೆ ಪಲಕಾಲ ಯಿಳೆಯ ನಾಳ್ವುದು ಶತ್ರುಕಾಲವನು ॥
ವಿಲಯಮೆಯ್ದಿಪುದೆಂದು ಬೆಸನಿತ್ತ ಶಿವಗೆ ಕೇ । ರಳ ಭೂಪ ಭಯದೆ ಬಿನ್ನವಿಸಿದ ॥ (46)

ಭಾವ ನಿನ್ನಂಘ್ರಿಕಮಲ ವಲ್ಲದುಳಿದಾವ । ಭಾವಮೆನಗೆ ನಿಶ್ಚಯ ನಿನ್ನ ॥
ಸೇವೆಯನುಳದರೆಳಗೆ ಬಾಳ್ದರೆನೆನೆ । ಪಾವಕಲೋಚನನಿಂತೆಂದ ॥ (47)

ಹಿಂದೆ ನೀನೀ ಪರಿಯೊಳು ನಮ್ಮ ಪೂಜಿಸಿ । ಒಂದಾದೆ ಭಜಿಸು ಕೈಕೊಂಡೆವೆ ॥
ಬಂದು ನಾ ನಿನಗೆ ನಿಚ್ಚಲು ಕೇಳಸುವೆ ಪಾದ । ದಂದುಗೆ ಧ್ವನಿಯನಿಶ್ಚಯವೆಂದ ॥ (48)

ಗಿರಿಜೆಯು ಮೆಯ್ಗುಂಪಿಗೆರಗುವ ತುಂಬಿಯಿಂ । ಚರವಶ್ವತರ ಗಾನರಸದೊಳು ॥
ಬೆರೆದು ಕಿವಿಗೆ ರಂಜಿಸಿ ತಲೆಯೊಲೆವ ಶಂ । ಕರ ಶಾಂತ ಮಲ್ಲಿಕಾರ್ಜುನ ಜಯ ॥ (49)

ಚೇರಮ ಶರಣಾಗ್ರಣಿಯ ಕೃತಿಯ ವಿ । ಸ್ತಾರವ ಮಾಳ್ಪರಾದರಿಪರ ॥
ತಾರಾರ್ಕರುಳ್ಳನ್ನೆವರ ಮಲ್ಲಿಕಾರ್ಜುನ । ನೋರಂತೆ ಪಾಲಿಪನೊಲವಿಂದೆ ॥ (50)

(ನಾಲ್ಕನೆಯ ಸಂಧಿ ಸಮಾಪ್ತಂ)

ಐದನೆಯ ಸಂಧಿ-

ಅಸಿತಕಂಧರ ಜಾಹ್ನವೀಧರ ಗಜಚರ್ಮ । ವಸನ ಮುಕುಂದವಂದಿತಪಾದ ॥
ಶಶಿಶಿಖಿ ರವಿಲೋಚನ ಜಗದೀಶ್ವರ । ಭಸಿತಾಂಗ ಜಯ ಮಲ್ಲಿಕಾರ್ಜುನ ॥ (1)

ಎಳೆವೆಣ್ದುಂಬಿಗಳಂಚರ ಮಲಯಾ । ನಿಲನ ಮೈಸೋಂಕು ಬಸಂತದ ॥
ತಿಳಿಜೊನ್ನಮೆನಲೆಸೆದುದು ವಿರುಪೇಂದ್ರ ನೀ । ನೊಲಿದೊರೆವಿನಿಗಬ್ಬವರಸ ॥ (2)

ಮಲಯಜಗಂಧಿ ಮಂದಸ್ಮಿತ ಮುಖಿ ಪೀನ । ಕಳಶಸ್ತನೆ ಸಂಶಯ ಮಧ್ಯೆ ॥
ತೊಳಪಗಣ್ಣ ಬಲೆಯೆನ್ನೆದೆ ತಿಳಗೊಳನಂಚೆ । ಯೆಳವೆಂಗಳರಸಿ ಮೇಲ್ಗತೆ ಕೇಳ ॥ (3)

ಬಳಕಕೇರಳ ನೃಪನಾ ಶಿವನಂಘ್ರಿಗೆ । ಬಲವಂದು ವಂದಿಸಿ ಬೀಳ್ಕೊಂಡು ॥
ನಲವಿಂದೆ ಪೊರಮಟ್ಟು ಸಕಲವೈಭವಗೂಡಿ । ಪೊಳಲ್ಗಭಿಮುಖನಾಗಿ ನಡೆತಂದು ॥ (4)

ನಿರುಪಮಭರಿತ ಚರಮ ಚೋಳ ಪಾಂಡ್ಯ ಭೂ । ವರರೊಡಗೂಡಿ ಬರಲು ಮುಂದೆ ।
ಪುರಮೆಸೆದುದು ರಾಜಿಸಿದ ಸಿಂಗರದಿಂದೆ । ತರುಣಿ ಕೇಳ್ಕಣ್ಗೆ ಕೌತುಕವಾಗಿ ॥ (5)

ಹರಿನೀಲದ ಮೌಕ್ತಿಕ ಪುಷ್ಯರಾಗದ । ಮರಕತ ವೈಡೂರ್ಯ ಮಣಿಗಳ ॥
ಸುರುಚಿರ ಮಕರ ತೋರಣಗಳನೀಕ್ಷಿಸು । ತರಸನಕ್ಕರು ಮಿಗೆ ನಡೆತಂದ ॥ (6)

ಎಡೆಯೆಡೆಯೊಳು ಮಣಿದರ್ಪಣ ಮಾಲೆಗ । ಳಡಿಕಿರಿ ದುನ್ನತ ಗುಡಿಗಳ ॥
ಗಡಣದೊಳೆಸೆವ ಗೋಪುರವೀಧಿಗಳೊಳು । ಸಡಗರದಿಂ ನೃಪನೆಯ್ತಂದ ॥ (7)

ಸಾರಣೆಗೆಯ್ದ ಮೃಗೋದ್ಭವದಿಂದೆಯ್ದ । ಕಾರಣೆದೆಗೆದ ಕಾಶ್ಮೀರದೆ ॥
ಚಾರುಸುಗಂಧದೊಳಲರಪ್ರೂವಲಿಯಿಂದೆ । ಕೇರಿಕೇರಿಗಳು ಕಂಗೆಸೆದವು ॥ (8)

ಮಿಳಿರ್ವ ಪತಾಕೆಗಳ್ಮಾಗೆ ಮೇಘಗಳಂ । ದಿಳೆಗೊಗುತಿರ್ಪ ಮುತ್ತೆಸೆದವು ॥
ಲಲನೆ ಕೇಳಾಪುರ ಲಕ್ಷ್ಮಿಯ ಕಂಗಳಂ । ತಳರ್ವ ಸಂತೋಷಾಂಬು ಕಣದಂತೆ ॥ (9)

ಮಸುಳಿಸೆ ಬಿಸಿಲಬೆಳ್ಗೊಡೆಗಳು ಪಸರಿಸ । ಲಸಿರುಚಿಕೇತುಗಳನಿಲನ ॥
ದೆಸೆಗೆಡಿಸಲು ಚಾಮರಾನಿಲ ಕೊರ್ವಿಸೆ । ವಸುಧೇಶವಿಭವದೆ ನಡೆತಂದ ॥ (10)

ಕರಿಗಳನೇರಿ ಕಾಮಿನಿಯರ್ಕಳರಸ ನಿ । ತ್ತರದೊಳ್ ಚಮರೀರುಹಮನಿಕ್ಕೆ ॥
ಸುರುಚಿರ ಧವಳಾತಪತ್ರಸೀಗುರಿಗಳು । ಕರವೊಪ್ಪೆ ಪುರದೊಳ್ಯೈತರುತಿರ್ದ ॥ (11)

ಬಿಸಿಲಿಂದೆ ನೊಂದ ಕೈರವತತಿಗಮೃತಾಂಶು । ಬಿಸಕೆ ಸಿಲುಕಿದಮರರಿಗೆಯ್ದಿ ॥
ಅಸವಾಕ್ಷ ವೈದೋರಿದಂದದೊಳಾ ನೃಪ । ವಸುಧೆಯ ಜನಕೆ ವೈದೋರಿದ ॥ (12)

ಶಶಧರನೋರ್ವ ನಾನಾಕೈರವಂಗಳ । ನೊಸೆದಲರಿಸುವಂತೆ ನೃಪನಾಸ್ಯ ॥
ಶಶಿಬಿಂಬವಲರಿಸಿದುದು ರಾಜಧಾನಿಯೊ । ಳೆಸೆವ ಜನದ ನೇತ್ರಕುಮುದವ ॥ (13)

ನೆಲೆವಾಡಗಳನೇರಿ ನೃಪನನೀಕ್ಷಿಪ ಹೆಂ । ಗಳು ತಮ್ಮ ವದನ ಪಂಕ್ತಿಗಳಂದೆ ।
ಕಳೆಯುಣ್ಮೆ ಬೆಟ್ಟದಾವರೆಗಳ ಸೋಲಿಸು । ತಲರ್ಗಣ್ಣೆಯಿಂ ನೋಲವಡೆದರು ॥ (14)

ಉದಯಾದ್ರಿಯೊಳು ಬಾಲ ತರಣಿ ತೋರ್ಪಂದದೆ । ಮದಗಜವೇರಿ ಬರ್ಪರಸಗೆ ॥
ಮುದದಿಂದೆ ವರಮಣಿಮಯದಾರತಿಗಳ । ಸುದತಿಯರ್ಪಿಡಿದೈತಂದರು ॥ (15)

ಮಿಸುಗುವ ರತ್ನದಾರತಿಗಳ ನಿವಾಳಿಪ । ಪೊಸತಾದ ಪಟ್ಟೆಯಂಬರಗಳ ॥
ವಸುಧಾಸುರರಪಾದುಕೆಯ ಕೈಕೊಳುತಾಗ । ರಸೆಯೊಣ್ಮನರಮನೆಗೆಯ್ತಂದ ॥ (16)

ರಮಣಿಕೇಳಾ ವೇಳೆಯೊಳು ಸಖರೊಲ್ದು ಚೇ । ರಮಗೆ ಪಟ್ಟವಕಟ್ಟವೇಳ್ಕೆಂದು ॥
ಕಮನೀಯವಾಗೆ ಮಾಡಿದರುತ್ಸವಾರ್ಥವ । ಧ್ಯಮ ಪುರೋಹಿತ ಮಾತುಗಳಂದೆ ॥ (17)

ವಿನಯದೊಳಾ ಚೋಳಪಾಂಡ್ಯರಾಕ್ಷಣ ಮ । ಜ್ಜನಗೃಹಕಾಮ್ನಾಯ ಘೋಷದೆ ॥
ವನಿತೆಯರೊಲ್ದು ಪಾಡುವ ಶುಭಗಾನರಂ । ಜನೆಯಿಂದ ತಂದರಾ ನೃಪತಿಯ ॥ (18)

ಪಳುಕಿನ ಮಜ್ಜನ ಪೀಠದ ಮೇಲೆ ಕಂ । ಗೊಳಿಸಿದನಾಚೇರಮ ಭೂಪ ।
ಬೆಳಪದಿಗಳನಾಯಕನುತ್ತರಾಯಣ । ದೊಳು ಹಿಮಗಿರಿಯ ಸಾರ್ದೆಸೆವಂತೆ ॥ (19)

ತಳರ್ದೊಂಗಲಿಂದೆ ನಿರ್ಮಳ ಜಲದಿಂದೆ ಮಂ । ಗಳ ಸೂತ್ರದಿನಕ್ಷತೆಯಿಂದೆ ॥
ಮಲಯಜ ಚರ್ಚೆ ಪೂಮಾಲೆಗಳಂದಿರ್ಪ । ಕಳಸವ ಪಿಡಿದೆತ್ತಿದರಾಗ ॥ (20)

ಚೆಲುವಾಂತು ತಳಿರೇರಿದ ಸುರಭೂಜದ । ಸೆಳಗೊಂಬೆರಡೊಂದು ಫಲವನು ॥
ತಳೆದಂತವನೀಶರ ಕರತರದೊಳು । ಕಳಶವೆಸೆದುದಬ್ಜದಳನೇತ್ರೆ ॥ (21)

ಮಸಕವಾಂತೆಸೆವ ಸಖನನೆಯ್ದಿ ಪರಸಿದ । ರೊಸಗೆವರೆಯ ಧ್ವನಿ ದಿಶೆಗಳ ॥
ಮುಸುಗೆ ಪಟ್ಟಾಭಿಷೇಕವ ನೊಲ್ದು ಮಾಡಿದ । ರಸಿಯಾಳೆ ಕೇಳ್ ಚೋಳಪಾಂಡ್ಯರು ॥ (22)

ಉದಯಾದ್ರಿಕೂಟ ಕೋಟಿಯೊಳುಣ್ಮುವ ರವಿ । ಪದಮನೆ ನೃಪರ ಕರಾಬ್ಜದಿ ॥
ಪುದಿದ ಸುವರ್ಣಕಳಶ ವಾರಿಧಾರೆಯೊ । ಪ್ಪಿದುದ್ಯೈದೆ ಪಿಂಜರವರ್ಣದೆ ॥ (23)

ಎಡದೆರೆಪಿಲ್ಲದೊಪ್ಪುವ ಕುಚೆಹಾರಾಂಶು । ಕುಡಿಗೆ ಕಂಗಳಕಾಂತಿ ಜಲಧಾರೆ ॥
ಒಡನೆ ಮೂಧಾರೆಯಂತಿರಲೊದರಿಸಿದರು । ಮಡದಿಯರವಗಭಿಷೇಕವ ॥ (24)

ಮಂಗಳ ಮಜ್ಜನಂಗಳ ಮಾಡಿ ಪೊರಮಡೆ । ಲಂಗನಾಜನವಿದಿರೆಯ್ತಂದು ॥
ಮಂಗಳ ವಚನರಚನೆಯಿಂದ ಲೆತ್ತಿದ । ರ್ಮಂಗಲಾರತಿಯನಾ ನೃಪನಿಗೆ ॥ (25)

ವರದುಕೂಲಾಂಬರವಂ ಪೊರ್ದು ಮಂಗಳಾ । ಭರಣವನಿಟ್ಟನುಲೇಪವ ॥
ವಿರಚಿಸಿ ಪೂಮಾಲೆಯ ಸೂಡಿ ನೃಪತಿ ಸಿಂ । ಗರದ ವೈಸಿರಿಯಿಂದ ॥ (26)

ಕುಲಗಿರಿ ನಡೆಗಲಿವಂತೆ ಬರ್ಪರಸನ । ಜಲದಬ್ಜಮಲ್ತು ಬೆಟ್ಟಗಳೊಳು ॥
ಬೆಳೆದಬ್ಜಮಲ್ಲದು ಗಗನಾಬ್ಜಗಳೆನೆ । ಕೆಲದ ಬೆಳ್ಗೊಡೆಗಳೆಸೆದವಾಗಲೂ ॥ (27)

ಇಂತೊಲ್ದು ಬಂದನಾ ಮನುಜೇಂದ್ರ ಚಂದ್ರನೋ । ರಂತೆ ಮಂದಾಕಿನಿಯೊಳು ತೋರ್ಪ ॥
ಕಾಂತಿ ವಿರೂಪ ವೀಚಿಗಳನೆ ಕೇತುವ । ನಂತವೆಸೆವ ಸೌಧ ಸದನಕ್ಕೆ ॥ (28)

ಮಿಳಿರ್ವವು ಪೊಳಪೊಂದಿದ ಗುಡಿ ಸೌಧಾಗ್ರ । ದೊಳಗಿರ್ಪ ಮಣಿಗಳಸದ ಮೇಲೆ ॥
ಪೊಳರ್ವ ಬಾಲಾರ್ಕಮಂಡಲ ರುಚಿಪೂರ್ವಾ । ಚಲದಗ್ರದೊಳು ತಳ್ತು ನಿಮಿರ್ವಂತೆ ॥ (29)

ನೀಲದ ನೆಲ ವಜ್ರದ ಕಂಭ ನವರತ್ನ । ಕೀಲಿತ ರಮ್ಯ ಭಿತ್ತಿಗಳಂದೆ ॥
ಮೇಳೈಸಿದ ರನ್ನದ ತೊಲೆ ಪಚ್ಚೆಯ । ಮೇಲುವಲಗೆ ರಂಜಸಿದುದು ॥ (30)

ತೊಳಪ ಮಂಟಪದ ವಿತಾನದ ಮೌಕ್ತಿಕ । ಗಳ ಮಾರ್ಪೊಳಪು ಕಣ್ಗೆಸೆದುದು ॥
ಎಳೆಯ ನೀಲದ ಕುಟ್ಟಿಮದೊಳು ಪೊಸಮುತ್ತು । ಗಳ ರಂಗವಲ್ಲಿ ರಂಜಿಸುವಂತೆ ॥ (31)

ತೊಳಗುವ ಪಂಚರತ್ನದ ಭೃಂಗಾರಿಗ । ಳಳವಡಿಸಿದ ಕಂಬಿಗಳಂದೆ ॥
ಸುಲಲಿತ ಸಾಲಭಂಜಕೆಗಳಂದೆ ಸೆದುದು । ಲಲಿತಾಂಗಿ ಕೇಳುತ್ಸವ ಗೇಹ ॥ (32)

ಪಳುಕಿನ ಪಚ್ಚೆಯ ರಜತನ ನೀಲದ । ಸುಲಲಿತ ನವಪಾತ್ರಗಳೊಳು ॥
ಸಲೆ ದಧಿ ದೂರ್ವೆ ಕರ್ಪುರ ಕಸ್ತೂರಿ ಮಂ । ಗಳ ಸಾಧನಗಳು ಕಣ್ಗೆಸೆದವು ॥ (33)

ಕೆಲರಲರಂಬನ ಶಸ್ತ್ರಸಾಲೆಗಳಂತೆ । ಲಲನೆಯರ್ ಪೂಮಾಲೆಗಳನಾಂತು ॥
ಕೆಲರಿಕ್ಷು ಚಾಪನ ಜಯಲಕ್ಷ್ಮಿಯರಂತೆ । ತಳೆದ ಪುಂಡ್ರೇಕ್ಷುವಿಂದೆಸೆದರು ॥ (34)

ಚಿತ್ರಲತಾಕಳಿಕೆಗಳಂದೆ ಮಣಿ ಕಾತ । ಪತ್ರದೆ ಹರಿಪಾದಾಂಶಗಳಂದೆ ॥
ಗೋತ್ರವೆನಿಸಿ ರಂಜಿಪ ಸಿಂಹ ಪೀಠವ । ಧಾತ್ರೀಶನಡರ್ದು ಮಂಡಿಸಿದನು (35)

ಶ್ರೀವನಿತೆಯ ಕೇಕರರುಚಿಯೆನೆ ಬಿಡ ದಾವರಿಸಿದವು ಚಾಮರಗಳು ॥
ಭಾವಿಸಿ ಸಿಂಗರಗಡಲ ಫೇನಗಳಂತೆ । ತೀವಿರ್ದವವನ ಬೆಳ್ಗೊಡೆಗಳು ॥ (36)

ನೆಲವೆಣ್ಣು ಪರಿಣಯ ಗೆಯ್ವೆನೆಂದುರೆ ಶಿರ । ದೊಳು ವೆಣ್ಣುಬಾಸಿಗ ವಿಡುವಂತೆ ॥
ಬೆಳಗುವ ಮಣಿ ಮುಕುಟವ ನಿಟ್ಟರರಸಗೆ । ಲಲನೆ ಕೇಳಾ ನೃಪರೊಲವಿಂದೆ ॥ (37)

ವಿವಿಧ ವಾದ್ಯಧ್ವನಿ ಮಂಗಲ ಸಂಗೀತ । ರವ ಪುಣ್ಯಾಪಾಠಕ ನಿರ್ಘೋಷ ॥
ಕವಿಬುಧರಾಶೀ ರ್ವಾದನಾತಿಶಯ ತೀವ । ಲವರೊಲ್ದು ಪಟ್ಟಗಟ್ಟಿದರಾಗ ॥ (38)

ಕೆಲಬರು ಗಂಧ ಸಿಂಧುರ ಜಾತ್ಯಶ್ವವ । ಕೆಲಬರು ರತ್ನಮಂಡನಗಳ ॥
ಕೆಲರು ಸುವರ್ಣಚ್ಛಾಯುವ ವಸ್ತ್ರ ನಿಚಯವ । ಕೆಲರು ಕಾಣಿಕೆಯಿತ್ತರರಸಗೆ ॥ (39)

ತರುಣಿಕೇಳ್ ಪೂರ್ವಾದ್ರಿಯ ರವಿರುತಿಗಳಾ । ವರಿಸುವಂತಾ ನೃಪಗೆರಗುವ ॥
ಧರಣಿಪಾಲರ ಮಣಿ ಮುಕುಟದ ರೋಚಿಯಾ । ವರಿಸಿದುದಾ ಸಿಂಹ ಪೀಠವ ॥ (40)

ಆಕಾರಣಾನ್ವಿತ ಹರಿಪೀಠದೊಳಗೆ ನ । ವ್ಯಾಕೃತಿವೆತ್ತು ಕೇರಳರಾಯ ॥
ನಾಕಪತಿಯ ಪದವಿಗೆ ಮಿಗಿಲೆನಿಸುವ । ನೇಕವಿಭವ ಮಿಗಿಲೆಸೆದಿರ್ದ ॥ (41)

ಶಿವಭಕ್ತರಸಂಗದೊಳು ಶಿವಕಥೆಯೊಳು । ಶಿವ ಪೂಜೆಯೊಳು ಶಿವನುತಿಯೊಳು ॥
ಶಿವನಾದ ಸತ್ವಭಾವನೆಯಿಂದೆ ರಂಜಿಪಂ । ತವನೀಶನಿಳೆಯ ಪಾಲಿಸುತಿರ್ದ ॥ (42)

ಶಿವಧರ್ಮಾರ್ಥಿ ವರ್ಧನ ಚಂದ್ರನಕಳಂಕ । ಶಿವಶಾಸ್ತ್ರ ಧುರ್ಯರ್ಸಚ್ಚರಿತಾಂಗ ॥
ಶಿವಪಾದಾಂಬುಜ ಭೃಂಗನಾ ಚೇರ ಭೂವರ । ನವನಿಯನೊಲ್ದು ಪಾಲಿಸುತ್ತಿರ್ದ ॥ (43)

ಗಿರಿಜೆಯ ಮೆಯ್ಗಂಪಿಗೆರಗುವ ತುಂಬಿ ಮಿಂ । ಚರವಶ್ವತರ ಗಾನ ರಸದೊಳು ॥
ಬೆರೆದು ಕಿವಿಗೆ ರಂಜಿಸಿ ತಲೆಯೊಲೆವ ಕಂ । ಕರಶಾಂತ ಮಲ್ಲಿಕಾರ್ಜುನ ಜಯ ॥ (44)

ಚೇರಮ ಶರಣಾಗ್ರಣಿಯ ಕೃತಿಯ ವಿ । ಸ್ತಾರವ ಮಾಳ್ಪರಾದರಿಪರ ॥
ತಾರರ್ತರುಳ್ಳನ್ನೆವರ ಮಲ್ಲಿಕಾರ್ಜುನ । ನೋರಂತೆ ಪಾಲಿಪನೊಲವಿಂದೆ ॥ (45)

(ಐದನೆಯ ಸಂಧಿ ಸಮಾಪ್ತಂ.)

ಆರನೆಯ ಸಂಧಿ.

ವಿಷಜಾತ ಪುತ್ರ ವಿಗ್ರಹ ಗೋತ್ರ ಶತಕೋಟಿ ।ವಿಷಧರಧರ ಕಾಲ ಭಂಜನ ॥
ವಿಷಧರಾಹಿತ ಮಿತ್ರ ಪವಮಾನಸಖನೇತ್ರ । ವಿಷಧರ ಜಯಮಲ್ಲಿಕಾರ್ಜುನ ॥ (1)

ಕೇಳದೆ ಪಳದರರಿಯೆ ನಿನ್ನ ಕಾವ್ಯವ । ಕೇಳದವರು ನವರಕದೊಳು ॥
ಆಳದೆ ಸಂತಸದಾಳದೆ ಮಗುಳೊಲ್ದು । ಕೇಳದಿರ್ದಪರೆ ವಿರುಪ ಭೂಪ ॥ (2)

ತರಳಮೃಗಾಕ್ಷಿ ಸಿಂಧುರಮಂದಗಮನೆ ಸಿಂ । ಗರಗಾರ್ತಿ ಸಿಂಹಬಂಧುರ ಮಧ್ಯೆ ॥
ಸರಸಿಜಗಂಧಿ ಹೆಂಗಳರನ್ನೆ ಮನ್ಮನ । ದರಸಿಕೇಳೊಲಿದು ಮೇಲ್ಗತೆಯನು ॥ (3)

ಇಂತೆಸೆವಧಿಕ ಭಾಗ್ಯದ ಸೊಂಪಿನಿಂದೆ ಭೂ । ಕಾಂತನಿರುತಲೊಂದು ದಿನದೊಳು ॥
ಕಾಂತೆ ಕೇಳೊಡ್ಡೋಲಗದೊಳಿರ್ದ ನತಿಶಯ । ಕಾಂತಿಮಿರುಪ ಮಂಟಪದೊಳು ॥ (4)

ಮಣಿಮಯವಾದ ವಿಭೂಷಣಗಳ ತೊಟ್ಟು । ಮಣಿಮಯ ಸಿಂಹಾಸನದೊಳು ॥
ಮಣಿಮಯ ಮಕುಟಬದ್ಧರ ಮಧ್ಯದೊಳು ನೃಪ । ಮಣಿಯಿರ್ದ ಕಣ್ಗೆ ಮಂಗಳವಾಗಿ ॥ (5)

ಹಡಪಕನಕದಂಡೆ ಚಾಮರಂಗಳ ತಂಪು । ವಿಡಿದು ರಂಜಿಸುವಾಲವಟ್ಟದ ॥
ಡಿನೀರ ಗುಂಡಿಕಾಳಂಜಯಸತಿಯರ । ಗಡಣದೊಳಿರ್ದನಾ ನರನಾಥ ॥ (6)

ಹೆಂಗಳ ತನುಕಾಂತಿ ಜಳನಲ ತೋಳ್ತೊಡೆ । ಪೊಂಗಿದ ಕುಚಚಕ್ರಮುಖ ಪದ್ಮ ॥
ಮುಂಗುರುಳಳರಂಜಿಪ ಸಭೆಸರಸಿಯೊ । ಳ್ಕಂ ಗೊಳಿಸಿರ್ದನಾ ನೃಪಹಂಸ ॥ (7)

ಸಲೆಸಂದ ಮಂತ್ರಿ ಸಾಮಂತ ನಿಯೋಗಿ ಮಂ । ಡಲಿಕ ರಾಜಶ್ರೇಷ್ಠಿ ಯುವರಾಜ ॥
ದಳಪತಿ ದಂಡನಾಯಕ ಸಂಧಿವಿಗ್ರಹಿ । ಗಳ ತಂಡವೆಸೆದುದಾ ಸಭೆಯೊಳು ॥ (8)

ಮಾಳವ ಮಗಧ ಕಾಶ್ಮೀರ ಕರಾಟ ನೇ । ಪಾಳ ಖರ್ಪರ ಸಿಂಧು ಬರ್ಬರ ॥
ಕಾಳಿಂಗ ಮುಖ್ಯ ದೇಶಾಧಿಪರಾ ನೃಪ । ನೋಲಗದೊಳಿರ್ದರಸಿಯಳಿ ॥ (9)

ಗುರುಜನ ಮಾಶ್ರಿತ ಜನ ಬಾಂಧವ ಜನ । ಪರಿಜನ ಸನ್ಮಿತ್ರ ಜನರೆಯ್ದಿ ॥
ಪುರಜನವತಿ ಸಂಭ್ರಮದಿ ಕಣ್ಗೆಸೆದುದು । ತರುಣಿ ಕೇಳಾ ಸಭಾಂತರದೊಳು ॥ (10)

ಕವಿವಾದಿ ವಾಗ್ಮಿಗಮಕಿ ಪೌರಾಣಿಕ । ವಿವಿದೇತಿಹಾಸಿಕ ಶಾಸ್ತ್ರಜ್ಞ ॥
ಯುವತಿ ಕೇಳ್ಗಾಯಕ ವಾದಕ ನರ್ತಕ । ನಿವಹವೊಪ್ಪಿರ್ದು ದೋಲಗದೊಳು ॥ (11)

ವರನಾಟಕಾಲಂಕಾರಜ್ಞ ಭರತಜ್ಞ । ಕರಿಹಯ ಶಾಸ್ತ್ರಜ್ಞ ನೀತಿಜ್ಞ ॥
ಪರಿವೃತ ನೈಮಿತ್ತಿಕ ಚಿತ್ರಕ ವೈದ್ಯ । ರರಸನಾ ಸ್ಥಾನದೊಳೆಸೆದರು ॥ (12)

ಪುದಿದ ವಾಮನ ದೀರ್ಘ ಮುಖ್ಯ ಜಾತ್ಯಂಗವು । ನೊದವಿಪ ಪರಿಹಾಸ ಜನದಿಂದೆ ॥
ಪದೆದಿಂದ್ರ ಜಾಲ ಮಹೇಂದ್ರ ಜಾಲಕರಿಂದೆ । ಚದುರತೆ ವೆತ್ತುದಾ ನೃಪಸಭೆ ॥ (13)

ತಳರಡಿ ನುಣ್ದೊಡೆಗಳ ಬಟ್ಟ ಸೊರವಾರ । ಸುಳನಾಭಿಯ ಕುಂಭ ಕುಚಗಳ ॥
ನಳದೋಳ್ಗಳ ನಗೆವೊಗ ಚೆಲ್ಲೆಗಂಗಳಿ । ಬೆಳವೆಂಗಳಿ ಸೆದರೋಲಗದೊಳು ॥ (14)

ಸ್ಮರನಧಿದೇವತೆಯರೊ ಪೂತಲತೆಗಳೊ । ಪರಿಮಳಮಯ ಪುತ್ರಿಕೆಗಳೊ ॥
ತರಳ ವಿಟರು ಮೋಹಿಪ ವಶ್ಯ ತಿಲಕದ । ಭರಣಿಗಳೆನೆ ಹೆಂಗಳೆಸೆದರು ॥ (15)

ಮುಡಿಗಳೊ ಕಾರ್ಮುಗಿಲೋ ಪೊಳೆವಕ್ಷಿಯೊ । ಕುಡಿಮಿಂಚೊ ಕರಿಕಣನಿಸದಪ್ರೊ ॥
ಇಡಿದ ಮೇಘಧ್ವಾನವೊ ಯೆನಲೆಸೆದರು । ಮಡದಿಯರ್ಮಳೆಗಾಲವೆಂಬಂತೆ ॥ (16)

ಕೆದರಿದ ಚಂದನ ರಜದಿಂದೆ ಮುಡಿಗಳಿಂ । ದುದಿರ್ದ ನಾನಾ ಪುಷ್ಪ ತತಿಯಿಂದೆ ॥
ಸುದತಿಯರಲತಿಗೆ ವಜ್ಜೆಗಳಿಂದೆಸೆ । ದುದು ಸಭೆ ಕಂಗೆ ಮಂಗಳವಾಗಿ ॥ (17)

ಓರೊರ್ವರ ಮೈಸೋಂಕೆ ನಿಂದುದಿರ್ದ ಕ । ಸ್ತೂರಿ ಕುಂಕುಮ ರಜತೆರೆಗೊಂಡು ॥
ಚಾರು ಚಾಮರ ದೆಲರಿಂ ಪರಕಲಿಸಿದು । ದಾ ರಾಜಸಭೆಯೊಳಂಬುಜನೇತ್ರೆ ॥ (18)

ದಿವಿಜ ಸಭೆಯೊಳೋರ್ವನೆ ಬುಧ ನೋರ್ವನೆ । ಕವಿ ಯೋರ್ವನೆ ಗುರುವಂತಲ್ಲ ॥
ಅವನಿಪ ಸಭೆಯೊಳನಂತ ಬುಧಾನೇಕ । ಕವಿಗುರು ನಿಕರ ಕಣ್ಗೆಸೆದುದು ॥ (19)

ನಿರುಪಮ ವೇದ ಶಾಖಾಸಮೂಹಗಳಿಂದೆ । ಸುರುಚಿರ ಶಾಸ್ತ್ರ ಪುಷ್ಪಗಳಿಂದೆ ॥
ವರಬುಧ ಜನ ಮಧುಕರ ಸಂದೋಹದೆ । ಸುರತರುವೆನೆ ಸಭೆಯೆಸೆದುದು ॥ (20)

ಪೆರಸಾರಿ ಸಮ್ಮುಖಗಳ ಬಿಡಿಕುಳ್ಳಿರಿ । ಸೆರಗನೋ ಸರಿಸಿ ಮೆಲ್ಲನೆ ಪೋಗಿ ॥
ಮರೆಯಾಗದಿರಿ ಬಿನ್ನಪಗೆಯ್ಯೆನಿಪ ಪಡಿ । ಯರರುಲುಪೆಸೆದುದಾ ಸಭೆಯೊಳು ॥ (21)

ವರಗುರ್ಜರ ಸಿಂಧ ಕಳಿಂಗ ಸಿಂಹಳೇ । ಶ್ವರರಿತ್ತ ಪಟ್ಟಾಂಶುಕ ಹಯ ॥
ಕರಿರತ್ನ ಮೊದಲಾದ ಕಪ್ಪವ ನೃಪನೀವ । ಪರಿವಿಡಿಯೆಸೆದುದಾ ಸಭೆಯೊಳು ॥ (22)

ರಸಕಾವ್ಯ ಗೋಷ್ಠಿಯೊಳೊರ್ಮೆ ನಾಟಕ ನಾಟ್ಯ । ದೆಸಕದಳ್ತಿಯೊಳೊರ್ಮೆ ಮಲ್ಲರ ॥
ಮಸದಂಕದೊಳೊರ್ಮೆ ಮೇಘಯುದ್ಧದೊಳೊರ್ಮೆ । ವಸುಧೇಶಸಂತಸವಡೆದಿರ್ದ ॥ (23)

ತರುಣಿ ಕೇಳಾ ಸಮಯದೊಳವಸರದವರ್ । ಪರಿತಂದು ನೃಪತಿಗಾನತರಾಗಿ ॥
ವರಗಾಯಕನೊರ್ವ ಬಂದು ಬಾಗಿಲ ಪರಿ । ಸರದೊಳಿರ್ದಪನೆನೆ ಬರವೇಳ್ದಂ ॥ (24)

ಕರೆಯಿಸೆ ಬಂದು ಕೈವಾರಿಸಿ ಕೊಂಡಾಡಿ । ಧರಣೀಶನಿದಿರೊಳ್ ಕುಳ್ಳಿರ್ದು ॥
ಸುರುಚಿರ ಕಾಂತಿ ಮಿರುಪ ದಂಡಿಗೆ ಯಾಂತ । ಕರದೊಳಗಾ ಭದ್ರ ಗಾಯಕ ॥ (25)

ಮುಗುಳಂಬ ನಿಕ್ಷು ಚಾಪದ ಗವಸಣಿಗೆಯ । ತೆಗೆದು ಸಿಂಜಿನಿಯಸೇರಿಸುವಂತೆ ॥
ಸೊಗಯಿಪ ಗವಸಣಿಗೆಯ ನುರ್ಚಿ ಪೊನ್ನ ದಂ । ಡಿಗೆಯ ಚಡಾಳಿಸಿ ಬಿಗಿದನು ॥ (26)

ವನದೇವತೆ ಸೊಗೆ ಕೋಗಿಲೆಗಳ ನು । ಣ್ದನಿಯಿಂದೆ ರಂಜಿಸುವಂದದಿ ।
ಇನಿಯಳಿ ಷಡ್ಜ ಪಂಚಮನಾದದಿಂದೆ ಚೆ । ನ್ನೆನಿಸಿದುದವನದಂಡಿಗೆ ಯಾಗ ॥ (27)

ಮಡದಿ ಕೇಳಾ ಭದ್ರಗಾಯಕ ದಂಡಿಗೆ । ವಿಡಿದುಪ ಶ್ರುತಿಗೂಡಿ ನಲವಿಂದೇ ॥
ಬಡದೆ ಪಾಡಿದ ಪೆಣ್ದುಂಬಿ ಯಿಂಚರಗಳ । ಗಡಣಿಸಿ ಕೋಗಿಲೆ ಯುಲಿವಂತೆ ॥ (28)

ಶೃಂಗಾರ ರಸವನ್ನುರಸಗಳ ತನ್ನೊಳ್ । ಡಂಗಿಸುವಂತಾ ಸಭೆಯೊಳು ॥
ಸಂಗೀತ ರಸವುಳ್ಳದಾದ ವಿದ್ಯೆಗಳನು । ನುಂಗುವಂದದೆ ಪಾಡಿದನವ ॥ (29)

ಸಾಳಂಗ ನಾಟ ಭೈರವಿ ದೇಶಿ ಗುಜ್ಜರಿ । ಮಾಳವಿಯಾಹೇರಿ ಕಾಂಬೋಧಿ ॥
ಗೌಳವರಾಳಿ ವಸಂತ ಭೈರವಿ [ಯರಿ] । ದೊಳವಸವನೊಲ್ದು ಪಾಡಿದ ॥ (30)

ಗತಿ ಗಹಗಹಿಕೆ ಗಮಕ ಜೋಕೆ ನೇವಣೆ । ಜತಿ ಕೊಂಕು ಜಯಿನೊಳ್ಪನುಜಮೀ ॥
ಯುತಿ ಸೊಂಪಾಹತ ವಹಣಿಕಳಗಸ ಕಂ । ಪಿತ ವ್ರಣ್ಮೆ ಪಾಡಿದನವನೊಲ್ದು ॥ (31)

ಅತಿಶಯ ಮಂದ್ರ ಮಧ್ಯಮ ತಾರವೆಂಬಲಂ । ಕೃತಿ ಗೀತ ಪದ ತಾಳಗಳ ರೀತಿ ॥
ನುತಿಶುದ್ಧ ಸಾಳಂಗ ಸಂಕೀರ್ಣವೊಪ್ಪೆ ವಿ । ಡುತ ನೃಪನೆರ್ದೆಯ ನಿರ್ಕುಳ
[ಗೊಂಡ ॥ (32)

ಲಲಿತಗಾನಾಮೃತರಸಕವನಿಪ ಶಿರ । ವೊಲೆಯೆಕಿರೀಟ ಕುಂಡಲಗಳ ॥
ಪೊಳಪಗಣಿತ ಸುರಚಾಪಗಳೊಗೆದಂತೆ । ಬೆಳಗಿದುದಾ ಸಭೆಯೆಡೆಯೊಳು ॥ (33)

ಪುಳಕವ ತೆಗೆದಾನಂದಾಶ್ರುವನಾಂತು । ವಿಲಸಿತ ಹಸ್ತ ವಿನ್ಯಾಸದೆ ।
ನಿಲಿಸಿ ಗಾಯಕನ ಸದ್ವಿನಯ ವಾರಿಧಿಯೊಳು । ಮುಳುಗಿಸಿದನು ಚೇರಮನೃಪ ॥ (34)

ಆಗಳವಗೆ ವಸ್ತ್ರಾಭರಣಂಗಳ । ಬೇಗದಿಕೊಡಲವ ನಿಂತೆಂದ ॥
ಚಾಗ ನಿಮಿತ್ತ ಬಂದವನಲ್ಲ ಶಿವನೆನ್ನ । ಪೋಗೆನೆ ಬಂದೆ ಕೇಳ್ನರನಾಥ ॥ (35)

ಶಿವನೆನ್ನ ರಕ್ಷಿಪ ಕರುಣದೆ ಸಂದೇ । ಶವ ನಿಮಗೀಯೆಂದು ಕಳುಪಿದ ॥
ವಿವರವ ನೀವೆ ತಿಳಿವುದೆಂದು ಗಾಯಕ । ನವನಿ ಪಾಲನ ಪೊರೆಗೆಳ್ತಂದ ॥ (36)

ದೇವ ದೇವೇಶ ನಿತ್ತಾದೇಶ ಲೇಖನ । ತೀವಿದ ರತ್ನಕರಂಡವ ॥
ಕೋವಿದ ಭದ್ರಗಾಯಕನೀಯೆ ಕೈಯಿಕ್ಕೆ । ಭೂವರನದ ಮಕುಟದೊಳಾಂತ ॥ (37)

ನಚ್ಚಿದ [1] ಹಿಂತಿಯೇರಿದ ಸಂತಸ ದಾಳಂ । ನಚ್ಚರಿವಟ್ಟು ಪುಳಕವಾಂತ ।
ಮೆಚ್ಚಿದ ಶಿವನಪಾದಾಬ್ಜದೊಳುರೆ ಮನ । ಬೆಚ್ಚವೊಲಿರ್ದನಾ ನರನಾಥ ॥ (38)

ಮರೆದನೊ ಮರುಳಾದನೊ ಶಿವನಡಿಯೊಳು । ತೆರವಿಲ್ಲದೇ ಬಳಸಂದನೊ ।
ಅರಿಯೆ ನಾನವನ ಭಕ್ತಿಯ ಭಾವದೇಳ್ಗೆಯ । ಪೆರೆದಲೆಯನೆ ಬಲ್ಲನಬುಜಾಕ್ಷಿ ॥ (39)

ಇಂತನಂತದಿಂಗಡಲೊಳು ಮುಳುಗಿ ಭೂ । ಕಾಂತ ಶಿರೋಮಣಿ ನಲವಿಂದೆ ॥
ಕಂತುಹರನ ಕಾರುಣ್ಯ ಸಂದೇಶವ । ಸಂತಸದಿಂ ಕರಣಿಕಗಿತ್ತ ॥ (40)

ನಡಗರದಿಂದವ ರತ್ನಕರಂಡವ । ನಡಸಿದ ಲಾಕ್ಷಣಮುದ್ರೆಯ ॥
ಒಡೆದು ರಾಯನವ ಹಸ್ತಾಬ್ಜಯುಗಳದಿಂದೆ । ಪಿಡಿದೋದಿನ ನೃಪ ನಲಿವಂತೆ ॥ (41)

ಶ್ರೀ ಮದನಘ ಪಾಂಡ್ಯ ದೇಶದೊಳೆಸೆವ ಲ । ಲಾಮಕ ಮಧುರ ಪುರದಾಣ್ಮ ॥
ಕಾಮಾಂತಕ ವಲಮುಖ ದೇವ ನೆಮ್ಮ ಸ । ತ್ಪ್ರೇಮ ಕಿಂಕರ ಚೇರ ನೃಪತಿಗೆ ॥ (42)

ಕರುಣದೊಳಿತ್ತ ನಿರೂಪ ಸಂಗೀತವ । ವಿರಚಿಸಿ ಭದ್ರಗಾಯಕ ನಮ್ಮ ।
ಪಿರಿದು ಮೆಚ್ಚಿಸಿದ ನಂತವ ನೀವುದು ನೀ । ನುರು ರತ್ನ ಕನಕಾದಿ ವಸ್ತುವ ॥ (43)

ಎನಲೆಯ್ದೆ ಹರುಷವ ತಾಳ್ದು ಚರಮ ನೃಪ । ನನಘನ ಕರುಣ ನಿರೂಪವೆ ॥
ನೆನೆದದ ಮಗುಳೆ ಮಗುಳೆ ಬಿಡದೋದಿಸಿ । ಯನುರಾಗರಸದೊಳೋಲಾಡಿದ ॥ (44)

---

[1] ಹಂತವೇರಿದ?

ಎನಗೆ ಜನಾಂತರ ಸುಕೃತ ಮೈದೋರಿತು । ಎನಗೆ ಪುಣ್ಯದ ಫಲ ಫಲಿಸಿತು ॥
ಎನಗ ಭವನ ಕಾರುಣ್ಯರಾಯಸ ವಿರಿ । ದಿನಿತಲ್ಲದೊಡೆಂತು ಬರ್ಕುವೆ ॥ (45)

ಕೊಡವೇಳ್ಪ ಕರ್ತೃ ಮಹೇಶ್ವರ ನಿತ್ತಾದ । ಪಿಡಿವಾತ ಶಿವಭಕ್ತಗಾಯಕ ।
ಕೊಡುವ ಪದಾರ್ಥವೆಮಗೆ ದೊಡ್ಡಿತಲ್ಲ ವೆಂ । ದಿಡಿದ ಸಂತೋಷ ಮಾನಸನಾದ ॥ (46)

ಅನಿತರೊಳ್ ಭದ್ರಗಾಯಕಗೆ ಚೇರಮ ಭೂಪ । ವಿನಯ ರಚನವಚನಗಳಿಂದೆ ॥
ಘನರಾಜ್ಯ ವಸ್ತುವಾಹನಗಳ ನೊಲ್ದೀಯೆ । ವನಜಾಕ್ಷಿ ಕೇಳವನಿಂತೆಂದ ॥ (47)

ಭೂವರ ಕುಲದೀಪಕ ರಾಜ್ಯಲಕ್ಷ್ಮಿಯ ನೀವುದೆ ನಮ್ಮವಂದಿಗರ್ಗೆ ॥
ದೇವೇಶ ಬೆಸಸಿದಂತಿವುದು ಕೇಳಿನ್ನ । ಜೀವನೋಪಾಯ ಕುಳ್ಳನಿತನು ॥ (48)

ಎನಲವನೀಶನಾ ಗಾಯಕಗಿಂತೆಂದ । ಧನವೆನಿತರದೀರಾಜ್ಯವ ॥
ನಿನಗಿತ್ತೆ ಮರುಮಾತು ಗುಡದಿರೆನುತಕರ । ವನದವ ಮುಗಿದನಂಬುಜನೇತ್ರೆ ॥ (49)

ಇಂತೆಂದು ನೀವು ಚಿತ್ತೈಪರೆ ಚೇರ ಭೂ । ಕಾಂತ ಕೇಳೀ ರಾಜ್ಯ ಲಕ್ಷ್ಮಿಯ ।
ನಾಂತಳೆವವನಲ್ಲ ತಳೆದೊಡೆ ನಿಮ್ಮಾಣೆ । ಕಂತುಹರನ ಪಾದಗಳಾಣೆ ॥ (50)

ಎನಲವನಭವನಾಜ್ಞೆಯ ಮೀರುವ ನ । ಲ್ಲೆನುತವನಿಯ ಪತಿಕರಿಸುತೆ ।
ಜನಪತಿ ಭದ್ರಗಾಯಕ ಗೊಲಬಿಂದಿತ್ತ । ಮನದಣಿವಂತದನೇ ನೆಂಬೆ ॥ (51)

ನವರತ್ನ ಭೂಷಣಗಳ ಹಯಗಜಗಳ । ವಿವಿಧ ವಸ್ತ್ರಗಳ ಲೇಪನಗಳ ॥
ಶಿವನ ನಿರೂಪಕೆ ನೂರ್ಮಡಿಯಾಗಿತ್ತೊ । ಡವನೆಂದ ನಾ ಚೇರ ನೃಪನೊಳು ॥ (52)

ಈ ವಯಸಿನೊಳೀರೂಪಿನೊಳೊಪ್ಪಗಾಡಿ । ತೀವಿದ ವಿಭವವೀ ಶಿವಭಕ್ತಿ ॥
ಭಾವಿಸೆ ವಿತರಣಗುಣ ನಿನಗಲ್ಲದೆ । ಭೂವಲಯದೊಳುಳ್ಳದರಿಗುಂಟೆ ॥ (53)

ದಾನ ಶೀಲದೊಳು ಸದ್ವಿನಯೋಕ್ತಿ ಯಿಂದೆ ಸು । ಜ್ಞಾನಮರ್ತ್ಯದೊಳೊಂದಿದೆ ॥
ಏನೆಂಬೆ ದಯಗೂಡಿದ ಶೌರ್ಯವಿದೆಯೆ ನು । ತಾನರೇಂದ್ರನವ ಬೀಳ್ಕೊಂಡ ॥ (54)

ವಿನಯದೆ ಭದ್ರಗಾಯಕನ ಬೀಳ್ಕೊಟ್ಟು ಭೂ । ವನಿತೇಶ ಕೇರಳಾಧಿಪನಂಗ ॥
ಘನತರವಾದ ಸಭೆಯ ಕಳುಪಿದನವ । ರನುವರಿದೆಲೆ ಕಂಜ ದಳನೇತ್ರೆ ॥ (55)

ಕೆಲರನಪಾಂಗದೆ ಕೆಲರ ಹಸ್ತಾಬ್ಜದೆ । ಕೆಲರ ಸದ್ವಿನಯ ವಚನದಿಂದೆ ॥
ಕೆಲರ ನಮಿಸಿ ತಾಂಬೂಲ ದಾನಗಳಿಂದೆ ಕೆಲರ ಬೀಳ್ಕೊಟ್ಟನೆಂದವನೀಶ ॥ (56)

ಸಭೆಯ ನಕ್ಕರು ಮಿಗೆ ಬೀಳ್ಕೊಡುತತಿಶಯ । ವಿಭವದೊಳರಮನೆಗೆಳ್ತಂದು ॥
ಶುಭಕರವಾದ ಸೌಭಾಗ್ಯದೊಳಿರ್ದ ನಾ । ವಿಭು ಕೇರಳೇಂದ್ರ ನಂಗಜನಂತೆ ॥ (57)

ಗಿರಿಜೆಯ ಮೆಯ್ಗಂಪಿಗೆರಗುವ ತುಂಬಿಯಿಂ । ಚರವಶ್ವತರ ಗಾನ ರಸದೊಳು ॥
ಬೆರೆದು ಕಿವಿಗೆ ರಂಜಿಸೆ ತರಿಯೊಲಿವಕಂ । ಕರಶಾಂತ ಮಲ್ಲಿಕಾರ್ಜುನ ಜಯ ॥ (58)

ಚೇರಮ ಶರಣಾಗ್ರಣಿಯ ಕೃತಿಯ ವಿ । ಸ್ತಾರವ ಮಾಳ್ಪರಾದರಿಪರ ॥
ತಾರಾರ್ಕರುಳ್ಳನ್ನೆವರ ಮಲ್ಲಿಕಾರ್ಜುನ । ನೋರಂತೆ ಪಾಲಿಪನೊಲವಿಂದೆ ॥ (59)

(ಆರನೆಯ ಸಂಧಿ ಸಮಾಪ್ತಂ)

ಏಳನೆಯ ಸಂಧಿ-

ದಕ್ಷನಂದನೆಯ ನಿಬಿಡಕುಚಕುಂಕುಮ । ವಕ್ಷ ನಿರ್ಲಕ್ಷ್ಯ ವಿರೂಪಾಕ್ಷ ॥
ಅಕ್ಷಯ ನಿರುಪಮರೂಪ ನಿತ್ಯಾನಂದ । ರಕ್ಷಿಸೆನ್ನನು ಮಲ್ಲಿಕಾರ್ಜುನ ॥ (1)
ಒಲಿದು ಸುಧಾಸೂತಿ ಕಳೆಯ ಕಪ್ಪುರದೊಪ್ಪ । ಸಲಗೆಯಿಂ ಸ್ಮರನೊಪ್ಪವಿಟ್ಟಂತೆ ॥
ಸುಲಭ ವಿರುಪಭೂಪ ನಿನ್ನೊಳು ನುಡಿಯಿಂದೆ । ಚೆಲುವಾಂತು ಕೃತಿರಂಜಿಸುತಿದೆ ॥ (2)

ಎಳೆವೆಂಗಳ ಮಂಡೆವಣಿ ಮರಿವುಲ್ಲೆಗಂ । ಗಳ ನೀರೆ ಯರಸಂಚೆ ನಡೆಯಳೆ ॥
ತಳರಡಿಯಳೆ ಗಿಳಿ ನುಡಿಯಳೆ ಕಥೆ ಗೇಳು । ತಳಪವೆಸೆವ ಬಟ್ಟದೊಡೆಯಳೆ ॥ (3)
ಇರುತಿರುತೊಂದು ದಿವಸ ಚೇರಮಾಂಕನು । ತಿರುವಂಜ ಕಳನಾಥನಡಿಗಳ ॥
ನಿರುಪಮ ಭಕ್ತಿ ಭಾವದೊಳೆಂದಿನಂದದಿ । ಪಿರಿದು ವೈಭವದೊಳರ್ಚಿಸುತಿರ್ದ ॥ (4)

ಕಾಂತೆ ಕೇಳವನ ಪೂಜಿಸಿ ಪ್ರೂಡಮಡುತೆ ಭೂ । ಕಾಂತ ನೊಲಿದು ನುತಿಗೆಯ್ದಲ್ಲಿ ॥
ಕಂತುಹರನ ಪಾದದಂದುಗೆಯುಲಿಯೆಂದಿ । ನಂತೆ ತೋರಿಸದಿರೆ ಬೆರಗಾದ ॥ (5)
ಕಳವಳಿಸಿದ ಕಂದಿದನೆದೆಗರಗಿದ । ಬಳಲಿದ ಬೆಂಡಾದ ಬೆರ್ಚಿದ ॥
ಅಳಲಿದ ಧೈರ್ಯಗುಂದಿದ ಸುಯ್ದು ಮನನೊಂದು । ನಲವಳಿದಿಂತೆಂದನವನೀಶ ॥ (6)

ಶಿವಭಕ್ತರ ನಿಂದೆಗೇಳ್ದೆನೊ ಗುರುವಿನೊ । ಳವಗುಣಗಳ ಕಲ್ಪಿಸಿದೆನೊ ॥
ಶಿವಶಾಸ್ತ್ರವ ನಲಸಿಕೆ ಯಿಂದ ಕೇಳ್ದೆನೊ । ಶಿವಧರ್ಮವನತಿಗಳೆದೆನೊ ॥ (7)
ಶಿವಪೂಜಾಕ್ರಮುದಪ್ಪಿದುದೊ ಬಗೆ । ಕವಲಾದುದೊ ಫಲಪದಗಳ ।
ಅವಿವೇಕದಿ ಬಯಸಿದೆನೊಯಿಂತಲ್ಲದೆ । ತವಿಸದು ಭವನಂದುಗೆಯುಲಿ ॥ (8)

ಚರಲಿಂಗವ ನರರೂಪೆಂದು ಬಗೆದೆನೊ । ಪಿರಿಯರೊಳೆಯ್ದ ಗರ್ವಿಸಿದೆನೊ ॥
ಹರಶರಣರಸೇವೆ ಗಲಸಿ ಮೈದೆಗೆದೆನೊ । ಹರನಲ್ಲದುಳಿದರ ಪೊಗಳ್ದೆನೊ ॥ (9)
ತಂಪಿಲ್ಲದುದಕದೊಳಭಿಷೇಕ ಗೆಯ್ದನೊ । ಸೊಂಪಿಲ್ಲದಲರೊಳರ್ಚಿಸಿದೆನೊ ॥
ಇಂಪಿಲ್ಲದ ನೈವೇದ್ಯ ವಿತ್ತೆನೊಯೆಂದು । ಕಂಪಿಸಿ ಕರಗಿ ಕಾತರಿಸಿದ ॥ (10)

ಪಲುಬಿದ ಪಂಬಲಿಸಿದ ಧೃತಿಗುಂದಿದ । ಹೊಲಬಳಿದೆದೆಯಾರಿ ಬಾಯ್ಬಿಟ್ಟು ॥
ತಳವೆಳಗಾಗಿ ಮೂರ್ಛೆಗೆ ಸಲುತೆಚ್ಚತ್ತು । ಬಳಿಕೊಂಡ ಮನದೆ ನಿಶ್ಚಯಿಸಿದ ॥ (11)
ಇಂದುಧರನ ಪಾದ ದುಂದೆಗೆಯುಲಿಯದೆ । ಮುಂದುಗೆಡಿಸಿತೆಂದು ಮನದೊಳು ॥
ನೊಂದು ಹವ್ವಳಿದು ಖಡ್ಗವನುರ್ಚಿ ಕೊರಲೊಳ । ಗೊಂದಿಸಲನುವಾದನವನೀಶ ॥ (12)

ಅನಿತರೊಳೀಶಪಾದಂದುಗೆಯಿಂಚರ । ಜನಪನ ಕಿವಿಗಿಂಪನಿತ್ತುದು ॥
ಘನತಾಪದಿಂದಲಸಿದ ಸೋಗೆಗೆ ಮೇಘ ನಿನದ ಮನೋರಥವೀವಂತೆ ॥ (13)
ಆಸಮಯದೊಳಂದುಗೆಯುಲಿ ಕಿವಿಗಳ । ಬಾಸಣಿಸಲು ಕೈಯ್ಯಖಡ್ಗವ ॥
ಓಸರಿಸುತ ಶಿವಗಭಿಮುಖನಾಗಿ ಮ । ಹೇಶ ದಯಾಂಬುಧಿ ಜಯಯೆಂದ ॥ (14)

ಭಕ್ತರಭೀಷ್ಟಸಾಧನ ಕಲ್ಪಪಾದಪ । ಭಕ್ತಕಿಲ್ಬಿಷರಂಭಾದ್ವಿಪ ॥
ಭಕ್ತಜನಾತ್ಮಾಭಿರಾಮ ಪುಣ್ಯಚರಿತ್ರ । ಭಕ್ತಮನಶ್ಚಾತ ಕುಜಜೈತ್ರ ॥ (15)
ಜಯ ಜಯ ಭಕ್ತ ವತ್ಸಲ ಭಕ್ತ ದೇಹಿಕ । ಜಯ ಜಯ ಭಕ್ತಮನೋನಾಥ ॥
ಜಯ ಜಯ ಭಕ್ತಕುಟುಂಬ ಭಕ್ತರ ಬಂಧು । ಜಯಜಯ ತಿರುವಂಜಕಳನಾಥ ॥ (16)

ಎಂದು ಶಿವಸ್ತುತಿ ಗೆಯ್ದೊಲ್ದು ಹಸ್ತಾರ । ವಿಂದವ ಮುಗಿದು ಬಿನ್ನವಿಸಿದ ॥
ಇಂದು ನಿಮ್ಮಯ ಪಾದದಂದುಗೆಯುಲಿ ತಡೆ । ದಂದವೇನೆನೆ ಶಿವನಿಂತೆಂದ ॥ (17)
ಅರಸ ಕೇಳೆನ್ನ ನಚ್ಚಿನ ಭಕ್ತಸೌಂದರ । ಪರವೆಯೊಳ್ ಪ್ರಣಯ ಕಲಹದಿಂದೆ ॥
ಇರಲವರೀರ್ವರ ತಿಳುಪುವೆ ನೆಂಬೊಂದು । ಹರುಷದೆ ನಾನಿಂತು ತಡೆದಿರ್ದೆ ॥ (18)

ಎನಲವರಿರ್ಪ ನಾಡಾವುದೂರಾವುದು । ಜನನವಾರೊಳು ಕುಲವಾವುದು ॥
ಎನಗೆ ನೀವೇಳವರೇತೆರದಿಂದಿರ್ಪ । ರೆನೆ ಪೇಳ್ದ ತಿರುವಂಜಕಳನಾಥ ॥ (19)
ಲಾಲಿಸುಮಗನೆ ಮನೋಹರ ಮಪ್ಪಂತೆ । ಪೇಳುವೆ ನವರಾದ್ಯಂತವ ॥
ಚೋಳ ದೇಶದೊಳಪ್ಪುದು ತಿರುನಾವಲೂ । ರಾಲಯಮಾಗಿ ಯಾವೆನಿತೆಗೆ ॥ (20)

ಹಿಂಗದೆ ನರಸಿಂಗ ಮೊನೆಯರೆ ನಿಸುತ್ರು । ತ್ತುಂಗ ಚೋಳಗೆ ನೆಲೆವನೆಯಾಗಿ ॥
ಕಂಗೆಸೆದಿರ್ದಪ್ಪುದಾ ರಾಜಧಾನಿ ಕೇ । ಳ್ಸಂಗರದಿಂದೆ ವೈಭವದಿಂದೆ ॥ (21)
ಅರಸಕೇಳಾಪುರದೊಳಗಿರ್ಪನೊಲ್ದು ಭೂ । ಸುರಕುಲ ದುಗ್ಧವಾರಿಧಿ ಚಂದ್ರ ॥
ಗರುವ ಚತುರ್ವೇದ ಕೋವಿದ ಬಹುಶಾಸ್ತ್ರ । ಪರಿಣತ್ರ ಜಡೆಯರೆನಿಪ ವಿಪ್ರ ॥ (22)

ಯಜನ ಯಾಜನ ಮುಖ್ಯವಾದ ಷಟ್ಕರ್ಮ ದೊ । ಳ್ಸಜೆಯಿಂದೆ ನಿರುಪ ಚರಿತದೆ ॥
ಸುಜನ ಜನಾನಂದರೂಪ ಶಿವಾಂಘ್ರಿ ವಾ । ರಿಜ ಭೃಂಗ ವೆನಿಸಿ ರಂಜಿಸುತಿರ್ಪ ॥ (23)
ಆತನ ಸತಿ ಸುಗುಣಾನ್ವಿತೆ ಸತ್ಕುಲ । ಜಾತೆ ಸುಶೀಲೆ ಪತಿವ್ರತೆ ॥
ಭೂತಳ ವಿನುತೆ ಯಸ್ಯ ಜ್ಞಾನಿಯೆಂಬ । ಖ್ಯಾತಿವಡೆದು ರಂಜಿಸುವಳು ॥ (24)

ಉಸಿರೊಡಲೆಂತಂತೆ ಕುಸುಮ ಸೌರಭದಂತೆ । ಶಶಿಜೊನ್ನದಂತೆ ಬೇರಲ್ಲದೆ ।
ಬೆಸುಗೆವಡೆದ ಮನದಿಂದಿರ್ಪರಿರ್ವರು । ವಸುಧೆಯ ಪುಣ್ಯಪುಂಜಗಳಂತೆ ॥ (25)
ಶಿವಭಕ್ತರ ಸಂಗದೆ ಶಿವ ಧರ್ಮದೆ । ಶಿವ ಪೂಜೆಯಿಂ ಶಿವನುತಿಯಿಂದೆ ॥
ಶಿವ ಭಕ್ತರ ಸೇವೆಯಿಂದೊಲಿದನು ದಿನ । ಶಿವಸುಖದೊಳಗವರಿರುತಿರ್ದರು ॥ (26)

ಒಂದು ದಿವಸ "ನಾಪುತ್ರಸ್ಯ ಲೋಕೋಸ್ತಿ" । ಎಂದಿರ್ಪ ನಿಗಮಾರ್ಥವ ಕಂಡು ॥
ಮಂದೈಸಿದ ಚಿಂತೆಯೊಳಿರ್ದ ಕಾಂತನ । ನಿಂದುವದನೆ ಬೆಸಗೊಂಡಳು ॥ (27)
ಇಂತತ್ರಿಶಯ ಚಿಂತೆಯೇಂ ಕಾರಣವೆನೆ । ಕಾಂತೆ ಪೇಳುವೆನೇನ ಶ್ರುತಿಗಳು ॥
ಸಂತಾನವಿಲ್ಲದವರಿಗೆ ಗೆತಿಯಿಲ್ಲೆನೆ । ಚಿಂತೆದಳೆದೆನೆಂದನಾ ವಿಪ್ರ ॥ (28)

ಎಲೆ ಸತಿ ನೀನೇಕೆ ಚಿಂತಿಪೆ ಯಮ್ಮಯ । ಕುಲದೈವ ವಲ್ಮೀಕ ನಾಥನ ॥
ಒಲಿದರ್ಚಿಸಿ ಸಂತಾನವಡೆವೆವೆನೆ । ಲಲನೆ ಸಹಿತಲವ ಪೊರಮಟ್ಟ ॥ (29)
ಪೋದರವರು ವಲ್ಮೀಕ ನಾಥನ ದಿವ್ಯ । ಪಾದಪಯೋಜ ಸನ್ನಿಧಿಗಾಗ ॥
ಆದಿಮಧ್ಯಾಂತರಹಿತನದ್ವಯ ನಾಮ । ವೇದ ಪ್ರಿಯನನರ್ಚಿಸಿದರು ॥ (30)

ಜಲದಿಂದೆ ಚಂದನ ದಿಂದಕ್ಷತೆಗಳಿಂ । ದಲರಿಂದೆ ಧೂಪ ದೀಪಗಳಿಂದೆ ॥
ಸಲೆ ನೈವೇದ್ಯ ತಾಂಬೂಲದಿಂದರ್ಚಿಸಿ । ನಲಿದು ಬೇಡಿದರು ಸುಪುತ್ರನ ॥ (31)
ವಿತ್ತೇಶ ಸಖನಲರಿಂಡೆಯ ಕರುಣದೊ । ಳುತ್ತಡವರು ಕಂಗಳೊಳೊತ್ತಿ ॥
ನೆತ್ತಿಯೊಳಾಂತು ಮಂದಿರಕ್ಕೈದಿ ಸಂತಸ । ವೆತ್ತಿರುತಿರಲೊಂದು ದಿನದೊಳು ॥ (32)

ತರುಣಿ "ಯಸ್ಯ ಜ್ಞಾನಿ" ಮೂಲೋಕವನೆಯ್ದಿ । ಪರಮಪ್ರಕಾಶದಿ ಬೆಳಗುವ ॥
ವರಸುತ ರತ್ನವಪಡೆವ ಸೂಚನೆಗಾಂಬಿ । ಪರಿಯಿಂದೆ ಮಾಣಿಕಗಂಡಳೆ ॥ (33)

ಮೆಯ್ಯಿಂಪಿ ಗೋರೊರ್ಮೆ ಸುಯ್ಗಂಪಿ ಗೋರೊರ್ಮೆ । ಒಯ್ಯನೆಜಘನಸೌರಭಕೊರ್ಮೆ ॥
ಮುಯ್ಯಾಂತೆರಗುವಾರಡಿ ದೂರಿದವು ತಿಳಿ । ಗೈರ್ಯಯಳ ಪುಷ್ಪೋದಯವನು ॥ (34)

ಕಡುಚೆಲ್ವಿನೆಂದುಗೆಯಿಲ್ಲದ ಪದಕಾಂಚಿ । ಇಡಿದ ಕಟಿ ಮಲಯ ಜದಣ್ಪ ॥
ಪಡೆಯದ ತನುಹಾರ ಮಿಲ್ಲದ ಕುಚಚೆಲ್ವ । ನೊಡರಿಸಿದುದು ಪುಷ್ಪವತಿ ಗಂದು ॥ (35)

ಕುಮುದಾಕ್ಷಿಗೆ ಮಲ್ಲಿಕೋದ್ಗಮ ಗಂಧಿಗೆ । ಕಮಲ ಮುಖಿಗೆ ಪುಷ್ಪವತಿಗೆಯ್ದ ॥
ಕಮನೀಯ ಕುರಿದ ಸ್ಮಿತೆಗಾದುದು ಚಿತ್ತದೆ । ರಮಣನ ನೇತ್ರ ಷಟ್ಪದ ವಶ್ಯ ॥ (36)

ಇಂತಿರುತಿರ್ದು ನಾಲ್ಕನೆಯ ದಿವಸದೊಳು । ಸಂತಸದಿಂ ಮಜ್ಜನಗೆಯ್ದು ॥
ಅಂತಕಾಂತಕನ ನರ್ಚಿಸಿ ಮಿಗೆ ಸಿಂಗರ । ಮಂತಾಳ್ದ ಲಲಿತಾಂಗಿ ಯೆಸೆದಳು ॥ (37)

ಮಲಯ ಜದಣ್ಪ ಮಲ್ಲಿಗೆಯ ಸೋಮುರ್ಡಿಕಂ । ಗೊಳಿಸುವ ನವಮೌಕ್ತಿಕಹಾರ ॥
ಸುವಿಪಲ್ಲಕಾಂತಿ ಬೆಳ್ಪುಡೆಯಿಂದೆ ಕರ್ಪೂರ । ವಳುಕಿನ ಪ್ರತಿಮೆಯಂತೆಸೆದಳು ॥ (38)

ಸೊಗಯಿಪ ಕಾಂಚಿಯಿಂಚರವಳಿ ರವಗಳ । ನಗೆ ಸುಯ್ಗಂಪು ಪೂಗಳ ಕಂಪ ॥
ಮಿಗುತಿರೆ ತನುಕಾಂತಿ ರತ್ನದೀಪವನೆಯ್ದೆ । ದುಗುಣಿಸೆ ಮನೆಯ ಪೊಕ್ಕಳು ತನ್ವಿ ॥ (39)

ಕುಲಿಶವ ಪಳವಃವುಗೆಯಿಂದೆ ಯಂಚಿದು । ಪ್ಪಲ ಕೋಮಲ ತಳ್ಪಗಳಂದೆ ॥
ತೊಳಗುವ ಮಣಿಮಂಚದ ಮೇಲೆ ಪತಿಯಿರ । ಲೊಲಿದು ಸನ್ನಿಧಿ ಗೆಯ್ದಿದಳ್ಕಾಂತೆ ॥ (40)

ಮರಕತ ಮಣಿ ಮುದ್ರಿಕೆಯಿಂದ ಭೂಸುರ । ತರುಣಿಯ ಕೋಮಲಾಂಗುಳಗಳ ॥
ಇರದೆ ಸಿಂಗರಿಪ ನೆವದೆ ಕೈವಿಡಿದು ಕು । ಳ್ಳಿರಿಸಿದ ಮಣಿಮಂಚದೆಡೆಯೊಳು ॥ (41)

ಸ್ಮಿತಧವಳಾಂಬುಜದೆಡೆಯೊಳು ಹಂಸದಂ । ಪತಿಗಳೊಲಿದು ರತಿಗೆಯ್ವಂತೆ ॥
ವಿತತಧವಳ ತಳ್ಪದೊಳವರೆಸೆದಿರ್ದ । ರತಿಕಯ ಸುರತೆ ಸುಖದೊಳೊಲ್ದು ॥ (42)

ಇಂತತಿ ಸುಖದೊಳಗಿರ್ದು ನಿದ್ರೆಯನಾಂತು । ಸಂತಸದಿಂದುದಯ ದೊಳೆರ್ದು ॥
ಕಂತುಹರನ ನರ್ಚಿಸಿ "ಯಸ್ಯಜ್ಞಾನಿ । " ಕಾಂತನ ಸಾರ್ದಳಕ್ಕರು ಮಿಗೆ ॥ (43)

ಪಗಲೊಳು ತಿಳಜೊನ್ನ ಮನುಗುಳ್ದಪುದೀ । ಮೃಗಧರ ಬಿಂಬಮಿದೊಂದೆನೆ ॥
ಮೊಗದಿಂದ ದಂತಕಾಂತಿಗಳೊಗೆತರೆಸತಿ । ನಗುತ ಕನಸುವೇಳ್ದಳರಸಗೆ ॥ (44)

ವಿಪುಳ ಮಹೇಶ್ವರೋಪಮನೊರ್ವ ಮುನಿಪಂಚ । ಲಪನಾರ್ಭಕನನೊಲ್ದಿನಗೊಂದ ॥
ಚಪಲಾಕ್ಷಿ ಸಲಹೆನುತ್ತಿತ್ತು ನಿಮ್ಮಿಷ್ಟವಾ । ದಪುದೆಂದು ತಳರ್ದನಾಕ್ಷಣದೊಳು ॥ (45)

ಆ ಋಷಿ ವಲ್ಮೀಕನಾಥನೊಲ್ದಿತ್ತ್ರ ಕಂ । ಠೀರವ ಶಿಶುಪಂಚವದನನ ॥
ಸಾರೂಪ್ಯವೆನಿಸುವಾತ್ಮಜಗೆ ಸೂಚನೆ ಕೇಳು । ನಾರಿ ಈ ಸ್ವಪ್ನಶೋಭನವೆಂದ ॥ (46)

ಕನಸಿನ ಫಲಕ್ಕೆ ಸಾರ್ದಂತೆ ವನಿತೆಯ । ತನುವಿನೊಳ್ಗರ್ಭ ತೋರಿದುದೆಂದು ॥
ಜನಪನೊಳಾಪರ ಶಿವನೆಂದ ಮೆಲ್ಲನೆ । ವನಜಾಕ್ಷಿ ಕೇಳು ಬಣ್ಣಿಪೆನೇನ ॥ (47)

ನಸುಬೆಳ್ಪು ಮೊಗದೊಳು ಕುಚದಗ್ರದೊಳು ಕರ್ಪು । ಮಿಸುಪಬಾಸೆಯೊಳು ಕರ್ಬುರ
ವರ್ನ ॥
ಎಸೆಯಲು ಗರ್ಭಮೊಯ್ಯನೆ ತೋರೆ ನಡೆಯೊಳ್ । ಶಶಿಮುಖಿ ಜಡತೆಯನಾಂತಳು ॥ (48)

ಮಡದಿಯ ಪೊಡೆಯೊಳೆಸೆವ ಶಿಶುಸಾರ್ದರ । ಬಡತನಗಳ ಪರಿಹರಿಪಂತೆ ॥
ಒಡನೆಡು ಪೊಂಗಿತವರ ತಾಪತ್ರಯ । ಕೆಡುವಂತೆ ತ್ರಿವಳಿಗಳಳಿದವು ॥ (49)

ಉರು ಚತುರ್ದಶ ಭುವನವ ತಾಳ್ದೀಶನ । ಹರುಷದೆ ತನ್ನೆರ್ದೆಯೊಳಗಿಟ್ಟ ॥
ಶರಣನ ನಿಜಗರ್ಭದೊಳಾಂತ ಭಾರದೆ । ತರಳಾಕ್ಷಿ ಗುಜ್ಜು ಮೆಚ್ಚುವಳೊಲ್ದು ॥ (50)

ಪರಿಮಳವತಿಶಯವಾಗಿರ್ದು ಪುಷ್ಪಮಂ । ಜರಿಗತಿ ಭಾರವಾಗದವೊಲು ॥
ವಗಭುವನತ್ರಯ ಗುರು ಗರ್ಭದೊಳಗಿರ್ದು । ಭರಮಿನಿತೆಲ್ಲ ತತ್ಕಾಂತೆಗೆ ॥ (51)

ದಿನದಿನಕಾಲಸ್ಯ ವೃತ್ತಿ ಮೈವೆರ್ಚಿತು । ದನಿ ಮೆಲ್ಪುಗೊಂಡುದಳಕತತಿ ॥
ಕೊನೆಯಿಟ್ಟುದು ನವಮಾಸ ಪೂರಿಸಿದುದು । ವನಿತೆಗಾ ಸಮಯದೊಳವನೀಶ ॥ (52)

ಪಡೆದಳು ಧರೆಗೆ ಪುಣ್ಯದ ಬಿತ್ತಪಡೆವಂತೆ । ಮೃಡಭಕ್ತಿವಲ್ಲಿಗಡರ್ಪನು ॥
ಪಡೆವಂತೆ ಜಗಕೆ ಕಣ್ಬಡೆವಂತೆ ಪಡೆದಳು । ಸಡಗರದಿಂ ಸೌಂದರೇಶನ ॥ (53)

ಗಿರಿಜೆಯ ಮೆಯ್ಗಂಪಿಗೆರಗುವ ತುಂಬಿಯಿಂ । ಚರವಶ್ವತರ ಗಾನ ರಸದೊಳು ॥
ಬೆರೆದು ಕಿವಿಗೆ ರಂಜಿಸೆ ತಲೆಯೊಲೆವ ಶಂ । ಕರ ಶಾಂತ ಮಲ್ಲಿಕಾರ್ಜುನಜಯ ॥ (54)

ಚೀರಮ ಶರಣಾಗ್ರಣಿಯ ಕೃತಿಯ ವಿ । ಸ್ತಾರವ ಮೊಳ್ಪರಾದರಿಪರ ॥
ತಾರಾರ್ಕರುಳ್ಳನ್ನೆವರ ಮಲ್ಲಿಕಾರ್ಜುನ । ನೋರಂತೆ ಪಾಲಿಪನೊಲವಿಂದೆ ॥ (55)

(ಏಳನೆಯ ಸಂಧಿ ಸಮಾಪ್ತಂ.)

ಎಂಟನೆಯ ಸಂಧಿ.

ತರುಣೇಂದು ಧರ ಗಿರಿಜಾವರ ಕಾಂಚನ । ಗಿರಿಚಾಪ ಸಕಲ ನಿಷ್ಕಲರೂಪ ॥
ಪರಮೇಶ ಫಣಿಭೂಷಣ ಜಯ ಹೊನ್ನೂರ । ವಿರುಪನೊಡೆಯ ಮಲ್ಲಿಕಾರ್ಜುನ ॥ (1)

ತನೆವಾಲು ಸಕ್ಕರೆಯಂತೆ ಮಾಕಂದದ ತಿನಿವಣ್ಗಳ ರಸವೆಂತಂತೆ ॥
ಮನುಜೇಂದ್ರ ಚಂದ್ರ ಹೊನ್ನೂರ ವಿರುಪೇಂದ್ರನಿ । ನ್ನಿನಿವಾತೆರ್ದೆ ನಿಂಪನಿತ್ತುದು ॥ (2)

ನಳನದ ಸಿರಿಯ ನಗುವ ನಗೆಮೊಗದ ಚಂ । ದಳರ ಮಿಗುವ ಕೇಸಡಿಗಳ ॥
ತಿಳಜೊನ್ನದ ಗಾಡಿಯ ಗೆಲ್ವ ಕಡೆಗಂಗ । ಳೆಳೆವೆಂಗಳರಸಿ ಮೆಲ್ಗತೆ ಗೇಳ ॥ (3)

ಅರಸಕೇಳಾ ದಂಪತಿಗಳಂದು ಘನವಾದ । ಹರುಷದೆ ತಮ್ಮ ಮಂದಿರದೊಳು ॥
ವಿರಚಿಸಿದರು ಪುತ್ರೋತ್ಸವದೇಳ್ಗೆಯ । ಪರಿಯನದೇನ ಬಿಸ್ತರಿಸುವೆ ॥ (4)

ಅವಿರಳಮೆನೆ ಪೂವಲ್ಲಿಗಳ್ ಪುದಿದವು । ನವರತ್ನತೋರಣದಳ್ತವು ॥
ಪವಣಿಲ್ಲದ ಬದ್ದವಣ ಬಾಜಿಸಿದವು । ಕುವರನ ಜನ್ಮೋತ್ಸವದೊಳು ॥ (5)

ಇದು ಸೌಖ್ಯದ ಸಂಪದ ಭುವನಂಗಳ । ಗಿದು ಭಾಗ್ಯದ ಬಾಳ್ಮೆದಲೆಯ್ದ ।
ಇದು ಪುಣ್ಯದ ಪುಂಜವೆಂದು ದಂಪತಿಗಳ್ । ಮುದದಿಂದೆ ಶಿಶುವ ನೀಕ್ಷಿಸಿದರು ॥ (6)

ಮನದಣಿವಂತೆರವರ್ಗೆ ಬೇಳ್ಪನಿತಿತ್ತು । ಧನಮೊದಲಾದ ವಸ್ತುಗಳನು ॥
ಅನಿಮಿಷತರುವ ಕೀಳ್ಪಡಿಸಿದನಾ ಮಿತ್ರ । ತನುಜನ ಜನ್ಮೋತ್ಸವದೊಳು ॥ (7)

ಶಿವಯೋಗ ತಿಥಿವಾರ ಕರಣ ನಕ್ಷತ್ರದೊಳ್ । ಶಿವಭಕ್ತ ಜನಗೂಡಿ ಪಿತೃಗಳು ॥
ಶಿವನ ಸೌಂದರವೆ ತಾನಾದ ಬಾಲಕ ರ । ತ್ನವ 'ನಂಬಿ' ಯೆಂದೊಲ್ದು ಕರೆದರು ॥ (8)

ತರುಣಾರ್ಕತೇಜನ ವರಕಲ್ಪ ಭೂಜನ । ಹರುಷದೆ ಮಣಿದೊಟ್ಟಿಲೊಳಟ್ಟು ॥
ಹರನ ಕುಮಾರ ಜೋ ಭವಪಾಶ ದೂರ ಜೋ । ಶರಣಾಗ್ರಗಣ್ಯ ಜೋಯೆಂದರು ॥ (9)

ಶಿವಭಕ್ತವನಜ ಮಾರ್ತಂಡ ಜೋ ಜೋ ಎಂದು । ಶಿವನವತಾರ ಜೋ ಜೋ ಎಂದು ॥
ಶಿವಪದಸಾಧನ ಜ್ಞಾನಿ ಜೋ ಜೋಯೆಂದು । ಯುವತಿಯರೊಲಿದು ಪಾಡಿದರಾಗ ॥ (10)

ಪರಮಪವಿತ್ರ ಜೋ ಪರತತ್ವಗಾತ್ರ ಜೋ । ಪರಮಾರ್ಥ ಪರಮಪವಿತ್ರ ಜೋ ॥
ಪರವಸಂಕಿಲಿಯರಾನಂದಾಬ್ಧಿಚಂದ್ರನೆ । ಪರಮ ಜೋಯೆಂದು ಪಾಡಿದರಾಗ ॥ (11)

ರವಿಕರಗಳು ಸೋಂಕದೆ ವಿಕಸನವಾಂತೆ । ನವಕಮಳವ ಸೆವವಿಲ್ಲದ ॥
ಕುವರನ ನಗೆಮೊಗ ನೆನೆಯಿಸಿ ನೋಳ್ಪರ್ಗೆ । ಪವಣಿಲ್ಲದಿತ್ತುದಾನಂದವ ॥ (12)

ಇಂತತಿಶಯ ಸಂಭ್ರಮದೆ ಪುಣ್ಯದ ಬೆಳೆ । ಯಂತೆ ರಂಜಿಸುತೆಯ್ದೆ ಪಿತೃಗಳ ॥
ಸಂತೋಷಮಾನಸ ಕೇಳಿ ಮರಾಳನೆಂ । ಬಂತೆ ಕಂಗೆಸೆದನಾ ಶಿಶುರತ್ನ ॥ (13)

ತನಯಗೆ ಚೌಲಾದಿ ಕರ್ಮಂಗಳ ಶುಭ । ದಿನದೊಳ್ ಮಾಡಿ ಬಂಧುಗಳಿಗೆ ॥
ವಿನುತ ಬುಧರ್ಗೆ ಮಂಡನ ಮಾಲ್ಯಾಂಬರ । ವನು ಲೇಪನಂಗಳ ನೊಲಿದಿತ್ತ ॥ (14)

ಧರೆಯೊಳು ಶಾಸ್ತ್ರವ ತೇಜೋಮಾತ್ರವ । ನಿರಲೀಯೆನಿಂತೆಂದು ತೋರ್ಪಂತೆ ॥
ತರಳಾಗ್ರಣಿ ಮಣಿ ದೀಪಾಂಕುರಗಳ । ಕರತಳದೊಳು ಪೊಯ್ದು ಮುದದಿಂದೆ ॥ (15)

ಅಸಮಾಕ್ಷನೀ ಶಿಶು ಪುಸಿಯಲ್ಲ ನೋಡೆಂದು । ವಸುಮತಿಯೊಳು ಸೂಚಿಪಂದದೆ ॥
ಎಸೆದುದು ಪಣೆಗಣ್ಣೆನೆ ಬಾಲರೆರೆಯನ । ನೊಸಲೊಳೊಪ್ಪುವ ರತ್ನದರಳೆಲೆ ॥ (16)

ಅರುಣಾಧರ ಕಾಂತಿಯ ಮಿಗೆ ಪಸರಿಸಿ । ಪಿರಿದು ಪಲ್ಲವಿಸಿದಂತೆಸೆದುದು ॥
ವರಮಣಿ ಕುಂಡಲಗಳ ರುಚಿ ಸುತನ ಬಂ । ಧುರ ಗಂಡಸ್ಥಳ ಯುಗದೊಳು ॥ (17)

ಅರಸಲಾಲಿಸು ಮುಖ ಶಶಿಯ ಬಳಸಿ ತೋರ್ಪ । ಪರಿವೇಶ ಕಂಗೆ ರಾಜಿಸುವಂತೆ ॥
ವರಮೌಕ್ತಿಕ ಕಂಠಿಕೆ ಕಣ್ಗೆಸೆದುದು । ತರಳನ ಮುಂಗುರಳೆಡೆಯೊಳು ॥ (18)

ಪರವೆ ಸಂಕಿಲೆಯರ ವರಿಸುವ ಕುರುಪ ಬಿ । ತ್ತರಿಸುವರಿಟ್ಟ ಕಂಕಣಮೆನೆ ॥
ಸುರುಚಿರ ಮಣಿಮಯ ಕಟಕವನಾಂತಿರ್ದ । ಕರದೊಳು ಸೌಂದರನೆಲೆ ಭೂಪ ॥ (19)

ಪೊಂಬೆಟ್ಟ ಬಳಸಿ ರಾಜಿಪ ರತ್ನ ಮೇಖಲೆ । ಯೆಂಬವೊಲಾಕಾಂತಿಮಯವಾಗಿ ॥
ನಂಬಿಯುಡಿಯ ರತ್ನಮೇಖಲೆ ಜನಲೋಹ । ನಂ ಬೆತ್ತು ಬಳಸಿ ರಾಜಿಸಿದುದು ॥ (20)

ಪಿರಿದು ಸಟಾವಳಿ ಕಿರುಜಡೆ ನವ್ಯ ಕೇ । ಸರಕಾಂತಿ ಕೊರಲ ರಕ್ಷಾಕಾಂತಿ ॥
ಕರಮೆಸೆದಿರಲಂಬೆಗಾಲಿಕ್ಕುವಣುಗ ಕೇ । ಸರಿಯ ಶಿಶುವಿನಂತೆಸೆದಿರ್ದ ॥ (21)

ಪೊಳೆವುಡೆನೂಲ ಕಿಂಕಿಣಿಯಿಂದೆ ಘಂಟೆಯ । ಮೊಳೆವಲ್ಗಳಿಂದೆ ಚೌದಂತವ ॥
ಇಳಿವ ಲಾಲಾಜಲದಿಂದೆ ಮದವ ಶಿಶು । ಗೆಲಿದಿಂದ್ರ ವಾರಣದಂತಿರ್ದ ॥ (22)

ಕಿವಿಗಿಂಪನೊಸೆದೀವ ವೀಣೆಯಿಂ ಚರಗಳ । ತಲೆಕೇಳ್ಮಾಡುತೆ ಬಾಲನ ॥
ನವಮೃದು ಪದದೊಳೊಪ್ಪುವ ಮಣಿ ನೂಪುರ, ರವ ಪೊಣ್ಮಿತವನದಟ್ಟಡಿಯೊಳು ॥ (23)

ಚರಣ ಸರೋಜ ರಜಂಬೊರೆದಳಮಾಲೆ । ಕರಮೆಸೆವಂತೆ ನುಣ್ಚರದಿಂದೆ ॥
ಸುರುಚಿರ ಕನಕ ಕಿಂಕಿಣಿ ರಂಜಿಸಿದವು । ತರಳನ ಕೋಮಲ ಪದದೊಳು ॥ (24)

ಅರಳೆಲೆಯೆಲೆ ಕಾಯಿ ಮಾಗಾಯಿ ತೊಳಪ ಕ । ಣ್ಮರಲ್ಗಳ ಪೂಗೊಂಚಲೆಳೆನಗೆ ॥
ಬಿರಿಮುಗುಳೆನೆ ಬಾಲದ ಮಂಡೆವಣಿವೋ । ಲ್ತ ವರ ಕಲ್ಪಭೂಭುಜದಸವಿಯನು ॥ (25)

ಎಲೆ ಸೌಂದರಯಿತ್ತಿತ್ತನೆ ನೋಡುವ । ನೊಲಿದು ಬಂದಪ್ಪುವ ಮಾತೆಯ ॥
ಬಳಿಕ ಕೈಪರೆಗಾಡುವ ಮುಡಿವಿಡಿದೊಯ್ಯ । ನೆಳೆವ ಮುಂಡಾಡುವ ಮುದ್ದಿಪ ॥ (26)

ಬಾಲಕೇಳಿಯನಿಂತು ಕಳೆದು ಸಂವತ್ಸರ । ಮೇಳಾಗೆ ನಂಬಿಗೆ ಶುಭಮೆಪ್ಪ ॥
ವೇಳೆಯೊಳುಪನಯನವ ಮಾಡಿ ಶ್ರುತಿಶಾಸ್ತ್ರ । ಜಾಲವನರುಪಿದ ಪಿತನೊಲ್ದು ॥ (27)

ಶಶಿಯುದಯವ ಕಂಡಂಬುಧಿ ಪೆರ್ಚುವವೊಲು । ಶಿಶುಗಳೆರೆಯ ಸೌಂದರ ಮಾಳ್ಪ ॥
ಪೊಸತಾದ ಶೈಶವದೆಸಕವ ಕಂಡು ಸಂ । ತಸವನಾಂತರು ಪೆತ್ತರೊಲವಿಂದೆ ॥ (28)

ಜಡೆಯರನಾ ಯಸ್ಯ ಜ್ಞಾನಿಯ ಬಗೆ । ಗೊಡರಿಚುತಧಿಕ ಸಂತೋಷವ ॥
ಪೊಡವಿಯೆರೆಯ ಕೇಳು ಶಿಶುವೊಂದು ದಿನ ಮಕ್ಕ । ಳೊಡನೆಳಸಿದ ಬಂಡಿ ಯಾಟವ ॥ (29)

ಮೃಡನಂದು ಪುರದಹನಂಗೆಯ್ವರಮರರ । ಗಡಣವೊಳಡರುವಂತ್ರಿಳಿದೇರ ॥
ಅಡರಿದ ಪೊನ್ನ ಬಂಡಿಯ ನೊಲ್ದು [ಕುವರನು] । ಸಡಗರದ ಬಾಲಕರ ಸಮ್ಮೇಳದೆ ॥

(30)
ಏನೆಂಬೆನಾಗವೃತ್ತುಂಗ ಚೋಳನ ಪಟ್ಟ । ದಾನೆ ಕನಲಿ ಸಪ್ತ ಮದದಿಂದೆ ॥
ಭೂನಾಥ ಕೇಳ್ಪರಿ ತಂದುದಿರೊಳ್ದರ್ । ಮಾನವರಗಳ ಕಂಗೆಡಿಸುತೆ ॥ (31)

ಕೆಲರಕೋಡಿಂದಿರಿದೆತ್ತಿ ವಾಲಾಗ್ರದೆ । ಕೆಲವಪೊಯ್ದೀಡಾಡಿ ಕಾಲಿಂದೆ ॥
ಕೆಲರ ನಿಟ್ಟೊರಸಿ ಮದಾಂಧ ಬಂಧುರವಾ । ಪೊಳಲೊಳು ಕೊಂದು ಕೂಗಿಡಿಸಿತ್ತು ॥ (32)

ಇಂತೆಯ್ದಿ ಸಕಲ ಜನವ ಕೊಲುತಾ ಮದ । ದಂತಿ ಪರಿದು ರಾಜವೀಥಿಯಾ ॥
ಮುಂತೆ ಬರ್ಪಲ್ಲಿ ಬಂಡಿಯನೇರಿ ಸೌಂದರ । ತಾಂತೋರುತಿರೆ ಮುಟ್ಟಿ ವಂದುದು ॥ (33)

ಬರುತಿರ್ದ ಮದದಂತಿಯ ಕಂಡು ಬಂಡಿಯ । ಹರುಷದೊಳೆಳೆವ ಶಿಶುಗಳೆಲ್ಲ ॥
ಇರದೊಡೆ ಭಯವಿಲ್ಲದಾಬಾಲನಿರೆ ತ । ತ್ಕರಿ ಭಯವಟ್ಟು ನಿಂದುದು ಭೂಪ ॥ (34)

ಬಲವರಿದುದು ಭಾರಿಕ್ಕೈಯ ಕುಂಭಸ್ಥಳ । ದೊಳು ತಾಳ್ದುದು ಮೊಳಕಾಲ್ಗಳ ॥
ನೆಲಕಿಟ್ಟುದು ಪೊಡಮಟ್ಟುದು ಪೋದುದು । ಬಳಿಕ ಮತ್ತೇಭ ಕೇಳೆಲೆ ಭೂಪ ॥ (35)

ತಿರುಗಿತಾ ಗಂಧ ಸಿಂಧುರ ಮತ್ತಲಿತ್ತ ಬಂ । ದಿರದೊಡನಾಡಿಗಳರುಪಲು ॥
ಭರದಿಂದವಾ ಕುವರನ ತಂದೆತಾಯಿಗಳ್ । ಪರಿತಂದರತಿಶಯ ಭಯದಿಂದೆ ॥ (36)

ಇಳವಶ್ರುಜಲ ಬತ್ತಿದ ಬಾಯಿ ಬೆನ್ನೆಳ । ಗೆಳಲುವ ಜಡೆಕಂದಿದ ಮೊಗ ॥
ನೆಲದೊಳೆಳೆವ ವಸ್ತ್ರ ರುದ್ರಾಕ್ಷೆಗಳ ಮಾಲೆ । ಕಳೆದಿಳೆಯಲ್ಲಡೆ ತಂದರು ॥ (37)

ಜನಪ ಕೇಳ್ಬಂದಪ್ಪಿದರು ತಂದೆ ತಾಯ್ಗಳು । ಕೊನರುವ ಶೋಕದುಕ್ಕಂದದೆ ॥
ತನಯನ ಮುಖದೊಳು ಮೊಗವಿಟ್ಟು ಮುಂಡಾಡಿ । ನನೆದರು ಭಾಷ್ಪ ಧಾರೆಗಳಿಂದ ॥

(38)
ಎನ್ನಾಳ್ದನೆಯೆನ್ನ ಪುಣ್ಯದಾಗಾರವೆ । ಯೆನ್ನ ಜೀವವೆಯೆನ್ನತಾತನೆ ॥
ಎನ್ನಯ ಚಿತ್ತ ಚಕೋರಿಗೆ ಸೊಗಸೀವ । ಜೊನ್ನವೆಯೆಂದು ಮುದ್ದಿಸಿದರು ॥ (39)

ಇತ್ತಲುತ್ತುಂಗ ಚೋಳಗೆ ಸೌಂದರೇಶನ । ವೃತ್ತಾಂತವ ಚರರೆಯ್ತಂದು ॥
ಬಿತ್ತರಿಸಲು ಕೌತುಕದೊಳಾ ರಾಜಕು । ಲೋತ್ತಮ ನೋಳ್ಪೆನೆಂದೆಯ್ತಂದ ॥ (40)

ಹರುಷದೆ ಮಂತ್ರಿಮಂಡಲಿಕ ಸಾಮಂತರು । ವೆರಸಿ ಬರುತ ಕಂಡನಿದಿರೊಳು ॥
ಹರಶರಣಾಗ್ರಗಣ್ಯನ ಕೃತಪುಣ್ಯನ । ದುರಿತನಾಶನ ಸೌಂದರೇಶನ ॥ (41)

ಕಾಣುತ ಕರವ ಮುಗಿದ ಬಾಲಕ ಮೌಳಿ । ಮಾಣಿಕ ವೆನಿಸುವ ಕುವರಗೆ ॥
ಕ್ಷೋಣಿಪ ನೊಲಿದೀಕ್ಷಿಸಿದನಾ ಶಿಶುವಿನ । ಕ್ಷೀಣವೆನಿಪ ದಿವ್ಯ ಮೂರ್ತಿಯ ॥ (42)

ಕಡುಮರುಗುವ "ಯಸ್ಯಜ್ಞಾನಿ" ದೇಶಿಯು । ಜೆಡೆಯುರ ನೃಪ ಸಂತೈಸುತೆ ॥
ನುಡಿದನಭೀಷ್ಟಾರ್ಥಪದವಿಯ ಪಡೆವಂತೆ । ಪಡೆದಿರಿ ನೀವೀ ತನಯನ ॥ (43)

ಇದು ಪಶುಪತಿಯೊಡನೆಯವತಾರವ । ಲ್ಲದೆ ಶಿಶುವಲ್ಲವೆಂದೆರ್ದೆಯೊಳು ॥
ಮುದವುಣ್ಮೆ ನರಸಿಂಗವೊಡೆಯರು ಮೆಲ್ಲನೊ । ರೆದರವನೊಡನೆ ವಿನಯದಿಂದ ॥ (44)

ಈತ ನಾಡಾಡಿ ಬಾಲಕನಲ್ಲ ಭುವನ ವಿ । ಖ್ಯಾತ ಮಹಾಮಹಿಮಾತ್ಮಕ ॥
ಭೂತಳ ಶಿಕ್ಷೆ ರಕ್ಷೆಗೆ ಪಾತ್ರವಿಗ್ರಹ । ಭೂತೇಶನ ನಿಜರೂಪೆಂದ ॥ (45)

ಎನುತಲಾ ಭೂಪಕುಲೋತ್ತಮನವರೊಳು । ವಿನಯದೊಳಂತೆಂದ ನಿಮ್ಮಯ ॥
ತನಯನ ನೀವುದೆಮ್ಮಯ ರಾಜ್ಯಲಕ್ಷ್ಮಿಯ । ನನುಭವಿಪಂತತಿ ಮುದದಿಂದೆ ॥ (46)

ಎನೆ ಧರಣೀಶನ ನುಡಿಯುಲಾಲಿಸಿ ತನ್ನ । ವನಿತೆಯೊಳಂತೆಂದನಾ ವಿಪ್ರ ॥
ಮನದನುಮಾನವಿನ್ನೇಕೆಂದು ತನಯನ । ಜನಪತಿ ಗೀವುದುಚಿತವೆಂದ ॥ (47)

ಲೇಸನಾಡಿದಿರಿ ಭೂಪಾಲಕುಲೋತ್ತಮ । ನೀಶಾರ್ಚಕನೆಮಗದರಿಂದೆ ॥
ಈ ಶಿಶುವಿವರಲ್ಲಿ ಬೆಳೆದೊಡಧಿಕ ಗುಣ । ಭೂಸುರ ಕೇಳೆಂದಳಾ ಕಾಂತೆ ॥ (48)

ಎಂದೀರ್ವರೇಕಮಾನಸರಾಗಿ ತಮ್ಮಯ । ಕಂದನನಾಭೂಮಿಪಾಲಗೆ ॥
ತಂದಿತ್ತರೆಂದೀಶ ನವನಿಪಗೊರೆದ ಪೂ । ರ್ಣೇಂದುವದನೆ ಬಣ್ಣಿವೆ ನೇನ ॥ (49)

ಉಡುಗೊರೆಗಳ ಪಿರಿದಾಗಿ ಯಸ್ಯ ಜ್ಞಾನಿ । ಜೆಡೆಯರಿಗೊಲಿದಿತ್ತು ಬೀಳ್ಕೊಟ್ಟ ॥
ಮೃಡನವತಾರನ ವರಸುಕುಮಾರನ । ಪೊಡವಿಗೆರೆಯ ಕರೆತಂದನು ॥ (50)

ಅರಸಕೇಳಾನೃಪ ಗಜಮಸ್ತಕದೊಳು । ತರಳನನಿರಿಸಿ ಸಂಭ್ರಮದಿಂದೆ ।
ಪರಿಜನ ಪುರಜನವೆರಸಿ ಸಂತಸ ಮಿಗ । ಅರಮನೆಗೆಳ್ತಂದನೊಲವಿಂದೆ ॥ (51)

ಹರಶರಣಾಗ್ರಣಿಯೆನಿಸುವ ತರಳನ । ಧರಣಿಪಾಲಕ ತನ್ನ ರಾಣಿಗೆ ॥
ಹರುಷದೊಳೀಯೆ ಸಂತಸದ ಪೆರ್ಚುಗೆಯಿಂದ । ಪರಿರಂಭಣಂಗೆಯ್ದಳಾಕಾಂತೆ ॥ (52)

ತೊರೆದೊಕ್ಕವು ಮೊಲೆವಾಲಂಗಕೊರ್ವಿದು । ದರಸಿಯ ಕಣ್ಣೊಳಾನಂದಾಶ್ರು ॥
ಸುರಿದವು ಮಿಗೆ ರೋಮಾಂಚನ ವಾದವು । ತರಳನ ಸೋಂಕಿನ ಸೊಗಸೆಂತೊ ॥ (53)

ಇಂತತಿವಿಭವದೇಳ್ಗೆಯು ಮೆಯ್ಸಿರಿಯಿಂದೆ । ಸಂತಸಗಡಲೊಳೋಲಾಡುತೆ ॥
ಕಾಂತೆ ಕೇಳ್ಸುತನ ಸಲಹುತಿರ್ದನೆಂದ ಭೂ । ಕಾಂತನೊಳ್ತಿರುವಂಜಿಕಳನಾಥ ॥ (54)

ಗಿರಿಜೆಯ ಮೆಯ್ಗಂಪಿಗೆರಗುವ ತುಂಬಿಯಿಂ । ಚರವಶ್ವತರ ಗಾನರಸದೊಳು ॥
ಬೆರೆದು ಕಿವಿಗೆ ರಂಜಿಸೆ ತಲೆಯೊಲೆವ ಶಂ । ಕರ ಶಾಂತ ಮಲ್ಲಿಕಾರ್ಜುನಜಯ ॥ (55)

ಚೇರಮಶರಣಾಗ್ರಣಿಯ ಕೃತಿಯ ವಿ । ಸ್ತಾರವ ಮಾಳ್ಪರಾದರಿಪರ ॥
ತಾರಾರ್ಕರುಳ್ಳನ್ನೆವರ ಮಲ್ಲಿಕಾರ್ಜುನ । ನೋರಂತೆ ಪಾಲಿಪ ನೊಲವಿಂದೆ ॥ (56)

(ಎಂಟನೆಯ ಸಂಧಿ ಸಮಾಪ್ತಂ)

ಒಂಬತ್ತನೆಯ ಸಂಧಿ-

ಧರಣಿ ಜಲಾಗ್ನಿ ಮಾರುತ ವಿಯದ್ದಿನ ಹಿಮ । ಕರ ಪರಮಾತ್ಮಸಂಯುತಮಾದ ॥
ನಿರುಪಮರೂಪ ನಿರಾಕಾರ ಸಾಕಾರ । ಗುರುಶಾಂತ ಮಲ್ಲಿಕಾರ್ಜುನ ಜಯ ॥ (1)

ಕನ್ನಡಜಾಣ ಕಲಾಶೇಖರ ರಾಜ ರನ್ನ ಮಾನವಮೀನಕೇತನ ॥
ನಿನ್ನಯ ಕಬ್ಬ ಕೇಳ್ವರ ಕಿವಿಗಳ ಹಬ್ಬ । ಹೊನ್ನರ ವಿರುಪ ಮುಂಗತೆ ಕೇಳ ॥ (2)

ಚೆಲುವಿನ ಚೆನ್ನಪುತ್ಥಳಿಯೆ ಮೂಲೋಕದ । ಲಲನಾ ಸೀಮಂತ ರತ್ನವೆ ॥
ಕಲೆಗಳ ಕಲ್ಪಲತೆಯೆ ಮನದನ್ನಳೆ । ಒಲಿದಾಲಿಸು ಮೇಲ್ಗತೆಯನು ॥ (3)

ಕೇಳವನೀಶ ಶಿರೋಮಣಿ ಯುತ್ತುಂಗ । ಚೋಳನ ನಿಜಮಂದಿರದೊಳು ॥
ಮೂಲೋಕದ ಪುಣ್ಯಬೆಳೆವಂತೆ ಬೆಳೆದನಾ । ಬಾಲಕರೆರೆಯ ಸಂತಸದಿಂದೆ ॥ (4)

ಎಳಗನನೇರಿ ಧೂಮಾಳಪ ಭೂಷಣಾ । ಮಳಗಳ ನೆರೆವವರ್ಗೊಲಿದೀವ ॥
ನಲಿದು ಮದೇಭ ತಳಭದೊಳ್ಪೆಣಗುವ । ಚೆಲುವಿಂದೆ ಕುವರ ಕಣ್ಗೆಸೆದನು ॥ (5)

ಸಿತಪಕ್ಷದ ಮೃತಕಿರಣನಂತೆ ಪೆರ್ಚುವ । ಸುತಗೆ ನೃಪಾಲ ಚೂಡಾಮಣಿ ॥
ಅತಿಶಯಮಾದ ನವೀನ ವಿದ್ಯೆಗಳ ಪ । ದ್ಧತಿ ಕಲಿಸಿದನದ ನೇನೆಂಬೆ ॥ (6)

ಕರಿತುರುಗಾ ರೋಹಣ ಶಸ್ತ್ರ ಶಾಸ್ತ್ರದೆ । ಪರಿಣತನಾಗಿ ತಾನರಿಯದೆ ॥
ನಿರುಪಮಸಕಲಕಲೆಗಳಲ್ಲೆನಿಸಿ । ಕುವರ ನೊಪ್ಪಿದನೆಳೆವರೆಯದೆ ॥ (7)

ಈಪರಿಯೊಳ್ ಸೌಂದರ ಧರಣಿಪ ಪುಷ್ಪ । ಚಾಪನ ನೂರ್ಮಡಿ ಸೊಬಗಿಂದೆ ॥
ರೂಪಾಂತು ರಂಜಿಪಂತೆಸೆದಿರ್ಪ ನಾಚೋಳ । ಭೂಪನ ಕಣ್ಗೆ ಮಂಗಳಮಾಗಿ ॥ (8)

ಕನಕಕೆ ಕೆಂಪು ರನ್ನಕೆ ಮಾರ್ದವ ಕರ್ಬಿ । ನಿನಿವಣ್ಣು ಕತ್ತುರಿಗೊಳ್ವಣ್ಣ ॥
ಜನಪಕೇಳ್ಸಂಭವಿಸಿದ ಮಾಳ್ಕೆಯಂತೆ ಜ । ವ್ವನವೊದಗಿದುದಾಕುವರಗೆ ॥ (9)

ನೋಡಿದನುತ್ತುಂಗ ಚೋಳ ಮುಂಬರೆಯದ । ಗಾಡಿ ರಂಜಿಸುವ ಕುಮಾರನ ॥
ಮೂಡುವ ಮುದದೆ ತುಂಬುರನೆಂಬ ಮಂತ್ರಿಯೊ । ಳಾಡಿದನಿಂತೆಂದು ನಯದಿಂದೆ ॥ (10)

ನವಯೌವನದೆಸಕದೆ ಥಳಥಳಸುವ । ಕುವರಗೆ ತಕ್ಕ ಕನ್ನಿಕೆಯನು ॥
ತವಕದೆ ನೋಡು ಪೋಗೆಂದು ಬೀಳ್ಕೊಡೆ ಪೋದ । ನವತಿರುಮಣ[1]ಮಂದ ಪುತ್ತೂರ್ಗೆ ॥ (11)

ಆ ಪುರ ದೊಳಗೊರ್ವ ಭೂಸುರಸುತೆ ದಿವ್ಯ । ರೂಪಾನ್ವಿತ ಮಾದ ಕನ್ನೆಯ ॥
ತಾಪದಪಿಂನೋಡಿ ನಿಶ್ಚೈಸಿ ತಿರುಗಿದ । ಭೂಪಕೇಳಾ ತುಂಬುರ ಮಂತ್ರಿ ॥ (12)

ಅರಸನೊಳಾ ವೃತ್ತಾಂತವನರುಪಲು । ಹರುಷದ ತಾಳ್ದು ವಿವಾಹಕೆ ॥
ಪರಿಕರಗಳ ತರಿಸೆನೆ ತುಂಬುರ ಮಂತ್ರಿ । ನೆರಪಿದೆ ಸಕಲಸಾಧನಗಳ ॥ (13)

ಬರಿಸಿದ ಮಂತ್ರಿ ಮಾಂಡಲಿಕ ಸಾಮಂತರ । ದೊರೆಗಳ ಸಕಲರಾಯರುಗಳ ॥
ಕರಿರಥ ತುರಗಪದಾತಿ ಸಹಿತ ಲ । ಚ್ಚರಿಯ ನಧಿಕ ಸಂಭ್ರಮದಿಂದೆ ॥ (14)

ಹರುಷದೆ ಸೌಂದರೇಶನ ಸಿಂಗರಗೆಯ್ದು । ಧರಣಿಪ ಬಿಗಿಯುಪ್ಪಿ ಪಟ್ಟದ ॥
ಕರಿಯ ಮಸ್ತಕದೊಳಿರಿಸಿ ತುಂಬುರಗೂಡಿ । ತೆರಳಿಸಿದನು ಪರಿಣಯ ಕೊಲ್ದು ॥ (15)

ತಂಬಟ ಮುರಜವೃಜವಾಸ (?) ದುಂದುಭಿ । ಕೊಂಬು ಕಹಳೆ ಶಂಖಡಿಂಡಿಮ ॥
ಚೆಂಬಕವರೆಗಳ ಧ್ವನಿಯೆಣ್ದೆಸೆಗಳ । ತುಂಬಲುತ್ಸವ ಮಿಗೆ ನಡೆತಂದ ॥ (16)

---

[1] ಮೊದ.

ಉರಗಪತಿಯು ಬೆಡೆ ಕುಸಿವನ್ನ ಮಪ್ಪುದಿ । ಕ್ಕರಿಗಳ ಮಸ್ತಕ ಬಿರಿವನ್ನ ॥
ಧಾರುಣಿ ನಡುಗೆ ವಡೆದುದು ಮದುವೆಯ ಜನ । ತಿರುಮಣಿ ¹ಮಂದ ಪುತ್ರಾರ್ಗೆಯ್ದೆ ॥ (17)

ಬಂದು ಬಿಟ್ಟನು ತುಂಬುರ ಮಂತ್ರಿ ತಿರುಮಣಿ । ಮಂದ ಪುತ್ರಾರ ಬಾಹ್ಯದೊಳರ್ಪ ॥
ನಂದನದೊಳಗೆ ಮುಹೂರ್ತ ಬರ್ಪನ್ನೆಗ । ಸೌಂದರಗೂಡಿ ಸಂತಸದಿಂದೆ ॥ (18)

ಆಡುವ ನರ್ತಕಿಯರ ನವ್ಯಗೀತವ । ಪಾಡುವ ಗಾಯಕ ನಿಕರವ ॥
ನೋಡುತೆ ಪಿರಿದಾಲಿಸುತೆ ತುಂಬುರ ಮಂತ್ರಿ । ಗೂಡಿ ಸೌಂದರ ಭೂಪನಿರುತಿರ್ದ ॥ (19)

ಧರಣಿಪ ಕೈಲಾಸ ಗಿರಿಯೊಳೀ ವಿವರವ । ತುರಿಪದೊಳರಿದನು ಪೊರಮಡೆ ॥
ಗಿರಿಸುತೆ ಗಮನ ವೆತ್ತಣದೆಂದು ಬೆಸಗೊಳೆ । ಹರುಷದೊಳಂತೆದೆನು ಕೇಳ ॥ (20)

ಧರೆಯೊಳಗೆಮ್ಮ ನಂದನನ ಸೌಂದರೇಶ್ವರ । ಪಿರಿದು ಸಂಶ್ರುತಿಯೊಳಾಳ್ದಪ ಗಡ ॥
ಪರಿಹರಿಸಿಯು ತನಗೆಂದಿರ್ಪ ಸಂಕಲೆ । ಪರವೆಯ ರೊಡಗೂಡಿಸಿ ಬರ್ಪೆ ॥ (21)

ಎನೆಕೇಳಿ ತಾನು ಬಂದವೆನೆನೆ ಗಿರಿರಾಜ । ತನುಜೆಯು ತಾಳ್ದಳಿಗೆಳ್ತಂದು ॥
ಜನಪ ಕೇಳ್ತಿರುಮಣಿ ಮಂದ ಪುತ್ರಾರ್ಗೆ ಭೋಂ । ಕನೆ ಬಾದೆ ವಿಪ್ರವೇಷವ ನಾಂತು ॥ (22)

ನಡನಡುಗುವ ತಲೆನೆಸು ಜೋಲ್ದ ಪುರ್ಬುಗ ಸು । ಕ್ಕಡಸಿದ ಮೈಬಾಗಿ ದೊಡಲಿಂದೆ ॥
ಕೊಡೆಕೋಲು ಗುಂಡಿಗೆಗಳನಾಂತು ಕೆಮ್ಮುತೆ । ನಡೆತಂದ ಕಲ್ಯಾಣಿ ಸದನಕೆ ॥ (23)

ನರೆಗಡ್ಡ ನೆಲಕೆಳಲುವ ಧೋತ್ರ ಭಸಿತಾಂಗ । ಧರಿಸಿದ ರುದ್ರಾಕ್ಷೆಗಳಂದೆ ॥
ಹರಹರ ಶಿವಶಿವ ಎನುತ ಕೇಕರಿಸುತೆ । ನೆರೆದ ವಿಪ್ರರ ಮಧ್ಯಕೆಳ್ತಂದ ॥ (24)

ಎಡವುತೆ ಪೂರ್ಣಕುಂಭಗಳ ಭೃಂಗಾರವ । ಕೆಡವುತ ತರತರಿಸುತೆ ಬಿರ್ದು ॥
ಒಡೆವುತೆ ಗಳಗೆವಟ್ಟಲ ಪಾರ್ವರ ಮೇಲೆ । ಕೆಡೆವನು ಮೂರ್ಛೆವೋದವನಂತೆ ॥ (25)

ಕಡುಮುರುಗುತೆ ವಿಪ್ರಜನವೆದ್ದು ತಣ್ಣೀರ । ತೊಡೆದು ಕಣ್ಣಾಳಗಾಗ ಮೆಲ್ಲನೆ ॥
ಪಿಡಿದೆತ್ತಿ ನಿಂದಿರಿಸಲು ದಡದಡಿಸುತೆ । ಕೆಡಿಸಿದ ಶುಭವಸ್ತು ನಿಚಯುವ ॥ (26)

ಈ ವಿಪ್ರನ ಪಿಡಿದೊಡೆ ಕೈಯೊಳ । ಗಿವನೆಸು ಬಿಟ್ಟು ಪೋಪಂತಿದೆ ॥
ಆವನ ಪೊಗಿಸಿದನೀ ಗೌತಮ ಗೋವ । ನೀವಿವಾಹಕೆ ಕಂಟಕನನು ॥ (27)

ಎನುತಲಾ ದ್ವಿಜರೆಲ್ಲ ಕೈಕಾಲ್ಗಳನೊ । ಯ್ಯನೆ ಪಿಡಿದೆತ್ತಿ ಕೊಂಡೊಯ್ದಾಗ ॥
ಕನಲುತೆ ಚಪ್ಪರದಿಂ ಪೊರಗಿಟ್ಟು ಭೋಂ । ಕನೆ ಕವಾಟವ ಬಂಧಿಸಿ ಪೋಗೆ ॥ (28)

ಆವರಿಂದೆ ಮುಂದೆ ಬಂದೊಳ ಪೊಕ್ಕು ತೋರಣ । ನಿಕಹವ ಪರಿದು ಕರದೊಳಾಂತು ॥
ಶಿವಧೋ ಎಂದು ಕೂಗಿಡಲಚ್ಚರಿ ವ । ಟ್ಟುವ ಕಾರಣಿಕನೆಂದು ಸುರ್ದರು ॥ (29)

ಏನಯ್ಯ ಬಂದ ಕಾರಣವೇನು ಮೊರೆಯೇಕೆ । ಹಾನಿಯಾವುದು ನಿಮ್ಮ ಮನದಿ ॥
ಮೌನದಿಂ ಬನ್ನಿ ಕುಳ್ಳಿರಿ ನಿಮ್ಮ ಮನದಿಷ್ಟ । ವೇನೆಂದು ಬೆಸಗೊಳಲಿಂತೆಂದ ॥ (30)

ಇತ್ತಪಿರೇಕೆ ಕನ್ನಿಕೆಯ ಸೌಂದರ ನೆಮ್ಮ । ತೊತ್ತಿನ ಮಗನಿದು ಪುಸಿಯಲ್ಲ ॥
ಉತ್ತುಂಗ ಚೋಳ ಪಡೆದ ಮಗನಿವನಿಲ್ಲ । ದತ್ತಪುತ್ರನು ಲೋಕವರಿಯಲು ॥ (31)

ಇದು ಪುಸಿಯಲ್ಲೆನ್ನ ಕೈಯೊಳು ಪತ್ರ । ವಿಡೆಯೆನೆ ಕೇಳ್ದು ಕೌತುಕವಟ್ಟು ॥
ಮುದವೆಯಾಗದ ಮುನ್ನ ನೀವಿಲ್ಲಿಗೆಳ್ತಂ । ದುದುಲೇಸಾದುದೆಂದುಸಿರ್ದರು ॥ (32)

¹ ಮಾದ ?

ಅರಿಯದಿತ್ತವು ಕನ್ನಿಕೆಯ ದತ್ತಪುತ್ರ ನೆಂ । ದರಿದ ಬಳಿಕ ಕೊಡೆವೀ ಪೆಣ್ಣ ॥
ಪೊರಗಣ ವನದೊಳರ್ದಪ ಸೌಂದರನೆಂ । ದರಿಪಿದರವರಾ ಕ್ಷಣದೊಳು ॥ (33)

ಹರುಷದೊಳಾ ಭವನವ ಪೊರಮಟ್ಟಿತಿ । ಭರದಲ್ಲಿ ವನದಲ್ಲಿ ಗೆಳ್ತಂದು ॥
ನೆರೆದಿರ್ದ ಮಕುಟವರ್ಧನ ಮಾಂಡಲೀಕರ । ನೊರಸುತೊಯ್ಯನೆ ಕುವರನ
[ಸಾರ್ದು ॥ (34)

ಏನಯ್ಯ ಬಂದ ಕಾರಣ ಬಯಸುವ ವಸ್ತು । ವೇನು ಬೇಡಿದುದೀವೆ ನಿನಗೆನೆ ॥
ನೀನೆಮಗೀಯತಕ್ಕನೆ ನಮ್ಮ ತೊತ್ತಿನ । ಸೂನುವೆತ್ತೆಮಗೀವ ಗುಣವೆತ್ತ ॥ (35)

ಇನಿತು ದಿವಸ ನಮ್ಮ ಸೇವೆಗೆ ತಕ್ಕನ । ಲ್ಲೆನುತ ಬಿಟ್ಟಿರ್ದೆವು ನಿನಗೀಗ ॥
ಜನಿಸಿತು ಯೌವನ ಕೊಡೆ ಕಮಂಡಲು ಪಿಡಿ । ಯೆನೆ ಕೋಪದಿಂದವನಿಂತೆಂದ ॥ (36)

ಬಿಟ್ಟವರಾರೀ ಪಿಚ್ಚನೆ ನೂಂಕೆನೆ । ಕಟ್ಟೆಗೆಯುವರಾಗ ಲಿಯ್ತಂದು ॥
ಮುಟ್ಟದ ಮುನ್ನಿಳೆಯೊಳು ಬಿದ್ದು ಪೊರಳ ಕಂ । ಗೆಟ್ಟವೊಲಿರೆ ತುಂಬುರ ಬಂದು ॥ (37)

ಎಲೆ ವೃದ್ಧ ವಿಪ್ರ ನೀನೆತ್ತ ಕುವರನೆತ್ತ । ಕಲಹವಿದೇನು ಕಾರಣವೆನೆ ॥
ಇಳೆಯರಿವಂತೆ ಕೇಳವನ ಪಿತೃಗಳೆಮ್ಮ । ಕುಲಪರಂಪರೆಯ ಕಿಂಕರರೆಂದ ॥ (38)

ಎರವಿನ ಸಿರಿಯನರ್ಚಿರ್ದೆನ್ನ ಮರೆದಿವ । ನಿರೆ ಸುಮ್ಮನೆ ಬಿಡೆ ನಾನೀಗ ॥
ಧರೆ ಮೆಚ್ಚೆ ಪತ್ರವ ತೋರಿಕೊಂಡೊಯ್ದನ್ನ । ಪರಿಯ ತೋರದೆ ಮಾಣೆನಾನೆಂದ ॥ (39)

ಅನಿತರೊಳ್ತಿರುಮಣಿ ಮಂದ ಪುತ್ರಾರ ವಿ । ಪ್ರನಿಕಾಯ ಕಳುಪಿದ ಚರನು ಬಂದು ॥
ಜನಪತಿಕೇಳೊರ್ವ ಕತವೃದ್ಧ ಬಂದೀಗ । ಕನಲಿ ವಿಘ್ನಗಳ ನೊಡರ್ಚಿದ ॥ (40)

ಎನುತಲಾ ಚರನಾದ ವೃತ್ತಾಂತವೆಲ್ಲವ । ನಿನಿಸುಳಿಯದೆ ಪೇಳ ಪೋಗಲು ॥
ಮನನೊಂದು ಸೌಂದರೇಶ್ವರ ತುಂಬುರನೊಳು । ಘನತರ ಕೋಪದೊಳಂತೆಂದು ॥ (41)

ಕಂಡೆಯಲಾ ಮಂತ್ರಿ ಮುದಿ ಪಾರ್ವ ಮಾಡಿದು । ದ್ದಂಡತನವನಲ್ಲಿಗೆ ಪೋಗಿ ॥
ತೊಂಡುಗೆಡೆದು ನಿಂದಿಸಿ ನಮ್ಮ ಕಾಡಿದ । ದಿಂಡೆಯದೇನ ಮಾಡುವೆನೆಂದ ॥ (42)

ದೇವ ಚಿತ್ತೈಸು ಕೈಯೊಳು ಪತ್ರವಿಡಿದು ಬಂ । ದೀ ವಿಪ್ರನಿಂದು ದೂಷಿಸುತಿರೆ ॥
ಸಾವಿದನುಲ್ಲಂಘಿಸಬಾರದವನಿಪ । ಗೀ ವಿವರವನರುಪುವುದೆಂದ ॥ (43)

ಎನುತಲಾ ತುಂಬುರ ಮಂತ್ರಿ ಯುತ್ತುಂಗ ಚೋ । ಳನ ಬಳಿಗೀ ವೃತ್ತಾಂತವ ॥
ಇನಿಸುಳಿಯದೆ ಪೇಳ ಕಳುಹಿದ ಚರನೋ । ರ್ವನ ಶೀಘ್ರಗತಿಯೊಳ್ ಬರಲೇಳ್ದ ॥ (44)

ಬಂದಾ ಚರನುತ್ತುಂಗ ಚೋಳನ ಮುಂದೆ । ಯೆಂದಾ ವಿವರವನರುಪಲ್ಕೆ ॥
ಹಂದೆಯ ಹಾವಡರ್ದಂತೆ ನಡುಗಿ ಭಯ । ದಿಂದವ ಮನದೊಳಗಿಂತೆಂದ ॥ (45)

ತನಯರಿಲ್ಲೆಂದು ಚಿಡೆಯನ್ನೈ ನಾರಿಯು । ವನಿತೆ ಯಸ್ಯಜ್ಞಾನಿ ದೇವಿಯು ॥
ವಿನಯೋಕ್ತಿಯಿಂದೊಡಂಬಡಿಸಿ ತಂದುದು ಫಲ । ವಿನಿತಾಗ್ರವಿಲ್ಲೆಂದಳೆಪಿದ ॥ (46)

ಮುನ್ನಮೊಡಿದ ಸುಕೃತದ ಫಲವಿನಿತಿಲ್ಲ । ದಿನ್ನು ಪುತ್ರನ ಬಯಸಿದರುಂಟೆ ॥
ಎನ್ನಿಷ್ಟಸಿದ್ಧಿ ಕೈಸಾರಿರ್ದು ಸಿಯಲಾದು । ದಿನ್ನೇಕೆ ವಾಂಛೆಯೆಂದನು ನೃಪ ॥ (47)

ಶಿವಭಕ್ತರೊಳಗೆ ವಿಲಯುಸಲ್ಲದೆ ಮಗೇ । ಕವರ ಕೈಯೊಳಗಿರ್ದ ಪತ್ರದ ॥
ವಿವರವ ತಿಳಿದು ಸತ್ಪುರುಷರೆಂದಂತೆ ತಿ । ರ್ದುವುದೆಂದು ಪೇಳು ನೀಪೋಗೆಂದ ॥ (48)

ಎನೆ ದೂತ ಬಂದು ಬಿನ್ನಪಗೆಯ್ಯೆ ನರಸಿಂಗ । ಮೊನೆಯರು ಪೇಳ್ದ ವೃತ್ತಾಂತವ ॥
ಮನನೊಂದು ನಂಬಿ ತುಂಬುರ ಮಂತ್ರಿಯೊಡನೆನ್ನ । ಘನಭಾಗ್ಯ ವಿನಿತಾದುದಕಟೆಂದ ॥ (49)

ಮರುಗುವ ಕುವರನ ಸಂತೈಸಿ ದುರ್ಜನ । ರೆರೆಯು ನಿನ್ನಯ ಪತ್ರವೀಯೆನೆ ॥
ಉರೆ ಹರುಷದೊಳೀಯಲೋದೆಂದು ಕರಣಿಕ । ಗರುಪ ಲೋದಿದನವನಿಂತೆಂದು ॥ (50)

ವಿತತೇಶ್ವರ ವತ್ಸರ ಮಾಘ ಬಹುಳ ಸಂ । ಗತಚತುರ್ದಶಿಯಿಂದುವಾರದೆ ॥
ನುತಿವಡೆದೀಶ್ವರ ಭಟ್ಟನಿಗೊಲಿದನು । ಮತಿಯಿಂದೆಯ್ದೆ ಜೆಡೆಯರಿತ್ತ ॥ (51)

ಪತ್ರದ ಕ್ರಮವೆಂತೆನೆ ಎನ್ನ ಪುತ್ರ ಕ । ಳತ್ರರ ನಿಮಗೆಲ್ಲರ ನೊಲ್ದು ॥
ನಾತ್ರಿಕರಣಶುದ್ಧದಿಂದಿತ್ತೆನಿದಕೆಮ್ಮ । ಗೋತ್ರವೆ ಸಾಕ್ಷಿಯದಾರೆನೆ ॥ (52)

ತಿರುವೆಣ್ಣೆನಲ್ಲೂರ ರುದ್ರಭಟ್ಟರು ಮಹೇ । ಶ್ವರಭಟ್ಟರಿವರನು ಮತದಿಂದೆ ॥
ಬರೆದಾತ ತಿರುಚಿಟ್ಟಾಂಬರ ಮಲಘಿಯೆಂ । ದಿರೆ ನಂಬಿ ಕೋಪದೊಳಂತೆಂದ ॥ (53)

ನಡೆ ತೋರಿಸು ನಿನ್ನ ಸಾಕ್ಷಿ ಗೀಕ್ಷೆಯೆನೆಂದು । ಘುಡುಘುಡಿಸುತೆ ಮದದಂತಿಯು ॥
ಅಡರಿ ಸೌಂದರ ತಿರುವೆಣ್ಣೆನಲ್ಲೂರ್ಗೆ ಪೆ । ರ್ಬಡೆಗೂಡಿ ದುಗುಡದೆ ಬರುತಿರ್ದ ॥ (54)

ಬಲದ ಭಾಗದ ಕಂಣು ತೊಳ್ಕುತ್ತೆ ತುಂಬುರ । ನೊಳು ಪೇಳ್ದ ಸೌಂದರ ಹರುಷದೆ ॥
ಸಿಲುಕುವೆನೇ ನಾ ನೀ ವೃದ್ಧ ವಿಪ್ರನಿಗೆಂ । ದೊಲಿದೆಳ್ತಂದ ಸಾ ಪುರಕಾಗಿ ॥ (55)

ಗಿರಿಜೆಯು ಮೆಯ್ಗಂಪಿಗೆರಗುವ ತುಂಬಿಯಿಂ । ಚರವಶ್ವತರಗಾನ ರಸದೊಳು ॥
ಬೆರೆದು ಕಿವಿಗೆ ರಂಜಿಸೆ ತಲೆಯೊಲೆವ ಶಂ । ಕರಶಾಂತ ಮಲ್ಲಿಕಾರ್ಜುನ ಜಯು ॥ (56)

ಚೇರಮ ಶರಣಾಗ್ರಣಿಯು ಕೃತಿಯ ವಿ । ಸ್ತಾರವ ಮಾಳ್ಪರಾದರಿಪರ ।
ತಾರಾರ್ಕರುಳ್ಳನ್ನವರ ಮಲ್ಲಿಕಾರ್ಜುನ । ನೋರಂತೆ ಪಾಲಿಪನೊಲವಿಂದೆ ॥ (57)

(ಒಂಬತ್ತನೆಯ ಸಂಧಿ ಸಮಾಪ್ತಂ.)

ಹತ್ತನೆಯ ಸಂಧಿ-

ಕಂಬಳಾ ಶ್ವತರ ಗಾನಾಮೃತ ರಾಜ ಕ । ದಂಬ ಮನೋಭವ ಸೂದನ ॥
ತ್ರ್ಯಂಬಕ ತ್ರಿಪುರಾಂತಕ ಜಯ ಸುರನಿ ಕು । ರುಂಬ ಸೇವಿತ ಮಲ್ಲಿಕಾರ್ಜುನ ॥ (1)

ರಸಿಕರ ರಸನೆಯಿಂದಿಳಿಯಳು ಕವಿ ಹೃದ । ಯ ಸರೋಜ ಸದನದಿಂದಗಲಳು ॥
ವಸುಮತಿಯಾಣ್ಮ ವಿರುಪರಾಜ ನೀ ಪೇಳ್ದ । ರಸಕೃತಿರಮೆಯೆಸಕಮದೆಂತೊ ॥ (2)

ಕಾಮನ ಕಲ್ಪವಲ್ಲರಿ ಬಿಂಬಾಧರೆ । ತಾಮರಸ ದಳಾಯತ ನೇತ್ರೆ ॥
ಸಾಮಜಯಾನೆ ಶಶಾಂಕ ವದನೆ ಕೇ । ಳೀ ಮನೋಹರ ಮಪ್ಪ ಕಥೆಯನು ॥ (3)

ಸರಸಿಜಮುಖ ಕೇಳು ತಿರುವೆಣ್ಣೆನಲ್ಲೂರ್ಗೆ । ಬರುತಿರ್ದ ಸೌಂದರ ನೆಸುತೊಲ್ದು ॥
ವಿರಚಿಸಿದನು ಚೇರಮ ಭೂಪತಿಯೊಳು । ತಿರುವಂಜಿ ಕಳನಾಥ ನೊಲವಿಂದೆ ॥ (4)

ಬರಲುತ್ಸವದೊಳಲ್ಲಿನ ಮಹಾಜನ । ನೆರೆದಿದಿರ್ವಂದತಿ ಹರುಷದೆ ॥
ಪರಸಿ ಮಂತ್ರಾಕ್ಷತೆಗಳ ನೀಡಿ ಪಿಡಿಯದೆ । ಧರಣಿಪ ಮುನಿಸಿನಿಂದೆಳ್ತಂದ ॥ (5)

ಕೇಳವ ನೀಶ ಗಜವ ನಿಳದಾ ನಂಬಿ । ವೋಲಗ ಗೊಟ್ಟು ವಿಪ್ರರ ಕೂಡೆ ॥
ಕೇಳಿರೈ ನಿಮ್ಮೂರ ಭೂಸುರ ನೋರ್ವ ತ । ನ್ನಾಳೆಂದೆಮ್ಮ ನಿಂದಿಸಿದನು ॥ (6)

ಜಗಳವಾಡಿದ ಪತ್ರವ ತೋರಿ ನೀವು ಸಾ । ಕ್ಷಿಗಳಂತೆ ನಿಮ್ಮೂರವ ನಂತೆ ॥
ಮಿಗೆ ಮುಪ್ಪಿನ ವಿಪ್ರನೆಲ್ಲಿರ್ದಪನೆನೆ । ಬಗೆಗೆಟ್ಟು ನುಡಿದರಾ ಬುಧರಾಗ ॥ (7)

ಈ ಊರೊಳು ನೆಲೆಯಾಗಿರ್ಪ ವಿಪ್ರರು । ನಾವಲ್ಲದಿನ್ನಿಲ್ಲವೆಮ್ಮೊಳು ॥
ಆವವ ನಿಮ್ಮ ಕಾಡಿದ ಪಾರ್ವನೆಂಬುದ । ನೀವೆ ವಿಚಾರಿಪ್ಪುದೆಂದೆನೆ ॥ (8)

ಆ ಮಾತು ಹಿಂಚಿತು ಮುಂಚಿತೆಂಬಂದದೆ । ಭೂಮಿ ಸುರರ ಮಧ್ಯದೊಳಿದ್ದು ॥
ಕ್ಷೇಮವೆ ರುದ್ರಭಟ್ಟರೆ ಶಿವಾನಂದರೆ । ವಾಮದೇವರೆ ಪಶುಪತಿಗಳೆ ॥ (9)

ಕುಶಲವೆ ಸೋಮಯಾಜಿಗಳೆಂದವರ ನುಡಿ । ಯಿಸಲಚ್ಚರಿವಟ್ಟು ವಿಪ್ರರು ॥
ಉಸಿರ್ದರು ನೀವೆಲ್ಲಿರ್ಪಿರಿ ನಿಮ್ಮದು । ಪೆಸರಾವುದೆನಲಾಗಳಂತೆಂದ ॥ (10)

ಈ ವೂರೆಮಗೆ ಜನ್ಮಸ್ಥಳ ಪೂರ್ವದೊ । ಳಾವಿರ್ದೆವಿಲ್ಲಿ ನಮ್ಮಯ ವೃತ್ತಿ ॥
ದೇವದಾಯಕೆ ಸಂದುದೆಂಬರೆಮ್ಮಾ ಭಿಧಾನ । ಭಾವಿಸಿ ವಿಶ್ವೇಶ್ವರರೆಂದು ॥ (11)

ಹದಿನಾರನೆಯ ವರುಷದೆ ವಾರಣಾಸಿಗೆ । ಯ್ದಿದೆವದ ರಿಂದಂದಿಂದಿಗೆ ॥
ಇದೆ ತಾನೆ ಬಂದೆವೆಂದೆನೆ ವಿಪ್ರಜನವೆಲ್ಲ । ಮುದದಿ ಕುಳ್ಳಿರಿಸೆ ಸೌಂದರನೆಂದ ॥ (12)

ಉಂಟುಂಟು ನೀವು ನಿಮ್ಮೊಳು ನಿಮ್ಮ ಮುನ್ನಿನ । ನಂಟಭೇದಕವೆಮ್ಮ ಮದುವೆಗೆ ॥
ಕಂಟಕವಾದ ಪತ್ರವನೋದಲಿ ಮೇಲೆ । ತುಂಟತನವ ಕಾಣ್ಬೆ ನಾನೆಂದ ॥ (13)

ಓದೆಂದು ಕೊಡೆ ಬರಹವ ಕಂಡು ಗಣಕ ಮೇ । ಲೋದುತೆ ಕಣ್ಬನಿಗಳ ತಂದು ॥
ಆದರಿಸೆಮ್ಮಯ್ಯನ ಹಸ್ತಾಕ್ಷರ । ಮೇದಿನೀ ಪತಿಯೆಂದು ನುಡಿದನು ॥ (14)

ಸಾಕ್ಷಿಗಳೊಪ್ಪದಕ್ಕರ ವಪ್ಪುದೆಂದು ಮುನಿ । ರೀಕ್ಷಿಸುತವರವರಣುಗರು ॥
ಆ ಕ್ಷಿತಿಪತಿಗೆ ಬಿನ್ನಪಗೆಯ್ಯೆ ಕೋಪದೊ । ಳೀಕ್ಷಿಸುತವರೊಡನಿಂತೆಂದ ॥ (15)

ಬರದಾತನ ಸಾಕ್ಷಿಗಳಳಿದರು ಗಡ । ನೆರವಿನೀವಪ್ಪುದೆಂಬಿರಿ ಗಡ ॥
ಸರಡಿನೋಲೆಯ ತೋರಿ ನಮ್ಮ ನಾಳ್ದಪ ಗಡ । ದುರುಳ ಹಾರುವ ಲೇಸುಲೇಸೆಂದ ॥ (16)

ದೇವರಾಲಿಪ್ಪುದೀಗಳೆರಿದೆವೀ ವೃದ್ಧನ । ನಾವು ಪೂರ್ವದೊಳರಿದಿರ್ದೊಡೆ ॥
ನೀವೆಮಗಾಜ್ಞೆಯ ಚಿತ್ತೈಸ ಬೇಕೆಂ । ದಾ ವಿಪ್ರಜನ ಬಿನ್ನವಿಸಲು ॥ (17)

ಅನಿತರೊಳಾ ಪತ್ರದೊಳಿರ್ದ ವಿವರವ । ದೆನಿತಿರ್ಪುದು ನೋಡುವೆನೆಂದು ॥
ಜನಪತಿ ಕೇಳ್ಸೌಂದರ ನೀಸಿ ಕೊಂಡದ । ನಿನಿಸಾಗಿ ಸೀಳದ ನಾಗ ॥ (18)

ಪರಿದೊಡೇನಾಯ್ತು ಪತ್ರವನೆಮ್ಮ ಸತಿ ಮುನ್ನ । ಲರಿದಿರ್ದ ಮೂಲ ಪತ್ರಗಳನು ॥
ಪೊರಗಣ ಶಿವ ಭವನದೆ ಬೈತಿಟ್ಟಳೆಂ । ದರುಪೆ ಸೌಂದರ ಮುಳದಿಂತೆಂದ ॥ (19)

ಕಡು ಪೊಸತಿದು ನಿನ್ನಯ ಮೂಲ ಪತ್ರವ । ನಡೆ ನೋಡುವೆ ನೇಳೇಳೆಂದು ॥
ಘುಡಿಘುಡಿಸುತ ಭೋಂಕನೆದ್ದ ನೃಪಾಲನ । ನೊಡಗೊಂಡು ಶಿವಭವನಕೆ ಬಂದು ॥ (20)

ಕೆರಹುಗಾಲಿಂದೀಶ ಭವನದ ಪೊಗೆ ಸೌಂ । ದರ ಕಂಡು ಕುಪಿತ ಮಾನಸನಾಗಿ ॥
ದುರುಳ ಹಾರುವ ನೀನಿಂತು ಮಾಳ್ಪರೆ ನಿನ್ನ । ಪರಿಭವಿಸುವೆನೆಂದು ಬೆಂಬತ್ತೆ ॥ (21)

ಕೇಳಿಲೆ ಕೇರಳ ನೃಪ ಪೋಗಿ ಭವನದೊಳ । ಗಾಳಲಾ ಶಿವಲಿಂಗ ದೊಳಗಾಗ ॥
ಪೇಳಲೇನಾ ಸೌಂದರ ಕಂಡು ಹರುಷಾಶ್ರು । ದಾಳದ ರೋಮಾಂಚಯುತನಾಗಿ ॥ (22)

ಅರಸ ಕೇಳ್ಸಾತ್ವಿಕ ಭಾವ ಸಂಜನಿಸಿ ಸೌಂ । ದರ ನಾಗ ಕನಸು ಕಂಡರಿದಂತೆ ॥
ಕರತಳಾಮಳಕವಾಗಲು ಪೂರ್ವ ವೃತ್ತಾಂತ । ಹರಹರಯೆನುತೆಹೊಂಗಿದನಾಗ ॥ (23)

ದೇವದೇವೇಶ್ವರ ನೀವೃದ್ಧ ವಿಪ್ರನೆ । ಭಾವದೊಳ್ಅರೆ ಮುಂದರಿಯದೆ ॥
ಚಾವಳನೆಂದು ಬಗೆದ ತಪ್ಪ ಸೈರಿಸಿ । ಕಾಯ್ವುದೆನುತೆ ಬಿನ್ನಪಗೆಯ್ದು ॥ (24)

ಕುರಿಗಳು ಸಲಹಿದಾಣ್ಮನನರಿದಿರ್ಪವು । ಕುರಿಗಳಂದವೆ ಕಷ್ಟವನ್ನಯು ॥
ಎರೆಯು ನೀನೆಯ್ತರಲರಿಯದಿರ್ದುದರಿಂದೆ । ದರೆ ಗಾಂಪನಾದೆ ನಾನಕಟೆಂದ ॥ (25)

ದ್ರೋಹವೆನ್ನದು ನಿಮ್ಮನರಿಯದ ಮಾಯಾ । ಮೋಹ ಮದಾಂಧ ವಿಮೋಹನ ॥
ಊಹೆಗೆಡುಗನ ನೋಳ್ಪರೆ ದೇವ ಸಲಹಲು । ಬೇಹುದೆನುತೆ ಬಿನ್ನಪಗೆಯ್ದು ॥ (26)

ಈ ಪರಿ ಮನ ಮರುಗುವ ಸೌಂದರೇಶಗೆ । ರೂಪುದೋರಿದ ಲಿಂಗ ಮಧ್ಯದಿ ॥
ಭೂಪ ಕೇಳಖಿಳ ಸೂರ್ಯಪ್ರಭೆ ಯೊಡಗೂಡಿ । ದಾಪರಿಯೊಳು ಥಳಥಳಸುತೆ ॥ (27)

ಮಿರುಗುವ ಪಂಚವದನ ದಶಭುಜಗಳ । ಶಿರೆದಲೆ ಪಲವಾವುದೊಡಿಗೆಯ ॥
ಕರೆಗೊರಲಿಂಗಳ ಗಂಗಳೆ ಸಕದಿಂದೆ । ಮೆರೆವ ಮಹಾ ಮೂರ್ತಿಯು ಕಂಡ ॥ (28)

ಕೊ ತ್ತಾಡಿಬ ನಕ್ಕರೊಳಮರಾದ್ರಿ ಕೋ । ದಂಡ ಗಿರೀಶ ಪುರಹರ ಜಯ ॥
ಖಂಡ ಪರಶು ಜಯ ಕಾಲಾಂಬು ಜಾತವೆ । ತಂಡ ಶಂಕರ ಜಯ ಜಯಯೆಂದ ॥ (29)

ಹರುಷದೆ ಪಾದಾಬ್ಜ ಕೆರಗಿದ ನಂಬಿಯ । ಶಿರವಿಡಿದೆತ್ತಿ ಮಗನೆ ನಿನ್ನ ॥
ಪಿರಿದು ಕಾಡಿದೆ ತಪ್ಪುಂಟದ ಮರೆಯೆಂ । ದಿರದೆ ತಳ್ಕೈಸಿ ಮೆಯ್ದಡವಿದ ॥ (30)

ಮೊಗದೊಳು ಮೊಗವಿಟ್ಟು ಮುಂಡಾಡಿ ಮುದ್ದಿಸಿ । ಮಗನೆ ನಿನ್ನಕ್ಕ ಮಾಲೆಯ ನಿನ್ನ ॥
ಮಿಗೆ ಪಾಡೆನುತ ಪೊಂದಾಳವ ಕೊಡಲವ । ನಗಜೇಶ ಪಾಡಬಲ್ಲನೆಯೆಂದ ॥ (31)

ಎನಲೆನ್ನ ನಾಪುರ ಬಾಹ್ಯದ ವನದೊಳು । ಮುನಿದು ಪಿಚ್ಚರೆಯೆಂದು ಬಯ್ದಂತೆ ॥
ವಿನಯದೆ ಪಾಡು ಕಿನ್ನರ ಸರವಿತ್ತಪೆ । ನೆನೆ ಸೌಂದರೇಶ ಪಾಡಿದನಾಗ ॥ (32)

ಪಾಡನಾಲಿಸಿ ಕೇಳ್ದು ಮೆಚ್ಚಿ ಹೋಗಿದೆಯೆಂದು । ನಾಡೊಳು ಶಿವಭವನದೆ ನೀನು ॥
ಪಾಡಲು ಪಡಿಹೊನ್ನ ನೀವೆನೆನುತಲಾಗ । ನೀಡಿದೆ ನಂಡಿಯುಂಡಿಗೆ ಹೊನ್ನ ॥ (33)

ಇಂತತ್ರಿ ಕರುಣದೆ ಪಡಿಹೊನ್ನ ನಿತ್ತು ಮೇ । ಣಿಂತೆಂದನಾ ಸೌಂದರ ನೊಳು ॥
ನೀಂತಿರುವಾರೂರ್ಗೆ ಬರೆ ನಿನ್ನ ಮನಸಿಗೆ । ಸಂತೋಷವ ನೊಡರಿಪೆನೆಂದು ॥ (34)

ನುಡಿದು ಕುಮಾರು ಬೀಳ್ಕೊಟ್ಟು ಲಿಂಗದೊ । ಳಡಗಿದೆನೆಂದು ಮಹೇಶ್ವರ ॥
ಪೊಡವಿಗೆರೆಯಗತಿ ಹರುಷದೊಳರಿಪಿದ । ಮಡದಿಯ ರನ್ನವೆ ಪೇಳೆಸ್ವದೇನ ॥ (35)

ಗಿರಿಜೆಯು ಮೆಯ್ಗಂಪಿಗೆರಗುವ ತುಂಬಿ । ಯಿಂಚರವಶ್ವತರಗಾನ ರಸದೊಳು ॥
ಬೆರೆದು ಕಿವಿಗೆ ರಂಜಿಸೆ ತಲೆಯೊಲೆವ ಶಂ । ಕರ ಶಾಂತ ಮಲ್ಲಿಕಾರ್ಜುನ ಜಯ ॥ (36)

ಚೇರಮ ಶರಣಾಗ್ರಣಿಯ ಕೃತಿಯ ವಿ । ಸ್ತಾರವ ಮಾಳ್ಪಗಾದರಿಪರ ॥
ತಾರಾರ್ಕರುಳ್ಳನ್ನವರ ಮಲ್ಲಿಕಾರ್ಜುನ । ನೋರಂತೆ ಪಾಲಿಪ ನೊಲವಿಂದ ॥ (37)

(ಹತ್ತನೆಯ ಸಂಧಿ ಸಮಾಪ್ತಂ.)

ಹನ್ನೊಂದನೆಯ ಸಂಧಿ-

ಇಂದ್ರಾದಿ ಸುಮನೋನುತಿಪಾತ್ರ ಮೂರ್ತಿ ಯು । ಪೇಂದ್ರ ಹಿರಣ್ಯಗರ್ಭಾರ್ಚಿತ ॥
ಚಂದ್ರಧನಂಜಯ ಮಿತ್ರಾಕ್ಷ ಜಯತು ಮು । ನೀಂದ್ರ ವಂದಿತ ಮಲ್ಲಿಕಾರ್ಜುನ ॥ (1)

ಪೇಳೆನ್ನೆರೆಯ ಹೊನ್ನೊರೆಯ ವಿರುಪ ಭೂಪ । ಪೇಳು ಚೋಳರ ಭೀಮ ಗುಣಧಾಮ ॥
ಪೇಳು ಬೀಡಿನ ಗೋಪ ಕಂದರ್ಪ ಸಮರೂಪ । ಪೇಳು ಮೇಲ್ಗತೆಯ ವಿಸ್ತರವನು ॥ (2)

ಎಳೆ ಮಿಂಚಿನ ಮೊತ್ತವ ಮರಿಪುಲ್ಲೆಗಂ । ಗಳ ಗಾಡಿಯ ಕಿರು ಮಿನ್ಗಳ ॥
ಪೊಳಪ ಕನ್ನೆಯ್ದಿಲ ನಗೆಯ ನೇಳಿಸುತಿರ್ಪ । ತಳಪಗಣ್ಣಬಲೆ ಮೇಲ್ಗತೆಗಳ ॥ (3)

ಪೃಥ ಸದನವ ಪೊರವಂಟು ತುಂಬುರ ಮಂತ್ರಿ । ಯೊಡನೆ ಮುಗುಳ್ನಗೆ ಮೊಗದಿಂದೆ ॥
ಪೊಡವಿಯೆರೆಯ ಸೌಂದರೇಶ್ವರ ಪೋಗು ನಿ । ನ್ನೊಡೆಯನ ಬಳಗೆ ನಲವಿನಿಂದೆ ॥ (4)

ಬಿಡೆ ನಿನ್ನ ಪಾದ ಸರೋಜವನೆಲೆ ದೇವ । ಮೃಡಗೆ ನೀನಾಳಾದೆ ನಿನಗಾನು ॥
ಪೊಡವಿಯರಿಯೆ ದಾಸನಾಗಿ ಬಾಳುವೆನೆಂದು । ನುಡಿಯೆ ಸಂತಸವಟ್ಟನಾ ನಂಬಿ ॥ (5)

ಅಂದಲ್ಲಿ ಪಡೆದ ಪೊಂಗಳ ಭಕ್ತ ತತಿಗಿತ್ತು । ಸೌಂದರನಾ ತಿರುವಾರೂರ್ಗೆ ॥
ಅಂದಣವೇರಿ ತುಂಬುರಗೂಡಿ ಸಂಭ್ರಮ । ದಿಂದೆಯ್ತರುತಿರ್ದನೊಲವಿಂದೆ ॥ (6)

ಶಿವನ ಕಾರುಣ್ಯವ ಪಡೆದ ಮಹಾಭಕ್ತ । ನೆವನೆಂದು ತನ್ನ ದೇಶವ ಬಿಟ್ಟು ॥
ತವಕದೆ ಪೆರುಮಲ್ಲೇಶ ಕುರುಂಬನೆಂ । ಬವ ನಿದಿರ್ವಂದನಾ ನೃಪತಿಗೆ ॥ (7)

ಗುಡಿಯೆತ್ತಿ ಕುಣಿದಾಡುತೆ ನಮಿಸುತೆ ಬರ್ಪ । ಮೃಡಭಕ್ತನಿರವ ಸೌಂದರಕಂಡು ।
ಒಡೆಯ ನೀನಾರೆಂದೆನೆ ನಿನ್ನ ಪಾದವ । ಬಿಡದೆಯ್ದುವ ದಾಸ ನಾನೆಂದ ॥ (8)

ಇಂದು ಮೊದಲು ನನಗಿದು ನೇಮ ನಿನ್ನ ಪೊ । ನ್ನಂದಣದಿದಿರೊಳು ಗುಡಿಯೆತ್ತಿ ॥
ಬಂದಪೆನೆನಲದ ಕೈಕೊಂಡು ವಿಭವದೆ । ಸೌಂದರ ನಡೆದನಾ ನೃಪಗೂಡಿ ॥ (9)

ಈ ತೆರದಿಂದ ಸೌಂದರ ಭೂಮಿಪಾಲ ವಿ । ಖ್ಯಾತಿವಡೆದ ತ್ರಿರುವಾರೂರ್ಗೆ ॥
ಪ್ರೀತಿಯಿಂ ಬರುತೆ ವಲ್ಮೀಕನಾಥನ ಶಿಖ । ರಾತಿಶಯವ ಕಾಣುತೊಲವಿಂದ ॥ (10)

ಅಂದಣವಿಳಿದು ಸೌಂದರಭೂಪ ಕಾಲ್ನಡೆ । ಯಿಂದೆ ಸಂತಸದೊಳೆಯ್ತರುತಿರೆ ॥
ಇಂದು ಶೇಖರನಾಜ್ಞೆಯಿಂದೀಶ ಭಕ್ತರ । ವೃಂದವ ತನಗಿದಿರ್ಗೊಂಡುದು ॥ (11)

ತೆಡೆವೆಳಗಿಂದೆ ಮುಗುಳ್ನಗೆವೆಳಗಿಂದೆ । ಕುಡಿತೆಗಂಗಳ ಕುಡಿವೆಳಗಿಂದೆ ॥
ಸೊಡರ್ವೆಳಗಿಂದೆ ಜಂಗಮ ಪುಷ್ಪಲತೆಯಂತೆ । ಮಡದಿಯರಿದಿರ್ಗೊಂಡರರಸನ ॥ (12)

ನವಕುಚಕಲಶಗಳಿಂದಾಸ್ಯ ಮುಕುರದಿ । ತವೆಯೊಪ್ಪುವಳಕ ತೋರಣದಿಂದೆ ॥
ಯುವತೀ ಜನವೆತ್ತರಮುಡಿ ಗುಡಿಯಿಂ । ದವನಿಪನಿದಿರ್ವಂದರೊಲವಿಂದೆ ॥ (13)

ಕಳಶಗನ್ನಡಿಪಿಡಿದಧಿಕಸಂಭ್ರಮದೊಳ । ಗೆಳೆವೆಣ್ಗಳ ತಂಡವೆಳ್ತಂದು ॥
ತೊಳಗುವ ರನ್ನದಾರತಿಯೆತ್ತಿ ಸೌಂದರ । ನೊಳ ಪೊಕ್ಕಪುರವನುತ್ಸವದಿಂದೆ ॥ (14)

ಮಣಿಗೋಪುರವ ಕಳದು ಹರಶರಣಾ । ಗ್ರಣಿ ಶಿವಭವನಕೆಳ್ತರುತಿರೆ ॥
ಮಣಿಮಾಡಗಳನೇರಿ ಸತಿಯರ ಸೀಮಂತ । ಮಣಿಗಳೀಕ್ಷಿಸಿದರಕ್ಕರು ಮಿಗೆ ॥ (15)

ಒಲವಿಂದೆ ಸೌಂದರ ನೃಪನನೀಕ್ಷಿಪ ವಾರ । ಲಲನೆಯರಕ್ಷಿ ತ್ರಿವರ್ಣದ ॥
ಬೆಳಗೆಸೆದುದು ರತ್ನಮೌಕ್ತಿಕ ಹರಿನೀಲ । ಗಳ ಸಾಲು ತೋರಣವೆಂಬಂತೆ ॥ (16)

ಓರೋರ್ವೆ ಮೀನ್ಗಳನೋರೋರ್ವೆ ಜೊನ್ನವ । ನೋರೋರ್ವೆ ನೆಯ್ದಿಲನಿಳಕೆಯ್ದು ॥
ಚಾರುಕಟಾಕ್ಷಗಳಿಂ ದೀಕ್ಷಿಸಿದರಾ । ನಾರಿಯರಾ ಸೌಂದರೇಶನ ॥ (17)

ಪೊಳೆವ ಪೊಂಗರುವಾಡಗಳನೇರಿ ನೋಡುತಿ । ರ್ಪೆಳೆವೆಣ್ಗಳಂಗಾಂಶು ಕೈನೀಡಿ ॥
ನಲಿದು ತೆಗೆದುಕೊಂಡುದು ತಮ್ಮನೀಕ್ಷಿಸಿ । ಬಳಲಿದರಾಲೋಕನಗಳ ॥ (18)

ಕಂತುವನಿಳಕೆಯ್ವ ಸೌಂದರ ನೃಪನ ವಿ । ಶ್ರಾಂತಲೋಚನಗಳಿಂದೀಕ್ಷಿಸೆ ॥
ಸಂತಾಪ ಬಡಿಪನಂಗಜನೆನ್ನನೆಂದೊರ್ವ । ಕಾಂತೆ ನೋಡಿದಳು ಕಣ್ಗೊನೆಯಿಂದೆ ॥ (19)

ಘನ ಕೇಶಪಾಶ ಸಡಿಲಿ ಮಡಕೆಳದೊರ್ವ । ವನಿತೆ ನಿಂದೀಕ್ಷಿಸುತೆಸೆದಳು ॥
ಜನಪ ಕೇಳ್ನೀಲದ ನಿಡುಗಂಬದೊಳೊಂದಿ । ಮಿನುಗುವ ಪೊನ್ನ ಪುತ್ಥಳಿಯಂತೆ ॥ (20)

ವರಕುಂಕುಮಾಂಗಿ ಮೌಕ್ತಿಕಭೂಷದರ್ಪಣ । ಕರೆ ಪಸದನಗೆಯ್ವುತೆಳ್ತಂದು ॥
ಕರಮೆಸೆದಳು ಪೂರ್ಣಶಶಿಯ ತಾರಾಳಿಯ । ಧರಿಸಿದ ಸಂಜೆವೆಣ್ಣೊಂಬಂತೆ ॥ (21)

ನಿಡುಮುಡಿ ನಿಡುಗಂಗಳ ಚೆಲ್ವಿಕೆಯಿಂದೆ । ಬಡನಡು ಬಡಬಾಸೆಗಳಿಂದೆ ॥
ಕುಡಿಪುರ್ಬು ಕುಡಿಗುರುಳುಗಳಿಂದೆ ರಂಜಿಪ । ಮಡದಿಯರೊಲಿದೀಕ್ಷಿಸಿದರು ॥ (22)

ಈ ವಿಧದಿಂದ ಸೌಂದರ ನೀಕ್ಷಿಸುವ ರಾ । ಜೀವ ಗಂಧಿಯರ ಮಧ್ಯದೊಳಿರ್ದು ॥
ಕೋವಿದೆ ಪರವೆಯೊಪ್ಪಿದಳೆಳೆ ವಳೀಗ । ಳಾವರಿಸಿದ ಕಲ್ಪಲತೆಯಂತೆ ॥ (23)

ಹಡಪ [1]ವಿಜನ ಗಿಂಡಿ ಕಾಳಂಜ ಕುಂಚ ಕ । ನ್ನಡಿವಿಡಿದೆಸೆವೆಳೆವೆಂಗಳ ॥
ಗಡಣದೊಳಿರ್ದಂಬುಜಾಯತೇಕ್ಷಣೆ ಯೆವೆ । ಯಿಡದೀಕ್ಷಿಸಿದಳಾ ಕುವರನ ॥ (24)

ಇವನಾರೊ ಇಂದ್ರನೊ ಚಂದ್ರನೊ ಮದನನೊ । ರವಿಯೊ ವಸಂತನೊ ಧನದನೊ ॥
ದಿವಿಜರೊಳೊರ್ವನೊ ಹರಿಯೊ ನಳನೊ ಎಂದು । ತವಕದೊಳವನ ನೀಕ್ಷಿಸಿದಳು ॥ (25)

ಕಾಮನೆಂಬೆನೆ ಚೆಲ್ವರೂಪ ನಿವನು ಕಂಜ । ಪ್ರೇಮನೆಂಬೆನೆ ಉಷ್ಣಕರನಲ್ಲ ॥
ಸೋಮಧರನ ಸಖನೆಂಬೆನೆ ನೇತ್ರಾಭಿ । ರಾಮನಾಗಿಹನಿವನಾರೆಂತೊ ॥ (26)

ಇಂದ್ರನೆಂಬೆನೆ ಮೆಯ್ಗಣ್ಣಿಲ್ಲ ಭಾವಿಸು । ಪೇಂದ್ರನೆಂಬೆನೆ ಶ್ಯಾಮ ತನುವಲ್ಲ ॥
ಚಂದ್ರನೆಂಬೆನೆ ಕಳಂಕಿಲ್ಲವ ಪೊಸ ಮನು । ಜೇಂದ್ರನೆಂದಿವನನೀಕ್ಷಿಸಿದಳು ॥ (27)

ಮನವ ಪಿಂತಿಕ್ಕಿ ಕಂಗಳು ಕಂಗಳಿಂದೆಯ್ದಿ । ಮನಮುಂದುವರಿಯೆ ಕಾಂತಾಮಣಿ ॥
ಅನುಪಮರೂಪ ಸೌಂದರನನೀಕ್ಷಿಸಿದಳು । ಜನಪತಿ ಕೇಳದನೇನೆಂಬೆ ॥ (28)

ಎವೆಯಿಡದಕ್ಷಿ ಲಜ್ಜಾನ್ವಿತ ಮುಖ ಕಿರು । ಬೆಮರಾಂತು ಕಂಪಿ ಪ ಲಲಿತಾಂಗ ।
ದ್ರವಗುಂದಿದಧರ ತಲ್ಲಣಗೊಂಬ ಚಿತ್ತದಿಂ । ದವಳೀಕ್ಷಿಸಿದಳಾ ಕುವರನ ॥ (29)

ನವನೀರೇಜದಳಾಯತಲೋಚನೆ । ತವಕದೊಳವನನೀಕ್ಷಿಸುವಲ್ಲಿ ॥
ದ್ರವಬಳಸಿದ ಮೃಗಿಯಂತೆ ಕಾಮಾಗ್ನಿ ಯಿಂ । ದವೆ ಕಳೆಗುಂದಿ ಮೆಯ್ಮರೆದಳು ॥ (30)

ಚಂದನ ಗಂಧಿ ಚಂಪಕಕೋಮಲೆ ರಾಗ । ಮೊಂದಿದ ಶೋಕ ಪಲ್ಲವ ಪದೆ ॥
ಸೌಂದರೇಶನ ರೂಪನೀಕ್ಷಿಸಿ ಮರವಟ್ಟು । ನಿಂದಳುಚಿತ್ರಮೆನೆ ಲಲಿತಾಂಗಿ ॥ (31)

ಮನವೆಯ್ದಿ ತನ್ನ ಬೆಂಬಳಿಯಾಗಿ ರೋಮಾಂ । ಚನಗಾತ್ರೆಯಾ ಸ್ವೈರಗಾಗಿ ॥
ತನು ಮರವೆಗೆ ಪಕ್ಕಾಗಿ ನಿರೀಕ್ಷಿಪ । ವನಿತೆಯ ಕಂಡನಾ ನರನಾಥ ॥ (32)

[1] ವ್ಯಜನ ?

ಮಿಸುಪೆಳೆ ಮಿಂಚೊ ಮನೋಜನಾರಾಧಿಪ । ಕುಸುಮ ಬಾಣವೊ ಪೂತವಲ್ಲಿಯೊ ॥
ಎಸೆವಮೃತಾಂಶು ಲೇಖೆಯೊ ಬಗೆಗರಿದೆಂ । ದಸಿಯಳ ನೊಲಿದೀಕ್ಷಿಸಿದನು ॥ (33)

ಗಾಣಿಸೂಸುವ ಮಣಿಗರುವಾಡದಗ್ರದೊ । ಳ್ಶೋಡುವ ತರಳೆಯ ನಗುಮೊಗ ॥
ನಾಡೆಕೇಳ್ಮಾಡುತ ಮಿದೆ ಯುದಯಾದ್ರಿಯೊ । ಳ್ಮೂಡುವಿಂದುವದನೆಂದು ಬೆರಗಾದ ॥ (34)

ಮೃಗ ನೇತ್ರಮಿವೆ ಮೃಗವಿಲ್ಲಾಲವಣ್ಣಿದೆ । ನೆಗಳ್ದಾಲಮಿಲ್ಲ ಚಂದಿರನಿದೆ ॥
ಗಗನಮಿಲ್ಲೆಂದು ವಿಸ್ಮಯವಟ್ಟ ಪರವೆಯ । ಮೊಗಗಂಡು ಸೌಂದರಗಣನಾಥ ॥ (35)

ಎನಗನುರಾಗವಿತ್ತುದು ಹರಿನೀಲಾಂಶು । ವೆನಿಸಿ ಕೌಟಿಲ್ಯಮೆ ನಿಜವಾಗಿ ॥
ಮನವನು ಋಜುಮಾಡಿತು ಭಾವಿಸುವಡೀ । ವನಿತೆ ಯಳಕವಚ್ಚರಿಯೆಂದ ॥ (36)

ಸಿರಿಸದ ಬಾಸಿಗದೊಳು ನಲಿದಾಡುತ । ಕರಮೆಸೆವಳಿದಂಪತಿಯಂತೆ ॥
ಪರವೆಯ ದೋರ್ವಲ್ಲರಿಯೊಳು ಕಂಗಳು । ಪರಿದಾಡಿದವು ಸೌಂದರೇಶನ ॥ (37)

ಪರವೆಯ ಚೆಲ್ವ ಕಂಬೊಳಪು ನಂಬಿಯ ಚಿತ್ತ । ಸರಸಿಯೊಳೆಳೆ ಮೀನ್ಗಳಂದದಿ ॥
ಪರಿದಾಡಿ ಕಲಕಿ ಸಂಚಲವಡಿಸಿದುದೆಲೆ । ಧರಣೀಶ ಕೇಳದನೇನೆಂಬೆ ॥ (38)

ಮನಕೆ ವಜ್ರದ ಸಂಕಲೆ ನಯನಕೆ ಬಲೆ । ಯೆನಿಸಿ ಲತಾಂಗಿ ರಂಜಿಸುತಿರೆ ॥
ಜನಪ ನಂಬಿಯ ಧೈರ್ಯ ಪದ್ಮಪತ್ರದ ನೀರ । ಪನಿಯಂತೆ ಚಂಚಲವಾಂತುದು ॥ (39)

ಕುಸುಮಗಂಧಿನಿಯಡಿದಾವರೆಗಾಸ್ಯ । ಬಿಸಜಕೆ ಸಾಲ್ವಿಡಿದಳಮಾಲೆ ॥
ಎಸೆದಿರೆ ಪುಷ್ಪಚಾಪದ ನಾರಿಯೆಂದು ಜಾ । ನಿಸಿ ನಂಬಿ ಭಯವಟ್ಟನೆರ್ದೆಯೊಳು ॥ (40)

ಮೊಗದಾವರೆ ಕನ್ನೆಯ್ದಿಲೆ ದಂತ ಮ । ಲ್ಲಿಗೆ ಪದ ಕಂಕೇರಿ ಪಲ್ಲವ ॥
ಮುಗುದೆಯ ಕೈಮಾಂದಳಿರಿವಂಗಜ ಬಾ । ಣಗಳೆಂದು ಬಗೆಗೆಟ್ಟನಾ ನಂಬಿ ॥ (41)

ಅನಿತರೊಳವನಿಂದೆ ಕಡುಚೆಲ್ವನಿವನೆಂದು । ಕನಲಿ ಮನದೆ ಪುಳುವಗೆಯಾಂತು ॥
ಮುನಿದೆಚ್ಚನೆನೆ ನನೆಗೋಲುಗಳಿಂದೆಚ್ಚ । ಮನಸಿಜನಾ ಸೌಂದರೇಶನ ॥ (42)

ಚಿಂತಿಸಿ ಸುಯ್ದು ಜಾನಿಸಿ ಕಂದಿ ಕುಂದಿ ವಿ । ಭ್ರಾಂತಿಯಿಂ ಬಗೆಗೆಟ್ಟು ಮನವಿಟ್ಟು ॥
ಸಂತಸವೆರಸು ಸೌಂದರ ಬೆಸಗೊಂಡನೀ । ಕಾಂತೆ ಯಾರೆಂದು ಮಂತ್ರೀಶನು ॥ (43)

ಕಂಗೊನೆಯಿಂದಿಂಗದಿರ ಪೂಮುಡಿಯಿಂದೆ । ಭೃಂಗಾಳಿಯ ಚೆಂದುಟಿಯಿಂದೆ ॥
ರಂಗುಮಾಣಿಕದ ಕಾಂತಿಯ ಸೆರೆವಿಡಿದೆಸೆ । ವಂಗನೆಯಿವಳಾರು ಪೇಳೆಂದ ॥ (44)

ಅರಸ ಕೇಳೀಕೆ ಮಂಗಲೆ ನಾಚಿಯಾತ್ಮಜೆ । ಪರಿಣತೆ ಸಕಲ ಕಲೆಗಳೊಳು ॥
ಪರವೆಯೆಂಬೊಳ್ವೆಸರಾಂತಿರ್ಪಳೆಂದು ತುಂ । ಬುರ ಪೇಳೆ ಸೌಂದರ ನಿಂತೆಂದ ॥ (45)

ಈ ಲಲನೆಯ ಕಡು ಚೆಲುವೆನ್ನ ಚಿತ್ತವ । ಸೋಲಿಸಿದುದು ಕಾವನುರಂಬು ॥
ಕೀಲಿಸಿದುದು ಮನದೊಳು ವಿರಹಾಗ್ನಿಯ । ತಾಳಲಾರೆನು ಮಂತ್ರಿ ಕೇಳೆಂದ ॥ (46)

ಇಂತತಿ ವಿರಹವ ಪೇಳುತ ಬಲಗುಂದಿ । ಚಿಂತೆಯೊಳಡಿಯಿಡಲಾರದೆ ॥
ಭ್ರಾಂತಿಯಿಂ ಮರವಟ್ಟು ನಿಂದೀಕ್ಷಿಪ ಭೂ । ಕಾಂತನ ಕಂಡವನಿಂತೆಂದ ॥ (47)

ಕೇಳು ಸೌಂದರ ನೀ ಕ್ಷಣ ಮಾತ್ರ ಧೈರ್ಯವ । ತಾಳು ನಿನ್ನಿಷ್ಟಾರ್ಥ ಸಿದ್ಧಿಯ ॥
ಬಾಲೇಂದುಶೇಖರನಿತ್ತಪ ನಡೆ ಶಿವ । ನಾಲಯಕೆಂದ ನಾ ಸಚಿವೇಂದ್ರ ॥ (48)

ಕಂಬಳಾಶ್ವತರಮುಖ್ಯರ ಗಾನ ರಸಪ್ರಿಯ । ಜಿಂಬವಾದುದರಿಂದ ನಂಬಿಗೆ ॥
ತುಂಬುರ ಮೃದು ಮಧುರಾಲಾಪ ಹೃದಯವ। ನಿಂಬುಗೊಂಡುದು ಸಾರ್ಥಕವೆನೆ ॥ (49)

ಅಡಿಯಿಕ್ಕುವನೆಡೆಗೆಡೆಗೊಮ್ಮೆ ನಿಂದು ನಿಂ । ದೊಡನೊಡನೀಕ್ಷಿಪ ಮುಂಪೋಪ ॥
ಅಡಿಯಿಡ ಮರೆವ ಮಂತ್ರಿಯ ಮಾತಿನಾಸೆಯಿಂ । ನಡೆತಂದನಾ ನಂಬಿ ಮನನಂಬಿ ॥ (50)

ಮನವನುಧೈರ್ಯದೊಳಟ್ಟು ನಾಂಬೆರ್ದ ಲೋ । ಚನಗಳ ಸೆಳೆದು ಕಂಪನವನು ॥
ತನುವಿಂದಲೌಂಕಿ ಮೂರ್ಛೆಯ ನೆಚ್ಚರಿಂ ನೂಂಕಿ । ಜನಪನೀಶ್ವರವಾಸಕೆಳ್ತಂದ ॥ (51)

ಗಿರಿಜೆಯ ಮೈಯ್ಗಂಪಿಗೆರಗುವ ತುಂಬಿಯಿಂ । ಚರವಶ್ವತರಗಾನ ರಸದೊಳು ॥
ಬೆರೆದು ಕಿವಿಗೆ ರಂಜಿಸೆ ತಲೆಯೊಲೆವ ಶಂ । ಕರ ಶಾಂತ ಮಲ್ಲಿಕಾರ್ಜುನ ಜಯ ॥ (52)

ಚೇರಮ ಶರಣಾಗ್ರಣಿಯ ಕೃತಿಯ ವಿ । ಸ್ತಾರವ ಮಾಳ್ಪರಾದರಿಪರ ॥
ತಾರಾರ್ಕರುಳ್ಳನ್ನೆವರ ಮಲ್ಲಿಕಾರ್ಜುನ । ನೋರಂತೆ ಪಾಲಿಪನೊಲವಿಂದೆ ॥ (53)

(ಹನ್ನೊಂದನೆಯ ಸಂಧಿ ಸಮಾಪ್ತಂ.)

ಹನ್ನೆರಡನೆಯ ಸಂಧಿ.

ಪುರಮರ್ದನ ಕುಂದ ಚಂದನ ಮಂದರ । ಹೀರವರ್ಣೋಪಮಾಮಲತೇಜ ॥
ವಾರಿಜಲೋಚನಾರ್ಚಿತ ಭಕ್ತಜನ ಕಲ್ಪ। ಭೂರುಹ ಜಯ ಮಲ್ಲಿಕಾರ್ಜುನ ॥ (1)

ಭಾವಜಾಗಮತಂತ್ರವೊ ಬಗೆವಡೆ ರತಿ । ದೇವಿಯಾಕರ್ಷಣ ಮಂತ್ರವೋ ॥
ಕೋವಿದರೆರೆಯ ಹೊನ್ನರ ವಿರುಪೇಂದ್ರನಾ । ನೇವೇಳ್ವೆ ನಿನ್ನ ಕಬ್ಬದಗರ್ಬ ॥ (2)

ಮನಸಿಜನಾರಾಧಿಪ ಮಂತ್ರ ದೇವತೆ । ವಿನಯ ಸುಶೀಲೆ ಗುಣಾನ್ವಿತೆ ॥
ಮನದನ್ನಳೆ ಕೇಳು ತಿರುವಂಜಿ ಕಳನಾಥ । ಜನಪಗೆ ಪೇಳ್ದ ಮೇಲ್ಗತೆಯನು ॥ (3)

ಬಂದು ವಾಲ್ಮೀಕಿನಾಥನ ಪಾದಪದ್ಮಕೆ । ವಂದನೆಗೆಯ್ದು ಸಮ್ಮುಖದೊಳು ॥
ನಿಂದು ಸದ್ಭಕ್ತಿಯೊಳಾ ಸೌಂದರೇಶ್ವರ । ಪೊಂದಳವಿಡಿದು ಪಾಡಿದನಾಗ ॥ (4)

ಜಯ ಜಯ ಭಕ್ತರಭೀಷ್ಟಪ್ರದಾಯಕ । ಜಯ ಜಯ ಮಾಪತಿನಾಯಕ ॥
ಜಯ ಜಯ ಮನಸಿಜ ಗರ್ವನಿವಾರಣ । ಜಯ ಜಯ ದುರಿತಾಬ್ಧಿವಾರಣ ॥ (5)

ಜಯಜಯ ಕುಂದಮಂದಾರೇಂದು ಸಂಕಾಶ । ಜಯ ಜಯ ದಂದ ಶೂಕ ವಿಭೂಷ॥
ಜಯ ಜಯ ನಿರ್ವಾಣ ಲಕ್ಷ್ಮೀಮನೋ ನಾಥ । ಜಯ ಜಯ ಸಕಲ ಜಗನ್ನಾಥ ॥ (6)

ಇಂತತಿ ಸದ್ಭಕ್ತಿಯೆಸಕದೆ ನಂಬಿಯ । ನಂತ ವಿಧದೆ ಪಾಡಿ ಪಡಿಹೊನ್ನ ॥
ಸಂತಸದಿಂದೆಂದಿ ನಂತೀಯಲು ಮೇ । ಣಿಂತೆಂದನವ ಕೇಳೆಲೆ ಭೂಪ ॥ (7)

ಪಡಿವೊನ್ನನೊಲ್ಲೆ ಪಾಲಿಪುದೆಳೆವೆಂಗಳ । ತೊಡವೆನಿಸುವ ಚೆಲ್ವ ಪರವೆಯ ॥
ಕಡುನೊಂದೆ ಕಾವನಂಬುಗಳಿಂದೆ ರಕ್ಷಿಸೆ । ನ್ನೊಡೆಯ ಕೇಳೆಂದ ಬಿನ್ನಪಗೆಯ್ದು ॥ (8)

ಎಲೆ ದೇವ ನಿನ್ನ ಕರುಣವೆನ್ನೊಳಿರ್ದ್ದ ಕ । ಮ್ಮಲ ರಂಬಗಳ್ಕರ ಬೇಕೆಂದು ॥
ಸಲುಗೆಯಿಂ ನಂಬಿ ಬಿನ್ನಪಗೆಯ್ವೆ ಪೇಳ್ದ ಮಂ । ಗಳೆ ಕೇಳಳೆನ್ನ ನುಡಿಯನೆಂದು । (9)

ಎಳವೆರೆದಲೆಯ ವಿಶ್ವವ್ಯಾಪಿ ನೀಂ ಮನ । ವೊಲಿದೊಡಾಗದುದುಂಟೆ ಜಗದೊಳು ॥
ಲಲನೆ ನಿಮ್ಮಯ ನುಡಿಯನು ಕೇಳಳೆಂಬುದೊಂ । ದಳ ನುಡಿ ನಿಮಗುಚಿತವೆ ದೇವ॥ (10)

ಹರನೀನಿಂತಳಲಿಪರೆ ಯೆನ್ನಯಮನ । ಪರವೆಯೊಡನೆ ಬಳಸಂದಿದೆ ॥
ಕರುಣದಿಂದಾ ತರುಣಿಯ ನೀವು ದಲ್ಲದೊ । ಡಿರದೆನ್ನ ಪತ್ರವ ಬಿಸುಡೆಂದ ॥ (11)

ಬಸವಳದತನುತಾಪದೆ ಮುಂದುಗೆಟ್ಟು ಮಾ । ನಸನಾದ ನಂಬಿಯ ಬಗೆಗೊಂಡು ॥
ನಸುನಗುತಿದಕೆ ಮಾಡುವುದಾವುದೆಮಗೆ ನೀ । ನುಸುರೆನಲಾ ನೃಪನಿಂತೆಂದ ॥ (12)

ಆವ ತೆರದೊಳಾದರು ಪರವೆಯ ತಂದು । ಈವುದು ನೀನೀಯದಿರ್ದೊಡೆ ॥
ಭಾವಜನಸಿತೋತ್ಪಲ ಶರಹತಿಯಿಂದೆ । ಸಾವೆನೆಂದೆರ್ದೆಗೆಟ್ಟು ನುಡಿದನು ॥ (13)

ತರಳ ನಿನಗೆ ಚೆಲ್ವ ಪರವೆಯ ತಂದೀವ । ಪಿರಿದು ಕುಂಟಣಿತನವನು ಮಾಳ್ಪ ॥
ಇರವೆಮಗಲ್ಲದಿನ್ನಾರಿಗೆ ಸಲ್ವುದೆಂ । ದೊರೆದು ಮೇಣಿಂತೆಂದ ನವನೊಳು ॥ (14)

ಪಿರಿಯ ರೊಳಷ್ಟದೈವದೊಳಾರಾಧಿಪ । ಗುರುವಿನೊಳ್ ತಂದೆ ತಾಯಿಗಳೊಳು ।
ಗುರುವರಿಂತೆಂದು ನುಡಿಯಲಕ್ಕುಮೆಯೆನೆ । ಕರವ ಮುಗಿದು ಬಿನ್ನೈಸಿದ ॥ (15)

ಎನಿತಿಂದ್ರಿಯಮುಖದಿಂದಾದ ಸುಖವ ನೀ । ನನುಭವಿಸುವೆಯೆನ್ನ ಹೃದಯದೆ ।
ಅನಿತರಿಂದೆಲೆ ದೇವ ನೀನಾರ್ಗೆ ಕುಂಟಣಿ । ತನವ ಮಾಡುವೆ ನೀನೆ ಪೇಳೆಂದ ॥ (16)

ಅದಕೆ ಮಾರ್ನುಡಿಗಾಣದೆ ಮುನಿವೇಶವ । ಮುದದಿಂದೆ ಧರಿಸಿ ಮಂಗಲೆಯರ ॥
ಸದನಕೆಯ್ದಿದೆನೆಂದು ಕೇರಳಾಧಿಪನೊಳು । ಮದನಾರಿ ಪೇಳಲಾ ನೃಪನೆಂದ ॥ (17)

ಎಲೆ ದೇವ ಹರಿವಿರಿಂಚಿಗಳು ನಿಮ್ಮಯ ಪಾದ । ತಳಮಸ್ತಕಂಗಳ ಕಾಣದೇ ॥
ತೊಳಲಿದರ್ ಪರವೆಯ ಮನೆಯುತ್ತರಾಸದೆ । ಹರಿಗಳಾದರೆ ಧನ್ಯರವರೆಂದ ॥ (18)

ಇಂತು ಚೇರಮ ಭೂಮಿಪ ಮನದೊಲವಿಂದೆ । ಕಂತುಹರನ ಸನ್ನುತಿಗೆಯ್ಯೆ ॥
ಕಾಂತೆ ಕೇಳ್ಪರವೆಯ ಸದನಕೆಯ್ದಿದನೆಂ । ದಂತಕಾಂತಕ ಪೇಳ್ದನವನೊಳು ॥ (19)

ಬರವ ಕಾಣುತ ಮುಂಗಲೆ ನಾಚೆಯಿದಿರೆದ್ದು । ಚರಣಕ್ಕೆರಗಿ ಸದ್ವಿನಯದೆ ॥
ಕರೆದು ಕುಳ್ಳಿರಿಸಿ ನೀವೆಲ್ಲಿಂದ ಬಂದಿರೆಂ । ದೊರೆಯೆ ನಾನಿಂತೆಂದೆನವಳೊಳು ॥ (20)

ಪರಿತೋಷದೆ ವಾಲ್ಮೀಕಿನಾಥನ ನೋಳ್ಪ । ಭರದಿಂದೆ ಕಾಶಿಯಿಂದೆಳ್ತಂದು ॥
ದರುಶನಗೆಯ್ದು ವಾರಾಂಗನೆಯರೊಳು ನೀ । ಹರಭಕ್ತೆಯೆನೆ ಕೇಳಿ ಬಂದೆವು ॥ (21)

ಎನಲೊಳಿತಾದುದೆಂದುಪಚಾರವೃತ್ತಿಯ । ವಿನಯದಿಂದೊಡರಿಸೆ ಕೈಕೊಂಡು ॥
ವನಿತೆನಿನ್ನಾನನವೇಷಾಗಮಾಬ್ಜವ । ನನುಕರಿಪಂದವೇನೆಂದೆನೆ ॥ (22)

ನಿನ್ನಿನ ದಿನ ಸೌಂದರ ಬರುತಿರಲಾಗ । ಲೆನ್ನ ತನೂಜೆ ಪರವೆ ಕಂಡು ॥
ಬನ್ನಬಟ್ಟಳು ಕಾವನಲರಂಬಿನಿಂದೆ ಕೇ । ಳೆನ್ನೀ ವ್ಯಥೆಯನೇ ಪೇಳ್ವೆನು ॥ (23)

ಕಂಡಂದು ಮೊದಲುಣ್ಣಲು ನೀರ್ಗುಡಿಯಳು । ಮಂಡೆಗಟ್ಟಳು ಕಣ್ದೆರೆಯಳು ॥
ಕಂಡಕಂಡರ ಸೌಂದರನೆಲ್ಲಿದನೆಂದು । ದಿಂಡುಗೆಡೆದು ಪೊರಳುವಳೆಯ್ದೆ ॥ (24)

ಬಡವಾದಳು ಕಂದಿದಳು ಕಾಂತಿಗೆಟ್ಟಳು । ನಡುಗಿದಳಧಿಕಾಂಬುವಿನೊಳು ॥
ಕಡೆದಳನನ್ಯಜರಾಹುವಿಗುಣಿಸಾದ । ಳುಡುಪತಿಯಂತೆ ಚಂದನಗಂಧಿ ॥ (25)

ಕಂಗೆಡುವಳು ಕಣ್ದೆರೆದೀಕ್ಷಿಸುವಳು । ಮುಂಗಾಣದೆ ಬಿಸುಸುಯ್ವಳು ॥
ಹೆಂಗಳ ರನ್ನೆ ಸೌಂದರ ಬಾ ಬಾರೆಂದು । ಹಿಂಗದೆ ಬಯಲನಪ್ಪುವಳೊಲ್ದು ॥ (26)

ಕಳವಳಪಳು ಕಾತರಿಪಳು ಭ್ರಮೆಯೊಳು । ಮುಳುಗುವಳುರೆ ಪಂಬಲಿಪಳು ॥
ಬಳವಳವಳು ಸೌಂದರನೆಂದು ಸಾರಿರ್ದ । ಕೆಳದಿಯು ಬಿಗಿದು ತಕ್ಕೈಪಳು ॥ (27)

ನುಡಿಯಳು ಮಿಗೆ ಮಾತಾಡಿಸಲಧರವ । ಮಿಡಕಳು ಸಲೆಮೈಮರೆವಳು ॥
ಮಡದಿ ಮಾಟದ ಪುತ್ರಿಕೆಯಂತಿರ್ಪಳ । ನ್ನೊಡಲ್ವಿಡಿದಾನೆಂತು ಜೀವಿಪೆ ॥ (28)

ವಿರಹದ ತಳ್ಪಂಕದೊಳೆನ್ನ ಮುದ್ದಿನ । ತರಳೆ ಬಳಲಿ ಬೆಂಡಾದಳು ॥
ಬರವೆ ನಿನ್ನೇನನುಳವ ತೆರನೆಂತೆನೆ । ಕರುಣದೊಳಂತೆಂದನವಳೊಳು ॥ (29)

ಈ ಪರಿಯೊಳು ನಿಜ ತನುಜೆಯೊಳೊದವಿದ । ತಾಪವ ಪೇಳ್ಪೆ ನೀನೆಮ್ಮೊಳು ॥
ಚಾಪಲಾಕ್ಷಿಯ ನೋಡಲಪ್ಪುದೆ ನಾವೆನ । ಲಾಪೆಣ್ಣೊಡೆಗೆಮ್ಮನೊಯ್ದಳು ॥ (30)

ನೋಡೆಲೆ ತಂದೆ ನಾನೀ ಹಸುಳೆಗೆ ಬಂದ । ಕೇಡ ಕಂಡೆಂತು ಸೈರಿಸುವೆನು ॥
ನಾಡಾಡಿಯೆ ನಂಬಿಯುವನ ತಂದಿವಳೊಳು । ಕೂಡುವರಿಲ್ಲೆಂದು ನುಡಿದಳು ॥ (31)

ಕಂಗೆಡೆದಿರು ಕಂಜದಳನೇತ್ರೆ ಪರವೆಯೊಳ್ । ಸಂಗಡಿಸುವ ಸೌಂದರೇಶನ ॥
ಮುಂಗುರುಪರಿಯುರೆಂದೆನೆ ಬೇಡ ಕೇಳೆಲೆ । ಮಂಗಳೆ ನಂಬೆಂದು ನುಡಿಯಲು ॥ (32)

ಲೇಸನಾಡಿದ ಭೂಸುರೋತ್ತಮ ಯಮ ನಿ । ನೇಸು ಪುಣ್ಯದ ಫಲ ಫಲಸಿತೋ ॥
ಈ ಶಶಿಮುಖಿಯ ರಕ್ಷಿಪುದೆಮ್ಮಸು ನಿ । ಮ್ಮಾಸೆಯೆಂದಡಿಗೆರಗಿದಳಾಗ ॥ (33)

ಶಿರವಿಡಿದೆತ್ತಿ ಸತ್ಕರಿಸಿಯಾದರದಿಂದೆ । ತರಳಾಕ್ಷಿ ನಿನ್ನಾಳಿಯೊರ್ವಳೆ ॥
ತುರಿಪದೆ ಕಳುಪೆಂದು ಬೀಳ್ಕೊಂಡು ಪೋಗಿ ಸೌಂ । ದರನೊಳೀ ತೆರನ ಪೇಳ್ದನು ಭೂಪ ॥
[(34)

ಕೇಳ ಸೌಂದರ ತನ್ನ ಮನದೊಳು ಹರುಷವ । ತಾಳ ಕಾಲ್ಗೆರಗಿ ಕೈಮುಗಿದೆದ್ದು ।
ನೀಲಕಂಧರ ಗಿರಿಜಾವರ ನಾ ನಿನ । ಗಾಳಾದುದು ಫಲಿಸಿದುದೆಂದ ॥ (35)

ಬಳಲಿದೆ ದೇವ ಕೃಪಾಕರ ಹರ ನಿ । ನ್ನೊಲುಮೆ ಮೂಜಗದೊಳಚ್ಚರಿಯತ್ತೆ ॥
ತಲೆದೊರೆಯನೆ ಯೆನ್ನಯ ಮನದಿಷ್ಟವ । ಸಲಿಸದೆಯೆಂದು ನುತಿಸಲತ್ತ ॥ (36)

ಬರಸಿದಳಾ ಮಂಗಲೆ ತನ್ನ ಸಖಿಯರೊ । ಳೊರು ಚಿತ್ರಲೇಖೆಯೆಂಬವಳನು ॥
ಪರವೆಯಿರವ ಪೇಳ ಸೌಂದರೇಶನ ನೀ । ಕರತಾರೆನಲವಳುಸುರ್ದಳು ॥ (37)

ಇಂದೀವರದಳ ಲೋಚನೆಯುನಿಸು ಧೈ । ರ್ಯಂದಳೆ ನಾ ಸೌಂದರೇಶನ ॥
ತಂದೀ ಸತಿಗೆ ಪಾಸಲ್ಕೆ ತಂದೆಳದಳ । ರಿಂದೆ ಕಟ್ಟಿಸುವೆ ತೋರಣವನು ॥ (38)

ಎನುತೆ ಬೀಳ್ಕೊಂಡು ಬಂದಾ ಚಿತ್ರಲೇಖೆ ತ । ಜ್ಜನಪ ಸೌಂದರನ ಮೆಲ್ಲಡಿಗಳ್ಗೆ ॥
ವಿನಯದೊಳೆರಗಿ ಪಲ್ಗದಿರುಣ್ಮೆ ಪೇಳ್ದಳಾ । ವನಿತೆಯ ವಿರಹಾತಿರೇಕವ ॥ (39)

ವಿರಹಾಂಧಕಾರಕೆ ಮಣಿಯಂತೆ ಯಾನಿಾಂ । ದರನಕ್ಷಿ ಪುತ್ರಿಕೆ ಕುಣಿವಂತೆ ।
ಉರವಣಿಸುವ ಪುಳಕಾಂಕುರ ಪೆಣೆವಂತೆ । ಪರವೆಯ ದೂತಿ ಬಂದುಸುರ್ದಳು ॥ (40)

ನಿನ್ನಯ ರೂಪುಗಂಡಂದಿಂದೆ ಸೌಂದರ । ಕನ್ನೆ ಕಾವನ ನನೆಯಂಬಿಗೆ ॥
ತನ್ನನೆ ಗುರಿಮಾಡಿದಳು ಕಡು ವಿರಹದೆ । ಬನ್ನಬಟ್ಟಳು ಪೇಳ್ವೆನದನೇನ ॥ (41)

ಅಳಕಾಲವೆಂದು ಕುರುಳೆ ತಿರ್ದಲಮ್ಮಳು । ಗಿಳಿ ನುಡಿಯೆಂದಂಜಿ ನುಡಿಯಳು ॥
ಕಳೆಯಾಣ್ಮನೆಂದಳ್ಕಿ ಮುಕುರವ ನೋಡಳು । ನಳಿನಾಕ್ಷಿ ಮದನಸಂತಾಪದೆ ॥ (42)

ಎನ್ನೊಳು ನುಡಿಗಲ್ತ ಗಿಳಿ ನಡೆಗಲ್ತಂಚೆ । ಯೆನ್ನ ಸರಂಗಲ್ತ ಕಲಕಂಠ ॥
ಎನ್ನಿರ್ದೆಗೆಡಿಸಿದುವರಸುವ ಗುಣವಾವು । ದಿನ್ನು ವಿಜಾತಿಯೊಳೆಂಬಳು ॥ (43)

ಹೆಂಗಳ ರನ್ನೆ ಕೈಯಲ್ಕೊಂಡು ಮುಕುರವ । ನಂಗಳದೊಳಗಿಡು ಶಶಿಬಂದು ॥
ಸಂಗಳಪಾಕ್ಷಣ ನುಗ್ಗು ನುರಿಯ ಮಾಡು । ಹಿಂಗದೆ ಸುಖಮಿರ್ಪೆನೆಂಬಳು ॥ (44)

ಮಂದರಗಿರಿಯಿಂದ ಕಡಲ ಕಡೆಯ ದುಷ್ಟ । ಚಂದಿರನೇಕಳದುದಿಲ್ಲವೋ ॥
ಅಂದು ಕುಂಭಜ ನುದರದೊಳು ಜೀರ್ಣಿಸದಾದ । ನೆಂದು ಪಂಗಲಿಪಳಾ ಲಲಿತಾಂಗಿ ॥ (45)

ಪರಿಮಳಿಸುವ ಬಿಳಿ ಮುಗುಳಪಾಸಿನ ಮೇಲೆ । ಪರವೆಯ ತಂದಿಳಪಿದೊಡದು ॥
ಧುರದೊಳು ಗಾಂಗೇಯನೊರಗಿ ರಂಜಿಸುತಿರ್ಪ । ಸರಳಮಂಚದ ತೆರನಾದುದು ॥ (46)

ಬೆಳೆದ ಕಾಮಾಗ್ನಿಗೆ ಹವಿಯಾದುವಲ್ಲದೆ । ಕಳೆದವೆಯವಳಂಗ ತಾಪವ ॥
ಬಳದ ಚಂದನ ಮೇಲೆ ಸುರಿವ ಕಪ್ಪುರವುಡಿ । ತಳಿವ ಪನ್ನೀರದನೇನೆಂಬೆ ॥ (47)

ತರಳೆಯೊರ್ವಳು ಪೂವತಂದವಳಂಗದೊ । ಳ್ಸುರಿವೆಡೆಯೊಳು ಪೂಗಳು ಬೆಂದು ॥
ಕರತಳ ಪೊತ್ತೆ ಶೀತಳಜಲದೊಳಗಾ । ತರುಣಿ ಯದ್ದಿದಳೆವಳುಳವೆಂತೋ ॥ (48)

ಅನಿಲಮೈಸೋಂಕೆನಿಂದುರಿವ ಕರಸ್ಪ । ರ್ಶನದಿಂದೆ ಚಂದ್ರ ತಪಂಬೆತ್ತ ॥
ಮನಸಿಜ ದೂರದೊಳೆ ಸುತ್ತಿರ್ಪನೆನೆ ನಂಬಿ । ಮನದೊಳೆಂತಿರ್ದಪಳಾ ಪರವೆಯು ॥ (49)

ನೆಡುವಲರಂಬಿಗಳುಕೆ ಕಾಂತೆ ಹರಣವ । ಬಿಡಲಾಲಲಿತಾಂಗವ ನಿನ್ನು ॥
ಪಡೆವುದು ದುರ್ಘಟವೆಂದಾ ಹರಣವೆ । ಬಿಡದಾದ ನಿನಗೆ ಸೂಚಿಸಬಂದ ॥ (50)

ಕೇಳುತೆ ತಲೆದೂಗಿದನಚ್ಚರಿಪಟ್ಟ । ಮೇಲು ಮೇಲೆಸೆವಂಗಜಾಸ್ತ್ರದೆ ॥
ಬೇಳಾಗಿ ಕಂಗಳ ಮುಚ್ಚಿ ಜಾನಿಸಿ ನೃಪ । ತಾಳದ ಹರುಷ ಪಿಪಾದವ ॥ (51)

ಕಂಜಾಸ್ತ್ರಕಂ ಜಾಸ್ತ್ರವಿದಳಿತ ಭೂಪ ಹೃ । ತ್ಕಂಜ ಕಂಜಾಕ್ಷಿಯ ನುಡಿಗೇಳ್ದು ॥
ಮಂಜುಳವಾಯ್ತುಬಲೆಯುರನುರಾಗಮೇಂ । ಸಂಜೀವನವೊ ವಿರಹಿಗಳ್ಗೆ ॥ (52)

ಇನಿಯಳ ಮುನ್ನರ್ಚಿದಲರಂಬು ತನ್ನಿರ್ದೆ । ಯನು ತಾಗಿತೆಂಬ ಸಂತಸದಿಂದೆ ॥
ಎನಗಿಂದು ಹಿತಕಾರಿಯಾದ ನೀ ಸ್ಮರನೆಂದು । ಜನಪತಿ ಪೊಗಳ್ದನಾರ್ದೆಸುತಿರೆ ॥ (53)

ಅಂಬುಜಾಕ್ಷಿಯ ಕಡೆಗಣ್ಣಸಿವೊಯಿಲ್ಲಳಂ । ದಂ ಬಿರಿದಿರ್ದೆನ್ನ ಹೃದಯಕೆ ॥
ಬಿಂಬಾಧರ ಪಾನ ಕುಚಕಂಕುಮದ ಲೇ । ಪಂ ಬಡೆವಂತೆ ಮಾಳ್ಪುದು ಸಖಿ ॥ (54)

ಎನೆ ದೇವ ಲೇಸನಾಡಿದೆ ನಮ್ಮ ಪರವೆಯ । ಮನದಿಷ್ಟ ಫಲಿಸಿತೆಂದಾ ದೂತಿ ॥
ಜನಪತಿಗಾನತೆಯಾಗಿ ನಿಮ್ಮಯ ಬರ । ವನು ಪೇಳ್ವೆನೆಂದು ಬೀಳ್ಕೊಂಡಳು ॥ (55)

ಕಳೆಹಿದುದವಿಯ ವಲ್ಮೀಕನಾಥನ ಪಾದ । ನಳಿನ ಕೆರಗಿ ಸೌಂದರ ಭೂಪ ॥
ಮಲಯಜ ಘನಸಾರ ಕಸ್ತೂರಿ ವಸ್ತ್ರ ಮಂ । ಗಳ ಭೂಷಣಂಗಳ ಪಡೆದನು ॥ (56)

ಮಿಸುಪ ದುಗೂಲವ ಪೊರ್ದು ಮಂದಾರಾದಿ । ಕುಸುಮವ ಸೂಡಿ ಭೂಷಣವಾಂತು ॥
ಪೊಸಕರ್ದಮಯಕ್ಷಲೇಪನಗಾತ್ರದೆ । ವಸುಧೇಶ ಹಯಮೇರಿ ನಡೆತಂದ ॥ (57)

ಎಡಬಲದೊಳು ಡಾಳಿಪ ಚಾಮರಂಗ । ಳಡೆಗಳ ತಳ್ತ ಕೇತನಗಳ ॥
ಪೊಡೆವ ವಾದ್ಯಗಳ ಕಟ್ಟಗೆ ಕಾರರುಲುಪಿನೆ । ಗಡಣದೆ ಸೌಂದರನೆಳ್ತಂದ ॥ (58)

ಬಿರುದಾವಳಿಯ ನೋಡುವವರಿಂದೆ ಪಾಡುವ । ಸರಸಗಾಯಕರಿಂದೆ ಪೊಗಳುವ ॥
ವರವಂದಿಗಳಿಂದೆ ನಂಬಿ ತುಂಬುರಗೂಡಿ । ಪರವೆಯು ಮಂದಿರಕೆಳ್ತಂದ ॥ (59)

ಗಿರಿಜೆಯು ಮೆಯ್ಗಂಪಿಗೆರಗುವ ತುಂಬಿಯಿಂ । ಚರವಶ್ವತರಗಾನ ರಸದೊಳು ॥
ಬೆರೆದು ಕಿವಿಗೆ ರಂಜಿಸೆ ತಲೆಯೊಲೆವ ಶಂ । ಕರ ಶಾಂತ ಮಲ್ಲಿಕಾರ್ಜುನ ಜಯ ॥ (60)

ಚೇರಮ ಶರಣಾಗ್ರಣಿಯ ಕೃತಿಯ ವಿ । ಸ್ತಾರವ ಮೂಳ್ಪುರಾದರಿಪರ ॥
ತಾರಕರುಳ್ಳನ್ನೆವರ ಮಲ್ಲಿಕಾರ್ಜುನ । ನೋರಂತೆ ಪಾಲಿಪನೊಲವಿಂದೆ ॥ (61)

(ಹನ್ನೆರಡನೆಯ ಸಂಧಿ ಸಮಾಪ್ತಂ)

ಹದಿಮೂರನೆಯ ಸಂಧಿ.

ಗಣಪತಿ ಪಿತ ಸುರಗಣಪತಿ ನತ ಭೂತ । ಗಣನಾಯಕ ವಿಘ್ನನಾಯಕ ॥
ಅಣಿಮಾದಿ ಪದಸಿದ್ಧಿದಾಯಕ ಪ್ರಮಥಾ । ಗ್ರಣಿಶಾಂತ ಮಲ್ಲಿಕಾರ್ಜುನ ಜಯ ॥ (1)

ಕಲ್ಪಮಹೀಜ ಸನ್ನಿಭ ತಾರಗುಣಗಣ । ನಲ್ಪ ನೂತನ ಪಂಚ ಮಾರ್ಗಣ ॥
ಮೇಲೊಪ್ಪಂಡಿಯನಿದೀವುತಿದೆ ಕೃತಿ ಮತ್ಕುಚ । ತಳ್ಪ ಶಯನ ಮೇಲ್ಗತೆವೇಳ ॥ (2)

ಪರಮೆಗುರುಳು ತಳದಿರ್ದಟಿಯ ತಳಪಗಣ್ಣ । ನೆರೆವೆರೆ ಮೊಗದ ಸುಣ್ಣದಪಿನ ॥
ಸರಿಗೊಂಡೆಡೆವಿಡದಡೆರ್ದ ಮೊಲೆಯ ಬಟ್ಟ । ಪೊರವಾರ ಕಾಂತೆ ಮೇಲ್ಗತೆಗೇಳ ॥ (3)

ಅರಸ ಕೇಳಾ ಸಮಯದೆ ಚಿತ್ರಲೇಖೆ ಬಂ । ದೊರೆಯೆ ಮಂಗಲೆ ತನ್ನ ಕುವರಿಯ ॥
ಪಿರಿದು ಸಿಂಗರಿಸಿ ಶಯ್ಯಾಗೃಹದೊಳಗಿಟ್ಟು । ಕರತಂದಳಾ ಸೌಂದರೇಶನ ॥ (4)

ಪೊಂಗಳಸದ ಮಣಿವಾಗಿಲ ಮುಂದೆ ತು । ರಂಗವ ನಿಳದು ಸೌಂದರ ಭೂಪ ॥
ಮಂಗಲೆಯಂಗಣಕೆಳ್ತಂದ ರೂಪುದಾಳ್ದಂ । ಗಜನೆನಿಸಿ ತುಂಬುರಗೂಡಿ ॥ (5)

ಕನ್ನಡಿ ಕಳಸ ಪೂವಲಿದಳದೋರಣ । ರನ್ನ ದೀವಿಗೆ ಗುಡಿ ರಾಜಿಸೆ ॥
ಸೊನ್ನ ಪುತ್ಥಳಿಕೆಲಸದ ಬಾಗಿಲೊಪ್ಪುವ ಚೆನ್ನೆಯ ಸೆಜ್ಜೆವನೆಗೆ ಬಂದ ॥ (6)

ಕಂಡನಾ ನಂಬಿ ಸನ್ಮೋಹನ ರಸದ ಕ । ರಂಡವೆನಿಪ ಸೆಜ್ಜೆವನೆಯನು ॥
ಮಂಡಿವೊಲೆದು ತುಂಬುರ ಕುರುಂಬರ ಕೂಡೆ । ಕೊಂಡಾಡಿದನದರಿರವನು ॥ (7)

ಪರಿಮಳದಿಕ್ಕೆ ತಂಪಿನ ತವರ್ಮನೆ ಮಂದ । ಮರುತನ ಬಿಡುಗಾಡಿಯ ಪಕ್ಕೆ ॥
ಅಲರಂಬನ ಶಸ್ತ್ರಶಾಲೆ ಯೆನಿಸಿ ಸಾಂ । ದರನ ಮನಗೊಂಡುದಾಗೃಹ ॥ (8)

ಸುದತಿಯ ಕಡೆಗಂಗಳ ಬೆಳತಿಗೆಗದಿ । ರ್ಪುದಿದತ್ತಿ ಧಾವಲ್ಯವಡೆದಂತೆ ॥
ಸದನದಿ ಭಿತ್ತಿಗಳೊಳು ಸುಣ್ಣವಡೆದ ನಾ । ಲ್ಸೊದೆಯೆಸೆದಿರೆ ಕಂಡನಾ ನಂಬಿ ॥ (9)

ಎಳೆಯಳ ಚೆಂದುಟಿವಣಿಯಿಂದೆ ಸೋಲವ । ತಳೆದೆವೆಳಕ ತಿಮಿರವನೆಮ್ಮ ॥
ಬೆಳಗಿಂದೆ ಕಡಿಸಿದುದಿಲ್ಲೆಂದು ಮಣಿದೀಪ । ಗಳು ಬೆರಗೊಂದಿದಂತೆಸೆದವು ॥ (10)

ಪರಿಭವಿಸಿದುದೆಮ್ಮ ಪರವೆಯು ಕಿನ್ನರ । ಸರವೆಂದು ಮೂಗುವಟ್ಟಿರ್ಪಂತೆ ॥
ಪರಿವಿಡಿಯಿಂದೆ ನಾನಾಯಂತ್ರವಾದ್ಯದ । ನೆರವಿ ಕಂಗೆಸೆದುವಾ ಗೃಹದೊಳು ॥ (11)

ಒದವಿದ ಕಾಂತಿವಿಶೇಷದೆ ಮತ್ಸರಿ । ಸಿದುದೆನ್ನ ಸಿರಿಮೊಗದೊಡನೆಂದು ॥
ಸುದತಿ ಮುನಿದು ಸೆಜ್ಜೆವನೆಯೊಳು ಸೆರೆಯಿ । ಕ್ಕಿದವೊಲಿರ್ದುದು ರನ್ನಗನ್ನಡಿ॥ (12)

ಪರವೆಯು ಕಣ್ಣನೆಗಣೆಯಿರಲಿನ್ನೆ । ಕೆಲರಂಬುಗಳಿಂದು ಮನಸಿಜ ॥
ಅಲರಂಬು [1] ಪುದಿದ ದೊಣೆಯು ಬಿಸುಟಂತೆ ಕೆ । ಮ್ಮಲರ ಕರಂಡ ಕಂಗೆಸೆದುದು ॥ (13)

ತರಳೆಯು ನಾಸಿಕವಲುಗದೆ ಪರಿಮಳ । ಮರುತನ ಪಡೆದುದು ನಾನೆಯ್ದೆ ॥
ತಿರುಗಿ ಕಮ್ಮಲರ್ವೆತ್ತುದಿಲ್ಲೆಂದು ವೀಜನ । ಮರವಟ್ಟ ತೆರದಿ ಕಂಗೆಸೆದುದು ॥ (14)

ಹೃದಯ ಸರೋಜದೊಳೆಸೆವನುರಾಗವ । ಸುದತಿಯು ನೃಪಗೆ ತೋರಿಸಿದಂತೆ ॥
ಪುದಿದ ಕುಂಕುಮರಸ ಪೊಂಬಟ್ಟಲೊಳಗೊ । ಪ್ಪಿದುದು ಸುಗಂಧದೆಸಕದಿಂದೆ ॥ (15)

ಶಶಿಕಾಂತದ ಮಣಿ ಪಾತ್ರೆಯೊಳಗೆ ಕಂ । ಗೆಸೆದುದು ಪದನಾದ ಮೃಗಮದ ॥
ಪೊಸಬೆಳ್ದಾವರೆಯೊಳಗಳಕುಳ ರಾ । ಜಿಸುವಂತೆ ಸೌಂದರೇಶನ ಕಣ್ಗೆ ॥ (16)

ಎಳೆಯ ನೀಲದ ಮಣಿವಟ್ಟಲೊಳ್ಕರ್ಪುರ । ವಳುಕು ಸಿತಾಂಬುಜದೆಡೆಯೊಳು ॥
ತೊಳೆಪಪೂರ್ಣೇಂದು ವೆಳ್ತಂದೊಂದಿದಂತೆ ಕಂ । ಗೊಳಸಿದುದಾ ಸೆಜ್ಜೆವನೆಯೊಳು ॥ (17)

ಎಳೆಗೇತಕೆಯೆಸಕವ ಮಿಗುವ ಬೇ । ಳೆಲೆಗಳ ಮಸದೊಪ್ಪವಿಕ್ಕಿದ ॥
ಪಳೆರನ್ನದ ಗಾಡಿಯ ಚೆಲ್ವ ನವಪೂಗ । ಗಳ ತಾಳ್ದ ಪೊಂಬಟ್ಟಲೆಸೆದುದು ॥ (18)

ಮಕರಂದ ರಸಪೂರಿತ ಕನಕಾಬ್ಜದ । ಮುಕುಳವೆಂಬಂತೆ ಪನ್ನೀರ್ದೀವಿ ॥
ಅಕಳಂಕಮಾದ [2] ಪೊಂಗಿಂಡಿ ಕಂಗೆಸೆದುದು । ಚಕಿತ ಮೃಗಾಕ್ಷಿಯ ಗೃಹದೊಳು ॥ (19)

ಪರವೆಯು ವದನ ಸೌಮ್ಯಕೆ ಸೋಲ್ತು ಪೊಂದಾ । ವರೆ ಬಂದು ತಂಬುಲವೀಯೆಂದು
ಎರವಂತೆ ಪೊನ್ನ ಪಡುಗವೆಸೆದಿರ್ದುದು । ಸಿರಿವೆತ್ತ ಮಣಿಮಂಚಗೆಲದೊಳು ॥ (20)

ಅಂಚೆದುಪ್ಪುಳವಾಸುಗಳಿಂದೆ ಶಕುನಗ । ಳಂಚರದಿಂ ವಜ್ರರುಚಿಯಿಂದ ॥
ಮಿಂಚುವ ಪಳವಾವುಗೆಯಿಂದೆ ಮಣಿಮಯ । ಮಂಚ ಕಂಗೆಸೆದುದಾ ಗೃಹಹೊಳು ॥ (21)

ಇದು ಚಿತ್ರರೋಹಣಾದ್ರಿಯ ನೇರಿ ಕಣ್ಗೊಪ್ಪು । ತಿದೆ ಚಂದ್ರಲೇಖೆ ಯೆಂಬಂದದೆ ॥
ಸುದತಿಯರಧಿನಾಯಕಿ ಮಣಿಮಯ ಮಂ । ಚದ ಮೇಲೆ ಮಂಡಿಸಿರ್ದುದ ಕಂಡ ॥ (22)

ಬೆಳುದಿಂಗಳಧಿದೇವತೆ ಕಾಮನಲರಂಬು । ಗಳ ಮಂತ್ರದೇವತೆ ಚೈತ್ರದ ॥
ಮಲಯಾ ನಿಲನಿಷ್ಟದೇವತೆಯೆನಿಸಿ ಕಂ । ಗೊಳಸುವ ಪರವೆಯಿರವ ಕಂಡ ॥ (23)

ತಿಂಗಳ ಸಿರಿಯ ಮೊಗದೆ ನವ ಕುಸುಮ ಶ । ರಂಗಳ ಚೆಲ್ವನಪಾಂಗದೆ ॥
ಪೊಂಗಳಸಗಳ ಗಾಡಿಯ ಜವ್ವನದೆ ಸೋಲಿ । ಪಂಗನೆಯಿರವ ನೋಡಿದನೊಲ್ದು (24)

ಕಾಣುತೆ ಸಂತೋಷ ರಸದೊಳೋಲಾಡುವ । ಜಾಣ ಸೌಂದರ ಗಣನಾಥನ ॥
ಏಣಾಕ್ಷಿಯೊಲಿದು ನೋಡಿದಳು ಸಿತಾಂಬುಜ । ಬಾಣದ ಬೆಳ್ಸರಿ ಸುರಿವಂತೆ ॥ (25)

ಸ್ಮರನಲರ್ವಿಲ್ಲ ಜೇವಡೆಯಂತೆ ಕಾಂಚಿ ಯಿಂ । ಚರ ಪೊಣ್ಮೆ ಮೇಲುದ ಕೆಲನೂಂಕೆ ॥
ಗುರುಕುಚಪರವೆ ಲಾವಣ್ಯವಾರಿಧಿ ಮಿರಿ । ಪರಿವವೊಲಿದಿರೆದ್ದಳೊಲವಿಂದೆ ॥ (26)

ಕೂಡಿರ್ದ ಮಂತ್ರಿ ಕುರುಂಬರ ಬೀಳ್ಕೊಟ್ಟು । ಗಾಡಿಕಾರ್ತಿಯ ಮುದ್ದುಮೊಗವನು ॥
ನೋಡುತೆ ಮಣಿಮಂಚದೊಳಾ ಲಲಿತಾಂಗಿ । ಗೂಡಿ ಮಂಡಿಸಿದ ಸೌಂದರ ಭೂಪ ॥ (27)

ದರಹಾಸಕಾವುದಿ ಕಾರುಣ್ಯ ಪುಷ್ಪಮಂ । ಜರಿ ಲಾವಣ್ಯವಾರಿಗಳೊಳು ॥
ವರಚಕೋರಾಳಿ ಮೀನುಗಳಂತೆ ನಲಿದವು । ಪರವೆಯೊಳವನ ಲೋಚನಗಳು ॥ (28)

---

[1] ಸುದಿದ. [2] ಪೊಂಗಿಡಿ.

ಸ್ಮರತಾಪದೆ ಕಾಯಿದಕ್ಷಿ ಯಿಂದೀಕ್ಷಿಸ । ಉರಿವನಿನಿಯನೆಂದು ಕಂಗಳ ॥
ಕರುಣಾರಸದೆ ನಾಡೆ ನೋಳ್ಪಂತೆ ನೋಡಿದ । ಳರಸಿ ಸಂತಸಗಂಬನಿಗೂಡಿ ॥ (29)

ಮನವೊಲಿದಾಲಿಂಗಿಪಂತೆ ಮೋಹನರಸ । ವನು ಸೂಸುವಂತಿದಿರ್ಗೊಳುವಂತೆ ॥
ಖನಯವಾರಿಧಿಯೊಳ ಗೋಲಾಡುವಂದದೊ । ಳನಿಯಳ ನೋಟರಂಜಿಸಿದುದು ॥ (30)

ಬೆರಳೊಳು ಮಣಿಮುದ್ರಿಕೆಯ ತೊಡರ್ಚುವ । ಕುರುಳ ತಿರ್ದುವ ಮಣಿಹಾರವ ॥
ಪರಿಕಿಪ ನೆವದೆ ಸೌಂದರಭೂಪ ಸೋಂಕಿದ । ಪರವೆಯನನುರಾಗ ರಸವುಣ್ಮೆ ॥ (31)

ಇಕ್ಷುಚಾಪದ ಬಾಸಣಿದೆಗೆವಂತಂಬುಜಾ । ಕ್ಷಿಯ ಮುಸುಗುದೆಗೆಯಲವ ॥
ಆಕ್ಷಣದೊಳು ಮುಸುಕಿದಳವಳಂಗವ । ನಕ್ಷೀಣಪುಳಕ ಕಂಚುಕದಿಂದೆ ॥ (32)

ಸಲೆ ಜಘನಾದ್ರಿಯಿಂದೊಗೆ ತಂದಂಗಜ । ಜಲದ ಪೊನಲ್ದೆರೆವೊಯ್ಲಿಂದೆ ॥
ಕಳೆವಿಳವಂತಿಳದುದು ಕುವರನ ಕರ । ತಳ ಸೋಂಕೆನಿಂದವಳೊಳ್ನುಡಿ ॥ (33)

ಮನವನಿಚ್ಛೆಯೊಳೆ ಮುಸುಂಕೆ ನಿಜಾಸ್ಯವ । ಮಿನುಗುವ ಮಂದಹಾಸದೆ ಮುಚ್ಚಿ ॥
ಕೊನರುವಂಗಜರಸದಿಂ ನಾಣ ಮುಸುಕಿದ । ವನಿತೆಯನವನೀಕ್ಷಿಸಿದನು ॥ (34)

ಮುಡಿಗೆ ಬೆಳ್ಮಲರ ಬಾಸಿಗ ತೋಳ್ಗೆ ಬಜ್ಜರ । ದೊಡ ಬಲ್ಮೊಲೆಗೆ ಪೊಸಮುತ್ತಿನ ॥
ನಿಡುಹಾರನುಣ್ಡೊಡೆ ಪೊರವಾರ್ಗೆ ದುಗುಲದೊ । ಳ್ನುಡಿಯಾದುದವನ ನಯನಕಾಂತಿ ॥ (35)

ಎಳೆಯಳ ಸುಳಗೊಂಡ ನಾಭಿಕೂಪದ ಸುಳಿ । ಯೊಳು ಸಿಲ್ಕಿ ಪೊರಮಡಲಾರದೆ ॥
ಸುಳಿದಾಡುವ ನಂಬಿಯ ನೋಟವೆಸೆದುದು । ಸುಳಿಯೊಳಗಣ ಪರುಗೋಲಂತೆ ॥ (36)

ತನು ತನು ಸೋಂಕಿನ ಸೊಗದಿಂದೆ ರೋಮಾಂ । ಚನಮೀರ್ವರಂಗದೊಳೆಸದವು ॥
ಜನಪಕೇಳಾನಂದ ವಾರ್ಧಿಯ ವೇಲಾ । ವನಲತಾದ್ರುಮಕಳಿಕೆಗಳಂತೆ ॥ (37)

ಸರಸಮಾದೊಳ್ನುಡಿಯಿಂ ಪೊಸ ಸವಿಯಿತ್ತು । ತರಳಲೋಚನೆಯೊಳು ಚದುರಿಂದೆ ॥
ನೆರೆಯಲೀಯದ ಲಜ್ಜೆಯಂಬೆಡೆದೆಗೆಯ । ದರನೂಕಿ ಕಳೆದ ಕಾತರದಿಂದೆ ॥ (38)

ಅಡಿಗಡಿಗಮರ್ದಪ್ಪುವ ನುಡಿ ನುಡಿಗೊರ್ಮೆ । ಪಿಡಿದಲುಗುವ ಚುಬುಕಾಗ್ರವ ॥
ಬಿಡದೆ ಬಾಯೊಳ್ಪುಯಿಡುವ ಮುಂಡಾಡುವ । ತುಡುಕುವನೆಮದಣಗಳನು ॥ (?) (39)

ಕೊನರ್ವ ಪುಳಕದುರ್ಬಿನಿಂದೆ ಕೇಳಿಸಿದಂತೆ । ತನಿ ಬೆಮರ್ಸರಿಯೊಳೊಂದಿಸಿದಂತೆ ॥
ಮನವೊಲ್ದು ನಳತೋಳೊಳೆ ಕಟ್ಟಿ ಬಿಗಿದಂತೆ ತನುತನುವೆರಸಿ ಕೂಡಿದರೊಲ್ದು ॥ (40)

ಸಡಿಲದ ತಕ್ಕೆ ಸಂಚಲಿಸದ ಮನ ಯೆವೆ । ಯಿಡದಕ್ಷಿ ಪಿಂಗದ ಬಾಯ್ಗೂಟಿ ॥
ಬಿಡುಹಾಗದಂಗ ಬೀಯದ ಸವಿ ಕೆಲಕಡಿ । ಯಿಡದಿಚ್ಛೆಯವರೊಳಗೆಸೆದುದು ॥ (41)

ಕರಗುವ ದಿಟ್ಟಿ ಕಾತರಿಸುವ ಮನ ಬಿಡೆ । ದೂರವಣೆ ಪಂಗಜ ಜಲದೇಳ್ಗೆ ॥
ದೊರಗೆಟ್ಟ ಮಾತು ಸೊಕ್ಕುವ ತಕ್ಕೆ ರಾಜಿಸೆ । ನೆರೆದರನೇಕ ಬಂಧಗಳಿಂದೆ ॥ (42)

ತೊರೆದೊಳ್ಪುಗೆಡದಧ ರಾಮೃತ ಸೇವನೆ । ಹೊರಯಿಲ್ಲದೆಸೆವ ಸೊಗಸುದಕ್ಕೆ ॥
ಸುರತದೊಳಾದ್ಯಂತ ಮರಿಯದ ಪರಿತೋಷ । ಪರವೆ ಸೌಂದರರೊಳೊಪ್ಪಿರ್ದುದು ॥ (43)

ಮಣಿಮಂಚ ಸೆಳೆನಡು ಮಣಿಯೆ ಕುರುಳ್ಬರ್ಬು । ಕುಣಿಯೆ ಕಟಿದ್ರವಗಳ ರವ ॥
ಅಣಿಯುರಮಾಗುಣ್ಮೆ ಕಾಲಭೇದಂಗಳೆ । ಗಣಿಸದೆ ರಮಿಸಿದರೊಲವಿಂದೆ ॥ (44)

---

1 ಯಂ ಬಿಡದೆರೆಯ, 2 ಉರವಳಪ.

ಒಲವಿಂದಿನಿಯಳ ಚುಬುಕಾಗ್ರವ ಪಿಡಿ । ದಲುಗಿ ಚೆಂದುಟಿಯನು ಚುಂಬಿಸಿ ॥
ಗಳರವಗೆಯ್ದನೊಯ್ಯನೆ ನಂಬಿ ಗಂಡುಗೋ । ಗಿಲೆ ಮಾಂದಳಿರ್ಗಚ್ಚಿ ಕೆಲೆವಂತೆ ॥ (45)

ತಳಿರ ಕರ್ದುಕುತೆರೆಗಣ್ಮುಚ್ಚಿ ಸೊಕ್ಕುವ । ಕಳಕಂಠ ಗದ್ಗದ ಸ್ವರದಂತೆ ॥
ಎಳೆಯಳ ತಳಿರ್ದುಟಿ ಕರ್ದುಕುವ ಸೌಂದರ । ಕಳಕಂಠ ನಿನದ ರಂಜಿಸಿದುದು ॥ (46)

ವದನದೊಳಮೃತದ ಕಡವರವಿರೆ ಕಂಡು । ಚದುರಿಂದೆ ವಿಟರನ್ನ ತುಡುಕಲು ॥
ಮದನನೃಪಾಲಗೆ ಪುಯ್ಯಲನಿಡುವಂತೆ । ಸುದತಿಯ ಗಳರವಮೆಸೆದುದು ॥ (47)

ಚೆಂದುಟಿರನ್ನವಟ್ಟಲ ಮೀಸಲಮೃತವ । ಸೌಂದರೇಶ್ವರಗರ್ಪಿಸುವಾಗ ॥
ಅಂದವೆತ್ತೆಸೆವ ಶಂಖಧ್ವನಿಯೆನಲೊಪ್ಪಿ । ತಿಂದುಮುಖಿಯ ಚಾರುಗಳರವ ॥ (48)

ಉಸಿರ್ವಿಡಿದಾಯಸಂ ಬಡದೆ ಬಾಯ್ಗೂಟವ ನೆಸಗುವ ಪರಮೆಗಳುಲಿಯಂತೆ ॥
ರಸದಂಬುಲ ಗುಟುಕುಗಳ ಲಹರಿಯೊ । ಳೆಸೆವೀರ್ವರ ನುಣ್ಗೊರಲುಲಿ ॥ (49)

ಬಡವಾದನಲ್ಲನೆಂದುಡುರಾಜ ಬಿಗಿಯಪ್ಪ । ಲೊಡಲುಬ್ಬಿಯೆಳೆವೆರೆ ಬೆಮರ್ವಂತೆ ।
ಮಡದಿಯಿಂದುಟಿ ಮಿಂಚುವೊಲೆಲ್ವೊಂಕೆನಿಂ ಪೊಂಗು । ವಡೆದೊಸರ್ದುದು ನಂಬಿ ಚುಂಬಿಸೆ ॥
[(50)

ಒಯ್ಯನೆಯವಳಳಕವ ತನ್ನ ಚೆಂದಳಿ । ರ್ಗೆಯ್ಯಿಂದೆ ಪಿಡಿದವ ಮೊಣ್ಣೊಂದು ॥
ಕೈಯಿಂದೆ ಚುಬುಕಾಗ್ರವನೆತ್ತಿ ಮುರಿದವ । ಮುರ್ಯ್ಯಾಂತಧರವ ಸವಿದರು ॥ (51)

ಬಾಸಣಿಪಂತೆ ಚಂದ್ರನ ತಮ ತಾರಾಳಿ । ಸೂಸುವಂತಚಲಗಳ್ಚರಿಪಂತೆ ॥
ಆ ಸತಿಯುಪರಿರತಂಗೆಯ್ದಳು ಸೌಂದ । ರೇಶನ ತನುಮನ ದಣಿವಂತೆ ॥ (52)

ಕುರುಳಾರಡಿ ಮೊಲೆ ಪೊಣರ್ವಕ್ಕಿ ಮೊಗದಾ । ವರೆ ಕಣ್ಕೆಳೆ ಮೀನು ಘರ್ಮಾಂಬು ॥
ಶರದವೊಲಾಗೆ ಪೂಗಳನೆದ್ದಾಡುವಂ । ತರಸಿಯುಪರಿರತ ಗೆಯ್ದಳು ॥ (53)

ತರಳೆಯುಪರಿ ರತಗೆಯ್ಯೆ ಲತಾಂಗ ಬೆ । ಮರಿ ಕುಂಕುಮಾಂಬುಕುಚಾಗ್ರದೆ ॥
ಸುರಿದುದಂಗಜ ಗಜರಿಪುವನಿರಿಯೆ ದಂತ । ಪೊರೆದರುಣೋದಕವಿಳವಂತೆ ॥ (54)

ಪರೆದ ಕುಂತಳೆ ಮೇಘನೇತ್ರಾಂಶುವೆಳೆಮಿಂಚು । ಸರಿಬೆಮರ್ವನಿ ಬಿಡು ಮುಡಿಯಿಂದೆ ॥
ಸುರಿವ ಕುಸುಮವಾರಿ ವರಲೆನೆ ಮಳೆಗಾಲ । ದಿರವಾಂತಳುಪರಿರತದೆ ಕಾಂತೆ ॥ (55)

ಈ ಪರಿಮೈಮಸದಾಟದ ಸೊಬಗಿನಿಂ । ಚಾಪಲನಯನೆ ರತಂಗೆಯ್ದು ॥
ಭೂಪ ಕೇಳ್ಪರವಶವಂಕುರವಾದ ಕ । ಲಾಪರಿಪೂರ್ಣದೆಸಕದಿಂದೆ ॥ (56)

ಕಂಪಿಪ ತನು ಬಿಗುಹಳಿದಾ ಲಿಂಗನ । ಕೆಂಪಾದಕ್ಷಿ ನೀಳ್ದಳಕದೆ ॥
ಸೊಂಪಾಂತು ಮೂರ್ಛೆಗೆಸಲುವಿನಯರ ಬಗೆ । ಪೊಂಪುಳಿಯೋಗಿ ಕಣ್ಗೆಸೆದುದು ॥ (57)

ತಾರು ತಟ್ಟಾಗಿ ಪುಳಕ ಕಣ್ಬೆಂಡೇಳೆ । ಮೀರೆ ಘರ್ಮಾಂಬು ಸುಯ್ಯೊಳಗಿಡೆ ॥
ಜಾರೆ ನುಣ್ಮಾತು ನಾಣ್ಪೊಸಲೊಂದಿದ ತನು । ಬೇರಿಡೆ ಮಿಗೆ ಮೊರ್ಛೆವೋದರು ॥ (58)

ನಗೆಗಣ್ಣೊಳಗಲದೆ ಮೋಪನನೆವೆಯಿಂದೆ । ಬಿಗಿದಪ್ಪಿದಳೊ ಯೆದೆವನೆಯನು ॥
ಮುಗುದೆಯ ಪೊಗಿಸಿ ಕಣ್ಬಾಗಿಲಿಕ್ಕಿದನೆನೆ । ಮುಗಿದುವವರ ನೇತ್ರಗಳಾಗ ॥ (59)

ನೆರೆವೊಡೆಮಗೆ ಲಜ್ಜೆಯನೆಡ್ಡ ಬರಿಪುದೆಂ । ದಿರದ ಚೈತನ್ಯವ ಪೊರಗಿಟ್ಟು ॥
ಬೆರಸಿದಂತೋರೊರ್ವರ ಮೇಲೆ ನೆಮ್ಮಿರ್ದು । ಪರವೆ ಸೌಂದರರು ಮೆಯ್ಮರೆದರು ॥ (60)

ತಿಳಿದುದು ಮೂರ್ಛೆ ಮೆಲ್ಲನೆ ಸಾರ್ದುದಂಗವ । ಪುಳಕ ಚೇತನ ಮಾದುದೆರ್ದೆಯೊಳು ॥
ಬಳಲಿಕೆ ನಸು ಪರಿದುದು ಮುಗುಳಿರ್ದ ಕಂ । ಗಳ ತೆರೆದವಳ ನೀಕ್ಷಿಸಿದನು ॥ (61)
ಕಡೆಗಣ್ಣ ಬೆಳ್ಪಧರದೊಳಧರದ ಕೆಂಪು । ಕಡೆಗಣ್ಣೊಳಿರೆ ಚೋದ್ಯಮೆಂಬಂತೆ ॥
ಮಡದಿಯು ಬೆಳತೆಳೆವೆರೆದುಱ ಕೆಂಪಾದ । ಕುಡಿತೆಗಣ್ಣಿಡೆ ವಿರಾಜಿಸಿದುದು ॥ (62)
ಗಳದೊಳು ರತ್ನ ಭೂಷಣದಂತೆ ನಿಡಿದೋ । ಳ್ಗಳೊಳು ಕೆಂಬರಲ ವಲಯದಂತೆ ॥
ಪೊಲೆಯೆಡೆಯೊಳು ಮಣಿಹಾರದಂ [1]ತೆಸೆದರಾ । ಲಲನೆಗೆ ದಂತಾಕ್ಷತೆಗಳು ॥ (63)
ಬಾಲೆಯುರದೊಳೊಂದಿದ ಪೊಸಬೆಮರ್ಮುತ್ತು । ಬೀಳಲುಳದ ಚೆಂಬಟ್ಟೆಯು ।
ನೂಲಂತೆ ಕಂಗೆಸೆದುದು ತೋರವೊಲಗಳ । ಮೇಲೆ ರಂಜಿಪ ನೀಲ ನಖರೇಖೆ ॥ (64)
ಸುರತದ ಲೇಖವ್ರೊ ನಲ್ಮೆಯೊಂದೆಂಬ ಪೊ । ನ್ನೊರೆದೆಡೆಯೊ ರಾಗರಸ ತೀವಿ ॥
ಬರಿದುವ್ರೊ ಕಾಂತೆಯಂಗದೊಳೆಂಬಂದದೆ । ಸುರುಚಿರ ನಖಹತಿಯೆಸೆದವು ॥ (65)
ಆ ನಖರೇಖೆಯಿಂದೆಸೆದಿರ್ಪ ಪರವೆಯು । ಪೀನ ಕುಚದ ಚೆಲ್ವಿಕೆಗಂಡು ॥
ಭೂನಾಥ ಕೇಳೆಳೆವೆರೆಯುಂತಾಲಿಂಗ ವೆಂ । ದಾನಂದದೆ ಭಾವಿಸಿದ ನಂಬಿ ॥ (66)
ಆವ ಬೆಸನಗೆಯ್ಯಲಾವ ಲೀಲೆಯೊಳಿರ । ಲಾವಾವ ಕಜ್ಜವ ನೆಸಗಲು ॥
ಭಾವದೊಳೀಶ್ವರ ವಿಷಯವೆ ಶರಣರಿ । ನಾವರಿಸಿರ್ಪುದು ದಿಟವಲ್ತೆ ॥ (67)
ಹರುಷದೆ ಪೊಗಳ್ದ ಶಿವ ವಕ್ಷಸ್ಥಳೆ । ಭರಿತ ನಕ್ಷತ್ರಮಾಲಾವೃತ ॥
ಗುರುವೆ ಘನಾಘನ ರೂಪಕಾವೋತ್ತಾಪ । ಹರಯೆಂದ ಸೌಂದರ ಗಣನಾಥ ॥ (68)
ಖಲದಂಬರ ಜಯ ನಖಹರಿ ರುಚಿರೋ । ಜ್ವಲ ಚಂದ್ರಾಂಕಿತ ಜಯ ಜಯ ॥
ವಿಲಸಿತ ಕುಂಕುಮ ಚರ್ಚಿತ ಜಯ ಜಯ । ಸುಲಭಸ್ತನ ಶಂಕರ ಜಯ ॥ (69)
ಈ ಪರಿ ನುತಿಸೆ ಮೆಲ್ಲನೆ ಮೂರ್ಛೆದಿಳಿದು ತ । ನ್ನೊಪನ ಕೇಳ್ದಳೀಕುಚದೊಳು ॥
ವಿಪರಿ ಶಿವನಿರ್ದಪನೆನೆ ವಿಶ್ವ । ವ್ಯಾಪಿಯಿರ್ಪುದು ಚೋದ್ಯವೆ ಕಾಂತೆ ॥ (70)
ಎಂದ ಮಾತ್ರಿಗೆ ವಿಸ್ಮಯುವಟ್ಟು ನಾನರಿ । ವಂದದೊಳೆನ್ನಯ ಕುಚದೊಳು ॥
ಇಂದು ಧರನ ನುಡಿಸೆನಲೆನ್ನ ನುಡಿಸಿದ । ಸೌಂದರ ಗಣನಾಥ ನೆಲೆ ಭೂಪ ॥ (71)
ದೇವ ನೀ ನುಡಿದೊಡೇನೆನಗೀವ ಪಡಿವ್ರೊನ್ನ । ನೀವುದೀ ಮುಗ್ಧೆಯು ಕುಚದೊಳು ॥
ಪಾವಕ ನೇತ್ರ ನೀನೆನಲಿತ್ತೆ ನಂಬಿಗೆ । ನಾ ವಿನಯದೆ ಪೊಸಪಡಿವ್ರೊನ್ನ ॥ (72)
ಧನವನಾಶ್ರಯಿಸಿ ಭುಜಂಗನಿರ್ಪುದು ನಿಜ । ಮೆನಿಸಿತು ನಂಬಿಗಿತ್ತಪೆನೆಂದು ॥
ಧನವ ಪಿಡಿದ ಸೌಮ್ಯ ಕರವ ಬಳಸಿ ರಂ । ಜನೆವೆತ್ತ ಭುಜಗ ಕಂಕಣದಿಂದೆ ॥ (73)
ಪಡಿವ್ರೊನ್ನನಿತ್ತು ಮೆಲ್ಲನೆ ಪರವೆಯು ಕುಚ । ದೆಡೆಯೊಳಗಾನು ಮೆಯ್ಯುರೆದೆನೊ ॥
ಮಡದಿ ಮಾನದೆ ಸಂತಸದಾಳ್ದು ಸೌಂದರ । ನಡಿಗೆ ನಮಿಸಿ ಪೊಗಳ್ದಳಾಗ ॥ (74)
ಬರಿಸವನೊಂದು ತಿಂಗಳುಗೆತ್ತು ತಿಂಗಳ । ನಿರದೊಂದು ದಿನಗೆತ್ತು ದಿನಗಳ ॥
ಅರೆಗಳಿಗೆಯದಾಗಿ ಕಂಡಾ ಸೌಂದರ । ಪರವೆಯೊಳನುದಿನ ಸುಖವಿರ್ದ ॥ (75)
ಗಿರಿಜೆಯ ಮೆಯ್ಗಂಪಿಗೆರಗುವ ತುಂಬಿಯಿಂ । ಚರಪಶ್ವತರಗಾನ ರಸದೊಳು ॥
ಬೆರೆದು ಕಿವಿಗೆ ರಂಜಿಸೆ ತಲೆಯೊಲೆವ ಶಂ । ಕರ ಶಾಂತ ಮಲ್ಲಿಕಾರ್ಜುನ ಜಯ ॥ (76)
ಚೇರಮ ಶರಣಾಗ್ರಣಿಯ ಕೃತಿಯು ವಿ । ಸ್ತಾರವ ಮಾಳ್ಪರಾದರಿಪರ ॥
ತಾರಾರ್ಕರುಳ್ಳನ್ನೆವರ ಮಲ್ಲಿಕಾರ್ಜುನ । ನೋರಂತೆ ಪಾಲಿಪನೊಲವಿಂದೆ ॥ (77)

(ಹದಿಮೂರನೆಯ ಸಂಧಿ ಸಮಾಪ್ತಂ)

[1] ಎಸೆದುವಾ.

ಹದಿನಾಲ್ಕನೆಯ ಸಂಧಿ-

ಪಂಚಾಸ್ಯ ಪರಮ ಪಾವನ ಮೂರ್ತಿ ಫಣಿರಾಜ । ಸಂಚಯ ಕಲ್ಪ ಭೂಧರ ತಲ್ಪ ॥
ಕಾಂಚನ ಗರ್ಭ ಸರೋಜಾಕ್ಷ ನವ ಪುಂಗ । ವಾಂಚಿತ ಜಯ ಮಲ್ಲಿಕಾರ್ಜುನ ॥ (1)
ಮಲ್ಲಿಗೆ ಯಲರಿಂದೆಲ್ಲ ನರುಗಂಪ ಕಂ । ಕೆಲ್ಲಿಯ ತಳಿರ್ಜೊಂಪದ ಸೊಂಪ ॥
ಮೆಲ್ಲೆಲರಿಂಪ ಗೆಲ್ವುದು ನಿನ್ನ ಕೃತಿ ನನೆ । ವಿಲ್ಲ ಹೊನ್ನೊರೆಯ ವಿರೂಪ ಭೂಪ ॥ (2)
ತಳಿರ್ಗೆಯ್ಯಳೆ ತಾವರೆ ಮೊಗದಳೆ ಪೊನ್ನ । ಸೆಳೆ ಮೆಯ್ಯಳೆ ಗಿಳಿ ನುಡಿಯಳೆ ॥
ಅಲರ್ಮುಡಿಯಳೆ ಬಂದುಗೆ ತುಟಿಯಳೆ ಕೋ । ಕಿಲ ರವದಳೆ ಮೇಲ್ಗತೆ ಗೇಳ ॥ (3)
ಇಂತತಿ ಸುಖ ಸಂತತ ವಿನೋದ ದೊಳೆ ತ । ತ್ಕಾಂತೆ ಯೊಳ್ನಂಬಿ ಕೆಲವು ಕಾಲ ॥
ಸಂತತವಿರೆ ಬಂದುದು ವಿರಹಿಗಳ ಹೃ । ತ್ಕಂತ ಬಸಂತ ಕೇಳೆಲೆ ಭೂಪ ॥ (4)
ಅಳಿಝಂ ಕೃತಿ ಶಂಖ ನಿಸ್ವನ ಮತ್ತ ಕೋ । ಕಿಲ ರವ ಘನಭೇರೀಧ್ವಾನ ॥
ತಳಿತ ಚೂತ ಛತ್ರ ಚಮರ ಮಾಧವಿಯ ಕು । ಡ್ಮಳವಾಗೆ ಬಂದನಾ ಮಧುರಾಜ ॥ (5)
ಸರಸೀರುಹ ಹಿಮ ವಲೆದುದಿನ್ನೆಗಮದ । ಪರಿಹರಿಸುವೆನೆಂದು ಸಾರ್ದಂತೆ ॥
ತರಣಿಯುತ್ತರ ಕೈಯ್ದಿದ ಚೈತ್ರ ದೊಳ್ಮಗೆ । ಸರಿದುದು ಹಿಮ ಹಿಮಗಿರಿಗಾಗಿ ॥ (6)
ನಲಿವು ಜಾತಿಗೆ ಪೋಗೆ ನಾಡೆ ಕುಜಾತಿಗೆ । ನೆಲಸಿರೆ ಸಿರಿಯರಾರಡಿ ಪೆರ್ಚೆ ॥
ತಲೆದೋರಿರೆ ರಾಜ ಕರದಟ್ಟುಳಿ ಮಿಗೆ । ಕಲಿಕಾಲದಂತೆಸೆದುದು ಚೈತ್ರ ॥ (7)
ಅಲರ್ದೊಂಗಲೆ ಕೇಸರ ವೆಳೆವೆರೆದಾಡೆ । ತಳಿರೆ ನಾಲಗೆ ಮಾವಿನೆಳೆ ಗೊಂಬು ॥
ಲಲಿತವಾಲ ಮದಾಗೆ ವಿರಹಿಗಜವ ಭಯ । ಗೊಳಿಸಿತು ಮಧುಮಾಸ ಕೇಸರಿ ॥ (8)
ಅರಸ ಕೇಳಾ ಮಧು ಮಾಸದೊಳಗೆ ಸಿಂ । ಗರವಾದ ಕುಳಿರ ಮಂಟಪದೊಳು ॥
ಪರವೆಯೊಡನೆ ನಂಬಿ ಮುದದಿಂದೆ ಬಿನದಿಸು । ತಿರಲೊರ್ವ ವನಪಾಲನೆಳ್ತಂದ ॥ (9)
ರತಿಕುಸುಮಾಯುಧರೆಡೆಗೆಯ್ದಿ ಚೈತ್ರನಾ । ನತನಾಗಿ ನನೆಯಂಬ ನೀವಂತೆ ॥
ಅತಿ ಹರುಷದೆ ವನಪಾಲಕನಾ ದಂ । ಪತಿಗಳ್ಗೆ ನಮಿಸಿ ಕಮ್ಮಲರಿತ್ತ ॥ (10)
ವನಲಕ್ಷ್ಮಿ ತನಗೆ ಯೌವನ ಸಿರಿ ನೆಲಸಿರೆ । ಮನವೊಲ್ದು ಕೋಕಿಲ ರವದಿಂದೆ ॥
ವಿನಯದಿಂ ಪ್ರಾರ್ಥಿಸಿ ಕಳುಪಿದರಿರದೆನ್ನ । ಜನಪ ಚಿತ್ತೈ ಪುದುಚಿತವೆಂಥ ॥ (11)
ಕೊಡುವೆಡೆಯೊಳು ಗುರು ಲಘುವೆಂದು ಬಗೆದನೆ । ಪೊಡವಿಯೆರೆಯ ಸೌಂದರೇಶ್ವರ- ॥
ಮಿಡಿದಳಿರಲರಿತ್ತ ವನಪಾಲಕಗೆ ಬೆಲೆ । ಯಿಡಲರಿದೆನಿಪ ತೊಡವನಿತ್ತ ॥ (12)
ಉಡಲಿತ್ತು ವನಪಾಲಕನ ಬೀಳ್ಕೊಟ್ಟು । ಮಡದಿ ಸಹಿತ ಸೌಂದರೇಶನ ॥
ನಡೆತಂದು ಸಕಲ ವೈಭವ ಗೂಡಿ ಸಿಂಗರ । ವಡೆದಿರ್ದ ಗಂಧಗಜವ ಸಾರ್ದ ॥ (13)
ಶಾರದ ನೀರದವನು ರೋಹಿಣಿಯು ತಾ । ನೀರಜರಿಪು ವೇರುವಂದದೆ ॥
ವಾರಿಜ ವದನೆ ಪರವೆ ಸಹಿತ ಮತ್ತ । ವಾರಣವನೇರಿದನಾ ನಂಬಿ ॥ (14)
ತರುಣೀಜನ ಪಿಡಿಗಳನೇರಿ ಛತ್ರಚಾ । ಮರವಿಡಿದೆಸೆ ದರಿಕ್ಕೆಲದೊಳು ॥
ಅರಸಕೇಳ್ಮಗಿ ಲೆಡೆಯೊಳು [ತೋರಿ] ಮಿಗೆ ಸಂಚರಿಸು । ವರೆಬಳ್ಳಿ ಮಿಂಚುಗಳಂತೆ । (15)
ತುರಗವ ತುಂಬುರಾದಿಗಳು ವೀಣಾನೆಯ । ತರುಣೀಜನ ರಾಜ ತನಯರು ॥
ವರ ಶಿಬಿಕೆಯ ಗಣಿಕೆಯರಂದೆಳ ವೇರೆ । ಸರಸದೆ ನಡೆದ ಸೌಂದರ ಭೂಪ ॥ (16)

ಬಿತ್ತರಿಸುವೆನೇನ ಪರವೆಯು ಸಖಿಯರು । ಮೊತ್ತವ ನೋಳ್ಪರ ಚಿತ್ತವ ।
ತೊತ್ತಳ ದುಳಿದಂಗಜ ದಂತಿಗಳಿಂ । ತಿತ್ತರವಿಡಿದೆಯ್ತಂದರು ॥ (17)

ಮದನ ಮೋಹನ ದೇವಿಯರೊ ನುಡಿ ನಡೆ ಸೊಬ । ಗೊದವಿದ ರನ್ನೆ ಪುತ್ತಳಿಗಳೊ ॥
ಚದುರ ಸುಜನ್ಮ ಭೂಮಿಯೊ ಕಂತು ಶಕ್ತಿಗ । ಳ್ಪದ ಮಿಟ್ಟಿರೆ ನಲವರ್ನಡೆದರು ॥ (18)

ನಿಡುಮುಡಿಯರ ಸಂಜೆ ನಡೆತಳಿರಡಿ ಬಟ್ಟ । ದೊಡೆ ಬಡಬಾಸೆ ನುಣ್ದೋಳ್ಗಳ ॥
ಕುಡುಮುರ್ವಿನ ಕುಂದ ಮಂದಸ್ಮಿತ ಮುಖ । ಕಡರ್ವ ಜವ್ವನೆಯರೆಯ್ದಿದರಾಗ ॥ (19)

ಪೊಂಗೊಡ ಮೊಲೆಗಳ [ನಿಡು] ಜಡೆಗಳ ಚೆಲ್ವಿ । ಗಂಗಳ ಕೋಮಳಾಂಗುಳಿಗಳ ॥
ರಂಗು ಮಾಣಿಕದ ಕಾಂತಿಯ ಮಿಗುವಧರದ । ಹೆಂಗಳೆಯ್ತಂದರುತ್ಸವದಿಂದೆ ॥ (20)

ಕಿಡಿ ಕಿರಿದುನ್ನತ ಕುಚಗಳ ಪೊರೆಯಿಂದೆ । ಬಡನಡು ನಡೆ ನೋಳ್ಪರ ಬಗೆ ॥
ನಡುಗುವುದಿಂತೆಂದು ತೋರ್ಪಂತೆ ಕಂಪಿಸೆ । ಮಡದಿಯ ರಡಿಯಿಟ್ಟ ರೊಲವಿಂದೆ ॥ (21)

ತನುಕಾಂತಿ ಜಲನಾಭಿಯಾವರ್ತ ತೋಳ್ತಿರೆ । ಮಿನುಗುವ ಪಲ್ಮುತ್ತು ಮೊಲೆವೆಟ್ಟು ॥
ಇನಿದುಟಿ ವಿದ್ರುಮವೆನೆ ಕಡಲಂದದೆ । ವನಿತೆಯರೆಯ್ದಿದ ರೊಲವಿಂದೆ ॥ (22)

ಪೊಂದಾವರೆಯೆಸೆವ ಮಣಿದರ್ಪಣ । ದಂದವ ಪೂರ್ಣೇಂದು ಬಿಂಬದ ॥
ಚಂದವ ಸೋಲಿಪ ದರಹಸಿತಾಸ್ಯದ । ಮಂದ ಯಾನೆಯ ರೆಯ್ದಿದರಾಗ ॥ (23)

ಉನ್ನತ ಜಘನಂಗಳ ಸುಳಿ ನಾಭಿಯ । ಪೊನ್ನ ಬಣ್ಣದ ತನುಕಾಂತಿಯ ॥
ಕನ್ನೆಯ ರಖಿಲ ಕಲೆಗಳಿಂದೆ ರಾಜಿಪ । ಚೆನ್ನೆಯ ರೆಯ್ದಿದ ರೊಡನಾಗ ॥ (24)

ನಡೆಗಂಚೆ ನುಡಿಗರೆಗಿಳಿ ತೋಳ್ಗೆ ಸಳೆಗೊಂಬು । ಮುಡಿಗೆ ನವಿಲು ಮೊಲೆಗೆಣೆವಕ್ಕಿ ॥
ಪಡಿಯೆನಿಸಿರ್ಪವ ನೊಳಕೊಂಡು ದೆನುತೆ ದಾ । ಳಿಡುವಂತೆ ಬನಗೊಲ್ದು ನಡೆದರು ॥ (25)

ಪೊಡವಿಯೆರೆಯ ಕೇಳಿಂತಿರ್ಪ ಸತಿಯರ । ಗಡಣದೆ ಸೌಂದರ ಗಣನಾಥ ॥
ನಡೆತಂದು ಸಾರ್ದವನೊಪ ಕಂಠವ ನೊಲ್ದು । ಸಡಗರ ದಿಂದದ ನೇಸೆಂಬೆ ॥ (26)

ಮದದಿಂದೆ ಕರ್ಣ ಮೂಲವ ನೆತ್ತಿಪಿಂತಣ । ಮಡದಿಯ ನಿಳುಪಿ ಕಯ್ಯಲುಗಾನು ॥
ಅಡಸಿ ಪಿಡಿದು ಕರಿ ಶುಂಡಾಗ್ರವ । ತಡೆಪುದೆ ಗಜವನಿಳಿದ ಭೂಪ ॥ (27)

ಅರಲಂಬನ ಕೃತಕಾಚಲ ಶಿಖರಾಂ । ತರಲತೆ ಸೋಗೆಯ ಭರದಿಂದೆ ॥
ಧರೆಗೆರಗುವ ವೊಲ್ ಬಿಡುಮುಡಿಯಿಂದೋರ್ವ ತರುಣಿ ಬೆಹ್ಣನೆಯಿಂದಿಳಿದಳು ॥ (28)

ಫಲಭರದಿಂದೆ ಮಾಕಂದ ಸೆಳೆಗೊಂಬು । ನೆಲಕೆ ಜೋಲ್ವಂದದೆ ಕರಿಣಿಯ ॥
ಲಲನೆಯೋರ್ವಳು ಮೊಲೆ ಬಿಣ್ಪಿಂದೆ ನಡುಬಳ್ಕ । ಳಿಳಿದಳು ಕೇಳು ಕೇರಳ ಭೂಪ ॥ (29)

ಕೃತಕಾದ್ರಿಯ ನವಿಲಿಳಿವಂತೆ ನವಚೂತೆ । ಲತೆಯಿಂದೆ ಶುಕತತಿಯಿಳಿವಂತೆ ॥
ಸಿತಸರಸಿಜಗಳ ನಂಚೆಗಳಿಳಿವಂತೆ । ಸತಿಯರು ವಾಹನವಿಳಿದರು (30)

ಸೌಂದರ ಭೂಪನ ಮನವ ನೀಕ್ಷಿಸುತಿಂ । ತೆಂದ ತುಂಬುರ ನೊಡೆನಿವನ ॥
ತಂದೆಯಲ್ಲ ದೊಡಿಂದ್ರನ ವನಕಪ್ಪುದೆ । ನಂದನವೆಸರೆಂದು ಪೊಗಳ್ದನು ॥ (31)

ಅಗಲ್ದಿನಿಯರ ನಂಗಘನ ವನಾವನ ದೊಳು । ಪೊಗಿಸಲೆನುತ ಬೇಲಿಗೆತ್ತಂತೆ ॥
ಸೊಗಸಿತು ವನವ ಬಳಸಿ ಕೇತಕೆಗಳು । ಮಘಮಘಿಪಲರ್ಗಂಪುವೆನಿವಿದೆ ॥ (32)

ಕೋಗಿಲೆ ಯುಲಿವಾದ್ಯದೆ ಯಳಿರವಗಳೆ । ರಾಗದೆ ಮರುತನ ದೆಸೆಯಿಂದೆ ॥
ತೂಗುವ ಲತೆಯ ನರ್ತನವೊಪ್ಪೆ ನೃಪನನು । ರಾಗದೆ ವನರಂಗವ ಪೊಕ್ಕ ॥ (33)

ಶಿಶಿಗಜಲದೆ ಚಳಿಯಂ ಗೊಟ್ಟು ವಿಕಸಿತ । ಕುಸುಮ ಚಯದೆ ಪೂವಲಿಗೆಯ್ದು ॥
ಬಸಜದ-ಕಪ್ಪಕಾಣಿಕೆಯಿತ್ತು ಇದಿರ್ವಂದು । ವಸುಧೇಶಗೆ ಮಂದಮಾರುತ ॥ (34)

ತೊಲಗಿದ ನಿನಬಂಧ ಮಧುರಾಜ ಕೆಚ್ಚ್ನ । ಬಲದೊಳು ರಕ್ಕಸನೆಡದೊಳು ॥
ನೆಲೆ ಜವನೆವಯಂದು ದಕ್ಷಿಣಾಂಗನೆ ಸು । ಯ್ದಲರೆನಿನಿತು ತೆಂಕಣಗಾಳಿ ॥ (35)

ಕಳಕೆಯಂಕುರ ಮಿಡಿ ಬಲ್ಮಿಡಿ ಪೂಸನೆ । ತಳಿರೆಲೆ ಪಸುರೆಲೆಗಳ ತೊಂಚೆ ॥
ಎಳೆಗಾಯಿ ದೊರೆಗಾಯರೆವಣ್ಣು ತನಿವಣ್ಣು । ಗಳ ಚೊಂಪದಿಂ ಚೂತವೆಸೆದುದು ॥ (36)

ಎಳೆದಳಿರೆಂಬ ಮೇಲುದೆ ಸೆಳೆಗೊಂಚೆಂಬ । ನಳತೋಳ್ಗಳಲರೆಂಬಕಂಗಳು ॥
ಅಳಕುಳವೆಂಬ ಕುಂತಲ ಪೀನ ಫಲವೆಂಬ । ಮೊಲೆ ಚೂತ ಲಲಿತಾಂಗಿಗೆಸೆದುದು ॥ (37)

ಗಿಳಿವಿಂಡುದರ್ಭೆ ಮಲ್ಲಿಗೆ ಜನ್ನವರ ಕಾಸೆ । ತಳರಾಗೆ ಕುಸುಮಾಕ್ಷತೆಯಿತ್ತು ॥
ಅಲರಂಬನ ಪರಸುವ ಪಿಪ್ರನಂದದೆ । ಚೆಲುವಾದುದೊಂದು ಚೂತಕುಜಾತ ॥ (38)

ಬಿನದದೆ ರಮಿಪ ವಿಜಾತಿಯ ನಗುತಿರ್ಪ । ವನಲಕ್ಷ್ಮಿಯ ಬಾಯ್ದೆರೆದಂತೆ ॥
ತನಿರಸವಿಡಿದು ಬಿರಿದು ಬಿಡೆ ಮಿರುಪ ಪ । ಣ್ಗೊನೆಯಿಂದೆ ದಾಡಿಮವೆಸೆದುದು ॥ (39)

ಕಂಗೆಸೆದುದು ವೇಶ್ಯೆಯಂತೆ ಭುಜಂಗಾ । ಲಿಂಗನದಿಂದೆ ಹೆದೆಯಸಾಂತ ॥
ಅಂಗಜ ಕಾರ್ಮುಕದಂತೆ ಸಾಲ್ವಿಡಿದಿರ್ಪ । ಭೃಂಗಾಳಿಯಿಂದೆ ಚಂದನತರು ॥ (40)

ಜಲಜ ಲೋಚನೆಯರಾಲೋಕನ ಚಂದ್ರಿಕೆ । ಗಳನೀಂಟಿ ಯಳ್ಕಮೆ ತನಗಾಗಿ ।
ಫಳಿಲನುದ್ಗರಿಸಿದಂತೆ ಪೂತೆಸೆದಿರ್ಪ । ತಿಲಕವ ನೋಡಿದನಾ ಭೂಪ ॥ (41)

ಗಾವರ ದುಂಬಿಗಳೆಂಬ ಪತಂಗದ । ಜೀವಾಪಹಾರವನೆಸಗುವ ॥
ದೀಪಿಗೆಗಳ ಮೊತ್ತವೆನಿಸಿ ಕಂಗೊಳಿಸುವ । ಪೂವಿಂದೆ ಸಂಪಗೆಯೆಸೆದವು ॥ (42)

ಇಳೆಯಣ್ಮನ ಭಾಗ್ಯವ ನೋಡಲಯ್ತಂದು । ಬಳಲಿದ ಬಾಂಬಟ್ಟೆಗರಿಗೆ ॥
ಅಲರೆಳೆಗಾಯಿ ಪಣ್ಗೊಡುವಂದದೆ ತರು । ಕುಳಮಿರ್ದವು ಪರಹಿತಮಾಗಿ ॥ (43)

ನೋಡೆ ತಿಯ್ಯೊಳ್ಮಟ್ಟ ಕಾಲೊಳೊದೆಯೆ ಮಾತ । ನಾಡಲುಗುಳೆನಗೆ ತಳ್ಕೈಸೆ ॥
ಪಾಡಿ ಚಿಂತಿಸೆ ಸುಯ್ಯೆ ಸತಿಯರಂಕುರ ಮಪ್ಪ । ಗಾಡಿಯ ತರುಗಳೊಪ್ಪಿದ
[ರಲ್ಲಿ ॥ (44)

ಪರಿಭವವಡೆದಂತಸುಗೆ ಮಾದಳರ್ಗಳೆ । ಮರನೇರಿ ಬಾಳ್ದವಂಬುವ ಪೊಕ್ಕು ॥
ಸರಸಿಜ ಕುಮುದ ಜೀವಿಪವೆಂದು ನಗುವವೊ । ಲರಲ್ದ ಮಲ್ಲಿಗೆಗಳೊಪ್ಪಿದುವಲ್ಲಿ ॥ (45)

ಮಿಗವೊರೆ ನೇಸರಾರಡಿ ವಿರಹಿಗಳಿಗೆ । ಪಗೆಯಾದ ಪೂಗಳ ಬನವೆಣ್ಣು ॥
ಮೊಗದಂತೆ ನಿಡುಗಂಗಳಂತೆ ನಾಸಿಕದಂತೆ । ನಗೆವೆಳ್ಪಿನಂತೆ ಕಂಗೆಸೆದವು ॥ (46)

ನಸುವಿರಿದೊಪ್ಪುವ ಮಲ್ಲಿಕಾ ಮುಕುಳದೊ । ಳೊಸೆದು ಮಧುವನುಂಬಳಿರವ ॥
ಎಸೆದುದಾತನ ದಂಡು ನಡೆವಲ್ಲಿ ಮುಂದೆ ರಾ । ಜಿಸುವ ಶಂಖಧ್ವಾನ ಮೆಂಬಂತೆ ॥ (47)

ಅರಲಂಬನ ಮತ್ತಗಜ ವೆನಿಸುವ ಮಂದ । ಮರುತ ಬಂದುದು ಗಂಧ ಮದವೇರಿ ॥
ಬಿರಯಿನೀ ಪೋಗೆಂದು ಸಾರುವ ಡಿಂಡಿಮ । ಸ್ವರವೆನೆ ಪಿಕರವ ಮೆಸೆದುದು ॥ (48)

ಇಂದುಕಿರಣ ವಿಚಕಿಲಕೋಕಿಲ ರವ। ಮಂದಮಾರುತ ಲೋಕ ವಿಜಯಕೆ ॥
ಒಂದೊಂದೆ ಸಾಕೆಂದು ಮದನನೊಳ್ಮಥು ನುಡಿ । ವಂದದೆ ಶುಕತತಿ ನುಡಿದವು ॥ (49)

ಅನಿಲನೊಯ್ಯನೆ ಸೋಂಕಲೊಲೆವ ಮಾಕಂದದ । ತನಿವಣ್ಣಕರ್ದುಕುವಗಳಿಯರಾಗ ॥
ಮುನಿದಿನಿಯುಳ ವದನವ ತವಕದೆ ಚುಂ । ಬನಗೆಯ್ವ ವಿಟನ ಪೋಲ್ತುದುರಾಯ ॥ (50)

ಎಳೆಮಾವಿನೊಳು ದಾಡಿಮದೊಳು ಮಲ್ಲಿಗೆ । ಯೊಳು ಪರಪುಟ್ಟ ಗಿಳಿಯುಳಿ ॥
ನಲಿದಿತ್ತವು ತಾರಮಧುರಮಂತ್ರಸ್ವರ । ದೊಲವನಾ ನಂಬಿಯ ಕಿವಿಗಳ್ಗೆ ॥ (51)

ತಳಿರ್ಗಳ ಪೊಂದಾವಗೆಯ ಕೆನ್ನೆಯ್ದಿಲ । ಕಳಿಕೆಯ ಚಿತ್ರವರ್ಣಗಳಿಂದೆ ॥
ಸಲೆ ರಂಜಿಸಿದುದು ಬನಕೆಂದ್ರ ಧನು ಮಂ। ಡಲಮಾಗಿ ಕೆರ್ಗಟ್ಟಿದಂದದೆ ॥ (52)

ಸರಸಿಜಮೊಗವಾಗೆ ತಳಿರಂಘ್ರಿತಳವಾಗೆ । ಯರೆ ಗಿಳಿವಾತು ನಲ್ನುಡಿಯಾಗೆ ॥
ಅರಲ್ದ ಮಲ್ಲಿಗೆ ನೋಟವಾಗಿರೆ ಮಧುಗಾಜ । ನರಸಿಯಂತಾಬನ ಮೆಸೆದುದು ॥ (53)

ಜನಪ ಕೇಳೀ ಪರಿಯೊಳು ರಂಜಿಸುವು ಪವ । ನವನಿರೀಕ್ಷಿಸುತೆಳ್ತಂದು ॥
ವನಿತೆ ಪರವೆಗೂಡಿ ಕಂಡನಾ ನೃಪತಿ ನೂ । ತನವಪ್ಪಲತೆಯ ಮಂಟಪವನು ॥ (54)

ತಳಿರ ಕಾವಣದಿಂದೆ ಪನ್ನೀರ ಚಳೆಯದೆ । ಪೊಳೆವ ಕಪ್ಪುರ ವೇದಿಕೆಯಿಂದೆ ॥
ಥಳಥಳಿಪಾವನ ಲತೆಯೊಳಗೆಸೆವ ಚೆಂ । ದಳಿರ್ವಸೆಗೆಳ್ತಂದ ಸತಿಗೂಡಿ ॥ (55)

ತುಂಬುರ ಮಂತ್ರಿ ಕುರುಂಬ ನೃಪತಿ ಚಂದ್ರ । ಬಿಂಬಾಸ್ಯೆ ಪರವೆಯರೊಡಗೂಡಿ ॥
ನಂಬಿ ಮಂಡಿಸಿದ ಮಂಟಪದೊಳು ಕಾಂತಕ । ದಂಬದಿಂದೊಡ್ಡೋಲಗ ವಿತ್ತು ॥ (56)

ಗಿರಿಜೆಯ ಮೆಯ್ಗಂಪಿಗೆರಗುವ ತುಂಬಿಯಿಂ । ಚರವಶ್ವತರ ಗಾನ ರಸದೊಳು ॥
ಬೆರೆದು ಕಿವಿಗೆ ರಂಜಿಸೆ ತಲೆದೊಲೆವ ಶಂ । ಕರ ಶಾಂತ ಮಲ್ಲಿಕಾರ್ಜುನ ಜಯ ॥ (57)

ಚರಮ ಶರಣಾಗ್ರಣಿಯ ಕೃತಿಯ ವಿಸ್ತಾರವ । ಮಾಳ್ಪರಾದರಿಪರ ॥
ತಾರಕರ್ಗುಳ್ಳನ್ನವರ ಮಲ್ಲಿಕಾರ್ಜುನ । ನೋರಂತೆ ಪಾಲಿಪ ನೊಲವಿಂದೆ ॥ (58)

ಅಂತು ಸಂಧಿ 14 ಕ್ಕಂ ಪದನು 775 ಕ್ಕಂ ಮಂಗಳ ಮಹಾಶ್ರೀ.

(ಹದಿನಾಲ್ಕನೆಯ ಸಂಧಿ ಸಮಾಪ್ತಂ.)

ಹದಿನೈದನೆಯ ಸಂಧಿ-

ಪನ್ನಗಸೂತ್ರ ಪಾವಕನೇತ್ರ ಸುಚರಿತ್ರ । ಕಿನ್ನರೇಶ್ವರ ಮಿತ್ರ ಸಿತಗಾತ್ರ ॥
ಸನ್ನುತಿ ಪಾತ್ರ ಸಂಸಾರ ವಾರ್ಧಿ ಬಹಿತ್ರ । ಮನ್ನಾಥ ಜಯ ಮಲ್ಲಿಕಾರ್ಜುನ ॥ (1)

ಎಳೆದುಂಬಿಗಳಂ ತೆಗೆದಂತೆ ಸೊಗಸರೆ। ಗಿಳಿವಾತಿನಂತೆ ಮೋಹನದಿಂಪು ॥
ಕಳಕಂಠರವದಂತೆ ನಯವಾದುದೆಯ್ದೆ ನಿ । ನ್ನೊಳುನುಡಿ ವಿರುಪಭೂವರ ಚಂದ್ರ ॥ (2)

ಕಣ್ದುಂಬಿಯ ಬಾಜ ದೋರ್ಲತೆಯಡರ್ಪೆನ್ನಿನಿ । ವಣ್ದುಟಿಯರೆಗಿಳಿ ಗುಣಮಣಿ ।
ಜಾಣ್ದಳೆದೆರ್ದೆ ಪಿಂಗದಾಡುಂ ಬೊಲನಪ್ಪ । ಪೆಣ್ದಲೆ ರನ್ನವೆ ಕತೆಗೇಳ ॥ (3)

ಅರಸಕೇಳಾ ಸೌಂದರ ಪರವೆಯರತಿ । ಹರುಷದೊಳೊಡನಿರ್ದ ಸತಿಯರ ॥
ಪರಿಮಳವಾಂತ ನಾನಾ ಪುಷ್ಪತತಿಗಳ । ಶರವೇಳೆ ಪೋದರುತ್ಸವದಿಂದೆ ॥ (4)

ಅಲರ್ಮುಡಿಗೆರಪಳ ಯಿಂಚರನೇವುರ । ದುಲಿಗಳೆಣ್ದೆಸೆಗಳ ಪಸರಿಸೆ ॥
ಲಲನಾಜನಮನ ಪುಷ್ಪಾಪಚಯಕೆ ಮನ । ವೊಳದೆಳ್ತಂದರುತ್ಸವದಿಂದೆ ॥ (5)

ಲತೆಯೊಳು ತನುಪುಷ್ಪಮಂಜರಿಯೊಳು । ನ್ನತ ಕುಚವಕ್ಷಿಯಾರಡಿಯೊಳು ॥
ವಿತತಪಲ್ಲವದೊಳು ಕರವೊಪ್ಪೆ ಲತೆಯೊಳು । ಲತೆಯುವೊಲವರು ಪೊದಿರಿದರು ॥ (6)

ಸುರಭಿಯ ಸ್ಥಿರವರ್ಣವಸ್ಥಿರಮಿಕ್ಕಿದೆ । ಲರುಗಳೆ ಬಾಳ್ತಿಯೆಂದೆಯ್ದೆ ॥
ಸುರಭಿಯ ಬಳಮುಗುಳ್ಗಳನಾಯ್ದು ಕೊಯ್ದಳು । ಹರಿಣ ಲೋಚನೆಯೋರ್ವಳೊಲವಿಂದೆ ॥ (7)

ನೀರಜಮುಖ ಕುಂಕುಮಲಿಪ್ತಗಾತ್ರನ । ವಾರುಣ ಕರ ಪಲ್ಲವದಿಂದೆ ॥
ತೋರಮಲ್ಲಿಗೆಯ ಕೊಯ್ದಳು ಪೂರ್ವಸಂಧ್ಯಾ । ನಾರಿತಾರಗೆಗಳ ತಿರಿವಂತೆ ॥ (8)

ಅಳಿಯೆ ತಿವಳ ಮೊಗಕಡರೆ ಬಲ್ಮೊಲೆ ನಡು । ಮಿಳಿರೆ ಕಣ್ಬ್ಯಾಳಿಘಾಗಕಳಿ ॥
ನಳತೋಳ ನಿಡಿವುಂಗುಟವೂರಿ ತಿರಿದಳೊ । ವರ್ಳಿವೆಣ್ಣು ಪುನ್ನಾಗದ ಪೂವ ॥ (9)

ಜನಿಸುತೆ ನರುಗಂಪುಗೂಡಿ ರಂಜಿಪುದಿದ । ನನುಕರಿಸದೆ ಪೂಬಂಡಿಗೆ ॥
ಮನವೀವುದು ತುಂಬಿ ಮಧುಪನಾದುದರಿಂ । ದೆನುತೊರ್ವಳಾಯ್ದಳು ಮರುಗವ ॥ (10)

ಮಧುವಾಂತುದು ಮಧುಸಖ ಬಾಣವಾದುದು । ಮಧುಪಾಳಿಗಾದುದು ನೆಲೆವನೆ ॥
ಮಧುದೂತಿಯೆಂದು ನಿಂದಿಸಿ ತಲೆಯರಿವಂತೆ । ವಧುಗಳಾಯ್ದರ ಮಲ್ಲಿಗೆವೂವ ॥ (11)

ತರಳೆಯೊರ್ವಳು ಕೊಯ್ದು ಪಿಡಿಯೆ ಕೆಂದಳದೊಳು । ವರಕ ಮೂಲದ ಕೊನರೆಸೆದವು॥
ಅರುಣಾಬ್ಜ ಮಕರಂದವ ನೀಂಟುವ ಮಧು । ಕರಗಳ ಸಂಕುಳ ವೆಂಬಂತೆ ॥ (12)

ಅಂಗಹೀನನೊಳು ಕೈಗೂಡಿದ ದೋಷಿಯ । ಸಂಗಕೆ ನಲಿವ ಮಿತ್ರದ್ರೋಹ ॥
ಸಂಗಡಿಸಿದ ಗುಣವಾಂತುದೆಂದುಡಿವ ವೊ । ಲಂಗನೆಯ ಸಿತಾಬ್ಜದಿರಿದಳು ॥ (13)

ಉಸುರ್ಗಂಪಿಗೆರಗುವಳಿಯನಿಕ್ಕೈಯ್ಯಿಂದೆ । ಬಿಸಜವದನೆ ಸೋವುತಿರ್ಪಾಗ ॥
ಮಿಸುಗುವ ನೀಲದ ಕಿರಿಕಲ್ಲನಾಡುವಂ। ತೆಸೆದಳು ಪುಷ್ಪಾಪಚಯದೊಳು ॥ (14)

ಶಶಿಮುಖಿಯರು ಚಂಪಕಕರ್ಣಿಕಾರದ । ಪೊಸನೆಯ್ದಿಲ ನವ್ರಗಂತಿಯ ॥
ಬಿಸಜದ ಪಾರಿಜಾತದ ಬಿಡ್ಡುಳಿಗಳ ಕುಸುಮವ । ತಿರಿದರಕ್ಕರು ಮಿಗೆ ॥ (15)

ಬಿಡುಮುಡಿ ಸಡಿಲ್ದುಡೆ ಪರೆದ ಕುರುಳು ಬೆಮ । ರಿಡಿದಂಗ ಜಾರಿದ ಮೇಲುದು ॥
ನಿಡುಸುಯ್ಲು ಕೊರಗಿದ ಮೊಗಗಳಂ ಬಂದರು । ಮಡದಿಯರಖಿಲ ಪುಷ್ಪವನಾಂತು ॥ (16)

ಸರಸಿಜವದನೆ ಕೈರವನೇತ್ರೆ ಕೇತಕಿ । ಕರಜಾತೆ ಕುಂದಕೋರಕದಂತೆ ॥
ವರಚಂಪಕೋದ್ಗಮಗಂಧಿಯೋರ್ವಳು ಕೊಟ್ಟ । ಳರಲನುಚಿತಮೆನೆ ನೃಪತಿಗೆ ॥ (17)

ಬಿಸಜನೇತ್ರದಿ ಸುರ ಹೊನ್ನೆಯ ಮುಗುಳ್ಗಳ । ಶಶಿಮುಖಿಗೊರ್ವಳು ಸರಗಟ್ಟಿ ॥
ಒಸೆದಿತ್ತಳು ಪರಿಪುಳವಾಂತು ರಂಜಿಪ । ಪೊಸಮುತ್ತಿನೊಚ್ಚ ರವೀವಂತೆ ॥ (18)

ಸುಳಗುರುಳೊಡನಾಡಿಯೆನಿಸಿ ರಾಜಿಪ ತುಂಬಿ । ಗಳಗಿದು ಪಗೆಯಾದುದೆಂದೆಯ್ದೆ ॥
ಮುಳದು ಬಂಧಿಸಿದಂತೆ ಸರಗಟ್ಟಿಕೊಟ್ಟಳು । ಲಲನೆಗೊರ್ವಳು ಸಂಪಗೆವೂವ ॥ (19)

ಶಶಿಕದಿರೊಳ್ಕಾಸಿ ಮೊನೆ ಮಾಡಿ ಕಾವ ನಾ । ರ್ದೆಸಲೇರು ಸೂಡುಗಾಣಿಪ್ಪುದಿದು ॥
ಕುಸುಮನಾಯಕಗಳೊಳಧಿಕವೆಂದೀವಂತೆ । ಬಿಸಜದಲರನಿತ್ತಳೊರ್ವಳು ॥ (20)

ಬಂದಿ ಕಂಕಣ ಬಳೆ ಮೂಗುತಿ ಹೆರೆ ತಿಲ । ಕಂ ದಂಡೆ ಚಳಕೆಗೆ ಕಟಿಸೂತ್ರ ॥
ಅಂದುಗೆ ಮೊದಲಾದ ತೊಡವೆ ಪೆಂಗಳು ಪ್ರೂಗ । ಳಂದೆ ರಚಿಸಿಕೊಟ್ಟರರಸಿಗೆ ॥ (21)

ರಸವಿನಿತಿಲ್ಲದೆ ಬಿಣ್ಪಾಗಿ ಮಿರುಗುವ । ಪೊಸರನ್ನಗಳೆನೆ ಮೃದು ಲಘುವಾಗಿ ॥
ಎಸೆವಂತೆ ರಾಜಿಪ ಪೊಂದೊಡಿಗೆಯನಿತ್ತ । ವಸುಧೇಶ ಪರವೆಗಕ್ಕರು ಮಿಗೆ ॥ (22)

ಅನಿತರೊಳೆಲರಭೂಷಣಗಳನೊಡನಿರ್ದ । ವನಿತೆಯರಿಗೆ ಕೊಟ್ಟುತಾನಿಟ್ಟು ॥
ನನೆಯೊಂತ ಪೊನ್ನವ ನಿಳಿಕೆಯ್ವ ನೂ । ತನ ಲತೆಯಂತೆಸೆದಳು ಕಾಂತೆ ॥ (23)

ಇಂತೆಸೆದಿರ್ಪ ಪರವೆ ಸಹವಾಗಿ ಭೂ । ಕಾಂತಶಿರೋಮಣಿ ನಡೆತಂದ ॥
ಕಾಂತಾಜನದ ಗಡಣದಿಂದೆ ಸಿಂಗರ । ವಾಂತು ನಿರ್ಮಲವೆತ್ತ ಸರಸಿಗೆ ॥ (24)

ಅಲರ್ಗಳ ಪಸದನ ವಾಂತ ಕಾಮಿನಿಯರು । ಬಳಸಿ ಬರಲು ನೃಪನೆಸೆದನು ॥
ಚಲಿಸುವ ಕುಸುಮಲತೆಗಳೆಡೆಯೊಳು ಬರ್ಪ । ಲಲಿತ ಬಸಂತ ನೆಂಬಂದದೆ ॥ (25)

ಬಂದು ಕಂಡನು ಸೌಂದರೇಶ್ವರ ಫಲರನ್ನ । ದಿಂದ ಸಮೆದ ಸೋಪಾನದೆ ॥
ಕುಂದದೆಸೆವ ನೀರ್ವಕ್ಕಿಗಳುಲುಪಿನಿಂ । ದಂದವಡೆದ ಕಾಸಾರವ ॥ (26)

ಕಲಹಂಸಂಗಳರಮನೆ ಝೇಂಕರಿಪಳಿ । ಗಳೆಪಾನ ಕೇಳೀಗೃಹ ॥
ಮಲಯಾನಿಲನಾಡುಂ ಬೊಲನೆನೆ ಕಂ । ಗೊಳಿಪಿದುದಮಲಸರೋವರ ॥ (27)

ಹಿಮಕರವಾಗಿ ಶಿಶಿರಕಾಲವಲ್ತು ವಿ । ದ್ರುಮ ವೃತವಾಗಿ ಸಾಗರವಲ್ತು ॥
ಕಮಲಾಲಯವಾಗಿ ಹರಿಯುರವಲ್ತು ವಿ । ಕ್ರಮವಿದ್ದು ನೃಪತಿಯಲ್ತಾ ಕೊಳ॥(28)

ಈ ತೆರದಿಂದೆ ಕಂಗೆಸೆದಿರ್ಪ ಸರಸಿಯೊ । ಳಾ ತರುಣಿ ಜನದೊಳಗೂಡಿ ।
ಭೂತಳೇಶ್ವರ ಸೌಂದರೇಶ್ವರ ಪೊಕ್ಕ ಸಂ । ಪ್ರೀತಿಯಿಂದನೇನ ಬಣ್ಣಿಪೆ ॥ (29)

ದೇವಕನ್ನೆಯರೊಡ ನಂಬರನದಿಗೆ ಶ । ಚೀವರ ನಿಳವಂದದೊಳೊಲ್ದು ॥
ತಾವರೆಗೊಳನ ನಿಳಿದ ಚಿತ್ರಯಂತ್ರ ಕಂ । ತಾವಳಿ ಗುಡಿ ಸೌಂದರ ಭೂಪ ॥ (30)

ಬಿಸಜ ಮುಗಿಯೆ ನೆಯ್ದಿಲರಳೆ ಚಕ್ರಂಗಳ । ಬೆಸುಗೆ ಸಡಿಲೆ ತುಹಿನೋಪಲ ॥
ಒಸರೆ ಚಕೋರ ನಲಿಯೆ ಪೊಕ್ಕಳೊಲವಿಂದೆ । ಶಶಿಮುಖ ಪರವೆಯು ಸರಸಿಯು ॥ (31)

ಕಳಹಂಸೆಯೊಡನೆ ಮಾನಸ ಸರೋವರ ಕೆಳ । ವೆಳೆಯಂಚೆಗಳ ಮೊತ್ತವೆಂಬಂತೆ ॥
ಲಲಿತಾಂಗಿಯರಿಳಿದರು ಪರವೆಯು ಗೂಡಿ । ತಿಳಿಗೊಳಕತಿ ಸಂಭ್ರಮದಿಂದೆ ॥ (32)

ಅರೆಗಿಳಿಯಂಚೆ ಕೋಕಿಲಚಕೋರಿಗಳಂತೆ । ವಿರಚಿಸಿ ಕಣ್ಗೆ ರಾಜಿಸುತಿರ್ಪ ॥
ಹರಿತಮೌಕ್ತಿಕ ನೀಲ ವಜ್ರದ ಜಲಯಂತ್ರ । ಕರದೊಳೊಪ್ಪಿರೆ ಪೆಣ್ಗಳೆಸೆದರು ॥ (33)

ವಾರಿಜಾಸ್ಯದ ಚಕ್ರವಾಕಸ್ತನದ ವಿ । ಸಾರಿನೇತ್ರದ ಹಂಸ ಯಾನದ ॥
ನಾರಿಯರಧಿನಾಯಿಕಯು ರುಚಿತಪೆನೆ । ನೀರಾಟಕೆಳಸಿದರೊಲವಿಂದೆ ॥ (34)

ಪರವೆಯು ಕಣ್ಸನ್ನೆಯಿಂ ಕೆಲವರು ಸೌಂ । ದರನ ಕೈಸನ್ನೆಯಿಂದರೆಬರು ॥
ಪರಿಮಳ ದುದಕವನೋರೋರ್ವರ ಮೇಲೆ । ಪರಿದಾಡಿ ಭರದೆ ಸೂಸಿದರಾಗ ॥ (35)

ಧರಣಿಪ ಜಳಯಂತ್ರದೆ ಪೊಸಗತ್ತುರಿ । ವೆರದ ಜಳವನೊತ್ತೆ ಪರವೆಯ ॥
ಸಿರಿಮೊಗದೊಳು ಮುಸುಕಿದುದಾ ಜಲಧಾರೆ । ಸರಸಿಜಕಳವಾಲೆ ಕವಿದಂತೆ ॥ (36)

ಭಾವಕಿಯರು ಲೀಲೆ ಮಿಗೆ ಚಿತ್ರಯಂತ್ರದೆ । ಬಾವನ್ನ ಪೊರೆದ ಜಲವ ತುಂಬಿ ॥
ಭೂವರನಂಗಕೆ ಸೂಸಲೊಪ್ಪಿದ ಕುಳಿ । ರಾವರಿಸಿದ ಭೂಧರದಂತೆ॥ (37)

ಅಸಿಯಳೊರ್ವಳ ಮೇಲೆ ನರನಾಥ ಕಾಶ್ಮೀರ । ರಸವ ಸೂಸಲು ಚಿಕೊರ್ಳವಿಯಿಂದೆ ॥
ಎಸೆದಳ ಜಲಬಿಂದು ಮೆಯ್ದೊರಿ ನನೆಯೊಂತು । ವಿಸುಪ ಕೆಂಜಾಧಿಯ ಲತೆಯಂತೆ॥(38)

ಮದಕರಿ ಲೀಲೆಯೊಳೀಂಟಿ ಶುಂಡಾಗ್ರ ದಿಂ । ದುದಕವ ಸೂಸುವಂದದೊಳೊರ್ವ ॥
ಮೃದುಯಾನೆ ಪೀನ ಕುಂಭಸ್ತನಿ ಜಲಯುಂ । ತ್ರದೆ ನೀರ ಸೇದಿ ಸೂಸಿದಳಾಗ ॥ (39)

ಜಲವ ಚಿಕೊರ್ಳಯೊತ್ತಲರಸ ನೊರ್ವ । ಕೆಳದಿಯ ನಿಬಿಡ ಕುಚದ ಮೇಲೆ ॥
ಇಳಿಯಾದ ಜಲಮಿರೆ ಸಾರ್ಥಕವೆನಿಸಿತು । ಮೊಳಿಗೆ ಪಯೋಧರ ವೆಸರಾಗ ॥ (40)

ಮುಗುದೊಯೋರ್ವಳು ತವಕದೊಳಮಲಾಂಬುವ । ಮೊಗೆಯೆ ಕಳಸಕರತಳದಿಂದೆ ॥
ಜಗುಳೆ ಕರದೆ ನೀರೊಳಾಳ್ದಿಳ ಸತ್ರಿಯ ಮೊ । ಲೆಗೆ ಪಾಯ್ದಳಾ ಪೊಂಗೊಡನೆಂದು ॥ (41)

ಮಡದಿಯೋರ್ವಳು ಮರಕತಯಂತ್ರ ಶುಕನ ನೀ । ರೆಡೆಯೊಳದ್ದಿದಳೆನ್ನ ನುಡಿಗಿದು ॥
ಪಡಿಯಾಗಿ ಪುರುಡಿ ಪುದೆಂದದ ಪಿಡಿತಂದು । ಪುಡುಕು ನೀರದ್ದುವಾಯತದಿಂದೆ ॥ (42)

ತಿಳನೀರೊಳೊರ್ವ ಮಾನಿನಿ ತನ್ನ ಪಡಿರೂಪು । ಪೊಳೆಯೆ ಕಂಡದನನ್ಯ ಸತಿಯೆಂದು ॥
ನಳದೊಳ್ಗಳಂದ ಪಾಯ್ದಪ್ಪಲಿರ್ಕೆಲದ ಕೋ । ಮಳೆಯರು ನಕ್ಕರಾ ಮುಗುದೆಯ ॥ (43)

ತರುಣಿಯೋರ್ವಳು ಕುಚಜಲಕೇಳಿಯೊಳು ನಾಂದು । ಪರಿಮಳಪಂಗಲತೆಯ ಸುತ್ತೆ ॥
ವರಚಂದನ ಶಾಖೆಯು ಬಳಸಿದ ಕರ್ಪಿ । ನುರಗನೆಂಬಂತೆ ಕಂಗೆಸೆದುದು ॥ (44)

ನಳನದ ನವಕುಸುಮವ ಮುಸುಕಿದ ತುಂಬಿ । ಗಳ ಕಂಡು ನೀರೊಳಿರ್ದಬಲೆಯ ॥
ಕಳೆವೆತ್ತ ಮೊಗವ ಮುಸುಕಿದಳಕಗಳೆಂ । ದೆಳೆಯಳೊರ್ವಳು ತುಡುಕಿದಳಾಗ ॥ (45)

ಅಂಗನೆಯರ ವಂಚಿಸಿ ನೀರೊಳೊರ್ವಳ । ಡಂಗೆ ತತ್ಪರಿಮಳಕೆಳಸುವ ॥
ಭೃಂಗಾಳಿ ಸೂಚಿಸಿದುದು ಸತಿಯರ್ಗಾಲ । ತಾಂಗಿ ಮೆಯ್ಗರೆದಿರ್ದೆಡೆಯನು ॥ (46)

ತಳರ್ಗೆಯ್ಯಾಳಮರ್ದ ಕನಕಕಲಶವನೊರ್ವ । ಲಲನೆ ನೀರ್ದುಂಬುವುಜ್ಜುಗದಿಂದೆ ॥
ಮುಳುಗಿಸಲದು ಕಂಗೆಸೆದುದು ಕಡಲೊಳ । ಗಿಳಿವ ನೇಸರಬಿಂಬವೆಂಬಂತೆ ॥ (47)

ಅಳಕಾಳಿಯಿಂದೆ ಲೋಚನಕುಮುದದೆ ಮುಖ । ನಳನದೆ ಕುಚಚಕ್ರಮಿಥುನದೆ ॥
ಎಳೆವೆಂಗಳೆಸೆದ ರಂಗದ್ಯುತಿ ಸಲಿಲದೆ । ಕೊಳನೊಳು ಕೊಳನಾಡುವಂದದೆ ॥ (48)

ಜಲಕೇಳಿಯ ಮಾಣ್ದು ಸತಿಯರ ನಿಕುರಂಬ । ನಿಲೆ ತಾರೆಗಳ ಕಡುಕತ್ತಲೆ ॥
ಮುಳಿದುಗುಳ್ವಂದದೆ ಬಿಡುಮುಡಿಯುಗುಳವು । ಜಲಬಿಂದುಗಳ ನೋಡಲಾಗ ॥ (49)

ಪೊರಮಟ್ಟ ನಂಬಿ ಪೂರ್ವದೆ ಮಣಿಮುಕುರವ । ಪೊರಮಟ್ಟನಿಂತೆಂದು ಪರವೆಗೆ ॥
ಅರುಪುವಂತಧಿಕ ನಿರ್ಮಲ ಜಲಪೂರವ । ನರುಗಂಪುವೆರೆದ ಕಾಸಾರವ ॥ (50)

ಫಣಿಪತಿಯೊಡನೆ ರಸಾತಳದಿಂದೆ ನಾ । ಗಿಣಿಯರು ಪೊರಮಡುವಂದದೆ ॥
ಗಣನಾಥನೊಡನೆ ಪರವೆ ಮೊದಲಾದ ಪೆ । ಣ್ಮಣಿಗಳು ಪೊರಮಟ್ಟರುದಕವ ॥ (51)

ಎತ್ತರವೊಲೆ ನುಣ್ದೊಡೆ ಪೊರವಾರ್ಗಳ । ಪತ್ತಿದ ನಾಂದ ದುಗುಲದಿಂದೆ ॥
ಮತ್ತಕಾಶಿನಿಯರಡರ್ದರು ನವರತ್ನ । ತೆತ್ತಿಸಿ ಮರೆವ ಸೋಪಾನವ ॥ (52)

ಬೆಳತಥರದ ಬಿಗು ಹಿರಿದ ನೆರೆ ಮೊಲೆಗಳ । ನಸು ಗೆಂಪಾದ ಕಂಗಳ ॥
ಪುಳಕದಳೆದ ಮೆಯ್ಗಳ ಕುಟಿಲತೆ ಪಿಂ । ಗಳಕದ ಸತಿಯರೊಪ್ಪಿದರಾಗ ॥ (53)
ಅನುಲೇಪನ ಮಾಲ್ಯಾಂಬರ ರತ್ನ ಮಂ । ಡನಗಳ ನಾಂತು ಕಾಂತಾಳಗೆ ॥
ಮನಹಣಿವಂತಿತ್ತು ಸೌಂದರ ಗಣನಾಥ । ವನಭೋಜನ ಕುದ್ಯತನಾದ ॥ (54)

ಹರುಷದೆ ಪರವೆ ಕುರುಂಬ ತುಂಬುರ ಮಂತ್ರಿ । ವೆರೆಸಿ ಸೌಂದರ ಭೂಪ ಮಂಡಿಸಿ ॥
ಇರಲೀಶ ಪೂಜೆಗವರ ಮುಂದೆ ಪರಿಮಳ । ದಲರ ತಂದಿತ್ತುದುದಾಳ ಜನ ॥ (55)
ಎಲ್ಲರು ಶಿವಪೂಜೆಯ ನೊಡರಿಸೆ ಭೂ । ವಲ್ಲಭ ಸುಮ್ಮನಿರಲು ಕಂಡು ॥
ಮೆಲ್ಲನೆ ಪರವೆಯೊಡನೊರ್ವ ಲಲಿತಾಂಗಿ । ಸೊಲ್ಲಿಸಿದಳು ನಸುನಗೆಯಿಂದೆ ॥ (56)

ಅಂಗನೆ ಕೇಳೇನು ಕಾರಣ ನೃಪ ತನ್ನ । ಲಿಂಗಕರಳನರ್ಚಿಸನೆನೆ ॥
ಭೃಂಗಾಳಕಿ ಪೇಳ್ದಳು ಸೌಂದರ ಭೂಪ । ನಿಂಗಿತದಿರವ ನವಳ ಕೂಡೆ ॥ (57)
ಏನೆಂಬೆನೀ ಸೌಂದರ ಭೂಪ ಲಿಂಗವ । ದಾನಿ ಶಿವಾರ್ಚನೆಗಳ ತನ್ನ ॥
ಮಾನಸದೊಳು ಮಾಡುವನದರಿಂದೀಶ । ನ ನೀಸನೆಯೆಂವಳು ಕಾಂತೆ ॥ (58)

ಎನುತೆ ಪರವೆ ನಂಬಿಯು ಮುಂದಣಾರಲನಾ ವನಿತೆಯು ಕೈಯಿಂದ ತೆಗೆಯಿಸೆ ॥
ಅನುಪಮಕಾಂತಿಯೆಸಕದಿಂದೆ ಲಿಂಗವ । ನನೆಯೆಡೆಯೊಳಗೆ ರಂಜಿಸಿದುದು ॥ (59)
ಕಂಡು ಕುರುಂಬ ತುಂಬುರ ಮಂತ್ರಿ ಹೆಂಗಳೆ । ತಂಡ ಪೂವಿನೊಳರ್ದ ಲಿಂಗವ ॥
ಕೊಂಡಾಡಿದರರಸನ ಪಾದಪದ್ಮಕೆ । ಮಂಡೆಯೆರಗಿ ಸಂತಸದಿಂದೆ ॥ (60)

ಅಂದು ಪರವೆ ನಾಚಿಯು ಗುರುಕುಚದೊಳ । ಗಿಂದು ನವೀನ ಕುಸುಮದೊಳು ॥
ಇಂದುಧರನ ತೋರಿದ ಮಹಿಮಾತ್ಮಕ । ನೆಂದು ನಂಬಿಯು ಪೊಗಳದರಾಗ ॥ (61)
ಜನಪತಿ ಕೇಳು ಸೌಂದರ ಪರವೆಯುರು ಭೋ । ಜನವನೊಡರ್ಚಿ ಸಂಭ್ರಮಮಿಗೆ ॥
ವನದಿಂದೆ ಪೊರಮಟ್ಟು ಬಂದಳ್ತಿಯಿಂದರ । ಮನೆಯೊಳು ಸುಖವಡೆದಿರ್ದರು ॥ (62)

ಗಿರಿಜೆಯ ಮೆಯ್ಗಂಪಿಗೆರಗುವ ತುಂಬಿಯಿಂ । ಚರವಶ್ವೇಶರಗಾನ ರಸದೊಳು ॥
ಬೆರೆದು ಕಿವಿಗೆ ರಂಜಿಸೆ ತಲೆಯೊಲೆವ ಶಂ । ಕರಶಾಂತ ಮಲ್ಲಿಕಾರ್ಜುನ ಜಯ ॥ (63)
ಚರಮ ಶರಣಾಗ್ರಣಿಯು ಕೃತಿಯ ವಿಸ್ತಾರವ । ಮಾಳ್ಪರಾದಿಪರ ॥
ತಾರರ್ಕರುಳ್ಳನ್ನವರ ಮಲ್ಲಿಕಾರ್ಜುನ । ನೋರಂತೆ ಪಾಲಿಪನೊಲವಿಂದೆ ॥ (64)

ಅಂತುಸಂಧಿ 15 ಕ್ಕಂ ಪದನು 839 ಕ್ಕಂ ಮಂಗಳಂ ಮಹಾಶ್ರೀ.

ಹದಿನಾರನೆಯ ಸಂಧಿ-

ನೀಲಕಂಧರ ಮೇರು ಮಂದಿರ ಗಿರಿಜಾ । ಲೋಲ ಕಪಾಲರಂಜಿತಕರ ॥
ಕಾಲವಿನಾಶ ಗಗನಕೇಶ ಫಣಿಭೂಷ । ಪಾಲಿಸೆನ್ನನು ಶಾಂತಮಲ್ಲೇಶ ॥ (1)
ಮಸದೊಪ್ಪವಿಟ್ಟ ಮಾಣಿಕದಂತೆ ಚೈತ್ರದೊ । ಳ್ಮಸುಪ ಬೆಳ್ದಿಂಗಳ ಸಿರಿಯಂತೆ ॥
ಪೊಸಬಗೆ ವೆತ್ತು ರಂಜಿಪುದು ನಿನ್ನೊಳು ನುಡಿ । ಕುಸುಮಾಸ್ತ್ರರೂಪವಿರುಪ ಭೂಪ ॥
[(2)

ಅಂಗಜನೃಪನ ಮಾರಾಂಕದ ಮದ್ದಾನೆ । ಶೃಂಗಾರದಮೃತ ರಸದ ಸೋನೆ ॥
ಕಂಗಳ ಸಿರಿಯೆ ತಿಂಗಳ ತಿಳಿಜೊನ್ನವೆ । ಹೆಂಗಳ ರನ್ನವೆ ಕತೆಗೇಳ ॥ (3)
ಆ ಸಮಯದೊಳಪರಾಬ್ಧಿಯ ಸಾರ್ದುದು । ನೇಸರಬಟ್ಟೆ ನಿರ್ಜರಪತಿ ॥
ರೋಷದೊಳಸ್ತಗಿರಿಯ ನಿಡಲೊಡನಪ । ಗಾಸೆಯ ಸಾರ್ದಕುಲಿಶದಂತೆ ॥ (4)

ಸುರಮಂದಿರ ತರು ಗಿರಿಶಿಖರಾಗ್ರದೆ । ಪರಕಲಿಸಿದ ಬಿಸಿಲೆಸೆದುದು ॥
ಇರದುಚ್ಚದೇಶವನೇರಿ ಸೂರ್ಯನ ಗುಪ್ತ । ಚರರೆಯ್ದ ತಮದೊಡ್ಡ ನೊಳ್ವಂತೆ ॥ (5)

ಅಗಲಲಾರದೆ ಪದ್ಮಿನಿಯನವಳಂಗದಿಂ । ತೆಗೆದು ಪರಾಗಾಂಗರಾಗವ ॥
ಮಿಗೆ ತನ್ನ ತನವಿಗಂ ಪಿಟ್ಟಂತೆ ಯಾಸ್ತದೊ । ಳೊಸ್ಸಗಸಿತು ರವಿಬಿಂಬದರುಣಿಮ ॥ (6)

ಗಗನರಂಗ ದೊಳುವ್ವಾಳಸಿ ಬಳಲಿಬ । ಶ್ವಗಳೇಳೆ ನೀರುಣಿ ಸುವೆನೆಂದು ॥
ಮಿಗೆ ಜಲನಿಧಿಗಿಳವಂತಿಳದುದು ಕಿರ । ಣಗಳ ಕದಂಬ ನೇಸರಬಿಂಬ ॥ (7)

ದಿವಸಾಧಿಪತಿ ಮೂಡವೆಣ್ಣನಗಲಿ ಬಂದು । ತವಕದೊಳೆನ್ನ ಕೂಡಿದನೆಂದು ॥
ತವೆ ಪಶ್ಚಿಮಾಂಗನೆ ತಾಳ್ದನುರಾಗವೆಂ । ಬವೊಲು ಸಂಧ್ಯಾರಾಗವೆಸೆದುದು ॥ (8)

ಇದು ಚಕ್ರವಾಕದ ವಿರಹಾಗ್ನಿಯೆಸಕವೊ । ಇದು ಜಾರೆಯರ ರಾಗದೆಳೆಯೊ ॥
ಇದು ದೆಸೆವೆಣ್ಣಾಂತ ರತ್ನ ಭೂಷಣಕಾಂತಿ । ಯೊದವೆನೆ ಸಂಜೆಗೆರಿ ವೆಸೆದುದು ॥ (9)

ರವಿಕರಕವಚ ತೊಲಗೆ ಕಾವ ತೆರಹುಗಂ । ಡವಸರವರಿದೆಚ್ಚವೆನೆಂದು ॥
ತವಕದೊಳಪ್ಪಿ ತಲ್ಲಣದೆ ಚುಂಬಿಸಿಯುಗಳ್ದವು ಕೋಕಮಿಥುನ ಸಂಚಯುಗಳು ॥(10)

ಪಡುನೇಸರು ಗಾಣಾತೆಣ್ವಕ್ಕಿ ವಿರಹಾಗ್ನಿ । ಯೊಡಲ ನಾವರಿಸೆ ಪಾಲಿದವೆಂತೊ ॥
ನಿಡುಸುಯ್ಯಗಾಳಿ ಕೊಂಡಾಡಿದ ವ್ರೊಂದನೆಂ । ದೆಡೆಗಲ್ಲದವು ಪಾರಲಾರ್ಪವೆ ॥ (11)

ಸ್ಮರಶರಘಾತವಿಲ್ಲದ ನಲ್ಲರಗಲದ । ತರುಣಿಯು ಸಮಿಸದೆಡೆ ಯೊಳೊಲ್ದು ॥
ಸರಸಿಜೋದ್ಭವ ಮಜ್ಜನನದ ನೆಂದು ಕೊ । ರಗಿದವೆಣೆ ವಕ್ಕಿಗಳ ತಂಡ ॥ (12)

ಕಮಲದಳದ ಪೀಠದೊಳೊಲ್ದು ತನ್ನಯ । ರಮಣಿಯುಗಲಿ ಸೋಂಕೆ ಕುಳ್ಳಿರ್ದ ॥
ಭ್ರಮರಗಾನವ ಕೇಳ್ವ ಸೌಖ್ಯವ ನೆನೆದು ವಿ । ಭ್ರಮ ಗೊಂಡುದೊಂದು ಬಿಸಿಲ್ವಕ್ಕಿ ॥ (13)

ತೊಳಗಲಿನ ಪ್ರಿಯ ಪದ್ಮಿನಿ ತನ್ನಿರ್ದ । ಯೊಳು ಸಯ್ತಿಂಬಿಟ್ಟು ಮಧುಪನ ॥
ನಲವಿಂದ ಕುಡಿದಳೆಂಡೆನೆ ಜಗದೊಳು ಲಲ । ನೆಯರೊಲವ ನಚ್ಚುವ ಗಾಂಪ ॥ (14)

ಅಲರ್ವ ಕನ್ನೆಯಿದ್ದಲೆ ಮುನಿವಂಬುಜ ಕಳ್ಳ । ಗಳು ರಾಜ ಭೀತಿಯಿಂದಿರ್ಪರ ॥
ಒಲವಾಂತಿರ್ಪರ ಮನೆಗೆಯ್ದುವ ಬಂಧು । ಗಳವೊಲು ಸುಳಿದಾಡು ತಿರ್ದವು ॥ (15)

ರವಿಪಥ ಪಡುಗಡ ಲೊಳ್ಬೆಳಲೊಗೆದಾ । ರವ ದೆಸೆಗಳ ತೀವಿತೆಂಬಂತೆ ॥
ಶಿವಭವನಗಳೊಳು ಶಂಖಭೇರೀಧ್ವಾನ । ವವಿರಳವಾಗಿ ರಂಜಿಸಿದುದು ॥ (16)

ಖರಕರತಾಪದೆ ಬೆಂದು ಕಂದಿಪಂ । ಬರಭೂಮಿ ದೆಸೆಗಳೆಂಬಂದದೆ ॥
ಉರವಣೆಯಿಂ ದಶದಿಶೆಯ ನೆಲ್ಲವ ಪರ್ಬಿ । ಪರಕರಿಸಿದುಧು ಮರ್ಬಿನಗುರ್ಬು ॥ (17)

ಮೃಗವೆಲ್ಲ ಕೃಷ್ಣ ಮೃಗಗಳೆನೆ ನದಿಯಲ್ಲ । ಜಗುನೆಯೆಂದೆನೆ ಪಕ್ಷಿಗಣವಲ್ಲ ॥
ಮಿಗೆ ಕೋಕಿಲವ್ರಜವೆನೆ ಗಿರಿತತಿನೀಲ । ನಗ ಮೆನೆ ಮರ್ಬು ಪರ್ಬಿದುದಾಗ ॥ (18)

ಅತಿಶಯತ್ರಮದುರ್ವು ಬಯಲೊಳೆ ನೆಲೆವರ್ಚಿ । ಹಿತವಾದುದು ಜಾರಚೋರರ್ಗೆ ॥
ಕ್ಷಿತಿಯೊಳು ದುರ್ಜನಗಾದ್ಯೆಸಿರಿ ದುಷ್ಟ । ತತಿಗಲ್ಲದೆ ಸುಖಮೀವುದೆ ॥ (19)

ಧರೆಯನೆಲ್ಲವ ಮುಸುಕಿದ ತಿಮಿರವ ಕಂಡು । ಹರುಷದಿ ಜಾರೆಯರೊಲವಿಂದೆ ॥
ಪರಸಿದರಿದಿರ್ಗೊಂಡರಪ್ಪಿದ ಲೆಳಸಿದ । ರೆರೆದರಾ ನಂದಿಸಿದರು ಕೂಡೆ ॥ (20)

ನವನೀಲ ಚೇಲವ ನುಟ್ಟು ನೀಲದ ಭೂಷ । ಣವ ತೊಟ್ಟು ಕತ್ತುರಿಯಂ ಪಿಟ್ಟು ॥
ತವಕದೆ ಜಾರರೆಡೆಗೆ ಜಾರೆಯರು ಪೋದ । ರವಿರಳ ನೀಲ ಪುತ್ರಿಕೆಯಂತೆ ॥ (21)

ಪರಿಯಲೊಯ್ಯನೆ ಸಂಧ್ಯಾರಾಗ ಜವನಿಕೆ । ಹರುಷದೆ ರಾತ್ರಿನರ್ತಕಿ ಪೊಕ್ಕು ॥
ಭರದೆ ಪುಷ್ಪಾಂಜಲಿ ಗೆಯ್ದುವೊಲೆಸೆದುದ । ಸುರವರ್ತ್ಮರಂಗ ದೊಳುಡುರಾಜ ॥ (22)

ಒಡವಿದ ತಿಮಿರಾಳಿ ಕುಲವನಟ್ಟುವ ಚಂ । ಕದ ಮೊಗ್ಗೆಯೆನಿಸಿ ಶೋಭೆಯ ತಾಳ್ದು ॥
ಸದನಗಳಂತರದೊಳು ರಂಜಿಸಿದುದು । ಸದಮಳ ಮಣಿದೀಪ ಸಂದೋಹ ॥ (23)

ವಿರಹಿಗೆ ಶರಧಿಗೆ ಕೆಚ್ಚು ಬೆಚ್ಚರೆ ಪಂ । ಕಳುಹ ಕೈರವ ಕೆರೆ ಪಗೆ ನಗೆ ॥
ಉರುದುಃಖ ಹರುಷ ಕೋಕ ಚಕೋರಿಗೆರೆನಿ । ರರುಹಾರಿ ಪೂರ್ವಾದ್ರಿಯೇರಿದ ॥ (24)

ಅರುಣ ಕಿರಣ ಪಲ್ಲವಗಳ ನಗ್ರದೆ । ಧರಿಸಿದ ಪೂರ್ವಾದ್ರಿ ಕಳಸದ ॥
ಸಿರಿವೆತ್ತು ಪೊಳೆವ ಕನ್ನಡಿಯೆನೆ ಥಳಥಳ । ಪರವಿಂದರಿ ಪುಬಿಂಬ ಮೆಸೆದುದು ॥ (25)

ಓರ್ವೆ ಸಿಂದೂರ ಕಾಂತಿಯ ನಾಳಗೊಂಡು ಮ । ತ್ತೊರ್ವೆ ಪೊಂಬಣ್ಣವನಿಳಗೆಯ್ದು ॥
ಓರ್ವೆ ಗಂಗಾಫೇನವ ದೆಸೆದುದು । ವೆರ್ವೆಯಿಂದಂಬುಜ ರಿಪುಬಿಂಬ ॥ (26)

ಇದಿರೆಯ್ದಿ ಮಿಗೆ ಬಿಗಿಯಪ್ಪಿರ್ದನೊ ಕಾವ । ಮುದದೆ ನೀಲದ ಹಾರವನು ಚೈತ್ರ ॥
ಪದಪಿನಿಂ ತಂದಿಕ್ಕಿ ದದೊಯೆಂಬ ಬಗೆಯೊ । ಳೊಪ್ಪಿದುದಂಶ ಚಂದ್ರಮಂಡಲ
[ದೊಳು ॥ 27 ॥

ಶಶಿ ನಿಶಾಂಗನೆಯ ಸೋಂಕಲು ಪೋದುದು ಸಂಜೆ । ವಸನದಂತಬ್ಜಾಕ್ಷ ಮುಗಿದವು ॥
ಎಸೆದವು ತಾರಾಳಿ ಬೆಮರಂತೆ ಶಶಿಕಾಂತ । ವೊಸರ್ದುದು ಮದನಾಂಬುವಿನಂತೆ ॥ (28)

ಮೃಗಧರ ಪನ್ನಗಾಶನನ ಬರವ ಕಂಡು । ಗಗನ ಚಂದನ ತರು ಶಾಖೆಯ ॥
ಬಿಗಿದು ಸುತ್ತಿದ ಕಾಳ ತಮವೆಂಬ ಗಾಥೋ । ರಗ ನೋಡಿ ಪೋದುದಾ ಕ್ಷಣ
[ದೊಳು ॥ (29)

ಆ ಸತಿಯರಂಬಕ ಶಫರವನಂಥತಾ । ಮಸವಾರಿ ನಿಧಿಯೊಳು ಪಿಡಿವೊಡೆ ॥
ಕುಸುಮಾಸ್ತ್ರನೆಂಬ ವಾಗುರಿಕ ಬೀಸಿದ ಜಾಲ । ಮೆಸವಂತೆ ಪರೆದೆಸೆದುದು ಜೊನ್ನ ॥ (30)

ಕೊರಲೆತ್ತಿ ಬಾಯ್ದೆರದರೆ ಮುಚ್ಚಿ ಕಂಗಳ । ಪರೆದೆಳಲುವ ಪಕ್ಕಗಳಿಂದೆ ॥
ತರಳತೆಯಾಂತು ಮೆಯ್ಯನಿರುಟುವ । ವಿರದೆಚ ಕೋರಿ ಚಂದ್ರಿಕೆಯನು ॥ (31)

ಅರಸಲು ಪುರುಷೋತ್ತಮ ನಮೃತಾಬ್ಧಿಯ । ನರಸಲು ರಜತಗಿರಿಯ ಶಂಭು ॥
ಅರಸಲಾ ಮರಣವಾರಣವ ಗೋತ್ರಾರತಿ । ನೆರೆವೆರೆಗದಿರು ಕೊರ್ವಿದುದಾಗ ॥ (32)

ಈ ಪರಿಯವಿರಾಜಿಪ ಬೆಳುದಿಂಗಳೊ । ಳಾಪೀಠ ಮರ್ದ ನಾದಿಗಳೆಲ್ಲ ॥
ರೂಪಾಂತ ಮದನ ಸೌಂದರನ ಸಂಚರಿಪರೆ । ಭೂಪಕೇಳ್ಕರೆಯಲಿಂತನುವಾದ ॥ (33)

ಪರಿತೋಷ ದಿನಾ ಸಮಯದೊಳಗೆ ಸೌಂ । ದರ ನೃಪ ವಸ್ತ್ರ ಭೂಷಣಗಳ ॥
ಅರಲಮಾಲೆಯನನುಲೇಪನ ವಾಂತು ತುಂ । ಬುರ ಕುರುಂಬ ನೋಡಿ ಪೊರಮಟ್ಟ ॥ (34)

ಹರಶರಣಾಗ್ರಣಿ ಭೂಪ ಸೌಂದರ ಸಿರಿ । ಗರದೆ ಮೆರೆವ ಸೂಳೆಗೇರಿಗೆ ॥
ವರವಿದೂಷಕ ಪೀಠ ಮರ್ದನಾ ವಿಟನಾ । ಗರಿಕರು ಸಹವಾಗಿ ನಡೆತಂದ ॥ (35)

ಸುರತಾಂತದೊಳು ಬಳಲ್ದರ ಮುಡಿಯ ಕಂ । ಮ್ಮಲರಂಪು ಬೆಮರ್ದಂಪುಗಳನಾಂತು ॥
ಗುರುಕುಚ ದಿಡುಕುರೊಳೊಯ್ಯನೆ ಬಂ । ದರಸನನು ಸೋಂಕಿದು ದೆಳೆಗಾಳಿ ॥ (36)

ಕಂಜಾಸ್ತ್ರನ ನೆಲೆವನೆ ನರುಗಂಪಿನ । ಪುಂಜ ದೆಸಕವೆಳೆಗಾಳಿಯ ॥
ಮಂಜುಳ ಬೀಡಿದೆನಿಸಿ ಸಿಂಗರವಾಂತು । ರಂಜಿಪ ಸೂಳೆಗೇರಿಯ ಪೊಕ್ಕ ॥ (37)

ಕಂಡನಾ ಸೂಳೆಗೇರಿಯೊಳೆಳೆ ಪೆಂಗಳ । ತಂಡವ ನರುಗಂಪಿನಲರ್ಗಳ ॥
ದಂಡೆ ಚಿತ್ರಾಂಬರವನುಲೇಪನ ಮಣಿ । ಮಂಡನವಾಂತು ಕಣ್ಗೆಸೆದಿರ್ಪ ॥ (38)

ಅರೆವರು ಮದನಾಗಮ ಗೋಷ್ಠಿಯಿಂದೆ ಮ । ತ್ತರೆವರು ತೂರ್ಯತ್ರಯದಿಂದೆ ॥
ಅರೆವರು ಚದುರಂಗನೆತ್ತ ಜೂಜುಗಳಿಂದೆ । ಇರೆ ಕಂಡ ಸೌಂದರಗಣನಾಥ ॥ (39)

ಮಲಯಜದಣ್ಪಿಟ್ಟು ಪೊಸದುಗುಲವ ನುಟ್ಟು । ತೊಳಗುವ ಮುತ್ತಿನ ಸರದೊಟ್ಟು ॥
ಬೆಳುದಿಂಗಳು ರೂಪುವಡೆದಂತೆ ರಂಜಿಸು । ತೆಳೆವೆಂಗಳಿರೆ ಕಂಡನಾನಂಬಿ ॥ (40)

ತೊಳಪಕೇಸಡಿಗಳ ಮೆಲ್ನಡೆಗಳ ಚೆಂಬ । ವಳದುಟಿಗಳ ಪೆಂಗಳೆಸೆದವು ॥
ತಿಳಜೊನ್ನದೊಳರ ಸಂಚೆಗಳಿಂಗಡ । ಲೊಳಗಾಡುವಂತೆ ನೃಪನ ಕಣ್ಗೆ ॥ (41)

ನುಯ್ಯಲಾರಡಿಗಳ ನುಯ್ಯಲಾಡಿಸೆ ಕಾವ । ನೊಯ್ಯೊ ಕುಸುಮಚಾಪಕೆ ಕೆಯ್ಯ ॥
ಮೆಯ್ಯೊಲಪಿಗೆ ರಯ್ಯಮಾಗೆ ಹಾರಗಳೊರ್ವ । ಳುಯ್ಯಲಾಡಲು ನೋಡುತೆಳ್ತಂದ ॥ (42)

ಚರಣ ನಖದ ಕಾಂತಿ ತಾರಗೆಗಳ ಮೊ । ತ್ತರಿಸೆ ನುಯ್ಯಲರ್ಗಂಪ ನಿಳಕೆಯ್ಯ ॥
ಪರಿಭವಿಸಲು ಮೊಗದಿಂಗಳಿಂದುವ ನೊರ್ವ । ತರಳೆ ತೂಗುಯ್ಯಲಾಡಲುಕಂಡ ॥ (43)

ಇನಿಯನ ಕಲಡಿದಿರ್ವಂದು ಮೇಲುವ ನೂಂಕೆ । ಕೊನರ್ವ ಪುಳಕದುರ್ಬನಿಂದಪ್ಪಿ ॥
ಬಿನದದೆ ಚುಂಬಿಸಿ ಮಣಿಮಂಚಕೆಳದೊಯ್ವ । ವನಿತೆಯೊರ್ವಳ ನೋಡುತೆಯ್ತಂದ ॥ (44)

ಚಲಿಸುವಳಕ ತೂಗುವ ಹಾರದೆಸೆಗಳೆ । ಬೆಳಗುವ ದಿಟ್ಟಿ ಬಳ್ಕುವನಡು ॥
ಪೊಳೆವಂಗವಲುಗುವ ಕುಚಗಳೆಸೆಯಲೊರ್ವ । ಲಲಿತಾಂಗಿ ಓರೆಡೆ ಪಾಯ್ವುದ ಕಂಡ ॥
[(45)

ತಳತೆಳ ಮಾವನಡರಿ ಕನ್ನೆಗೋಗಿಲೆ । ವುಲಿವಂತೆ ಮಣಿಯ ಚೆಂಬಿಸಿಲಿಂದೆ ॥
ತೊಳಪ ಸೌಧದೊಳೊರ್ವಳು ಪಂಚಮ ಸ್ವರ । ದೊಳಗಾಗಿ ಪಾಡಿಕೇಳುತೆ ಬಂದ ॥ (46)

ಮುದ್ದಿಸಿ ತೆಗೆದಂಕದೊಳಟ್ಟಳಕವ । ತಿದ್ದಿ ಬಾಯೊಳ್ಬಾಯ ನೊಲಿದಿಟ್ಟು ॥
ಎದ್ದ ಮೆಯ್ಮೊಗದಲೊತ್ತರದಿಂದೆ ಕಾಂತೆಯ । ಪೊದ್ದಿ ರಂಜಿಸುವಿನೆಯನ ಕಂಡಳು ॥
[(47)

ಸ್ತನದ ಕುಂಕುಮ ಮುದ್ರೆ ಬೆನ್ನೊಳು ನೇತ್ರಾಂ । ಜನದ ಕಂಬನಿ ಪಾದಯುಗದೊಳು ॥
ಇನೆಯಗೊಪ್ಪಿರೆ ಕಂಡು ಮುಳಿಸಿಲ್ಲದಪ್ಪುವ । ವನಿತೆಯ ಬಗೆಗಂಡನಾ ನಂಬಿ ॥ (48)

ವಿರಹದೆ ಹರುಷದೆ ಸುರತೋದ್ರೇಕದೆ । ಪರಿರಂಭದೆ ನೇಹಗಲಹದೆ ॥
ಇರವ ಬಳಿಗೆ ಬಳಿದೊಡಿಸದಿರೆಂದೊರ್ವ । ಳೊರೆಯೆ ಕೇಳುತೆ ಬಂದ ನೃಪಚಂದ್ರ ॥ (49)

ನಗೆ ನುಡಿಯೊಳೆ ಮನವಂ ಮೋಹಿಸುವ । ಬಗೆ ಬಗೆ ಬೆಚ್ಚಂತಿರೊಡಗೂಡಿ ॥
ಮಿಗೆತೊರೆದ ಲೋಭಿಯ ನೇಹ ಬೇಡೆಂದು । ಮಗಳ ಬೋಧಿಸುತೋರ್ವಳ ಕಂಡ ॥ (50)

ಮನದನ್ನನನಪ್ಪಲೀಯದೆನ್ನಯ ಕಂಪ । ನ ನೋಡಲೀಯದಾನಂದಾಶ್ರು ॥
ಇನಿಗಲೆಯರಿಯಲೀಯದು ಮೂರ್ಛೆಯಂದೊರ್ವ । ವನಿತೆ ಸಖಿಯರೊಳೊರೆವುದ
[ಕೇಳ್ದ ॥ (51)

ನಲಿದು ಕಾದಲರು ಮಧ್ಯವನೀಂಟ ಸೊಕ್ಕಿ ಕ । ಣ್ಮಲರ್ಗೆಂಪು ತೂಗುವಂಗಗಳಿಂದೆ ॥
ತಲೆಯನೊಲೆವ ಕಾಲ್ಗೆಡೆವ ನರ್ತಿಪ ಕಳ । ವಳವ ನೋಡುತೆ ನೃಪನೆಳ್ತಂದ ॥ (52)

ವಿನುತ ಸುರಾರ್ಚನೆಯಿಲ್ಲದ ದುರ್ಜನ । ಮನುಜರು ಸನ್ಮಾರ್ಗದೂರರು ॥
ಘನಸುರಾರ್ಚನೆಯ ಮಾಳ್ಪೆಮ್ಮ ನಿಂದಿಪರೆಂದು । ವನಿತೆಯ ರಾಡೆಕೇಳುತೆ ಬಂದ ॥
[(53)

ಆರ ಸೊಕ್ಕಿಸದಾರ ಮುಂದೆಗೆಡಿಸದಾರ । ಭೂರಿ ಲಜ್ಜೆಯ ನೂಂಕಿ ಕಳೆಯದು ॥
ಆರನಂಡಲೆಯದಾಸವ ಸೇವೆಯೆನುತಲಾ । ಭೂರಮಣನಗು ತೆಯ್ತಂದ ॥ (54)

ಸಡಿಲ್ದುಡೆ ನಾಂದು ಪತ್ತಿದ ಕುಂತಳ ಬೆ । ಳ್ಪುಕರ್ದ ಬಿಂಬಾಧರ ಕೆಂಪಾದ ॥
ಕಡೆಗಣ್ಣು ಬಿಡುಮುಡಿಯೊಳೆ ರತ್ಯಂತದ । ಮಡದಿಯೊರ್ವಳು ರಂಜಿಸೆ ಕಂಡ ॥ (55)

ತರಳೆಯ ಕೊರಳೊಳೆಡದ ಕೆಯ್ಯನಿಟ್ಟೊಂದು । ಕರಪನವಳ ಕುಚದೊಳಟ್ಟು ॥
ಹರಿ ಶಂಖಚಕ್ರಗಳಾಂತೆಸೆವಂತೆ ಮೈ । ಸಿರಿಯಾಂತು ವಿಟನೋರ್ವನಿರೆ ಕಂಡ ॥ (56)

ಕುಚ ಕಮಲಜಮಧ್ಯಹರಿಗಳೆಡೆಯೊಳತಿ । ವಿಚಲವಡೆದ ಹಾರಮಣಿಕಾಂತಿ ॥
ರಚನವೆತ್ತರಿಲಿಂಗವೆನಿಸಿರೆ ಪೆಂಗಳ । ನಿಚಯದೊಳೊರ್ವ ಳೊಪ್ಪಿರೆ ಕಂಡ ॥ (57)

ತುಂಬಿಮಧುಪಪಿಕ ಪರಪುಟ್ಟಕಾವ ಕಿ । ಟ್ಟಂ ಬೆಂದವನಿಂದು ಸಕಲಂಕ ॥
ತಂಬೆಲರಹಿಶೇಷ ಮೆದೊರ್ವ ವಿರಹಿಣಿ । ಕಂಬನಿದುಂಬಿ ನಿಂದಿಸೆ ಕೇಳ್ದ ॥ (58)

ಅರಸಕೇಳೆಪರಿಯೊಳಗಿರ್ಪಗಣಿಕಾ । ಸರಣಿಯ ನೋಡುತೆ ನಡೆತಂದು ॥
ಪರವೆಯ ಮನೆಗೆಳ್ತಂದ ಕುಗುಂಬತುಂ । ಬುರಗೂಡಿ ಸೌಂದರಗಣನಾಥ ॥ (59)

ನವಮನ್ಮಥ ಸೌಂದರನಿಂತು ಯಾಮಿನಿ । ವ್ಯವಹರಣವ ತೀರ್ಚಿಕಳೆಯರ ॥
ತವೆ ಬೀಳ್ಕೊಟ್ಟು ಯಾಮತ್ರಯಾನಕನಾದ । ಕೆವಿವುಗಲರಮನೆಯಂ ಪೊಕ್ಕ ॥ (60)

ಹರುಷದೆ ಸೌಂದರೇಶ್ವರ ಪರವೆಯೊಳೊಂದಿ । ಸುರುಚಿರ ಮಣಿಮಂಚದ ಮೇಲೆ ॥
ನಿರುಪಮಸುಖದೊಳೊಲಾತಿ ನಿದ್ರಾರಾವಾ । ಪರಿರಂಭ ಸಂಭ್ರಮದಿಂದಿರ್ದ ॥ (61)

ಗಿರಿಜೆಯ ಮೆಯ್ಗಂಪಿಗೆರುವ ತುಂಬಿಯಿಂ । ಚರವಶ್ವತರಗಾನರಸದೊಳು ॥
ಬೆರೆದು ಕಿವಿಗೆ ರಂಜಿಸೆ ತಲೆಯೋಲೆವ ಶಂ । ಕರ ಶಾಂತ ಮಲ್ಲಿಕಾರ್ಜುನ ಜಯ ॥ (62)

ಚರಮ ಶರಣಾಗ್ರಣಿಯ ಕೃತಿಯ । ವಿಸ್ತಾರವಮಾಳ್ದರಾದರಿಪರ ॥
ತಾರರ್ಕರುಳ್ಳನ್ನವರ ಮಲ್ಲಿಕಾರ್ಜುನ । ನೋರಂತ್ರಿ ಪಾಲಿಪನೊಲವಿಂದೆ ॥ (63)

ಅಂತು ಸಂಧಿ 16ಕಂ, ಪದನು 902 ಕ್ಕಂ ಮಂಗಳ ಮಹಾ ಶ್ರೀ.

(ಪದಿನಾರನೆಯ ಸಂಧಿ ಸಮಾಪ್ತ.)

ಹದಿನೇಳನೆಯ ಸಂಧಿ-

ಕಾಮಾಂತಕ ಕರುಣಾತಂಕ ರಜತಾದ್ರಿ । ಧಾಮ ಮಾತಂಗ ಚರ್ಮಾವೃತ ॥
ತಾಮಸರಿಪು ಪುರ ಜಯುಮ ಕಾಲಲ । ಲಾಮ ಸಲಹು ಮಲ್ಲಿಕಾರ್ಜುನ ॥ (1)

ವಿನೆಂಬೆ ವಿರುಪ ಭೂವರ ನಿನ್ನ ಕೃತಿಕಾಮ ಧೇನುಕರೆದವಾಕ್ಯ ಸುಧೆಯನು ॥
ಪಾನವ ಕರ್ಣಮುಖದೆ ಮಾಡಿ ಮನುಜರ । ನೂನವಿಬುಧರಾದರಿದು ಚಿತ್ರ ॥ (2)

ತುರುಗೆವೆಗಂಗಳ ತುಂಗಕುಚದ ತುಂಬು । ವೆರೆವೊಗ ದೆಳೆವೆಂಗಳ ರನ್ನೆ ॥
ಮಿರುಗುವ ಪೊಂಬಣ್ಣಮೈಯ್ಯಳಿ ಮನ್ಮನ । ದೆರೆಯಳೆ ಕೇಳು ಮೇಲ್ಗತೆಯನು (3)

ಅನಿತರೊಳರುಣೋದಯಮಾದುದಿಂದ್ರದಿ । ಗ್ವನಿತೆಯ ಘುಸೃಣಲೇಪನದಂತೆ ॥
ಜನಪಕೇಳಾ ದಂಪತಿಗಳ ಮನದೊಳ । ರ್ದನು ರಾಗಾತಿಶಯ ಪುದಿಸಿದಂತೆ ॥ (4)

ನೊರೆಗೂಡಿಕಳಲ್ದ ಬೆಳ್ದಾವರೆಯೆಸಳ್ಗಳು । ಸರಸಿಯ ತಡಿಯ ಸಾರ್ದಂದದೆ ॥
ಅರುಣೋದಯ ಸಮಯದೊಳಂಬುನಿಧಿಯ ಚಂ । ದಿರಗೂಡಿ ತಾರಗೆ ಸಾರ್ದವು ॥ (5)

ಬರತುದು ಬೆಳುದಿಂಗಳು ಚಂದ್ರಕಾಂತಗ । ಳೊರತೆಗೆಟ್ಟವು ಸೊದೆಗಡಲೇಳ್ಗೆ ॥
ಕಿರಿದಾದುದು ಜೊನ್ನವಕ್ಕಿಗಳೆರ್ದೆಯೊಳು । ಮರುಗಿ ಬಾಯಾರಿದವೆಲೆ ಭೂಪ ॥ (6)

ತಾರೆಚಕೋರಿ ನೀಲಾಬ್ಜನಿಯರ ಕಣ್ಗೆ । ಸಾರಿ ರಂಜಿಪ ಚಯವೆಂಬಂತೆ ॥
ನೀರಜರಿಪು ಪಕ್ಕಗೆ ಸಾರೆ ಸಾರ್ದುದು । ಧಾರುಣಿವಳಯದೊಳೆಳೆ ಮಬ್ಬು ॥ (7)

ಅರಸಕೇಳ್ನಿದ್ರೆ ತೊಲಗೆ ನಿಮಿರ್ದುಡುಗಿದ । ಕೊರಲೆತ್ತಿ ನಾಲ್ಕು ದಿಶೆಯ ನೋಡಿ ॥
ಚರಣವನಿಡೆಯೆ ರಂಕೆಯ ಪೊಯ್ದು ಬಲ್ಮರ । ದಿಂದೆ ಕೋಳಿ ಕೂಗಿದುವಾಗ ॥ (8)

ಸಾರಿಕೆ ಶುಕಪಿಕ ಕೇಕಿಕೋಕ ಮರಾಳ । ಕಾರಂಡ ಕಳಕಳರವ ಮುಣ್ಮೆ ॥
ಜಾರೆಯರೊಡನಿನಿ ಸೊರಗಿರ್ದು ಪಾಣ್ಬರ । ನೋರಂತೆ ಬೀಳ್ಕೊಟ್ಟು ಸರಿದರು ॥ (9)

ಇರುಳನೊಳಾ ಕಾದಲರೊಲಿದೆಸಗಿದ । ಸುರತದೆ ಮುಖಕಾಂತಿ ಮುಸುಕಲು ॥
ಕಿರಣವಡಗಿದಂತೆ ಪೊಂಬೆಳಗಿನ ಮೆ । ಯ್ಸಿರಿಗೆಟ್ಟ ದೀಪಗಳೆಸೆದವು ॥ (10)

ಉದಯಾದ್ರಿಯ ದಾವಾನಳಮಿಗೆ ಪರ್ಬಿ । ದುದೊಸುರೇಂದ್ರ ಭೂಷಣದೊಳು ॥
ಪುದಿದ ಸುರತ್ನಾಂಶುವೊ ಯೆಂಬ ತೆರದೊಳಾ । ದುದು ಕಿರಣೋದಯವವನೀಶ ॥ (11)

ಎಳೆದಳರಂತೆ ಗೈರಿಕದಂತೆ ನವಮಣಿ । ಕಳಸಂಗಳಂತೆ ಸೌರಭ್ಯದಂತೆ ॥
ಪಳೆದುದು ಭುಜಪರ್ವತ ಸೌಧ ಶಿಖರಾಗ್ರ । ಗಳ ಮೇಲೆ ಕೇಳು ಕೇರಳಭೂಪ ॥ (12)

ಸುಕುಮಾರವೃತ್ತಿಯ ನಿಳಿಗೆ ತೋರ್ಪಂತುಷ್ಣ । ಕರನಕೈಸೋಂಕೆ ಕಡುಗಂಧಿ ॥
ವಿಕಸಿತಗೆಟ್ಟು ಮುರುಂಟಿದವೆಂಬಂತೆ । ಮುಕುಳತಮಾದುದುತ್ಪಲತತಿ ॥ (13)

ಶರಧಿಯ ಕುಳಿರ್ದೆರೆಗಳನೆತ್ತಿ ಮುಗಿದ ಪಂ । ಕರುಹದೊಳೆಸಳ್ಗಳನಲರಿಸಿ ॥
ಕೊರಗಿದ ಕೋಕ ಶೋಕಮನೂಂಕಿ ನರುಗಂಪು । ವೆರಸಿ ತಂಗಾಳಿತೀಡಿದುವಾಗ ॥ (14)

ಜಗವೆಲ್ಲವ ಬೆಳಗುವ ಮಗನಂ ಪೆತ್ತು । ಗಗನ ನೃಪತಿಸಂತಸದಿಂದೆ ॥
ಮಿಗೆ ಮುನ್ನ ಸೆರೆಯಿಟ್ಟ ತಮವ ಬಿಟ್ಟಂತೆ ಪೊ । ಣ್ಮೆಗೆದವಾರಡಿಯಬ್ಜದಲದಂತೆ ॥ (15)

ಭೋರನಿದಿರುವಂದು ಪಕ್ಕದಿಂದಪ್ಪಿ ಕಣ್ಣೀರ ಸುರಿದು ಮುಂಗುಟು ಕಿತ್ತು ॥
ಓರೊಂದರ ಮುಂದಲೆದುಪ್ಪಳಂ ಕರ್ಚಿ । ಕೂರಿಸಿ ಕೂಡಿದವೆಣೆವಕ್ಕಿ ॥ (16)

ಕಮಲಕೆಮುದಪೇರೆ ಶಶಿಗೆ ನಿಷ್ಕಳೆಯೇರೆ ಕುಮುದಕುಮ್ಮಳ ವೇರೆ ಚಕ್ರಕೆ ॥
ರವಿಸುವ ಸೊಗಸೇರೆ ದನುಜರಿಗಳಲೇರೆ । ಕಮಲಾಪ್ತನುದಯಾದ್ರಿ ಯೇರಿದ ॥ (17)

ಸುರಪತಿಪೂರ್ವಾಚಲವೆಂಬ ಲಿಂಗದ । ಶಿರವನರ್ಚಿಸಿ ವರುಣಾಬ್ಜದ ॥
ಅರಲಂತೆ ಸುರರ ದನಿಯ ಬಾಳರತ್ನಮು । ಕುರವೆ ನೆನೆಸಂಬವೆಸೆದುದು ॥ (18)

ನೇಸರು ಮೂಡಲೊಗೆದ ಪೊತ್ತಿನಲ್ಲಿ ಮ । ಹೀಶ ಸೌಂದರನಿರ್ಪ ಹರ್ಮ್ಯದ ॥
ಭಾಸುರಮಣಿಮಯ ದ್ವಾರೋಪಕಂಠವ । ನಾಶಶಿಮುಖಿಯರೆಯ್ದಿದರೊಲ್ದು ॥ (19)

ಕೆಲರು ನೀರಾಜನಗಳನಾಂತು ಪನ್ನೀರ । ಕಳಸಂಗಳನಾಂತು ಕೆಲಬರು ॥
ಕೆಲರುದಂಡಿಗೆ ದರ್ಪಣವಾಂತು ರನ್ನವಾ । ಗಿಲಸಾರ್ದುದೆಳೆವೆಂಗಳ ತಂಡೆ ॥ (20)

ಮಲಹರಿ ಮಧುಮಾಧವಿ ಮಾಳವಿಮಂ । ಗಳ ಕೌರಕೆ ದೇಶಿಕೆ ಸಾಕ್ಷಿ ॥
ಲಲಿತೆ ಗುಂಡಕ್ರಿಯೆ ಗುರ್ಜರಿ ಸಾವೇರಿ । ಗಳನವರರಿದು ಪಾಡಿದರಾಗ ॥ (21)

ತೊಲಗಿತು ನಿದ್ರಾಂಧಕಾರ ನೇತ್ರಾಂಬುಜ । ಮಲರ್ದುವು ಹೃತ್ಪೂರ್ವದೆಸೆಯೊಳು ॥
ನೆಲಸಿತು ಬೋಧ ಸಹಸ್ರಾಂಶಃ ಮೆಯ್ಮುರಿ । ದೆಳೆಯಾತ್ಮನುಪ್ಪವಡಿಸಿದನು ॥ (22)

ತಳತರಸಾಲಕೋಮಲ ಶಾಖೆಯಗ್ರದೊ । ಳ್ಬೆಳಗುವ ಶಶಿಬಿಂಬಮಿರ್ಪಂತೆ ॥
ಎಳೆಯೆಳತಳರ್ಗೆಯ್ಯೊಳರ್ದ ಕನ್ನಡಿಯಕೋ । ಮಲೆಕೂಡಿ ಕುವರನೀಕ್ಷಿಸಿದನು ॥ (23)

ಡಾಳಪಮುತ್ತಿನಾರತಿಗಳ ನವರ್ಗೆ ನಿ । ವಾಳಿಸಿ ಚೆಲ್ವಿದಳೊಲವಿಂದೆ ॥
ಆಳಿಯೋರ್ವಳು ಕಂಜಪತ್ರಾಂಬುವ ನೆಳೆ । ಗಾಳಿ ಮೆಲ್ಲನೆ ಸೂಸುವಂದದೆ ॥ (24)

ಪೊಂದಾವರೆಯ ಮುಗುಳ ಮಕರಂದವ । ಚಂದಳಿರೊಳಗಿಂ ಬಿಡುವಂತೆ ॥
ಬಂದೋರ್ವ ಲಲನೆ ಕನಕಕಳಶಾಂಬುವ । ತಂದವರಂಜಲಿಗೆರೆದಳು ॥ (25)

ಹರುಷದೆ ಮುಖ ಮಜ್ಜನಗೆಯ್ದು ಭಸಿತವ । ಧರಿಸಿ ಶಿವಾಂಘ್ರಿಪೂಜೆಯ ಮಾಡಿ ॥
ಪರಿಮಳ ಪುಷ್ಪಾನುಲೇಪನ ವಸ್ತ್ರಾಭರಣವಾಂತವರು ಕಣ್ಗೆಸೆದರು ॥ (26)

ಮಣಿಪೀಠದೊಳಗೆ ಕೋಮಲೆಯರ ಸೀಮಂತ । ಮಣಿಗೂಡಿ ಮಂಡಿಸೆ ಮುದದಿಂದೆ ॥
ತ್ರಿಣಯಾವತಾರ ಸೌಂದರನಿರ್ದ ಲಲನಾ । ಗಣವೆಡಬಲದೆ ಕಣ್ಗೆಸೆದಿರೆ ॥ (27)

ಅರಸ ಕೇಳಾ ಸಮಯದೊಳೈಯ್ತಂದೋರ್ವ । ಹರಭಕ್ತನವರ ಸಂಮುಖದೊಳು ॥
ಕರವ ಮುಗಿದು ನಿಲೆ ವಿನಯದೊಳವನ ಕು । ಳ್ಳಿರಿಸಿ ಸೌಂದರಭೂಪ ನಿಂತೆಂದ ॥ (28)

ಎಲ್ಲಿಂದೆ ನೀವು ಬಂದಿರಿ ನಿಮ್ಮ ಪೊಳಲಾವು । ದಿಲ್ಲಿಗೆಳ್ತಂದ ಕಾರಣವೇನು ? ॥
ಸೊಲ್ಲಿಸೆಂದತಿವಿನಯದಿ ಕೇಳಲಾತ ಭೂ । ವಲ್ಲಭನಿಂತೆಂದು ನುಡಿದನು ॥ (29)

ನೆಲವನೆಯೀತಿರುವಾರೂರು ನಾಬಂದ । ಕೆಲಸವೆ ಕೇಳೀ ಕುಡಿಯೊಳಿರ್ಪ ॥
ಕಲಿಕಾಮನ ಪಟ್ಟ (ಟ) ಳಘನ ಪೇಳ ಬಂದೆ ನಿ । ನ್ನೊಳಗಾದನೆನೆ ಸಂಬಿಯಿಂ
[ತೆಂದ ॥ (30)

ಮಾಡಿದ ತಪ್ಪಾವುದು ನೀವು ನಿಮಗಾತ । ಮಾಡಿದಟ್ಟುಳಿಯಾವುದು ನಮ್ಮ ॥
ಕೂಡೆ ಪೇಳನಿಸುಳಿಯದೆ ವಿವರದೊಳೆನ । ಲವನಾಡಿದ ಸೌಂದರನೊಳು ॥ (31)

ಛಲದಂಕಲಿಂಗನಿಷ್ಠಾಪರಶಿವ ಭಕ್ತ । ನಿಳಯ ಸದಾಚಾರ ಸಂಪನ್ನ ॥
ಕಲಿಕಾಮನೆಂಬ ಭೂನಾಥನ ನಗರಿಯ । ನೊಲಿದು ಪಾಲಿಸುತಿರ್ಪ ವಿಭವದೆ ॥ (32)

ಹರಭಕ್ತರಸದೊಳೋಲಾಡುತೆ ಮುದದಿಂದೆ । ಚರಲಿಂಗ ಸೇವೆಯ ಮಾಡುತೆ ॥
ಶರಣಸಂಗ ಡಿಹೆಚ್ಚಿ ಹೊರೆಯೇರುತನುದಿನ । ಪರಮ ಸುಖದೊಳಿರ್ಪ ನಾಭೂಪ ॥ (33)

ಇಂತಿರುತಿರಲೋರ್ವ ಶಿವಭಕ್ತನೈಯ್ತಂದ । ನಂತಭಕ್ತರಸುಚರಿತ್ರವ ॥
ಸಂತಸದಿಂ ಪೇಳುತೆ ಕಲಿಕಾಮ ಗೋ । ರಂತೊರೆದನು ನಿನ್ನ ಚರಿತೆಯ ॥ (34)

ಧರೆಯೊಳಗರಿದು ಪೇಳುವೆ ನೇನ ಕಲಿಕಾಮ । ಪರಮೇಶನ ನಂಬಿಯೊಳ್ಗೊಂಡು ॥
ಪರವೆಯ ಮನೆಗೆ ದುರಟ್ಟುವ ನವನಂತೆ । ಶರಣರಾರುಂಟು ಭೂಮಿಯೊಳೆಂದ ॥ (35)

ಎನೆ ಕೇಳಿ ಮರುಗಿ ಕೋಪವ ತಾಳ್ದು ಕಲಿಕಾಮ । ನನಘನದ್ವಯಿ ಮುಗ್ಧದೇವನ ॥
ಮನವೊಲ್ದು ಗಣಿಕೆಯ ಮನೆಗೆಡೆಯಾಡಿಪ್ಪು । ದನುಚಿತವವನ ಪೇಳದಿರೆಂದ ॥ (36)

ಶಿವಶಿವಕೇಳ ಬಾರದ ಮಾತ ಕೇಳ್ದಿವು । ಶಿವನನಾಳ್ಗೊಂಡು ದೂದಟ್ಟುವ ॥
ಪವಣವ ಶಾಸ್ತ್ರಮಾರ್ಗ ದೊಳುಂಟು ಪೇಳದಿ । ರವನ ಕೀರ್ತಿಯನೆಂದು ನುಡಿದನು ॥ (37)

ಚತುರಾನನ ಚಕ್ರಧರ ಮುಖ್ಯ ನಿರ್ಜರ । ತತಿಯುತಿ ಪಶುಸಂಕುಳವಾಗೆ ॥
ಪತಿಯಾದ ಶಿವನ ದೂದಟ್ಟು ಭಕ್ತಿ ಸ । ಮ್ಮತವಲ್ಲವೆ ಮಗೆ ಪೇಳದಿರೆಂದ ॥ (38)

ಈ ಪರಿಯುವ ಗುಣದೊಳು ವರ್ತಿಪ ಕಾಮ । ತಾಪೊಂಧನನೊಳ ಕೊಂಬರೆ ॥
ಆ ಪುರದೊಳು ಭಕ್ತರಿರ್ದೊಡೆನುತ ಮಿಗೆ । ಕೋಪವ ತಾಳ್ದು ಮೇಣಿಂತೆಂದ ॥ (39)

ಅವನನಿರಿವೆನವನಿರ್ದ ಸೀಮೆಯ ಮೆಟ್ಟೆ । ನವನೂರಜನದೊಳು ಮಾತಾಡೆ ॥
ಅವನ ಪೆಸರ್ಗೊಂಡರ ಕೊಲ್ವೆನೆಂದು । ನೇಮವ ತಾಳ್ದು ಕಂಕಣದಳೆದನು ॥ (40)

ಅಂದು ಮೊದಲು ನಿನ್ನ ಪೆಸರ್ಗೊಳೆ ನಿನ್ನತ್ತ । ಣಿಂದ ಬಂದವ ಬಾಧಿಸುತಿರ್ಪ ॥
ಸೌಂದರ ನಂಬಿಯಂ ಬೆರಡು ಪೆಸರ್ಗಳ । ನೆಂದು ಬಿನ್ನೈಸಿದ ನವನಾಗ ॥ (41)

ಅದಕೇಳಿ ಮನದೆ ಮುನಿಸ ತಾಳಿ ಮೆಯ್ಗದ । ಗದಿಸಿ ಕೋಪಾಗ್ನಿ ಮುಪ್ಪುರಿ ಗೊಂಡು॥
ಮುದಗೆಟ್ಟು ಮುಖದಿಂದೆ ವಲ್ಮೀಕ ನಾಥನ । ಸದನ ಕೆಯ್ತಂದು ಬಿನ್ನಪಗೆಯ್ದು ॥ (42)

ಎಲೆದೇವ ನಿನಗೆ ಮಾಡಿದ ತಪ್ಪದಾವುದು । ಕಲಿಕಾಮ ನೆಂಬವ ಮುಳಿದೆನ್ನ ॥
ಪೊಳಲೆಂದರ ಪೆಸರ್ಗೊಂಡರ ಬೆಂಬತ್ತಿ । ಕೊಲುತಿರ್ಪ ನಂತದನೇ ನೆಂಬೆ ॥ (43)

ನೀನೆನಗೊಲಿದು ಕುಂಟಣಿಯಾದೆ ಬಳ್ವಿಂದೆ । ನಾನಿನ್ನ ದೂದಟ್ಟಿದೆನೆಂದು ॥
ತಾನೆನ್ನನಿಂದು ಕೊಂದಪ ಗಡ ದೇವ ಕೇ । ಳೇನೆಂಬೆನವ ನುಪಟಳವನು ॥ (44)

ಮೂಗಣ್ಣ ನೊಡನುರುಳಲು ನೀನು ಬಾಣನ । ಬಾಗಿಲ ಕಾಯಿ ಪಿಟ್ಟವ್ವೆಗೆ ॥
ಚಾಗದಿ ಮಣ್ಣನಡಕವಿಲ್ಲದ ಕೋಪ । ವೀಗಳೆನ್ನೊಡನೇಕೆ ತನಗೆಂದ ॥ (45)

ತನಗಿನಿತತುಳ ಪರಾಕ್ರಮವಂತೆ ಕೇ । ಳೆನಗಿಲ್ಲವೆ ಭುಜಬಲದೇಳ್ಗೆ ॥
ನಿನಗಳ್ಕಿ ಸುಮ್ಮ ನಿರ್ದಪೆನ್ನೈಸೆ ನಾಕೇಳು । ವೆನೆ ದೇವನವನ ದುರುಕ್ತಿಯ ॥ (46)

ಬೇಡ ಮಗನೆ ಪಂದದ ಮಾತು ಕಲಿಕಾಮ । ನಾಡಾಡಿಯಲ್ಲ ಮಾರಾಂತಕ ॥
ಓಡಿಸದಿರು ಪಟು ಭಟಕಾದರುಮಾವ । ಗೀಡಿಲ್ಲವಿಳೆಯೊಳಗೆನೆ ಕೇಳ್ದು ॥ (47)

ಘಡುಘಡಿಸುತೆ ಕೋಪದೊಳೆದ್ದು ಸೌಂದರ । ಮೃಡ ಕೇಳನೀಗಳೆ ಪೋಗಿ ॥
ಪಿಡಿತಂದವನನೊಪ್ಪಿಸುವೆ ನೆನ್ನೊಳು ನಂಟೆ । ನಡರಿಸು ಬಳಿಕೆಂದು ಪೊರಮಟ್ಟ ॥ (48)

ಗಿರಿಜೆಯ ಮೆಯ್ಗಂಪಿಗೆರಗುವ ತುಂಬಿಯಿಂ । ಚ[illegible]ವಶ್ವತರ ಗಾನರಸದೊಳು ॥
ಬೆರೆದುಕಿವಿಗೆ ರಂಜಿಸೆ ತಲೆಯೊಲೆವ ಶಂ । ಕರ ಶಾಂತಮಲ್ಲಿಕಾರ್ಜುನ ಜಯ ॥ (49)

ಚರಮ ಶರಣಾಗ್ರಣಿಯ ಕೃತಿಯ ವಿ । ಸ್ತಾರವ ಮಾಳ್ಪರಾದರಿಪರ ॥
ತಾರಾರ್ಕರುಳ್ಳನ್ನವರ ಮಲ್ಲಿಕಾರ್ಜುನ । ನೋರಂತೆ ಪಾಲಿಪನೊಲವಿಂದೆ ॥ (50)

ಅಂತು ಸಂಧಿ 17 ಕ್ಕಂ ಪದನು 952 ಕ್ಕಂ ಮಂಗಳಂ ಮಹಾಶ್ರೀಃ

ಹದಿನೆಂಟನೆಯ ಸಂಧಿ-

ರಾಜ ಕಳಾಶೇಖರ ಭವ ಹರರಾಜ । ರಾಜ ಸುಮಿತ್ರ ಪಾವನ ಗಾತ್ರ ॥
ತೇಜೋಮಯ ಚಿನ್ಮಯ ಭಕ್ತಜನ ಕಲ್ಪ । ಭೂಜರಕ್ಷಿಸು ಮಲ್ಲಿಕಾರ್ಜುನ ॥ (1)
ಕನ್ನಡದಿಂಪು ಸಕ್ಕಜದೊಪ್ಪ ನುಡಿಗಳ । ಚಿನ್ನಣ ಮುಚಿತರಸದ ಬೆಂಪು ॥
ನಿನ್ನ ಕಬ್ಬದೊಳಲ್ಲದಿಲ್ಲ ಭಾವಿಸಿ ನೋಡೆ । ಹೊನ್ನುರ ವಿರುಪ ಮೋಹನರೂಪ ॥ (2)

ಕೇಳೆನ್ನ ಮಾನಸ ಕಳಹಂಸ ಘನಕುಚೆ । ನೀಲಾಳಕಿ ಮೃಗಮದಗಂಧಿ ॥
ಬಾಲೇಂದುಧರ ಚೇರಮ ನೃಪನೊಳು ಪೇಳ್ದ । ಮೇಲಣ ಕಥೆಯ ವಿಸ್ತರವನು ॥ (3)
ಅರಸಕೇಳತಿ ಕೋಪದೊಳೆಳ್ತಂದು । ಸೌಂದರ ತನ್ನ ಮಂತ್ರಿಯೊಡನೆ ಪೇಳೆ ॥
ಕರಿತುರಗದಿ ಬಲವನೆರಪುವೊಡೆ ಸಂ । ಗರ ಭೇರಿಯ ಪೊಯ್ಸಿದನವ ॥ (4)

ಶರಧಿಯನಚಲಾಧಿಪ ಸುತ ಪೊಗೆ ಪುರ । ಹರ ನಾಟ್ಯ ಲೀಲಾ ವಿನೋದದೆ ॥
ಧರೆಯ ಪದದೆ ತಟ್ಟೆ ಪೊಣ್ಮಿದ ನಿನದದೆ । ಪಿರಿದಾದುತ್ಸವನ ಭೇರಿಧ್ವಾನ ॥ (5)
ಮದಗೆಟ್ಟುದು ವಾಮನ ಪುಂಡರೀಕದಿ । ಯೆದೆಪೊಳೆದು ನೆಲಸಿದುದಂಜನ ॥
ಹೆದರಿದುದೈರಾವತ ಮುಖ್ಯಗಜಭೇರಿ । ಯುದ್ಭುತಧ್ವನಿದೆಸೆಗಳ ತೀವೆ ॥ (6)

ಧರೆಬೆಸಲಾದಂತೆ ಗಗನವಿದ್ದಂತೇಳು । ಶರಧಿಯೇಕಾರ್ಣವ ವಾದಂತೆ ॥
ನೆರೆದುದು ಬಲತದ್ಬಲ ಗೂಡಿ ಸೌಂದರ । ತೆರಳ್ವನದೇನ ಬಣ್ಣಿಪೆರಾಯ ॥ (7)
ಕರಿಜಲಕರಿಕಳಲಿಗೆಯೆಂಬು ಕಿರಿಮೀನು । ಕರವಾಳು ಬಾಳೆಮೀನ್ಗಳವೊತ್ತ ॥
ಹರಿಗೆಗಳಾವೆ ವರೂಥ ನಾವೆಗಳೆನೆ । ಶರಧಿಯ ಪೊಲ್ನೆರೆದುದು ಸೇನೆ ॥ (8)

ಸಿಂಗರದೆಳೆಯುದ್ಭುತ ದಿಕ್ಕೆ ರೌದ್ರ ತ । ರಂಗಭಯಂಕರ ರಸದುರ್ಬು ॥
ತುಂಗ ವೀರಾಕಾರದ ಪಕ್ಕೆಯಂದದೆ । ಕಂಗೊಳಸುತೆ ನಡೆದುದು ಸೇನೆ ॥ (9)
ನಡೆದುದು ಕುಂಭ ಸಂಭವನ ಮೇಲೆಳ್ತರ್ಪ । ಕಡಲಂತೆ ಸುರರಾಜನೆಡೆಗೆಯ್ದು ॥
ಕಡುಮಿಂದ ನಗಗಳೆಳ್ತರ್ಪಂತೆ ನಂಬಿಯ । ಪಡೆಕಲಿಕಾಮ ದೇವನ ಮೇಲೆ ॥ (10)

ನಡೆದೊಡೆ ಪದಹತಿಯಿಂ ಬೆಟ್ಟಗಳು ಪುಡಿ । ಪುಡಿಯಾದವು ಕೆಂದೊಳಂದೆ ॥
ಕಡಲರತುದು ಬಲಭಾರದೆ ಕುಸಿದುದು । ಪೊಡವಿಯದೇನ ಬಣ್ಣಿಪೆ ರಾಯ ॥ (11)
ಪಡೆ ಭರದಿಂದೆ ತೆರಳಪೋಪ ಸಮಯದೊ । ಳಡೆರ್ದು ಕೆಂದೂಳಕಂಗೆಸೆದುದು ॥
ಪೊಡವಿಯೆರೆಯ ಕೇಳು ಬಲವ ಬಳಸಿ ಬರ್ಪ । ನಡೆಗೋಂಟೆಯ ಮಾಳ್ಕೆಯಂಬಂತೆ ॥ (12)

ಇಂಬೆಯ್ಪುದು ಭೂಮಿ ಸೇನೆ ಪೋದುದಕೆನು । ತಂಬು ನಿಧಿಯ ಪೊಳ್ದಳೆಗೆಯ್ದು ।
ಮುಂಬರಿದುದು ತದ್ಬಲದ ಸೇನಾಪತಿ । ಯೆಂಬಂತೆ ಧೂಳಿಕೇಳವನೀಶ ॥ (13)
ಆ ಸಮಯದೆ ಬಲವೆಸೆದುದು ಪೊಗೆಗೊಂಡು । ಮಾಸಿದ ಚಿತ್ರ ಸಂಕುಳದಂತೆ ॥
ಮೈಸಿರಿ ರಜದಿಂದೆ ಮುಸುಳಿಸಿ ಬಂದ ಗ . ಣೇಶಾಗ್ರಣಿಯ ಪುರಕೆ ನಂಬಿ ॥ (14)

ಬಂದನತುಳ ಭುಜಬಲವೀರ ವಿಕ್ರಮ । ಬಂದನನೂನ ಪರಾಕ್ರಮ ॥
ಬಂದ ಸೌಂದರ ಭೂಪ ರಿಪುಜನ ಹೃತ್ತಾಪ । ಬಂದನೆಂದುಲಿದವು ಕಹಳಾಳಿ ॥ (15)
ಆಕಹಳಾರವ ಕಿವಿವೊಗೆ ಕಾಲ ರು । ದ್ರಾಕಾರ ಭೈರವ ಸಾಕಾರ ॥
ಏಕಾಂಗವೀರ ವೀರೇ ಶಾವತಾರ ಮ । ಹಾಕಾರಿ ರಿಪುಭೀಮಕಲಿಕಾಮ ॥ (16)

ಕನಲಿಕಟ್ಟುಗ್ರ ವೀರಾವೇಶದಿಂ ಭೋಂ । ಕನೆ ಪೊರಮಟ್ಟ ಕೂರಸಿಯಂತೆ ॥
ಜನಪಕೇಳವಗೆ ಬೆಂಬಲವಾಗಿ ನಂಬಿನಾ । ಥನ ಕಳುಪಿದೆ ರುದ್ರಗಣಕೂಡಿ ॥ (17)
ಬೆಂಬಲದಾಸೆಯಿಲ್ಲದೆ ತಾನೊರ್ವನೆ । ಮುಂಬರಿದಹಿತ ಬಲಂಪೊಕ್ಕ ॥
ಅಂಬುಜ ಸಂಕುಳದೊಳು ಮತ್ತಭದ್ರಗ । ಜಂಬುದ ಪೊಗುವಂತೆ ಕಲಿಕಾಮ ॥ (18)

ಇದಿರಾದ ಭಟರನಿರಿದ ಬಂದು ಮುಸುಕುವ । ಮದಗಜಘಟೆಯ ನುಗ್ಗೊತ್ತಿದ ॥
ಸದೆವನಶ್ವಾಳಿಯ ನಿಮಿಷದೆ ಮುರಿದುದು । ಚೂಣಿ ಕೇಳು ಕೇರಳ ಭೂಪ ॥ (19)
ಮುಂಜಾಳಿ ಮುರಿದುದ ಕಂಡು ಕುರುಂಬರು । ಕುಂಜರ ತತಿಗೂಡಿ ಮುಸುಕಲು ॥
ಭಂಜಿಸಿದನು ನಿಮಿಷದೆ ರಿಪುಬಲದ ಪ್ರ । ಭಂಜನಕಡುಗಲಿ ಕಲಿಕಾಮ ॥ (20)

ಕರಿಕುಂಭ ಮಧ್ಯವ ನೆರಗಿದೊಡರುಣಂಬು । ಸುರಿದುದು ಸಂಗರ ಲಕ್ಷ್ಮಿಯ ॥
ಉರಸಿಜ ಮಧ್ಯದೊಳಗೆ ರಂಜಿಪ ಬಣ್ಣ । ಸರದಂತೆ ಖಡ್ಗದೆ ಕಲಿಕಾಮ ॥ (21)
ಕುರಸಿಯಿಂದಲೆರಗೆ ಸೂಸಿದವು ಮುತ್ತ । ವಾರಣ ಜಿದುವಿಂದೆ ಪೊಸಮುತ್ತೊ ॥
ಭೂರಮ ಕೇಳ್ಕಲಿ ಕಾಮದೇವಗೆ ಜಯ । ನಾರಿ ತಳೆದ ಸೇಸೆಗಳಂತೆ ॥ (22)

ಉರುಬಿದು ಪೂರ್ವಾಚಲದಂತೆ ಮಿಗೆ ನೆಗೆ । ವರುಣಂಬುಧಾರೆ ಚೆಂಬಿಸಿಲಂತೆ ॥
ಇರೆರವಿಯಂತೆಸೆದುದು ಕರಿಗೆರಗಿದ । ಕರವಾಳ ಕಲಿಕಾಮದೇವನ ॥ (23)
ಬಿಗಿದುದಾ ವಾರಣದಳ ಹುಡಿಹುಡಿ । ಯಾಗಿ ನೇಸರುಗಂಡತಮದೊಡ್ಡು ॥
ಸಾಗುವಂದದೆ ಸಾಹಸಗುಂದಿ ಭೀತಿಯೊ । ಳಾಗಳವನ ಕೂರಸಿಗಂಡು ॥ (24)

ಇರದೋಡಿ ಬರ್ಪಕುರುಂಬರಿಗ ಭಯದ । ಕರವ ನೀವುತೆ ಮಣಿರಥಗಳಾ ॥
ಹೊರಳ ಸಹಿತೆ ಘಡೆಯೆನುತಿದಿರಾದ ತುಂ । ಬುರಮಂತ್ರಿ ಕಲಿಕಾಮದೇವಗೆ ॥ (25)
ಮುಸುರಿದುದಾ ತುಂಬುರ ಸೇನೆ ಚಂಪಕೆ । ಕುಸುಮವನಳಿವಿಂಡು ಕವಿವಂತೆ ॥
ದೆಸೆಯಾವುದಾಗಸ ವಾವುದೆಂಬಂತೆವೊ । ಲೆಸೆದುಬಳಸಿ ಕಲಿಕಾಮನ ॥ (26)

ಸಾರ್ದಿದಿರಾದ ಮಹಾರಥ ನಿಚಯವ । ಸಾರ್ದದಟಿಂದೆ ನೇರ್ಗುತ್ತುತೆ ॥
ಪರ್ದಿಕೆ ಕಾಕಜಂಬುಕಭೂತನಿಚಯಕೆ । ಬರ್ದಿಕ್ಕಿದರೀರಿಪುದಳವನು ॥ (27)
ಸುರಪತಿಕುಲಿಶಾಯುಧವಚಳಾಡಿಸಿ । ಗಿರಿಗಳ ರಂಕೆಯ ನರೆವಂತೆ ॥
ನೆರೆದ ವರೂಥಪತಾಕೆಯ ಕಲಿಕಾಮ । ಕರದಸಿಯಿಂದೆ ಖಂಡಿಸಿದನು ॥ (28)

ಎರಡು ಕರದಿಪಿಡಿದೆತ್ತಿದ ರಥವ ನಂ । ಬರಕೆಡಲಾ ತೇರ್ಗಳೆಸೆದವು ॥
ಧುರಧೀರ ಕಲಿಕಾಮನದಟ ನಿರೀಕ್ಷಿಪ । ಸುರರ ವಿಮಾನಗಳೆಂಬಂತೆ ॥ (29)
ರಥಗಳ ಮುರಿದ ರಥಾಶ್ವರನಿರಿದ ಸಾ । ರಥಿಗಳ ತರಿದ ಸಾಹಸದಿಂದೆ ॥
ರಥಿಕರ ಗೋಣಕೊರೆದ ರಿಪುಸೇನೆಯ । ರಥಚಕ್ರದೊಳಟ್ಟು ಕೆಡಪಿದ ॥ (30)

ಮುರಿದುದು ತುಂಬುರ ಬಲಮಿಗೆ ತುಂಬಿದ । ಕೆರೆಯೊಡೆದಂತೆ ಪರ್ದೆರಗಿದ ॥
ಪರಮೆಗಳಂತೆ ಪೆರ್ಬುಲಿಗಂಡು ಬೆದರಿದ । ಮರಿವುಲ್ಲೆಗಳ ಜಂಗುಲಿಯಂತೆ ॥ (31)
ಬಿಗಿದಮಾತ್ಯಬಲವ ಕಂಡು ಸೌಂದರ । ನಾಗಳಕ್ಕೆಲದ ನೃಪಾಲರ ॥
ಪೋಗೆಂದು ನೇಮಿಸಿದೊಡೆ ಕಡೆಗಾಲದ । ಸಾಗರದಂತೆ ಮುತ್ತಿತು ಸೇನೆ ॥ (32)

ಹರಿಗೆತ್ತು ಪ್ರಾಣಮುದ್ಗರಕುಂತ ಚಕ್ರತೋ । ಮರಪಾಶ ಬಿಟ್ಟೇಗುಗಳನಾಂತು ॥
ಬೆರೆಸಿದುದತುಳಭಟಾನೀಕ ಬೊಬ್ಬೆಯಾ । ಬ್ಬರಗೂಡಿ ಪಾಂಶುದೆಸೆಯಂತೀವೆ ॥ (33)

ಒಂದೊಂದು ಕಡೆಯೊಳಶ್ವವಾಹಕ ವೇರಿ ಮೇ । ಣೊಂದು ಕಡೆಯೊಳಭಟತತಿ ಮೋಹಿ ॥
ಒಂದು ದಿಕ್ಕಿನೊಳತಿರಥರೊತ್ತಿ ಸಾಹಸ । ದಿಂದವನಿದಿರಾಗಿ ಕವಿದರು ॥ (34)

ಪಗೆ ಕವಿದೊಡೆ ಭಯುವಟ್ಟನೆ ಮನದೊಳು । ನಡುಗಿದನೆ ನಯುಗೆಟ್ಟನೆ ॥
ಕಡು ಪಳದುದ ಕಂಗೆಟ್ಟನೆ ಮುಗುಳ್ನೊ । ರ್ಮಡಿಯೊದುದವನ ಪರಾಕ್ರಮ ॥ (35)

ನೆರೆದ ಬಲದೊಳರೆಬರ ತುಂಡು ಮಾಡಿದ । ನರೆಬರ ಶಿರವ ಚೆಂಡಾಡಿದ ॥
ಅರೆಬರನ ನಿಮಿಷಾನಗರವ ಕೂಡಿದ । ನರೆಬರಡೆಗ ಪರ್ದಿಗೂಡಿದ ॥ (36)

ಪೆಣಗಳಮಯುವಪ್ಪಂತೆ ಧರಣಿಮಾರ್ಗ । ಣಮಯುವಪ್ಪಂದದೆ ನಭ ॥
ತೃಣಮಯುವಪ್ಪಂದದೆ ರಿಪುಗಳ ಮುಖ । ಪೊಣರ್ದ ಭಕ್ತಪ್ರೇಮ ಕಲಿಕಾಮ ॥ (37)

ನಾಯುದ ಪಟುಭಟರಿಲ್ಲ ಕೃಪಾಣದೆ । ಘಾಯುವಡೆಯದತಿರಥರಿಲ್ಲ ॥
ನೋಯದ ಮಾವೃತರಿಲ್ಲೆನಿಸಿದ ಗಣ । ನಾಯಕ ರಾಮನ ಕಲಿಕಾಮ ॥ (38)

ಕಂಡ ಸೌಂದರ ನೃಪನಾಕಲಿಕಾಮನು । ಗಂಡತನದ ಪಟುಕರವನು ॥
ಕೊಂಡಾಡುತೆ ಮತ್ತವಾರಣವೇರಿಬಂ । ದಂಡಲೆದನು ತನ್ನ ಬಲಗೂಡಿ ॥ (39)

ಕಡಿಕಡೆಗೂಲೆಯುದಿರಿಂ ಕೊಲು ಮುಂದಕೆ । ನಡೆ ತೀವಿ ತುಂಡುಮಾಡಿದರಾಗ ॥
ಒಡಿಬೆಡೆಗೈಕೊಟ್ಟು ಕುಟ್ಟು ಭೋಕುಳ ಬೆದು । ಪಡೆ ಕವಿದುದು ಕಡುಪಿನೊಳಾಗ ॥
[(40)

ಕಾಲನ ಬಲಕವಿದುದು ಭುವನದ ಕಡೆ । ಗಾಲದ ದಳ್ಳುರಿ ಕವಿದುದು ॥
ಹಾಲಾಹಲಕವಿದುದು ಧಿಟಪೆನೆ ನರ । ಪಾಲನ ಕವಿದುದು ರಾಯು ॥ (41)

ಅದೆ ಸಿಕ್ಕಿದ ನಂಬಿಗೆ ಕಲಿಕಾಮನೆಂ । ದುದು ಮೇಲೆ ಸೋಳ್ಪನಿರ್ಝರ ತತಿ ॥
ಆದ ಕೇಳ್ದತಿಭರದೊಳು ಶಿವ ಗಣ ಬಂ । ದುದು ಸುರದುಂದುಭಿರವಮುಣ್ಕೆ ॥ (42)

ಶೂಲಡಮರುಗಾಂಕಿತ ಕರಗಳರುಂಡೆ । ಮಾಲ್ಗೊರಳ ಬಿಸುಗಂಗಳ ॥
ಬಾಲ ಶಶಾಂಕ ಶಿರಂಗಳ ತತ್ಪ್ರಮ । ಥಾಳಿ ಮಸುರೆ ಮುಸುರಿದು ಸೇನೆ ॥ (43)

ಒಬ್ಬಗೆ ಮುರಿದೋಡುವ ಬಲರುದ್ರರ । ಪೆರ್ಬಡೆ ನಿದಿರೆ ಬಿಗಿದುದಾಗ ॥
ಪೆರ್ಬುಲಿವಿಂಡ ನಿರೀಕ್ಷಿಸಿ ಬೆದರಿದ । ಕಬ್ಬುಸುಗಳ ಜಂಗುಳಯಂತೆ ॥ (44)

ಓಡಿತು ದಳಬರದೊಳು ತಿರುವಾತೂರ । ನಾಡಿಗೆ ಸೌಂದರ ನೃಪತತಿಯು ॥
ಕೂಡೋರ್ವರ ಕಾಣೆನು ಮಿಗೆ ಮೊಗಮುರಿ । ದೋಡಿದ ಬಲಕೆ ಬೆಂಬಲವಾಗಿ ॥ (45)

ಬೆಂಬತ್ತಿದ ಭರದೊಳು ಪ್ರಮಥ ನಿಕು । ರಂಬ ಸಹಿತ ಕೂರಸಿಗೊಂಡು ॥
ನಂಬಿಯ ಮಹಿಮಾವಲಂಬಿಯು ಸುಗುಣ ಕ । ದಂಬಿಯು ಕಡುಗತಿ ಕಾಮ ॥ (46)

ಓಡದಿರೆಲವೊ ಶಿವದ್ರೋಹಿ ನೀನೆನ್ನ । ಬೀಡಿಗೆ ಮುಂದರಿಯದೆ ಬಂದು ॥
ಓಡಿದೊಡಿಂದು ಬಿಡೆನು ನಿನ್ನ ಶಿರವ ಚೆಂ । ಡಾಡುವೆನೆನುತವ ಬಳಸಂದ ॥ (47)

ಮನಸಿಜವೈರಿಯ ಕೈಯಿಂದೆ ಕುಂಟಣಿ । ತನವ ಮಾಡಿಸಿದ ದುರಾತ್ಮಕ ॥
ನಿನಗೆ ತಕ್ಕುದ ಮಾಡದೆ ಬಿಡೆ ಪೋಗದಿ । ರೆನುತವನೊಡನೆ ಬೆಂಬತ್ತಿದ ॥ (48)

ತಾಳವ ಪಿಡಿದು ಪೊಗಳಿ ಪೊನ್ನನರ್ಚಿಸಿ । ಸೂಳೆಗೆ ಕೊಟ್ಟು ಬದ್ಧಿರದಿಂತು ॥
ಕಾಳಗಕೆಂದು ಗರ್ವದೆ ಬಂದು ಮೊಗಮುರಿ । ದೇಳುವುದುಚಿತವೆ ನಿನಗೆಂದ ॥ (49)

ಪೋಗದಿರೆಲವೊ ದುರಾತ್ಮಕ ನೀವಿದಿ । ರಾಗು ನಿವೇಶಿಯು ಮನೆಗೆಂತು ॥
ಮೂಗ ಮುಂದಿಟ್ಟು ಪೋದಪೆ ತಿರುಗೆನುತಲಿ । ಬೇಗದೊಳದಗಿದ ಕಲಿಕಾಮ ॥ (50)

ಭೂಮಿಪ ಕೇಳೆಲೆ ಭರದೆ ಸೌಂದರ ತನ್ನ । ಸೀಮೆಯು ಪೊಗೆ ಕಂಡು ಕಲಿಕಾಮ ॥
ನಾ ಪೆಟ್ಟನಿವನ ದೇಶವ ಮುನ್ನ ಕೈಕೊಂಡ । ನೇಮಮುಂಟೆಂದು ನಿಂದಿಂತೆಂದ ॥ (51)

ಎಲೆಲೆ ಪಾತಕ ಮುಂಚಿದೆ ಪೋಗು ನೀನೆಮ್ಮ । ನೆಲನ ಕಳದೆ ಸಿಕ್ಕಿದೊಡೆ ನಿನ್ನ ॥
ತಲೆಯೊರೆವೆನೆಂದು ಪಲ್ಮೊರೆಯುತೆ ಶಿವ । ಬಲಕೂಡಿ ನಿಜಪುರ ಕೆಳ್ತಂದ ॥ (52)

ಗಿರಿಜೆಯ ಮೆಯ್ಗಂಪಿಗೆರಗುವ ತುಂಬಿನಿಂ । ಚರವಶ್ವತರಗಾನ ರಸದೊಳು ॥
ಬೆರೆದು ಕಿವಿಗೆ ರಂಜಿಸೆ ತಲೆಯೊಲೆವ ಶಂ । ಕರಶಾಂತ ಮಲ್ಲಿಕಾರ್ಜುನ ಜಯು ॥ (53)

ಚರಮ ಶರಣಾಗ್ರಣಿಯು ಕೃತಿಯು ವಿ । ಸ್ತಾರನ ಮಾಳ್ಪರಾದರಿಪರ ॥
ತಾರರ್ಕರುಳ್ಳನ್ನವರ ಮಲ್ಲಿಕಾರ್ಜುನ । ನೋರಂತೆ ಪಾಲಿಪನೊಲವಿಂದೆ ॥ (54)

ಅಂತು ಸಂಧಿ 18 ಕ್ಕಂ ಪದನು 1006 ಕ್ಕಂ ಮಂಗಳ ಮಹಾಶ್ರೀ.

ಹತ್ತೊಂಬತ್ತನೆಯ ಸಂಧಿ.

ರಜತಾಚಲವಾಸನ ಭೂತೇಶನ । ಭುಜಗ ಭೂಷನ ಭವನಾಶನ ॥
ಅಜಹರಿಹೃದ್ವಾಸನ ಗಿರಿಜೇಶನ । ಭಜಿಸುವೆ ಶಾಂತಿ ಮಲ್ಲೇಶನ ॥ (1)

ಬೆಳದಿಂಗಳ ಸೋನೆಯು ಕಂತು ಸೇನೆಯು । ನೆಳಗಾಳಿ ದಂಪಮಲ್ಲಿಗೆಗಂಪ ॥
ಪಳಿವ ಸೊಬಗು ಬೀರುತಿದೆ ಪೆಂಪುವೆತ್ತು ನಿ । ನ್ನೊಳು ನುಡಿಯಿಂಪು ವಿರುಪ ಭೂಪ ॥ (2)

ಅಂಬುಜ ಪತ್ರೋಪಮ ನೇತ್ರ ಚಾರು ನಿ । ತಂಬಿನಿ ಮತ್ತವಾರಣಯಾನೆ ॥
ಬಿಂಬಾಧರೆ ಚಕ್ರವಾಕ ಪಯೋಧರೆ । ಕಂಬುಸಮಗ್ರೀವೆ ಕಥೆಗೇಳ ॥ (3)

ಸೌಂದರ ನೃಪತಿ ತಿರುವಾರೂರ್ಗೆ ದುಮ್ಮನ । ದಿಂದೆಯ್ದಿ ವಲ್ಮೀಕನಾಥನ ॥
ಮಂದಿರಕೆಳ್ತಂತು ಕೈಮುಗಿದಿದಿರೊಳು । ನಿಂದಿರಲವನೊಳಗಿಂತೆಂದ ॥ (4)

ಬಂದೆಯು ಕಲಿಕಾಮನ ಹೆಡಕಟ್ಟ । ತಂದೆಯು ಪೊಣರ್ದಡೆ ರಣದೊಳು ॥
ಕೊಂದೆಯು ಸುಮ್ಮನೆ ಬಾರೆ ನೀ ಛಲವಂತ । ನೆಂದೆನೆ ಸೌಂದರನಿಂತೆಂದ ॥ (5)

ಕೊಲಿಸಿದೆ ನೀನೆನ್ನ ಸೇನೆಯನವಗೆ ಬೆಂ । ಬಲವಿತ್ತು ಮುರಿದು ಬಂದಪೆನೆನ್ನ ॥
ಛಲಮುಸಿವಣ್ಣವಾದುದು ಪಾತ್ರವ ಬಿಸು । ಡೆಲೆ ದೇವ ಸಾಕು ನಿನ್ನೊಡೆತನ ॥ (6)

ಕೊಂದನಾ ಕಲಿಕಾಮನೆ ಪುಸಿ ನೀನೀಗ । ಕೊಂದೆಯೆನ್ನಖಿಲ ಸೈನಿಕರನು ॥
ಎಂದೆಂದಿಗು ನಿನ್ನ ಸಂಗವೆಮಗೆ ಬೇಡ । ವೆಂದು ಸೌಂದರ ಮಗುಳಿಂತೆಂದ ॥ (7)

ಓಡಿದ ಶಿವಪುತ್ರ ಸೌಂದರನೆಂದೆಂಬ । ಖೋಡಿಯಿಂದೆನ ಗಾದುದವಗೆಯ್ದ ॥
ಮಾಡತಕ್ಕವನಲ್ಲದೊಡೆ ಬೇಗದೊಳಿನ್ನ । ಕೂಡೆ ಸಂತವ ಮಾಳ್ಪುದೆನಲೆಂದೆ ॥ (8)

ಬಾರೆಲೆ ಮರುಳೆ ಮಾನವನಲ್ಲ ಕಲಿಕಾಮ । ನಾರೆಂದರಿಯೆ ವೀರಭದ್ರನೆ ॥
ಧಾರುಣಿಯೊಳಗವತರಿಸಿದ ನವಗೆಣೆ । ಯಾರಿಳೆಯೊಳಗೆಂದುಸುರ್ದನು ॥ (9)

ಬಲ್ಲಿದನವ ಪೋಗದಿರೆಂದು ಸಾರಿದು । ದಿಲ್ಲವೆ ನಾವು ನಿನ್ನೊಡನೆಂದು ॥
ನಿಲ್ಲದೆ ಪೋದೆ ಪಂಥದೊಳೆಮ್ಮ ವಾಕ್ಯವ । ನುಲ್ಲಂಘಿಸಿ ಮೂರ್ಖತೆಯಿಂದೆ ॥ (10)

ಅರಸುತನದ ಪೆರ್ಮೆಗೆ ಬೆದರರು ಶಿವ । ಶರಣರಹಂಕೃತಿಯಿಲ್ಲದ ॥
ಹರಭಕ್ತರ ಕಾಣುತೆ ಬೇಡರಿವರವ । ರಿರವು ನಿನಗೆ ಕಾಣಿಸದೆಂದೆ ॥ (11)

ನೀಪುರದೊಳಗಿರು ಕಲಿಕಾಮನ ನಾ । ನಾಪರಿಣತೆಯಿಂದೆ ಬೋಧಿಸಿ ॥
ಕೋಪವ ಬಿಡಿಸಿ ನೋಡುವೆನೆಂದು ಬೀಳ್ಕೊಂಡು । ನಾಪೋದೆ ಜಂಗಮ ರೂಪಾಂತು ॥ (12)

ನಿಂದೆ ಮೆಲ್ಲನೆ ಪೋಗಿ ಕಲಿಕಾಮ ದೇವನ । ಮುಂದೆ ಕಾಣುತಲವ ನಿದಿರೆದ್ದು ॥
ವಂದನೆಗೆಯ್ದು ಕುಳ್ಳಿರಿಸಿ ನೀವೆಲ್ಲಿಂದೆ । ಬಂದಿರಿ ಪೇಳೆನಲಿಂತೆಂದೆ ॥ (13)

ಪೊನ್ನಂಬಲದತ್ತಣಿಂ ದೆಳ್ತಂದೆವು । ನಿನ್ನ ಕೀರ್ತಿಯ ಕೇಳಿ ಕಲಿಕಾಮ ॥
ನಿನ್ನಂತೆ ಸೌಂದರವಾಂತು ಶಿವನ ನಂಬಿ । ಮನ್ನಿಪರಾರಿರ್ಪರರಿಯೆ ನೆಂದೆ ॥ (14)

ನಂಬಿ ಶಿವನ ಭಜಿಸಿದೆ ಪೂರ್ವದೊಳೀಗ । ನಂಬಿ ಜಂಗಮಪೂಜೆಗೆಯ್ದಪೆ ॥
ನಂಬದರುಂಟೆ ನಿನ್ನಂತೆ ಲೋಕದೊಳಸ । ಮಾಂಬಕ ಶರಣರನೆನೆ ಕೇಳಿ ॥ (15)

ಬೇಡವೀ ನುಡಿ ದೇಶಿಕೋತ್ತಮ ಮತ್ತೊಂದ । ನಾಡಬಾರದೆ ಬೇಗದೊಳೆಮ್ಮ ॥
ಕೂಡೆ ನೀವೆಳ್ತಂದ ಕಾರ್ಯವ ಬೆಸಸೆನ । ಲೋಡುವರನುವಾಗು ತಿಂಡೆಂದ ॥ (16)

ನಂಬಿಯೊಡನೆ ಸಂತವಾಗಿನ್ನು ಕಲಹವೇ । ಕೆಂಬ ನುಡಿಯ ಕೇಳಿ ಕಲಿಕಾಮ ॥
ಬೆಂಬತ್ತೆ ಬೇಗದೊಳೋಡಿದ ನದನೇ । ನೆಂಬೆ ನಾ ಪೊತ್ತಿನುಬ್ಬೆಸವನು ॥ (17)

ಜೆಡೆ ಕೆದರಿದುದೆನ್ನ ಕೈಯ ಕಮಂಡಲು । ಒಡೆದುದು ರುದ್ರಾಕ್ಷೆ ಪರಿದವು ॥
ಕೊಡೆ ಬಿದ್ದುದು ದಂಡ ಮುರಿದುದು ಖಟ್ವಾಂಗ । ಕೆಡೆದುದು ಭರದೊಳೋಡಿದೊಡಾಗ ॥ (18)

ಓಡಪೆರೆಲೆ ಕೌಟಲ್ಯ ಜಂಗಮ ನನ್ನ । ಕೂಡೆ ನೀ ದೂಷಕ ನಾಮವ ॥
ಆಡಬರ್ಪುದೆ ಕೆಡೆ ಕೆಡೆಯೆಂದು ಬೆಂಬತ್ತ । ಲೋಡಿ ಬಂದೆಮ್ಮ ಸೀಮೆಯಪುಗೆ ॥ (19)

ಬದುಕಿದೆ ಪೋಗು ಪೋಗೆನುತೆ ಪಿಂದಕೆ ತಿರು । ಗಿದ ನವನಾಬಂದು ನಮ್ಮೊರ್ಗೆ ॥
ಅದನಿನಿಸುಳಿಯದೊರೆಯೆ ಕೇಳದುಃಖಿ । ಗದಗದಿಸುತೆ ಸೌಂದರ ಭೂಪ ॥ (20)

ತಲೆಯೆರಗಿದ ಮನದೊಳು ಮರುಗಿದ ಕಡು । ಪಳಿದತಿಭಯರಸದೊಳಗಾಳ್ದ ॥
ತಳೆದ ಚಿಂತಾಭರದೊಳಗಿರ್ಪ ಸೌಂದರ । ನೊಳು ನಾನು ಕರುಣದೊಳಿಂತೆಂದೆ ॥ (21)

ಕೇಳೆಲೆ ಕಂದ ಸಂಗರದೊಳಾ ಕಲಿಕಾಮ । ಸೋಲುವನಲ್ಲ ಕೃತ್ರಿಮದಿಂದೆ ॥
ಆಳುಗೆಡಿಸಿ ನಿನ್ನೊಡನೆ ಸಂತಸವ ಮಾಳ್ಪೆ । ನೇಳೆಂದು ನುಡಿದೆ ಸೌಂದರನೊಳು ॥ (22)

ಅರಸಕೇಳಾ ನುಡಿಯೆದೆಗೊಂಡು ಸೌಂದರೇ । ಶ್ವರನೆನ್ನೊಳಿಂತೆಂದ ಕಲಿಕಾಮ ॥
ಉರಿದೇಳ್ವನೆನ್ನ ಪೆಸರ್ಗೊಳೆ ನಾ ಬರ್ಪ । ಪರಿಯಾವುದರುಪೆನಲಿಂತೆಂದ ॥ (23)

ನಾನಿನ್ನೊಡನೆ ಬಂದಪೆ ನಿನಗಾತನಿಂ । ದೇನಾದೊಡದ ಪರಿಹರಿಸುವೆ ॥
ನೀನೆನ್ನ ನಂಬಿ ಬಾರೆನೆ ಕೇಳ್ದು ಬೇಗದೊ । ಳಾನರವಲ್ಲಭ ಪೊರಮಟ್ಟ ॥ (24)

ನಡೆದವು ಸೇನೆ ಸಹಿತ ಮುನ್ನಿನಿಂದೆ ನೊ । ರ್ಮಡಿ ವಿಭವದಿ ಪಿಂತೆ ರಣದೊಳು ॥
ಮಡಿದ ಬಲವ ನೇಳಿಸಿಕೊಂಡು ಭೇರಿಯು । ಗ್ಗಡ ಧ್ವನಿಯೆಣ್ದೆಸೆಗಳ ತೀವೆ ॥ (25)

ಕಳುಹಿದೆನೊಂದು ಶೂಲೆಯ ನೆಮ್ಮ ದಳಕೆ ಮುಂ । ಬಲವಾಗಿ ಕಲಿಕಾಮನ ಮೇಲೆ ॥
ಎಳೆವಾವಿನ ವಿಷವೆಂತಂತೆ ಪಿಸುಪುವೆಂ । ತೊಳಪೊಕ್ಕು ದವನ ದೇಹದೊಳದು ॥ (26)

ಉರಿಕೊಳೆ ಕೋಮಲ ಲತೆಯಂತೆ ಕಲಿಕಾಮ । ಕೊರಗಿದ ನಾರಿ ಕಲ್ಲಂತಂತೆ ॥
ಕರಗಿದ ನಂಜು ತಾಗಿದ ಹುಲ್ಲೆಯಂದದೆ । ಸೊರಗಿದ ಶೂಲೆಯೊತ್ತರದಿಂವ ॥ (27)

ಅರಸ ಕೇಳಾ ಸಮಯದೊಳವ ನೂರನಾ । ವರಿಸಿದೆವಾ ಸೌಂದರೇಶನ ॥
ಬಿರುದಿನ ಕಹಳಾರವಕೆವಿಯೊಗೆ ಕೇಳೆ । ಶರಣಲಲಾಮನ ಕಲಿಕಾಮ ॥ (28)

ಕಡುಗೋಪದೆ ಖಡುಗವನಾಂತು ನಿಂದಡಿ । ಯಿಡೆ ಬಗೆಗೆಟ್ಟು ಕೈಕಾಲ್ಗಳು ॥
ನಡುಗಿ ಸಾಹಸದೇಳ್ಗೆಯುಡುಗಿ ಝುಮ್ಮಿನೊಳೀಗ । ದಡದಡಿಸಲು ಮರುಗುತಲೆಂದ ॥ (29)

ಹರಹರ ಎಡರಡಸಿದೆಡೆಯೊಳ್ದ್ರೋಹಿ । ಪರಿತಂದ ನೆಮ್ಮೊರ್ಗೆ ನಾವಾವ ॥
ಪರಿಯೊಳವನ ವದನವ ನೀಕ್ಷಿಪೆನೆಂದು । ಕರವಾಳನೊಡ್ಡಿ ಭೋಂಕನೆ ಪಾಯ್ದು ॥ (30)

ಜಾರಿದುದಸುಮಡಿದುದು ಗೋಣು ಕಣ್ಮೇಲ । ಕೇರಿದು ದೊಳಸರಿದುವಯ್ಯ ॥
ಅರಿದುದೆರ್ದೆ ಕರಚರಣಗಳೊಳು ತಣ್ಪು । ದೋರಿದುದವ ಧರೆಗೊರಗಿದ ॥ (31)

ಒಡಲು ಮರೆಸು ಮೂರ್ಛೆಯೊಳಿರ್ಪ ಕಲಿಕಾಮ । ನೆಡೆಗೆ ಸೌಂದರ ಭೂಮಿಪಾಲನ ॥
ಒಡಗೊಂಡು ಪೋಗದಿದಿರುವಂದಳಾತನ । ಮಡದಿ ಸದ್ಭಕ್ತಿಯೆಸಕದಿಂದೆ ॥ (32)

ಶರಣೆಂದು ಬಿಜಯಮಾಡಿಸಿ ಪಸೆಯಿಟ್ಟು ಕು । ಳ್ಳಿರಿಸಿ ವಿಭೂತಿ ವೀಳಯವಿತ್ತು ॥
ತರಳೆ ಸದ್ಭಕ್ತಿಭಾವದೆ ತಲೆಯೆರಗಿ ನಿಂ । ದಿರೆ ನೋಡಿ ಸಂತಸದೆಸಕದಿ ॥ (33)

ಲಲನೆಯೊಳತಿವಿನಯವ ನಾಡಿ ಕಡುಗಲಿ । ಕಲಿಕಾಮದೇವನಿರವನೋಡಿ ॥
ನೆಲದಾಣ್ಮ ಸೌಂದರ ನೃಪಗೆ ತೋರಿಸಿ ಮಗು । ಳೊಲವಿಂದ ತಾವೆಲ್ಲ ನಿಂತೆಂದ ॥ (34)

ಕಂಡೆಯ ಮಗನೆ ಸೌಂದರ ಶರಣಬ್ಜ ಮಾ । ರ್ತಂಡನ ಮುಕ್ತಿ ವಧೂಟಿಯ ॥
ಗಂಡನ ಕದನ ಪ್ರಚಂಡನ ಪಾಪವೇ ತಂಡ ಕೇಸರಿಕಲಿಕಾಮನ ॥ (35)

ಎನ್ನ ಕೊರತೆಗೇಳದ ನಿಜಭಕ್ತರ । ನಿನ್ನೊಳು ಖತಿಗೊಂಡಶಕನವ ॥
ಭಿನ್ನಮತಾಚಾರ ಸಾರವಿರಕ್ತನ । ಸನ್ನುತಯುವ ಧರ್ಮಯುಕ್ತನ ॥ (36)

ಈ ಪರಿಯೊಳು ನಂಬಿಯೊಡನೆ ಬಣ್ಣಿಸಿ ಪೇಳ್ದು । ನಾಪದಪಿಂದವನಂಗವ ॥
ಭೂಪತಿಗೇಳೊಯ್ಯನೆ ತಡಪಿದೊಡಾತ್ಮ । ನೆ ಪರಿಪೂರ್ಣತೆವಡೆದುದು ॥ (37)

ಮರವೆ ಜುಮ್ಮನೆ ತ್ರಿಳದುದು ಮೊರೆದೋಳದು । ದರಿವು ಚೇತನವೆರ್ದೆಗೊಂಡುದು ॥
ತುರುಗಿದುದುಸುರೊಡಲೊಳು ಕಲಿಕಾಮಕ । ಣ್ದೆರೆದೆನ್ನ ನೋಡಿ ನಂಬಿಯ ಕಂಡ ॥ (38)

ಕಡುಮುಳಿಸಿಂದೆ ತನ್ನೆರ್ದೆಯೊಳು ನಾಂಟಿರ್ದ । ಖಡುಗವ ನುರ್ಚೆವಾಯತಗಂಡು ॥
ಪೊಡವಿಯೊಡೆಯ ಕೇಳಾಕ್ಷಣವವನ ಕೈ । ವಿಡಿದು ಮೆಲ್ಲನೆ ನಗುತಿಂತೆಂದ ॥ (39)

“ಬೇಡ ಮಗನೆ ನಂಬಿಯೊಡನಿಂತು ಮುನಿಸು ನಾ । ಡಾಡಿಯಲ್ಲವನೆನ್ನ ನಿಜಭಕ್ತ ॥
ನೋಡು ದಯಾಪಾಂಗದೆ ವಿನಯದ ಮಾತ । ನಾಡಿ ಚಿತ್ತದನೋವ ಕಳೆಯೆಂದೆ ॥ (40)

ನಂಬಿಯೆನಗೆ ನಂಬಿದ ಭಕ್ತನೆನ್ನೊಳು । ನಂಬುಗೆಯಿವಗೊಳಗುವಿವೆನ್ನ ॥
ಬಿಂಬನೆನ್ನೊಡಲೆನ್ನ ಜೀವವೀತನ ದೋಷಿ । ಯೆಂಬುದುಚಿತವಲ್ಲ ನಿನಗೆಂದೆ ॥ (41)

ಈತನ ಚಾರಿತ್ರವೆನಗಧಿಕ ಪವಿತ್ರ । ವೀತನಧರ್ಮವೆನಗೆ ಮರ್ಮ ॥
ಈತನ ರೀತಿಗಳೆಲ್ಲವು ಮತ್ಪ್ರೀತಿ ನೀ । ನೀತನ ಮನ್ನಿಸಿ ಕಳುಪೆಂದೆ ॥ (42)

ನಿನ್ನನೀ ಪರಿಯೊಳಗೊಲಿಸಿದ ಭಕ್ತಿಸಂ । ಪನ್ನ ನೀ ನಂಬಿಯೆಂದರಿಯದೆ ॥
ಎನ್ನೆರ್ದೆಯೊಳು ನೋವ್ರುದಾಳ್ದದೆ ನಕಟೆಂದು । ಖಿನ್ನತೆಯಾದ ಭಾವವ ಕಂಡು ॥ (43)
ಬೇಡ ಮಗನೆ ಮನದೊಳು ದುಃಖವೀ । ನಂಬಿ ಮಾಡಿದುದಕೆ ನೀ ನೆಗಳ್ದುದು ॥
ನಾಡೆ ಮನೋಜಯ ಮಾದುದು ಸತ್ಯವೆಂ । ದಾಡಿದೆ ನಾ ನಸುನಗೆಯಿಂದೆ ॥ ” (44)

ಆ ಮಾತುಕೇಳ್ದು ನೃಪಾಬ್ಧಿಯೊಳಾಳ್ದು ಸ । ತ್ಪ್ರೇಮಾತ್ಮನಾಗಿ ಸಂತಸದಾಳ್ದು ॥
ರೋಮಾಂಚನ ಗಾತ್ರದ ಬಾಷ್ಪನೇತ್ರದ । ಸೀಮೆಯೆನಿಸಿ ಬಂದು ಕಲಿಕಾಮ ॥ (45)
ನೆಗಳ್ದನು ರಾಗತೆಯಿಂದಪ್ಪಿ ನಂಬಿಯು । ಮೊಗದೊಳು ಮೊಗವಿಟ್ಟು ಮುಂಡಾಡಿ ॥
ನಗೆಗಂಗಳಿಂದೆ ನೋಡಿದನೊಲವಿಂದೆ ರು । ದ್ರಗಣಾಭಿರಾಮನ ಕಲಿಕಾಮ ॥ (46)

ಬಂದುದನೂನ ವಿಮಾನ ಭೋಂಕನೆ ಸುರ । ದುಂದುಭಿ ಮೊಳಗಿದುದಮರರ ॥
ವೃಂದವರಲ್ಮಳೆಗರೆದುದು ಮುದದೊ । ಳೆಳ್ತಂದರು ರುದ್ರಕನ್ನೆಯರಾಗ ॥ (47)
ಅರಸಲಾಲಿಸು ಕಳುಪಿದೆ ರಜತಾದ್ರಿಗೆ । ತರಳೆ ಸಹಿತಕಲಿಕಾಮನ ॥
ತಿರುಗಿದ ನಂಬಿ ಸಹಿತ ನಿಜಪುರಕೆಂದ । ತಿರುವಂಜಿಕಳನಾಥನಬುಜಾಕ್ಷಿ ॥ (48)

ಗಿರಿಜೆಯ ಮೆಯ್ಗುಂಪಿಗೆರಗುವ ತುಂಬಿಯಿಂ । ಚರವಶ್ವತರಗಾನ ರಸದೊಳು ॥
ಬೆರೆದು ಕಿವಿಗೆ ರಂಜಿಸೆ ತಲೆಯೊಲೆವ ಶಂ । ಕರಶಾಂತ ಮಲ್ಲಿಕಾರ್ಜುನ ಜಯ ॥ (49)
ಚರಮ ಶರಣಾಗ್ರಣಿಯ ಕೃತಿಯ ವಿ । ಸ್ತಾರವ ಮಾಳ್ಪರಾದರಿಪರ ॥
ತಾರರ್ಕರುಳ್ಳನ್ನವರ ಮಲ್ಲಿಕಾರ್ಜುನ । ನೋರಂತೆ ಪಾಲಿಪನೊಲವಿಂದೆ ॥ (50)

ಅಂತು ಸಂಧಿ 19 ಕ್ಕಂ ಪದನು 1056 ಕ್ಕಂ ಮಂಗಳಂ ಮಹಾಶ್ರೀ.

(ಹತ್ತೊಂಬತ್ತನೆಯ ಸಂಧಿ ಸಮಾಪ್ತಂ.)

ಇಪ್ಪತ್ತನೆಯ ಸಂಧಿ-

ಸುತ್ರಾಮ ಸಾರಸಭವ ಮಾಧವ ಶತ । ಪತ್ರ ಸನ್ಮಿತ್ರ ಚಂದ್ರಪ್ರಭ ॥
ಚಿತ್ರಾಂಗ ಚರ್ಮವಸನ ಮುನಿ ಕುಮುದ ನ । ಕ್ಷತ್ರೇಶ ಮಲ್ಲಿಕಾರ್ಜುನ ಜಯ ॥ (1)
ಪೊಸಬಗೆ ಪೊಸಮಾತಿನ ಸುಗ್ಗಿ ಪೊಸತಾದ । ರಸಭಾವ ಚಿತ್ರ ಚಮತ್ಕಾರ ॥
ಪೊಸ ಸವಿ ಬೆಡಗು ಬಿನ್ನಣದಿಂದೆ ಸಭೆಯೊಳ್ । ಗೆಸೆದುದು ವಿರುಪನಿನ್ನೊಳುನುಡಿ ॥ (2)

ಮಂದಗಮನೆ ಮಾರನ ಮಂತ್ರದೇವತೆ । ಚಂದಿರ ಮುಖಿ ಚಂದನಗಂಧಿ ॥
ಇಂದೀವರ ಲೋಚನೆಯಿನಿದುಟಿಯಳೆ । ಮುಂದಣ ಕಥೆಯ ಲಾಲಿಸು ಕಾಂತೆ ॥ (3)
ಪರವೆಯೊಳತಿ ಸುಖ ಸಾಮ್ರಾಜ್ಯ ಪದದೊಳ । ಗಿರುತಿರುತೊಂದು ವಾಸರದೊಳು ॥
ಧರೆಯೊಳಗಿರ್ದ ಶಿವಸ್ಥಾನಗಳ ನೋಡಿ । ಬರವೇಳೆನುತೆ ಪೋಗಲನುವಾದ ॥ (4)

ಪರವೆಯ ಪರಿರಂಭಣಗೆಯ್ದು ವಿನಯೋ । ತ್ತರದೆ ಮಂಗಲೆಗೆ ಮನ್ನಣೆಯಿತ್ತು ॥
ಹರುಷದೆ ವಲ್ಮೀಕನಾಥ ಲಿಂಗನ ಚರಣ । ಕ್ಕೆರಗಿ ತಾನಂಬಿ ಬೀಳ್ಕೊಂಡ ॥ (5)
ತಿರುಕಳ ಹಸ್ತಿ ಕಾಂಚೀಪುರ ಮುಖ್ಯನ । ಗರಗಳ ಪೊಕ್ಕಲ್ಲಿ ಪಡಿವೊನ್ನ ॥
ಅರಸಕೇಳ್ಪಡೆದು ಪಯಣ ಗತಿಯಿಂದೆ ಸಾಂ । ದರ ತಿರುಪತ್ತೂರ್ಗೆ ನಡೆತಂದ ॥ (6)

ಬಂದುದು ತತ್ಪುರದೊಳಗಿರ್ಪ ಶರಣರ । ಸಂದೋಹಕಳಸಕನ್ನಡಿ ಗೂಡಿ ॥
ದುಂದುಭಿರವದೆಸಕದೆ ನೃಪತಿಯ ಕರ । ತಂದರೊಲಿದು ತಿರುಪತ್ತೂರ್ಗೆ ॥ (7)
ನಡೆತಂದ ನಂಬಿ ಶಿವ (ಪ್ರೀತಿ) (ಪ್ರತಿ) ಬಿಂಬ ವೆ । ಬ್ಬಡೆಗೊಡಿ ಕಣ್ಗೆರಾಜಿಸೆ ಗಾದಿ ॥
ಬಿಡದೆ ಕಹಳಕಾರರುಲಿಯೆ ಸಜ್ಜನ ಸಂದೋಹ ದು । ಗ್ಗಡಣಮುಣ್ಮೆ ಮೋಹನರಸ [ಪೊಣ್ಮೆ ॥ (8)

ಬಂದಾ ಸೌಂದರ ತಿರುಪತ್ತೂರ ನಾಥನ । ಮಂದಿರ ಕಧಿಕ ಸಂಭ್ರಮದಿಂದೆ ॥
ವಂದಿಸಿ ತಾಳವಿಡಿದು ಪಡಿವಡೆದನು । ನಂದಿಯೊಂಡಿಗೆಯುಳ್ಳ ಪಡಿವೊನ್ನ ॥ (9)
ಪಡಿವೊನ್ನವಡೆದು ಸೌಂದರ ಭೂಪನೆಳ್ತಂದು । ಮೃಡಗೇಹದಗ್ರ ಮಂಟಪದೊಳು ॥
ಪೊಡಪಿಯೆರೆಯ ಕೇಳೆ ಮಂತ್ರಿ ಕುರುಂಬರ । ಗಡಣದೊಳೊಲ್ದು ಮಂಡಿಸಿದನು ॥ (10)

ಪಾಡುವ ಗಾಯಕ ನಿಕರಕೆ ಬಿರುದ ಕೊ । ಡಾಡುವ ಪಾಠಕ ನಿಚಯಕೆ ॥
ಆಡುವ ಶಾತ್ರ ನಿಕಾಯಕೆ ಚಾಗವ । ನೀಡುತ ಸೌಂದರ ನೆಸೆದಿರ್ದ ॥ (11)
ಅರಸಕೇಳಾ ಸಮಯದೆ ಬಂದರಿರ್ವರು । ತರುಣಿಯ ರೀಶಮಂದಿರ ಕೊಲ್ದು ॥
ಪರಿಮಳ ಪುಷ್ಪಮಾಲೆಯ ಶಿವಗೇರಿಸಿ । ತಿರುಗಿ ಬರುತೆ ಗಾಡಿಯೆಸಕದೆ ॥ (12)

ಕಂಡರನಂಗನಲ್ಲದ ನವಕುಸುಮ ಕೋ । ದಂಡನೆನಿಪ ಸೌಂದರೇಶನ ॥
ಮಂಡೆಯೊಲೆದರಚ್ಚರಿವಟ್ಟು ಮುದದಿಂದೆ । ಕೊಂಡಾಡಿದರವರ ನೇನೆಂಬೆ ॥ (13)
ನಳನಸರನ (ನಲ್ಲಿ) ಲಲಿತಪೂರ್ಣ ಚಂದ್ರನ । ಕಳೆಯ ಜಯಂತನ ಚಾಣ್ಮೆಯ ॥
ನಳಕೂಬರನ ಗಾಡಿಯ ನಿಜಗಾತ್ರದೆ । ತಳೆದ ಸೌಂದರನೆಂದು ಪೊಗಳ್ದರು ॥ (14)

ಈ ಸೊಬಗೀ ಜವ್ವನ ಪೀ ಚೆಲ್ವಿನ । ವ್ಯೈಸಿರಿಯಾಗರುವಿಕೆ ಯೇಳ್ಗೆ ॥
ಈ ಸೌಂದರ ಗಲ್ಲದೆ ಕಾಣೆವೀ ಚೋಳ । ದೇಶದೊಳೆಂದರಾ ಸತಿಯರು ॥ (15)
ಈತನೆಮ್ಮೊಡೆಯನ ಕುವರಿಯ ವರಿಸ ತ । ಕ್ಕಾತನೀ ನೃಪ ನಿನ್ನೆ ಬರ್ಪಾಗ ॥
ಆ ತರಳೇಕ್ಷಣೆ ಮನದೊಳು ಸೋಲ್ತು ಸಂ । ಪ್ರೀತಿಯಿಂದೊಲಿದೀಕ್ಷಿಸಿದಳು ॥ (16)

ಕಂಡಮಾತ್ರ ದೊಳುರಿ ತಾಗಿದ ಜಾಜಿಯ । ದಂಡೆಯಂದದಿ ಕಳೆಗುಂದಿ ॥
ಬೆಂಡಾಗಿಡಿಳ್ಳೆ ದೆಯಾಗಿ ಪೂಗಣೆತಾಗಿ । ಮಂಡೆಯೆರಗಿ ಚಿಂತಿಸಿದಳು ॥ (17)
ಪೋದಳು ಸೆಜ್ಜೆವನೆಗೆ ಕಾಮಯೋಗಿಣಿ । ಯಾದಳೆಂದವಡುತಿರೆ ಕೇಳ ॥
ಆದರಿಸೆಂದು ಸೌಂದರ ಮಂತ್ರಿಯೊಡನೆ ವಿ । ನೋದದೆ ಬೆಸಸೇಯ ಲಿಂತೆಂದ ॥ (18)

ನೀವಾರು ನಿಮ್ಮೊಡೆಯ ಪೆಸರೇನು ನೀ । ವಾವೂರು ನಿಮ್ಮೊಡೆಯನ ಪುತ್ರಿ ॥
ಆವ ವರ್ತನೆಯೊಳಿರ್ದ ಪಳೆಮ್ಮೊಡನೆ ಪೇ । ಳನೀವೆನಲವರಿಂತೆಂದರು ॥ (19)
ನಾವು ಸಂಕಿಲೆಯುಲಾಳಿಯರೆಮ್ಮ ಪೆಸರು ಸಂ । ಜೀವನೆ ಚಂದ್ರ ಕಳೆಯರೆಂದು ॥
ಭಾವಿಸೆ ನಾವೀರ್ವರಾ ಸಂಕಿಲೆಯ । ಜೀವವೆಂದಳು ಚಂದ್ರಕಲೆಯಾಗ ॥ (20)

ನಾ ತಿಳುಪುವೆ ಮಂತ್ರಿಪ ನಿನಗವಳ ವೃ । ತ್ತಾಂತದ ಪೂರ್ವಾಪರವನು ॥
ಸಂತಸದಿಂಗಡಲೊಳು ಮುಳುಗಾಡಿ ಭೂ । ಕಾಂತನ ಮನದಂಚೆ ನಲಿವಂತೆ ॥ (21)
ಈ ತಾಣದೊಳಗಿರ್ಪ ನೀಶಾನ್ಯ ಸೆಟ್ಟಿಯೆಂ । ಬಾತ ಶಿವಾಚಾರ ಸಂಪನ್ನ ॥
ಆತನ ಸತಿ ಶಿವದೇವಿಯೆಂದಧಿಕ ವಿ । ಖ್ಯಾತೆ ಪತಿವ್ರತೆ ಗುಣವಂತೆ ॥ (22)

ವಿನಯದ ಪೆಕ್ಕೆ ಸದ್ಗುಣದಿಕ್ಕೆ ಗಂಭೀರ । ವನನಿಧಿ ಸಕಲಕಲಾನಿಧಿ ॥
ಮನಸಿಜ ಹರಭಕ್ತಿಯ ದೇಶ ಶುಭವಾಸ । ನೆನಿಸಿರ್ಪರಾ ದಂಪತಿಗಳು ॥ (23)
ಅವರಗ ಜೇಶನ ವರದಿಂದೆ ಪಡೆದರಾ । ಯುವತಿ ಯನುಗ್ರತಪವ ಮಾಡಿ ॥
ಶವೆ ಸಲಹಿದ ರಕ್ಕರು ಮಿಗಲ ಮೃತಾರ್ಣ । ವನಿಂದು ಕಲೆಯ ಸಲಹುವಂತೆ ॥ (24)

ಲಲನೆ ಲಲಿತ ಕಲ್ಪಲತೆಯಂತೆ ಚೆಲ್ವಿಂದೆ । ಬೆಳೆದಳಬ್ಜನಿ ಮೊಗ್ಗೆದಳದಂತೆ ॥
ತಳೆದಳು ಮೊಳೆ ಮೊಲೆಗಳ ದಿನದಿನಕತಿ । ಕಳೆಯೆತ್ತಿದಳು ಕನ್ನೆವೆರೆಯಂತೆ ॥ (25)

ಒದವಿದು ದೆಳೆಜವ್ವನ ಪೊಗರಿಡಿದವು । ಕದಪುಗಳತಿ ನಯವೆತ್ತಲು ॥
ಮದನ ನವೀನ ಲತಾ ವಪುವೆಸೆದುದು । ಮದನನಮುಸದಲಗೆಯಂತೆ ॥ (26)

ಮೊಳೆಹೋರಿದ ಮುಂಬರಿಯುದ ಗಾಡಿಕರಿ । ಗೊಳಸುವ ಮುಗಳನಿರೀಕ್ಷಿಸಿ ॥
ತಳೆದರು ತಂದೆ ತಾಯಿಗಳು ಮುದವ ಶಶಿ । ಕಳೆಗಂಡ ಪಾಲ್ಗಡಲೆಂತಂತೆ ॥ (27)

ಎನಗೆ ತನಗೆ ವೇಳ್ಕೆಂದೆಯ್ದೆ ಬಿಳ್ಪಬಿ । ದ್ದಿತರ ಕುಮಾರರ ನಾಕಾಂತೆ ॥
ತನಗೆಣೆ ಯಲ್ಲವೆಂದೊಲ್ಲಳು ವರಿಸೆನೆ । ಮುನಿವಳು ತಂದೆ ತಾಯಿಗಳೊಳು ॥ (28)

ಒಲ್ಲಳತರ ಪುರುಷರನೀಕೆ ಬಯಸುವ । ವಲ್ಲಭನಿಳೆಯೊಳ ಗಾರೆಂದು ॥
ಗಲ್ಲದ ಮೇಲೆ ಕರವನಿಟ್ಟು ಚಿಂತಿಸಿ । ತಲ್ಲಣಿಪರು ಪೆತ್ತವರೆಯ್ದೆ ॥ (29)

ಕೇಳಲೆ ಮಂತ್ರಿ ಸೌಂದರ ನಿಲ್ಲಿಗೆಳ್ತಂದ । ವೇಳೆಯೆಂತ್ರುಟೊ ನೀವು ಬರ್ಪುದ ॥
ಆಳಿಯರೊಡನೆ ನಿರೀಕ್ಷಿಸುತಾ ಕಾಂತೆ । ಬೇಳಾದಳವನ ಚೆಲ್ವಿಕೆಗಂಡು ॥ (30)

ನೋಡುವರವಳನನೇಕ ಪುರುಷರೊಲ್ದು । ನೋಡಲವರನೆಣೆ ಯಲ್ಲೆಂದು ॥
ನೋಡಿದಳೀ ಕುವರನ ನೀತಪೂರ್ವದೆ । ಮಾಡಿದ ಪುಣ್ಯಫಲವೆಂತೊ ॥ (31)

ಅರಸ ಕೇಳಾ ನೀರೆಯಾಡಿದ ಮಾತ ತುಂ । ಬುರ ಕೇಳ್ದು ನಸುನಗು ತಿಂತೆಂದ ॥
ಸ್ಮರ ರೂಪ ಸೌಂದರ ಭೂಪರ ನಾಕನ್ನೆ । ವರಿಸ ತಕ್ಕವಳೆ ಪೇಳೆನಗೆಂದ ॥ (32)

ನಸುನಗುತಾ ಲಲಿತಾಂಗಿ ತುಬುರ ನೊಡೆ । ನುಸುರ್ದಳಾ ತರಳೆ ಗೋರಗೆಯಾಗಿ ॥
ಎಸೆವೆಳೆ ವೆಂಗಳ ಕಾಣೆ ನಿನ್ನಾಣೆ ನೀ । ವಸುದೆ ಸೊಳೆಂದು ಮೆಲ್ನುಡಿದಳು ॥ (33)

ನಾಲಗೆಯೆರಡೆನಿಸುವ ನಾಗಕನ್ನೆಯರ್ನೆ । ಟ್ಟಾಳ·ಗೊಂಡಿಹ ಸುರಸತಿಯರ ॥
ಲೋಲಾಕ್ಷಿಗೀ ಕಟ್ಪಾಣಿ ಸಂಕಿಲೆ ನಾಚಿಗೆ । ಹೋಲಿಸ ಲಂಜುವೆ ಸಚಿವೇಂದ್ರ ॥ (34)

ಸುರವನಿತೆಯರೆ ಸಕವ ನಾಗಕನ್ನೆಯ । ರಿರವ ಮನುಷ್ಯ ಮಾನಿನಿಯರ ॥
ಪರಿಯ ಮಿಗುವ ಗಾಡಿಕಾರ್ತಿಯ ಚೆಲ್ವ ಬಿ । ತ್ತರಿಸುವೆ ನೆಂದೊರೆದಳು ಕಾಂತೆ ॥ (35).

ಆ ಕುವರಿಯ ಮೃದುಪದ ತಳವೆನಿಸುವ । ಶೋಕ ಮಾರ್ದವರಾಗ ವಡೆದಿರ್ದು ॥
ಶೋಕಯುಕ್ತರ ಮಾಡುವುದಕ್ಕರಿಂದವ । ಲೋಕಿಪ ಜನಕೆ ವಿರಹವಿತ್ತು ॥ (36)

ಪದೆದೀಕ್ಷಿಪರ ಧೈರ್ಯದ ಲಗ್ಗೆ ವಲಯಕೆ । ಧರಿಸುತ ತನುಕಂತುಕದಂತೆ ॥
ಮೃದು ತರಕಾಂತಿ ವೃತ್ತಾಯತಗಳನಾಂತು । ಸುದತಿಯ (ರ) ಡಿರಂಜಿಸಿದವು ॥ (37)

ನವಲಾವಣ್ಯ ವಾರಿಧಿಯೊಳು ರಂಜಿಪ । ಪವಳದಂಕುರಗಳವೆಂಬಂತೆ ॥
ಯುವತಿಯ ಚರಣಾಂಗುಲಿಗಳೊಪ್ಪಿದ ವೀಕ್ಷಿ । ಸುವ ರಕ್ಷಿ ಜನರ ಸೆರೆಗೆಯ್ದು ॥ (38)

ಮೊಗದಿಂಗಳ ಕಾಂತಿಗೆ ಮರೆಯಾಗಿ ನಿಂ । ದಗಲದ ಗುರುಪಯೋ ಧರಗಳ ॥
ಬಗೆ ದೀಕ್ಷಿಪ ವಳಡಿದಾವರೆ ಸಿರಿಯ ನೇ । ತ್ರಗಳೆನ ಲುಂಗುಟ ಮೆಸೆದವು ॥ (39)

ಕರಿದಿಲ್ಲದ ಕಳೆಗುಂದದ ನಿನ್ನ ಮು । ಖೇಂದು ಕಾಂತಿಯೆ ವ್ಮಾಣ್ಮಗೆ ॥
ವಂದಿಪ್ಪುದೆಂದವಳಡಿ ವಿಡಿದುದುರಾಜಿ । ಯಂದದೆ ಬೆಳ್ಳುಗುರೆ ಸೆದವು ॥ (40)

ಮಾನಿನಿಯಂಘ್ರಿ ಪದ್ಮಗಳ ಲಾವಣ್ಯನ । ದೀನಾಂಬು ಬುದ್ಬುದ ಸಾರ್ದಂತೆ ॥
ಏನೆಂಬೆನವಳ ಗುಲ್ಫಗಳೆಸೆದವು ಕಂಗ । ಳಾನಂದಕೆ ನೆಲೆ ವನೆಯಾಗಿ ॥ (41)

ಬಿಂಬಾಧರೆಯಂಗವ ಗರುಡಿಯೊಳಲ । ರಂಬನ ಭ್ಯಾಸಗೆಯ್ದಪನೆಂದು ॥
ಚೆಂಬೊನ್ನೊಳೊಡರಿ ಚಿದಂತರವಡಿಗೆ ಗ । ಳೆಂಬಂತೆ ಜಘನಗಳೆಸೆದವು ॥ (42)

ಬಗೆದಂದೀಕ್ಷಿಸುವರ ಚಿತ್ತವೆಂಬ ಮ । ತ್ತಗಜವ ಪಿಡಿತಂದು ಕುಸುಮಾಸ್ತ್ರ ॥
ಅಗಲದಂದದೆ ಕಟ್ಟುವ ಪೊನ್ನ ಕಂಭಗ । ಳೆನೆ ನುಣ್ದೊಡೆ ಯೆಸೆದವು ॥ (43)

ಅನುನಯದಿಂದೆ ನಿರೀಕ್ಷಿಪ ಮನುಜರ । ಮನವೆಂಬ ಸೋಗೆ ನರ್ತನಗೆಯ್ವ ॥
ನನೆಯಂಬನ ಕೃತಕಾದ್ರಿಗಳೆಂಬಂತೆ । ವನಿತೆಯ ಜಘನಗಳೆಸೆದವು ॥ (44)

ಅಂಗಜ ಜನ ಮೋಹನಾಧಾರ ಮಾಗಿರ್ದು । ನಂಗನ ದಂದದೆ ತರುಣಿಯ ॥
ತುಂಗ ಕುಚಾಧಾರ ಮಾಗಿರ್ದು ನೋಡಲ । ನಂಗಮಾದುದು ಸಂಶಯ ಮಧ್ಯ ॥ (45)

ಎಳೆವಾಳೆ ಯೆಲೆಯೆಸಕವ ಕೋಮಲ ಕರ । ತಳ ಸೊಬಗ ಗೆಲ್ವ ಗಾಡಿಯ ॥
ತಳೆದುರೆ ಕಣ್ಗೊಡ್ಡವಾಗಿ ರಂಜಿಸಿದುದು । ತೆಳುವಸುರಾ ಲಲಿತಾಂಗಿಯ ॥ (46)

ಭಾವಜಗಣಿತವ ಗುಣಿಸಿ ಲಬ್ಧವದಾದಿ । ವ್ಯಾವಯವಗಳನು ತಿಳದುನೋಡಿ ॥
ಭಾವೆಯ ನಡುಶೂನ್ಯ ವೆಂದಿಟ್ಟ ಸೊನ್ನೆಯಂ । ತಾವರ್ತನಾಭಿ ಕಂಗೆಸೆದುದು ॥ (47)

ಗುರುಕುಚ ಜಘನಂಗಳ ತೂಗವೇಳ್ಕೆಂದು । ಸರಸಿಜ ಭವನಡು ಪಿಡಿದೆತ್ತಿ ॥
ಬೆರಲ ಮೂವಜ್ಜೆಗಳ ಮೃದುರಂಜಿಸುವಂತೆ । ತರಳೆಯ ತಿವಳಿಗಳೆಸೆದವು ॥ (48)

ಲೀಲೆಯೊಳಂಗಜ ಪೀವರ ಕುಚ ಶುಂ । ಡಾಲವ ತೆಗೆದು ನಿರಿಸಲಾಂತ ॥
ನೀಲದ ಹಾರಗಟ್ಟಿಗೆ ಯೆನಿಸಿರ್ದುದು । ಬಾಲೆಯ ಬಾಸೆ ಕಣ್ಮಲರಾಸೆ ॥ (49)

ಎಳೆವಳ್ಳಿಯ ಕೋಮಲ ನವ ಮುಕುರದ । ತಳಪಚಂಪಕದಾಮ ದೊಳ್ಗೊಂಪು ॥
ನೆಲಸಿ ಸೊಬಗುವೆತ್ತು ಕಣ್ಗೆನಿದಾಗಿರ್ಪ । ನಳತೋಳ ಮೊದಲುಗಳೆಸೆದವು ॥ (50)

ವನಜಾಸ್ತ್ರನೆಂಬಿಂದ್ರ ಜಾಲಿಗ ನೋಳ್ಪರ । ಮನವೆಂಬ ಚೆಂಡಿಟ್ಟು ಮುಚ್ಚಿದ ॥
ಕನಕ ಕರಂಡಗಳಂತೆ ಕಂಗೆಸೆದವು । ವನಿತೆಯ ಪೀನ ಕುಚಗಳು ॥ (51)

ಸಿರಿಸದ ಮಾಲೆ ನೋಳ್ಪರ ನೇತ್ರಾಳಿಗೆ । ಕರತಲಕಮಲ ಕೊಪ್ಪುವ ನಾಳ ॥
ವರತರು ಚಂದನ ಶಾಖೆಗಳೆಂಬಂತೆ । ತರುಣಿಯ ನಳತೋಳ್ಗಳೆಸೆದವು ॥ (52)

ಇದು ಚಿತ್ರಕಂಟಕ ಮಿಲ್ಲದಂಭೋಜನಾ । ಳದೊಳರುಣಾಂಬುಜ ವೆಸೆವಂತೆ ॥
ಸುದತಿಯರಧಿ ನಾಯಕಿಯ ನುಣ್ದೋಳ್ಗಳ । ಗ್ರದೊಳು ಚೆಂದಳಿರ್ಗೈಯ್ಗಳೆಸೆದವು ॥ (53)

ಆಣೆವಡೆದ ಮುತ್ತುಗಳನಾಂತು ರಂಜಿಪ । ವೇಣುನ ವಾಂಕುರ ವೆಂಬಂತೆ ॥
ಏಕಾಕ್ಷಿಯ ಲಲಿತಾಂಗುಲಿ ನಖಗೂಡಿ । ಪಾಣಿತಳ ದೊಳೊಂದಿ ಮೆರೆದವು ॥ (54)

ಮಂಜರಿವಡೆದಸುಗೆಯ ತಳಿರಗ್ರಗಳಂಜಳ । ಕಣಗಳು ಸಾರ್ದಂತೆ ॥
ಕಂಜಮುಖಿಯ ಕರತಲದಂಗುಲಿಯೊಳು । ರಂಜಿಸಿದವು ಬೆಳ್ಳುಗುರ್ಗಳು ॥ (55)

ಅಲರ್ವಿಲ್ಲನ ಶೋಭನ ಶಂಖದಂತಿರ್ಪ । ಗಳವೆಸೆದುದು ಲಲಿತಾಂಗಿಯ ॥
ನಳನೋಪಮ ಮುಖ ಮುಕುರದ ಪಿಡಿಯುವೊ । ಲೊಲವೀವುತೆ ನೋಳ್ಪರಕ್ಷಿಗೆ ॥ (56)

ಸುಲಲಿತವಾದ ಯೌವನಲಕ್ಷ್ಮಿಯ ಮಂ । ಗಳ ಮಣಿ ಮುಕುರಂಗ ಳೆಂಬಂತೆ ॥
ಮಲಯಜಗಂಧಿ ಸಂಕಿಲೆಯ ನುಣ್ಗದಪು । ಗಳೊಲವಿತ್ತವು ನೋಳ್ಪ ಜನಕೆಯ್ದಿ ॥ (57)

ಉರುಮಣಿಮಯ ಖಚಿತಾವತಂಸಗಳಿಂ । ತರುಣಿಯ ಕರ್ಣಯುಗಂಗಳು ॥
ವರಮುಖಿ ಲಕ್ಷ್ಮಿಗೆ ನೀರಾಜಿಪ ಪಾತ್ರ । ಯಿರವೆನೆ ಕಣ್ಗೆ ರಾಜಿಸಿದವು ॥ (58)

ತೊಳಗುವ ದಶನ ಮೌಕ್ತಿಕಹಾರ ದೆಡೆಯೊಳ । ಗಳವಡಿಸಿದ ಮಧ್ಯ ಮಣಿಯಂತೆ ॥
ಎಳೆವೆಣ್ಣ ಬಣ್ಣದುಟಿಯ ಪೊಸಗಾಡಿ ಕಂ । ಗೊಳಿಪುದು ಮುಖಕೆ ಸಿಂಗರವಾಗಿ ॥ (59)

ಎಳೆಮಿಂಚಿನ ಮೈಸಿರಿ ದೋರ್ಪ ರದನಂ । ಗಳ ಸಾಲ್ಗಳೆಸದ ವಾನನದೊಳು ।
ನೆಲೆಸಿರ್ಪ ವಾಗ್ವನಿತೆಯ ನುಂಗೊರಲೊಳು । ಪೊಳೆವ ಹೀರಾವಳಿಯೆಂಬಂತೆ ॥ (60)

ಕಂದರ್ಪನಾ ಸುಕುಮಾರಿಗೆಸೆವ ವದನೇಂದಿರೆ । ಗೊಲಿದು ದರ್ಪಣಗೆಯ್ದು ॥
ಬಂದುಗೆಯಲ ರಂತಿರ್ದುದು ಬಾಯ್ದೆರೆ । ಯುಂದವಡೆದು ನೋಳ್ಪರ ಕಣ್ಗೆ ॥ (61)

ಎಳೆಯುಳ ಮೊಗದಾವರೆಯ ಪರವೆವಿಂಡು । ತುಳದಾಡಿ ಬಂದುಣ್ಣ ವಂದದೆ ॥
ನಳನಜಿ ಕಾವಲನಿಟ್ಟ ಸಂಪಗೆಯ ಮು । ಕುಳವೆನೆ ನಾಸಿಕ ವೆಸೆದುದು ॥ (62)

ಎಳೆಯಳಮುಖಸರಸಿಯೊಳೆಯ್ದೆ ತುಂಬಿದ । ಕಳೆಯೆನಿಪ ಮಲಾಂಬುವಿನೊಳು ॥
ಪೊಳೆವ ತರಳಪಾಠೀನಗಳಂತೆ ಕಂ । ಗೊಳಸಿದುವಾ ವೆಣ್ಣ ನಗೆಗಣ್ಣು ॥ (63)

ದಿಟ್ಟಿಯ ಪೂಗರುಳ ಪಳಯದ ವೊಲ್ಪತ್ತ । ನಟ್ಟ ತವೂಲದ ತಳಿರಂತೆ ॥
ನಿಟ್ಟಿಸಳೊರಗೆ ಗಂಗಳ ತುರುಗೆವೆ । ಯೆಟ್ಟಜೆಯಾಗಿರ್ಪವಾ ವೆಣ್ಗೆ ॥ (64)

ಕುವಲಯ ವದನ ಚಂದಿರನೊಳಗೆರಳೆಯ । ಸೆವವನೆಂದಂಬುಜ ಸಂಭವನೋಡಿ ॥
ನವಸೌಂದರಕೆ ಮೆರೆದು ಕೊಂಬುಗಳ ಬರೆ । ದವೊಲೆಸೆದುವು ಪುರ್ಬುಗಳಾಗ ॥ (65)

ಅಳಕ ತಿಮಿರ ವಲೆದುದು ಮೊಗತಾವರೆ । ಅಲರ್ದುದಿನ್ನೇಗೈಯ್ವೆನಾನೆಂದು ॥
ಕಳೆಯಾಣ್ಮ ಚಿಂತಿಸಿ ಬಡವಾದರೆಂಬಂತೆ । ಲಲನೆಯ ವೆರನೊಸಲೆಸೆದುದು ॥ (66)

ನಳನವೆಂದಾನನ ಕೆಳ್ತಂದು ಚೆಂಪಕ । ದಲವೆಂದು ನಾಸಿಕವಿರೆ ಕಂಡು ॥
ತೊಲಗಿ ಭಯದೆ ಮರವಟ್ಟಿರ್ಪ ಮರಿದುಂಬಿ । ಗಳ ಹಂತಿಯೆನೆ ಕುರುಳೆಸೆದವು ॥ (67)

ಜಡೆಗಟ್ಟ ಕಾಳೋರಗನಂತೆ ಮುಂದು ಗಂ । ಟಿಡೆ ಗಂಡು ನವಿಲು ನುಂಗೊರಲಂತೆ ॥
ಮುಡಿದೊಡೆ ಕಾರ್ಮುಗಿ ಲಂತಿರ್ಪುದ ಬಲೆಯ । ನಿಡಿದಾದ ಕೇಶ ಮನ್ಮಥಪಾಶ ॥ (68)

ಅಲರಿಂದೆಸೆವ ಸೋರ್ಮುಡಿಯ ಪಳವಿಗೆಯಿಂ । ಸಲೆ ಕಿವಿಯೋಲೆ ಗಾಲಿಗಳಿಂದೆ ॥
ತಳಪ ಕಣ್ತೋಜೆಗಳಿಂದಾದ ಛಾಸ್ಯ ಕಂ । ಗೊಳಸಿದುದಂಗಜ ರಥದಂತೆ ॥ (69)

ಭ್ರೂಲತೆಗಳೆ ಕಾರ್ಮುಕದಂತೆ ಕುಲಿಶ ತ । ಮಾಲ ಕೇಶವೆ ಪಾಶ ಕುಚ ಚಕ್ರ ॥
ಲೋಲಾಂಬಿಕ ಶರವೆನೆ ಮದನನ ಶಸ್ತ್ರ । ಶಾಲೆಯಂತವಳು ಕಣ್ಗೆಸೆದಳು ॥ (70)

ವಚನದೊಳಲ್ಲ ಕರ್ಕಶ ವೃತ್ತಿ ಪೀವರ । ಕುಚದೊಳಲ್ಲದೆ ವಕ್ರ ಮಬಲೆಯ ॥
ಕಚದೊಳಲ್ಲದೆ ಚರಿತದೊಳಲ್ಲ ಕಣ್ಗಲ್ಲ । ದೆ ಚಲನ ಮನದೊಳೆಳ್ಳನಿತಿಲ್ಲ ॥ (71)

ಪೇಳಲೆನಗೆ ಶಕ್ಯವೆ ಸಚಿವೇಂದ್ರ ತ । ದ್ಬಾಲೆಯ ಸೌಂದರ್ಯ ದೆಸಕವ ॥
ನಾಲಗೆ ಪಲವೆಸೆ ಮಹಿಪತಿಗಳವಲ್ಲ । ಕೇಳರಿದನಿತ ಬಿತ್ತರಿಸಿದೆ ॥ (72)

ಇಂತಪ್ಪ ಚೆಲ್ವಸಂಕಲೆಯೆಂದು ಮಂತ್ರಿಗಾ । ಕಾಂತೆ ಬಣ್ಣಿಸಿ ಪೇಳದಂದವ ॥
ಅಂತಕರಿಪುಪುರ ಸೂದನ ನುಸುರಿದ ದೋ । ರಂತೆ ಚರಮಭೂಪಗೆಲೆ ನೀಲೆ ॥ (73)

ಗಿರಿಜೆಯ ಮೆಯ್ಗಂಪಿಗೆರಗುವ । ತುಂಬಿಯಿಂ ಚರವಶ್ವತರಗಾನ ರಸದೊಳು ॥
ಬೆರೆದು ಕಿವಿಗೆ ರಂಜಿಸೆ ತಲೆಯೊಲೆವ ಕಂ । ಕರಶಾಂತ ಮಲ್ಲಿಕಾರ್ಜುನ ಜಯ ॥ (74)

ಚರಮಶರಣಾಗ್ರಣಿಯ ಕೃತಿಯ ವಿಸ್ತಾರವ ಮಾಳ್ಪರಾದರಿಪರ ॥
ತಾರರ್ಕರುಳ್ಳನ್ನವರ ಮಲ್ಲಿಕಾರ್ಜುನ । ನೋರಂತೆ ಪಾಲಿಪನೊಲವಿಂದ ॥ (75)

ಅಂತು ಸಂಧಿ 20 ಕ್ಕಂ ಪದನು 1131 ಕ್ಕಂ ಮಂಗಳ ಮಹಾ ಶ್ರೀ

(ಇಪ್ಪತ್ತನೆಯ ಸಂಧಿ ಸಮಾಪ್ತಂ.)

ಇಪ್ಪತ್ತೊಂದನೆಯ ಸಂಧಿ.

ಶ್ರೀಮದನಂತಕಟಕ ಗಿರಿಜಾನನ । ತಾಮರಸಾದಿತ್ಯ ನಿಜ ನಿತ್ಯ ॥
ಸೋಮ ಸಮಸ್ತ ಜಗತ್ಪತಿ ಸೀಮ ನಿ । ಸ್ಸೀಮ ಸಲಹು ಮಲ್ಲಿಕಾರ್ಜುನ ॥ (1)

ಅಂಗಜರೂಪ ವಿರೂಪಭೂಪ ನಿನ್ನ ವ । ಚಂಗಳ ಸವಿದೊರೆ ಪರಿದೆಯ್ದೆ ॥
ಸಂಗಮವಾದ ಕಾರಣದಿಂದೆ ನೀರ್ಗಡ । ಲಿಂಗಡಲಾದುದೆಂತುಟೊ ಪೆಂಪು ॥ (2)

ಎಳೆದಳರೆಸಕವಡೆದ ನುಣ್ಗೈಯಳೆ । ಯೆಳೆವಳ್ಳಿಯೋರಗೆ ಮೈಯಳೆ ॥
ಎಳೆವಾಳೆದೊಡೆಯಳೆ ಮುಂದಣ ಕಥೆಯ ಕೇ । ಳೆಳೆಯಂಚೆಗೆಣೆಯಾದ ನಡೆಯಳೆ ॥ (3)

ಲಲಿತಾಂಗಿಯ ಚೆಲ್ವಿನೆಸಕವನಾಚಂದ್ರ । ಕಲೆ ಮಂತ್ರಿಯೊಡನೊರೆದುದ ಕೇಳ ॥
ನೆಲದಾಣ್ಮ ನಂಬಿಯ ಬಗೆ ಬಸವಳಿದುದು । ಸಲೆ ಕಂದಿ ಕಾಂತಿಗುಂದಿದುದಾಸ್ಯ ॥ (4)

ಅನಿತರೊಳಸಮಸಾಯಕ ಘನಗರ್ಜಿಸಿ । ನನೆಗೋಲ ಬಲ್ಮಳೆಗರೆಯಲು ॥
ನೆನೆದು ಸೌಂದರ ನೃಪನೆದೆವೊಲಪದನಾಗೆ । ಜನಿಸಿತು ವಿರಹ ಬೀಜಾಂಕುರ ॥ (5)

ಮೊಳೆತುದು ಚಿಂತೆ ಮೆಲ್ಲನೆ ನಿಡು ಸುಯಿಯೆರ । ಡೆಲೆಯಾದುದು ಬಿಸುಪೊಡಲೊಳು ॥
ತಳತುದು ಬಡವು ಮೆಯ್ಯಾಳ್ವೊತ್ತುದವನೊಳು । ಫಲವಾದುದುಣಿಸನುಳಿದಪಾಂಗ ॥ (6)

ವಿರಹಾನಲದೆಸಕದೆ ಧೃತಿ ಗುಂದು ತಿ । ರ್ಪರಸನ ಬಗೆ ಗಂಡು ಕಂಗೆಟ್ಟು ॥
ಭರವಸದಿಂದೆಳ್ತಂದು ಕುರುಂಬ ತುಂ । ಬುರರು ಸೌಂದರನೊಳಿಂತೆಂದರು ॥ (7)

ಕಳುಪು ಕಾರ್ಯದ ಮಾತನಾಡು ನೀನೀ ಚಂದ್ರ । ಕಳೆಯ ಮೋಣೇಶ್ವರ ನೆಡೆಗೆಯ್ದಿ ॥
ಎಳೆವೆಂಗಳರಸಿಯ ಬೇಡು ಬೇಡಿದೊಡೀ । ಗಳೆ ನಿನಗಿತ್ತಪನೆನೆ ಕೇಳ್ದು ॥ (8)

ಉಡುಗೊರೆಯಿತ್ತು ಕಳುಪಿ ಚಂದ್ರ ಕಳೆಯ ನ । ಲ್ನುಡಿಯಿಂದೆ ಸೌಂದರ ಗಣನಾಥ ॥
ನಡೆತಂದೆನ್ನಿದಿರೊಳು ದೈನ್ಯರಸ ತೊ । ಟ್ಟಡ ವಂತೆ ನಿಂದು ಬಿನ್ನಪಗೆಯ್ದು ॥ (9)

ಕೊಡಿಸು ಸಂಕಿಲೆ ನಾಚಿಯ ನಲದಿರ್ದೊಡೆ । ಕೊಡು ನನ್ನ ಮೂಗೊರ್ಂಡೆ ಪತ್ರವ ॥
ನುಡಿವುದಿನ್ನೇನೀಯದಿರ್ದೊಡೆ ಹರಣವ । ಬಿಡುವೆನಲ್ಲದೆ ನಿನ್ನ ಬಿಡೆನೆಂದ ॥ (10)

ಆವನ ಸಫಲಿಮಾಡದು ಮರ್ಚುಗೊಳಸದ । ದಾವನ ಗೌರವ ಕೆಡಿಸದು ॥
ಆವನ ಕಾರ್ಪಣ್ಯ ಬಿಡಿಸದು ತನುತಾಪ । ವಾವನ ಕೊಂದು ಕೂಗದು ರಾಯ ॥ (11)

ನುಡಿದೆ ನಾನವನ ನುಡಿಯ ಕೇಳ ಪರವೆಯ । ಬಿಡು ಬಿಡದಿರ್ದೊಡೆ ಕುವರಿಯ ॥
ಕೊಡನಿನಗೀಶನು ಶಟ್ಟಿಯೆಂದುದ ಕೇಳ । ತಡವಡಿಸುತಲವನಿಂತೆಂದ ॥ (12)

ಉಚ್ಚಾಟವ ಮಂತ್ರವಾದುದು ಪರವೆಯೊ । ಳೆಚ್ಚ ಮನೋಗ್ರಹಕೆಲೆ ದೇವ ॥
ಒಚ್ಚೇರಗಣ್ಣ ಸೂಕಿಲೆಯ ಗುಣಸ್ತುತಿ । ಯುಚ್ಚಾರಣೆಯ ಸವಿಯೆಂದೆನೆ ॥ (13)

ಮರುಕವೆನಗೆ ಮೊಳೆಯುಲು ನೃಪತ್ರಿಯ ನಕ್ಕ । ರೊಳಪ್ಪಿ ವಿನಯದೆ ಸಂತೈಸಿ ॥
ಪೊರಮಟ್ಟನೀಶಾನ್ಯ ಸೆಟ್ಟಿಯ ಮನೆಗೆ । ಯ್ದುವರಕೆಯೊಳಧಿಕ ತಾಪಸನಾಗಿ ॥ (14)

ನಿಡುಜಡೆಗಳ ಸುಳಪಲ್ಗಳ ತಳಿರ್ಗಾಸೆ । ಯುಡಿಗೆಯ ಕರ್ಣಕುಂಡಲಗಳ ॥
ಪಿಡಿದಕ್ಷ ಮೇಲೆ ಕಮಂಡಲು ರುದ್ರಾಕ್ಷೆ । ದೊಡಿಗೆಯ ಗಾಡಿ ರಂಜಿಸೆ ಪೋದೆ ॥ (15)

ಕಂಡರೀಶಾನ್ಯಸೆಟ್ಟಿಯರೆನ್ನ ಮೂರ್ತಿಯ । ಪೆಂಡತಿ ಶಿವದೇವಿ ಸಹಕೂಡಿ ॥
ಚಂಡಪ್ರಭಬಿಂಬವ ಚಕ್ರಮಿಥುನಗ । ಳ್ಕಂಡವೊಲನುರಾಗ ತಳೆದರು ॥ (16)

ಉಡುಪತ್ರಿಯುದಯಾಲೋಕನಗೆಯ್ದ ಪಾ । ಲ್ಗಡಲ ಪಾಸಟಿಯಾದುದವನಂಗ ॥
ಮಡದಿಯ ನಗೆಗಂಗಳು ಚಂದ್ರಕಾಂತಕೆ । ಪಡಿಯಾದು ವೆನ್ನ ಮೂರ್ತಿಯಕಂಡು ॥ (17)

ಗುಡಿಗಟ್ಟಿದ ಪುಳಕಗಳೆಸಕದೊಳವ । ಕುಡಿಕೆಗಂಗಳ ಕುಡಿವೆಳಗಿಂದೆ ॥
ನಡೆಮುಡಿಗಳ ಪರಪಿದಳೊಲಿದಾತನ । ಮಡದಿಕಾಣುತಲೆನ್ನ ಬರವನು ॥ (18)

ಕೆಂದಳಿರೊಳು ಮರಿಗೋಗಿಲೆ ಮೊಗವಿಡು । ವಂದದೊಳವ ವಂದಿಸಿದನು ॥
ಬಂದೆರಗಿದಳವಳೆನ್ನಡಿಗೆಳೆದುಂಬಿ । ಕೆಂದಾವರೆಪೂವಿ ಗೆರಪಂತೆ ॥ (19)

ಮಂದಿರ ಮಧ್ಯದೊಳಗೆ ನವಮೌಕ್ತಿಕ । ದಿಂದೆ ರಂಜಿಸುತಿರ್ಪ ಪಸೆಯೊಳು ॥
ತಂದೆನ್ನನತಿಹರುಷದೆ ಕುಳ್ಳಿರಿಸಿ ಮೇ । ಣ್ಣಿಂದು ಬಿನ್ನಪಗೆಯ್ದರವರಾಗ ॥ (20)

ಎತ್ತಣಿನೆಳ್ತಂದಿರಿ ನೀವಿಲ್ಲಿಗೆ । ಚಿತ್ತೈಸಿದ ಕಾರಣವೇನು ॥
ಬಿತ್ತರಿಪುದು ಕೃಪೆಯಿಂದೆನಗೆಲೆ ತಾಪ । ಸೋತ್ತಮ ನೀವೆನಲಿಂತೆಂದ ॥ (21)

ಬಂದೆವು ನಾವೀಕ್ಷಣ ತಿರುವಾರೂ । ರಿಂದೆ ನಿಮ್ಮಧಿಕ ಯೋಗ್ಯತೆ ಕೇಳಿ ॥
ಸೌಂದರ ನೃಪಗೆ ಸಂಕಿಲೆ ನಾಚಿಯ ಬೇಳ್ಪಿ । ವಂದಿಲ್ಲಿಗೆಯ್ದಿದೆ ವೆಂದೆನೆ ॥ (22)

ನಸುನಗೆಯಿಂದೆ ದಂಪತಿಗಳು ಕೆಯ್ಮುಗಿ । ದುಸುರ್ದರು ನಮ್ಮ ಸಂಕಿಲೆ ನಾಚಿ ॥
ಹಸುಳೆ ಸೌಂದರ ನೃಪತಿಗೆ ತಕ್ಕ ಕಾಂತೆಯೆ । ಬೆಸಸೆನೆ ಮೆಲ್ಲನಾನಿಂತೆಂದೆ ॥ (23)

ಹಸುಳೆ ವಿವಾಹಕಾರಣೆಯಕ್ಕು ಪರಿಣಯ । ದೊಸಗೆಗೆ ಮೀಟು ಜವ್ವನೆಯರು ॥
ಎಸೆವರೆ ಮನವೊಲ್ದು ಕೊಡಿ ನಿಮ್ಮ ಮಗಳ ರ । ಕ್ಷಿಸತಕ್ಕವರ ಸೌಂದರಗೆನೆ ॥ (24)

ಮುನಿಪ ಕೇಳಾತ ವೇಶ್ಯಾಸಕ್ತ ನೀವೆಮ್ಮ । ತನುಜೆಯ ನೀಯೆಂಬುದುಚಿತವೆ ॥
ಅನುಮತವಲ್ಲವೆಂದೆನೆ ಕೇಳಿ ನಾನತಿ । ವಿನಯದೊಳಿಂತೆಂದೆನವರೊಳು ॥ (25)

ಮರುಳೆ ಕೇಳೀ ನಂಬಿ ನರನಲ್ಲ ಪರಮೇ । ಶ್ವರನ ಕುಮಾರ ಸಂಕಿಲೆ ನಾಚಿ ॥
ಪರವೆನಾಚಿಯುರಗ ಜಾತೆಯೊಳಗಗೆಯ್ವ । ತರುಣಿಯರೆ ನಲಚ್ಚರಿವಟ್ಟು ॥ (26)

ಕೇಳ್ದರವರು ಸಂತಸಕಂಬನಿಗಳೆ । ತಾಳ್ದದರಾದ್ಯಂತವೆಂತೆಂದು ॥
ಪೇಳ್ದೆ ನಾನವರೆರ್ದದಾವರೆ ಹರುಷದೊ । ಳಾಳ್ದಿರಪ್ಪ ತೆರದೆ ರಾಯ ॥ (27)

ಮೃಡನಗಜಾದೇವಿಯ ಮದುವೆಯೊಳರೆ । ಸಡಗರದಿಂ ಸಿಂಗರಗೆಯ್ದು ॥
ಮಡದಿಯೋರ್ವಳ ಕೈಯೊಳೆಸೆದಿರ್ಪರನ್ನಗ । ನ್ನಡಿಯ ನಿರೀಕ್ಷಿಸುತದರೊಳು ॥ (28)

ಕಂಡ ನಿಜಪ್ರತಿಬಿಂಬವನಖಿಲ ಮಾ । ರ್ತಂಡ ಕಲಾ ನಿಕುರಂಬವ ॥
ಮಂಡಲಕಧಿಕವಿಕಾಸಕದಂಬವ । ಖಂಡ ಪರಶು ಮಿಗೆ ಪದಪಿಂದೆ ॥ (29)

ಹರುಷದೊಳಾ ಪ್ರತಿ ಬಿಂಬವ ರತ್ನ ಮು । ಕುರದಿಂದೆ ತೆಗೆದನಗಜೆಯಾಣ್ಮ ॥
ಅರಲ ಚೆಂದಾವರೆಯೊಳೆಗರವಳ್ದಿರ್ಪ । ಸುರಭಿಯನೆಳೆಗಾಳಿ ತೆಗೆವಂತೆ ॥ (30)

ಉಡುರಾಜ ಬಿಂಬವನಗಲಿ ಚಂದ್ರಿಕೆಯಂಗ । ವಿಡಿದೊಪ್ಪುವಂತೆ ತತ್ಪ್ರತಿಬಿಂಬ ॥
ಮೃಡನಿದಿರೊಳಗೆ ರಂಜಿಸಿದುದು ರನ್ನಗ । ನ್ನಡಿಯ ತೊಲಗಿ ತಳತಳಸುತೆ ॥ (31)

ಹರಣವನಾ ಪ್ರತಿಬಿಂಬಿಕೆ ತುಂಬ ಸೌಂ । ದರನೆಂದು ನಾಮಾಂಕಿತವ ಮಾಡಿ ॥
ಸ್ಮರಮದ ಹರಗಣನಾಯಕ ಪದವಿಯ । ಹರುಷದೊಳತ್ತನಾ ಕುವರಿಗೆ ॥ (32)

ವಾರಣಮುಖ ಷಣ್ಮುಖರೊಳಗಾದ ಕು । ಮಾರರೊಳ್ಮತ್ತನೋರ್ವ ನೆನಿಸುತೆ ॥
ಚಾರುತರದ ಚೆಲ್ವಿನೆಸಕದೊಳಿರುತಿರೆ । ಮಾರಾರಿಯೊಂದು ವಾಸರದೊಳು ॥ (33)

ಕರೆದ ಸೌಂದರ ಗಣನಾಥನ ನತಿಶಯ । ಕರುಣದೆಬಿಗಿದಪ್ಪಿ ಮುದ್ದಿಸಿ ॥
ತರಳ ನೀನೆಮಗಿಂದು ಮೊದಲಾಗಿ ನರುಗಂಪಿ । ನರಲ ತಂದೀಯೆನೆ ಕೈಕೊಂಡು ॥ (34)

ಇಂದುಧರಗೆ ನಿಚ್ಚಲು ಪಾರಿಜಾತದ । ಮಂದಾರದ ಪೊಸವನೆಗಳ ॥
ತಂದುಕೊಡುತ ಸುಖವಡೆದಿರುತಿರ್ದವ । ನೆಂದಿನಂತೊಂದು ವಾಸರದೊಳು ॥ (35)

ವನಕೆಯ್ದಿ ಪೂದಿರುವುತೆ ಕಂಡ ಗಿರಿರಾಜ । ತನುಜೆಯ ಸಿರಿಮುಡಿಗಲರ್ಗೊಯ್ವ ॥
ಕನಕಲತಿಕೆ ಕಾಂತಿ ಮತಿಯೆಂಬ ಪೆಸರಾಂತೆ । ವನಿಯರಿರ್ವರನಿದಿರೊಳು ॥ (36)

ಮಾರನ ಮಂತ್ರ ಮಾತೃಕೆಯರೊ ಮೋಹನ । ವಾರಿಧಿಗಳೊ ರತಿಯೊಲವಿಂದೆ ॥
ಆರಾಧಿಪ ಶಕ್ತಿ ದೇವತೆಯರೊಮಿವ । ರಾರೆನೆ ಕಣ್ಗವರೆಸೆದರು ॥ (37)

ಪಡಿಯಿಡೆ ಪಾಕಶಾಸನ ವಧು ಮೊಮ್ಮನ । ಮಡದಿ ಮನೋಜಾತನ ರಾಣಿ ॥
ಪೊಡೆಯಲರನ ಪೆಂಡಿರೆಣೆಯಲ್ಲವೆನಿಸುವ । ಬೆಡಗಿನೊಳಾ ಪೆಣ್ಗಳೆಸೆದರು ॥ (38)

ಕುಸುಮಕಳಂಬ ಭುಜದ್ವಯ ವೇಶ್ಮದೊ । ಳೆಸೆವ ವಿಜಯ ಕಾಂತೆಯರಂತೆ ॥
ಅಸಮ ಶರನ ಮಸೆದಲಗುಗಳಂತೆ ರಂ । ಜಿಸುವೆಳೆವೆಂಗಳನವಕಂಡು ॥ (39)

ಕಲಿಗೆಟ್ಟ ಕಾತರ ಮಿಗಿಲೆರ್ದೆಗೆಟ್ಟ ಪೆ । ಣ್ಗಳ ಬಟ್ಟವೊಲೆಯೊಳಕ್ಷಿಯ ನಿಟ್ಟ ॥
ಬಲಗುಂದಿದ ನಾರೆ ಕಂದಿದ ಚಿತ್ತ ಚಂ । ಚಲವಾದುದು ಬಿಂಕ ಪೋದುದು ॥ (40)

ಕಾತರದಿಂದೆ ನೋಡುವ ಪುಷ್ಪದತ್ತನ । ನಾ ತರುಣಿಯರೊಲಿದೀಕ್ಷಿಸಿ ॥
ಸೋತರು ಸೊಬಗಳದರು ನನೆಗಣೆಗಳ । ಭೀತಿ ಮುಸುಕಲೆರ್ದೆಗೆಟ್ಟರು ॥ (41)

ನೋಡಿದ ಮಾತ್ರದೊಳಗೆ ತುರುಗೆವೆಯೊಳ । ಗಾಡಿದು ವಕ್ರಕಣಗಳೆಯ್ದೆ ॥
ಮೂಡಿದುದತನುದ್ರವ ಮನದೊಳು ಬೆರ । ಗೀಡಿರಿದುದು ಗಾಡಿವರಿದುದು ॥ (42)

ಪತಿಯೆನಗಿವನಾಗ ವೇಳ್ಕೆಂದು ತತ್ಕಾಂತಿ । ಮತಿಭುಜಂಗೋತ್ತಮ ನಿವನಾಗೆ ॥
ರತಿಸುಖದೊಳಗಿರ್ಪೆನೆಂದು ಕನಕಲತೆ । ಯತಿಶಯವಾಗಿ ಚಿಂತಿಸಿದಳು ॥ (43)

ಮರುಗುತಲೀ ಪರಿಯೊಳಗವರಲರ್ಗಳ । ತಿರಿದು ಸಿಂಗರಮಾಲೆಗಳ ಕಟ್ಟಿಂ ॥
ಪೆರದಲೆಯಾಗೆ ಗಿರಿಜೆಗೆ ತಂದುಕೊಟ್ಟರು । ನರುಗಂಪುದೆಸೆಯೊಳು ಪಸರಿಸೆ ॥ (44)

ಮುಂದುಗೆಡಿಸಿ ನಮ್ಮ ನೆಲದವೀ ಕುಸುಮಾಸ್ತ್ರ । ವೆಂದಂಗಜಾರಿಗೊಪ್ಪಿಸುವಂತೆ ॥
ತಂದಿತ್ತು ಪುಷ್ಪಮಾಲೆಗಳನಾನತರಾಗಿ । ನಿಂದಿರಲವರ ವಿಕಾರವದೆ ! ॥ (45)
ಕಂಡೆರಿದರುಹರ ಗಿರಿಜೆಯರರಲಂಬ । ನಂಡಲೆಗೊಳಗಾಗಿ ಮತಿಗೆಟ್ಟು ॥
ಚೆಂಡಾಗಿ ಬಿಂಕವಡೆದು ಕಾತರದೆದೆ । ಗೊಂಡು ನಿಂದಿರ್ದರಿಂಗಿತಗಳ ॥ (46)
ನಸುನಗುತವರೊಳೆಂದರು ನೀವು ರತಿಯ ಬ । ಯಸಿಮನವಿಟ್ಟಿರ್ದೆಗೆಟ್ಟಿರಿ ॥
ವಸುಧೆಗೆ ಪೋಗಿ ಜನನವಾಗಿ ಸುರತ ಸೌ । ಖ್ಯಸಮೇತ ಸಮ್ಮೋಹಿಗಳಾಗಿ ॥ (47)
ಮಗುಳಲ್ಲಿಗೆ ಬನ್ನಿಯೆಂದು ತಪ್ಪುರಹರ । ನಗಜೆಯರಾಡೆ ನಿಮ್ಮಡಿಗಳೆ ॥
ಅಗಲಿ ನಾವೆಂತು ಜೀವಿಪೆವೆಂದು ಕೈಗಳ । ಮುಗಿದು ಬಿನ್ನೈಸಿದರವರಾಗ ॥ (48)
ಆನುಡಿಗೇಳ್ದ ಗಜಾಪತಿಯಿಂತೆಂದ । ನಾನಿಮ್ಮ ಬಳಿವಿಡಿದೆಳ್ತಂದು ॥
ಮಾನವ ಲೋಕದೊಳಿದ್ದು ಮೋಕ್ಷ್ಮರತರ್ಪ । ನೀನಗರಕೆ ನಿಮ್ಮನೆಂದೆನೆ ॥ (49)
ದುಗುಡದೊಳಾ ಭವಾದ್ರಿಜೆಯರ ಬೀಳ್ಕೊಂಡು । ಬಗೆಗೆಟ್ಟು ಭೂತಳಕೆಳ್ತಂದು ॥
ಬಗೆದರವರ್ಜೊಳ ಮಂಡಲರಜಿತಾ । ದ್ರಿಗೆ ಸಮವೆಂದಾ ಯೆಡೆಯೊಳು ॥ (50)
ಧರಣೀಸುರಜಡೆಯರ ಬಸುರೊಳಗವ । ತರಿಸಿದನಾ ಪುಷ್ಪದತ್ತನು ॥
ತರುಣೀಜನ ಮಣಿಮಂಗಲೆಯುದರಾಂ । ತರದೊಳು ಕನಕಲತಿಕೆ ಪೊಣ್ಮೆ ॥ (51)
ಸತಿಯರ ಸೀಮಂತಮಣಿಯೆನಿಸುವ ಕಾಂತಿ । ಮತಿನಿಮ್ಮ ಬಸುರೊಳಂಕುರವಾಗಿ ॥
ಸುತೆ ನಿಮಗಾಪಳೀ ಸಂಕಲೆ ಯಾ ಕಾಂತೆ । ಋತವಾಕ್ಯವೆಂದನ ಮುನಿವರ ॥ (52)
ಈಶಾನ್ಯ ಕೇಳದು ಕಾರಣ ವೀ ಸೌಂದ । ರೇಶನ ಪರವೆಗೆ ಮನವಿಟ್ಟು ॥
ಅಶಕ್ತನಾದುದ ನರಿಯದೆ ನೀವು ವೇ । ಶ್ಯಾಸಕ್ತನವನೆಂಬುದುಚಿತವೆ ॥ (53)
ಕೊಡಿಸುಮ್ಮನೆ ನಿಮ್ಮ ಕುವರಿಯ ಸೌಂದರ । ಪೊಡವಿಯೆರೆಯಗೆಂದುಮುನಿವರ ॥
ನುಡಿಯಲಾ ದಂಪತಿಗಳ್ನಲಿದಾಯತಿ । ಯಡಿಗೆ ಬಿನ್ನಪಗೆಯ್ದರಿಂತೆಂದು ॥ (54)
ಈ ವಿವರವನರಿದವರಿಲ್ಲ ಧರೆಯೊಳು । ನೀವಿದನರಿದ ಕಾರಣವೇನು ? ॥
ನೀವಿಳಿಯುವರಲ್ಲ ನಿಮ್ಮ ನಿಜವ ಪೇಳ್ದೊ । ಡೀವೆವಾತಗೆ ಕುವರಿಯನೆನೆ ॥ (55)
ಅವರೊಳು ಪುಸಿಯಿಲ್ಲದೆ ಪೇಳ್ದನಾ ಬಂದ । ವಿವರವನಿನಿಸುಳಿಯದೆ ರಾಯ ॥
ಶಿವನಾದೊಡೆಮಗೆ ನಿಜವ ತೋರು ತೋರಿದೊ । ಡವಗೆಮ್ಮ ಸುತೆಯ ನಿತ್ತಪೆವೆನೆ ॥ (56)
ಭೂಪ ಕೇಳಾ ದಂಪತಿಗಳ್ಗೆ ನಾ ನಿಜ । ರೂಪದೋರಿದೆ ನವರದ ಕಂಡು ॥
ಶ್ರೀ ಪಾದಕೆರಗಿ ಬಗೆಯೆ ಭಕ್ತಿ ತುರುಗಿ ನಾ । ನಾ ಪರಿಯೊಳು ಪೊಗಳಿದರೆನ್ನ ॥ (57)
ದೇವ ಕೇಳ್ನಮ್ಮ ನಂದನೆ ಸೌಂದರೇಶಗೆ । ನಾವಿತ್ತೆ ವೆಮ್ಮ ಪುತ್ರಿಯನೆನೆ ॥
ಆವೇಳೆಯೊಳೆ ನಿಶ್ಚಯ ತಾಂಬೂಲವ । ನಾ ವಿನಯದೊಳಿತ್ತು ಬೀಳ್ಕೊಂಡೆ ॥ (58)
ಬಂದು ನಾನೀ ವೃತ್ತಾಂತವನೆಲ್ಲವ । ಸೌಂದರನೊಳ್ಬಣ್ಣಿಸಿದೆನೆಂದು ॥
ಇಂದುಕಲಾಧರನಾ ಚೇರ ಭೂಪನೊ । ಳೆಂದ ನಿಂದೀವರದಳನೇತ್ರ ॥ (59)
ಗಿರಿಜೆಯ ಮೆಯ್ಗಂಪಿ ಗೆರಗುವ ತುಂಬಿಯಿಂಚೆರವಶ್ವತರಗಾನರಸದೊಳು ॥
ಬೆರೆದು ಕಿವಿಗೆ ರಂಜಿಸೆ ತಲೆಯೊಲೆವ ಶಂ । ಕರ ಶಾಂತ ಮಲ್ಲಿಕಾರ್ಜುನ ಜಯ ॥ (60)
ಚರಮ ಶರಣಾಗ್ರಣಿಯಕೃತಿಯ ವಿ । ಸ್ತಾರವ ಮಾಳ್ಪರಾದರಿಪರ ॥
ತಾರಕರ್ರುಳ್ಳನ್ನವರ ಮಲ್ಲಿಕಾರ್ಜುನ । ನೋರಂತೆ ಪಾಲಿಪನೊಲವಿಂದೆ ॥ (61)

ಅಂತು ಸಂಧಿ 21 ಕ್ಕಂ ಪದನು 1192 ಕ್ಕಂ ಮಂಗಳಂ ಮಹಾಶ್ರೀ.

(ಇಪ್ಪತ್ತೊಂದನೆಯ ಸಂಧಿ ಸಮಾಪ್ತಂ.)

ಇಪ್ಪತ್ತೆರಡನೆಯ ಸಂಧಿ.

ಅಸಮಾನ ನಸಮಾಕ್ಷನಸಮಾಸ್ಯನ । ನಸಮೇಷು ಸಂಹಾರ ಧೀರನ ॥
ಪಶುಪನ ಪರಮಾತ್ಮನ ಪರಶಿವನ ಕೇ । ರ್ತಿಸುವೆನು ಕಾಂತಮಲ್ಲೇಶನ ॥ (1)

ಇಂದೀವರ ರಜದೊಳು ಪೊರಳ್ದ ಮಕ । ರಂದ ಜಲದೊಳಾಳ್ದು ತೀಡುವ ॥
ಮಂದಾನಿಲನೀವ ಸೊಗಸೀವುತಿದೆ ರಜಾ । ಮಂದಾರ ವಿರುಪ ನಿನ್ನೊಳ್ನುಡಿ ॥ (2)

ರಂಗಾಂತ ರನ್ನದುಟಿಯ (ಳೆ) ಕೋಮಲಾಂಗದ । ತುಂಗಕುಚದ ಪುಲ್ಲೆಗಂಗಳ ॥
ಭೃಂಗ ಕುಂತಳದ ತಿಂಗಳ ಮೊಗದೆಳೆವೆಣ್ಣೆ । ಕಂಗಳ ಪುಣ್ಯವೆ ಕಥೆಕೇಳ ॥ (3)

ಈಶಾನ್ಯ ಸೆಟ್ಟಿ ತನ್ನಯ ಸುಕುಮಾರಿಯ । ನಾ ಸೌಂದರ ಗಣನಾಥನ ॥
ಭಾಸುರ ಮಹೋತ್ಸವ ನಿಲಯ ವ ಸುವಿ । ಲಾಸದೆ ರಚಿಸಲುದ್ಯತನಾದ ॥ (4)

ಶುಭದಿನ ಶುಭಲಗ್ನ ಶುಭಹೋರೆ ಶುಭತಾರೆ । ಶುಭವಾರೆ ಶುಭವೇಳೆಯೊಡಗೂಡಿ ॥
ಶುಭತರಮಪ್ಪಂತೆ ವೈವಾಹ ಸದನವ । ಶುಭದಿನದವರೊಡಸಿದರು ॥ (5)

ಕುಸುಮಬಾಣನ ರತಿಯ ಶಿಶಯ ಪರಿಣಯ । ದೆಸಕದೆ ಮಧುರಾಜನೊಲವಿಂದೆ ॥
ಒಸೆದುವಣಿಡಿದ ಮೋಹನ ನಿಲಯದ ಗಾಡಿ । ಮಸುಳಿಸುವಂತೆ ನಿರ್ಮಿಸಿದರು ॥ (6)

ನಿರ್ಮಿಸುವೊಡೆ ಬಿದಿ ಮಂಡವಿಮಯ ವಿಶ್ವ । ಕರ್ಮಾದಿಗಳವಲ್ಲವೆಂಬಂತೆ ॥
ನಿರ್ಮಿಸಿದರು ಫಲರನ್ನ ಚೆಂಬೊನ್ನಿಂದೆ । ಪೆರ್ಮೆನೆತ್ತುತ್ಸವ ನಿಲಯವ ॥ (7)

ಓವರಿ ಕಟ್ಟುವಂಜರಿ ಸೆಜ್ಜೆ ಜಗಲಿ ನಾ । ನಾವಿಧ ಗೃಹ ಮತ್ತ ವಾರಣ ॥
ತೀವಿರೆ ನಡುವೆ ಕಂಗೆಸೆದುದು ಸಕಲ ಶೋ । ಭಾವಹ ವೈವಾಹಮಂದಿರ ॥ (8)

ಮಿಸುನಿಯ ತೇರು ರನ್ನದ ಕಂಭ ಪಚ್ಚೆಯ । ಪೊಸಲೊವೆನಿಲದ ನೆಲೆಗಟ್ಟು ॥
ಮಿಸುಪ ವಜ್ರದದಾರ ವಂದ ಸಿಂಗರವಡೆ । ದೆಸೆದವು ಮಂಗಲಗೃಹದೊಳು ॥ (9)

ಮುರಜವು ಡಕ್ಕೆ ಕಹಳೆ ಪಹಳ ತಾಳೆ । ಸರಮಂಡಲಿಂಗಳ ಪಿಡಿದಿರ್ಪ ॥
ವರಚಿತ್ರಮಣಿ ಚಿತ್ರಿತಪುತ್ಥಳಿಗಳಿಂ । ಕರಮೆಸೆದುದು ಪಳುಕಿನ ಭಿತ್ತಿ ॥ (10)

ಮರಕತ ಜಲಯಂತ್ರದಿಂದೆ ನೀರ್ಸೂಸುವ । ವರಮೌಕ್ತಿಕಾಕ್ಷತೆನಿಡಿದಿರ್ಪ ॥
ಅರಲಬಾಸಿಗವ ತಾಳ್ದಿಸೆವ ಪುತ್ಥಳಿಗಳೆ । ಹೊರಳಿಕಣ್ಗೆಡ್ದಮಾದುದುರಾಯ ॥ (11)

ಪಳುಕಿನ ಭಿತ್ತಿಗಳೊಳಗೆಳೆವೆಂಗಳ । ನೆಳಲು ಮೆಯ್ದೋರೆ ದಿಗಂತದ ॥
ಲಲನೆಯ ರೊಸಗೆಗೆಯ್ದಿದ ಮಾಳ್ಕೆಯಂತೆ ಕಂ । ಗೊಳಿಸಿದುದೇನ ಬಣ್ಣಿಪೆರಾಯ॥ (12)

ನೋಡೆ ನೋಡುವ ಮಾತನಾಡೆಯಾಡುವಬಗೆ । ಗೂಡೆ ಪೆಸರ್ಗೊಳೆ ಪೆಸರ್ಗೊಂಬೆ ॥
ನಾಡೆ ಸುಯ್ಯಾಣ ತತ್ತರಿಮಣಿವೆಸರಿಂದೆ । ಗಾಡಿವೆತ್ತುದು ವಿತಾನವಿಚಿತ್ರ ॥ (13)

ಪಲತೆರದಿಂದ ಸಮೆದ ಮೇಲ್ಕಟ್ಟನು । ಜ್ವಳಿಸುವ ಮಣಿಸೂಸಕಂಗಳ ॥
ನೆಳಲು ಕುಟ್ಟಿಮದಲ್ಲಿ ಬಣ್ಣವುರಂದಿವಿ । ದಿಳೆಯಂತೆ ಕಣ್ಗೆಡ್ದಮಾದುದು ॥ (14)

ಪಲರನ್ನದ ಮೇಲು ಕಟ್ಟಿನ ಚಿತ್ತರ । ಗಳವೊತ್ತವಾರಂಗದೆಡೆಯೊಳು ॥
ಪೊಳೆದುದೆಮ್ಮಯ ಚೆಲ್ವೆ ನಾಕು ಕೈವೊಟು ಕೋ । ಟಲೆ ಬೇಡವೆಂದು ಸೂಚಿಸುವಂತೆ ॥ (15)

ಸುದತಿಯುರಡಿಯುಲತೆಗೆ ವಜ್ಜೆಯಂತಳಿ । ತುದು ನಖರುಚಿಯಿಂದೆ ನನೆಯೇರಿ ॥
ಕೆದರಿದ ಪೂವಲಿಗಳ ಸಾಲ್ಗಳಿಂದೆ ಪೂ । ತುದುರಂಗವಲಿವಲ್ಲಿಯೆಂಬಂತೆ ॥ (16)

ಬಿಸವೆಂದು ದಾಡಿಮವೆಂದು ಮಾಮಿಡಿಯೆಂದು । ಒಸೆದಂಚೆಯುರಗಿಳಿ ಕಳಕಂಠ ॥
ಮುಸುಕಿ ಮೌಕ್ತಿಕಮಣಿ ಮರಕತಲಂಬಾಳ । ವೆಸೆದವು ಮಿಸುನಿಲೋವೆಯು ಸುತ್ತ ॥ (17)

ಪಾದರಿ ಮಲ್ಲಿಗೆ ಸಂಪಗೆ ಸುರಯಿ ಹೊಂ । ಗೇದಗೆ ಯಿರವಂತಿಯಲರ್ಗಳ ॥
ಭೇದಿಸಲರಿದೆಂಬ ಪೊಲುರನ್ನಗೆಲಸಗ । ಳ್ಕೇದ ಪೂಮಾಲೆಗಳೆಸೆದವು ॥ (18)

ಕುಳಿರ್ವಟ್ಟ ಶಿಲೆಯ ನಾವರಿಸಿ ಬೆಳ್ಮುಗಿಲು ಕಂ । ಗೊಳಿಸುವಂತಾ ಗೃಹದೆಡೆಯೊಳು ॥
ಪಳುಕಿನ ಮಣೆಗೊಳು ಪೊಸದುಗುಲದ ಕಾಂತಿ । ಥಳಥಳಿಸಿದುದುದುಮಂಗಲವಾಗಿ ॥ (19)

ಪೊಸದಳಿರಕ್ಷತೆ ಪೂಮಾಲೆ ಸಿತದೂರ್ವೆ । ಬಿಸಸೂತ್ರ ಕನಕ ದರ್ಪಣಗಳು ॥
ನೊಸರ್ವಟ್ಟ ನವಫಲ ಮಣಿಭೂಷಣಂಗಳು । ಮಿಸುಪ ಪೊಂಜಗಲಿಯೊಳೆಸೆದವು ॥ (20)

ಸಲೆ ದಿವ್ಯೌಷಧಿಯಂ ಪಂಚರತ್ನದೆ । ವಿಲಸಿತ ಘಾತ್ರೋದಕದಿಂದ ॥
ತಳತಳಿಸುವ ಪೂರ್ಣ ಕುಂಭವೊಪ್ಪಿರ್ದವು । ಪೊಳೆವ ಸುವರ್ಣವೇದಿಕೆಯೊಳು ॥ (21)

ರಂಗವಲಿಯ ನಿಕ್ಕುವಪೂವಲಿಗೆಯ್ವ । ಮಂಗಲಾಕ್ಷತೆ ಬಣ್ಣವುಗಳ ॥
ಕಂಗೊಳಿಸುವ ಲಾಜೆ ಬಾಯಿನಂಗಳ ಮಾಳ್ಪ । ಹೆಂಗಳ ಗೊಂದಣಿಯೆಸೆದುದು ॥ (22)

ಮಂಗಲಾಭರಣ ಮಂಗಲ ನೀರಾಜನ । ಮಂಗಲಸೂತ್ರ ಮಂಗಲವಸ್ತ್ರ ॥
ಮಂಗಲಾಕ್ಷತೆಗಳನಾಂತಿರ್ದ ಸತಿಯರು । ಮಂಗಲ ಗೃಹದೊಳೊಪ್ಪಿದರು ॥ (23)

ಪರಿವೃತಮಂಗಲಕೇತು ಸುಳಿವರಾಜ । ಗುರುಕವಿಮಿತ್ರ ಸದ್ಬುಧರಿಂದೆ ॥
ವರಭೋಗಿ ಮಂದಯಾನೆಯರಿಂ ನವಗ್ರಹ । ದಿರವಾಂತುದು ಪರಿಣಯಗೇಹ ॥ (24)

ತಿಳಿಜೊನ್ನವೆಳೆವಿಸಿ ಲೊಡಗೂಡಿ ಬೆಳಗಿದು । ದಿಳೆಯ ನೆಂಬಂತೆಂಟು ದೆಸೆಯೊಳು ॥
ಪೊಳೆದುದುತ್ಸವ ಗೇಹ ಹರ್ಮ್ಯಾಗ್ರಮಣಿಮಯ । ಕಳಸಧವಳ ಕೇತುಗಳ ಕಾಂತಿ ॥ (25)

ಎನ್ನಂತೆ ಮಿತ್ರರಾಜನು ವಿಭವಸಂಪನ್ನ । ಸೌಂದರನೆಂದಾಗಸ ॥
ತನ್ನೆರ್ದೆಯೊಳು ತಾಳದನುರಾಗವೆಂಬಂತೆ । ರನ್ನದ ಕಳಸಕಂಗೆಸೆದುದು ॥ (26)

ನೋಡಿದಳಾ ಶಿವದೇವಿ ಶೋಭನವೆತ್ತ । ಗಾಡಿಯೊಳೆಸೆವ ಮಂಟಪವನು ॥
ಕೂಡೆ ತನ್ನಾತ್ಮಭವೆಗೆ ಪಸದನಗಳ । ಮಾಡುವೆನೆಂದುದ್ಯತೆಯಾಗಿ ॥ (27)

ಬಳಿಕನುರಾಗದಂಭೋನಿಧಿ ಮನದೊಳು । ತುಳುಕಾಡೆ ಭೋಂಕನೆ ಶಿವದೇವಿ ॥
ಎಳೆ ಮುತ್ತಿನಕ್ಷತೆಯಿಂ ಪಸೆಯಿಟ್ಟಳು । ನೆಲೆವೆಣ್ಣೆ ಸಿಂಗರದೊಡ ಮಾಗೆ ॥ (28)

ಭೂಕಾಂತೆ ಫಣಿಫಣಾ ಮಣಿಪೀಠದಲ್ಲಿ ಮಂ । ದಾಕಿನಿ ಹಿಮಗಿರಿಶಿಲೆಯಲ್ಲಿ ॥
ಶ್ರೀಕಮಲದೊಳು ಮಂಡಿಸಿದಂತೆ ಪಸೆಯೊಳು । ರಾಕೇಂದುವದನೆ ಮಂಡಿಸಿದಳು ॥ (29)

ಲಲನೆ ನಿನ್ನೆರ್ದೆ ಪಾಗಿದಲ ರೆಂಬಿವೆಂದಂಘ್ರಿ । ಗಳಗೆರಗಿಸಿ ಸಂತಗೆಯ್ವಂತೆ ॥
ಎಳೆಯಳಡಿಗೆ ನೆಯ್ಯನೇರಿಸಿದರು ಚೆಲ್ವ । ಕೆಳದಿಯರೊಸಗೆ ವರೆಗಳಂದೆ ॥ (30)

ಇನೆಯನ ಮನಕನುರಾಗವ ನೀವ । ವನಿತೆಯ ದೋರ್ಮೂಲಗಳೆಂದು ॥
ಘನಕುಚೆಯರು ಸರದಿಂ ಮುಟ್ಟಿ ತೋರ್ಪಂತೆ । ವಿನಯದೆ ನೆಯ್ಯನೇರಿಸಿದರು ॥ (31)

ಮುದದೆ ಮಸ್ತಕದೊಳು ನೆಯ್ಯನೇರಿಸಿದರುಬ್ಬ । ವದನೆಗೆ ಕೆಳದಿಯರಲೆ ಭೂಪ ॥
ಪದೆದೋಪನ ಕಂಡು ತಪ್ಪಿವಾಂ ನಿನಗೆಂದು । ಮದನಾಸ್ತ್ರ ತಲೆಗೆ ಕೈಯಿಟ್ಟಂತೆ ॥ (32)

ಮಂಗಲವಾದ್ಯಘೋಷಣೆಯ ಪಾಡುವ ಶೋಭ । ನಂಗಳ ಜಲೆಗೂಡಿಸತಿಯರು ॥
ಅಂಗೈಗಳಿಂತಾಳ ಪುಟದೋಲಿ ತೈಲಾ । ಭ್ಯಂಗವನೆಸಗಿದರಬಲೆಗೆ ॥ (33)

ತಳರುಣ್ಮುವ ಪೊಸ ಪನ್ನೀರ ಕೈಯ ಪೊಂ । ಗಳಸದ ಬೀಸಿನೀರ್ಗೆ ಪದಗೆಯ್ದು ॥
ಅಲರ್ವುಡಿಯೊಳ್ಗಂಪುಡೀವ ಮುದದೆಸಂ । ಕಿಲೆಗೆ ನೀರೆರೆದುದಾಳಿಜನ ॥ (34)

ತರಳೆಯ ಶೋಭನಾರಂಭದೊಳೆಳ್ತಂದು । ಸುರರು ಸೂಸಿದ ಪೂಮಳೆಯಂತೆ ॥
ತರುಣಿಯರಲರ್ಗಂಗಳ ಬೆಳಕೆಗೆ ಕದಿ । ರಿರವೆಸೆದುದು ನೋಡೆ ಸೊಗಸಾಂತು ॥ (35)

ಅನುದಿನವೆನ್ನ ಮುಖಕೆ ಮಚ್ಚರಿಪುದೆಂ । ದೆನುತೆ ವಿಧುವಮೆಚ್ಚಿ ಮೀವಂತೆ ॥
ಮಿನುಗುವ ಹಳುಕಿನ ಪೀಠದ ಮೇಲೆ । ತದ್ವನಿತೆ ಮಜ್ಜನಗೆಯ್ದಳೊಲವಿಂದೆ ॥ (36)

ವರಚಂದ್ರಕಾಂತರಚಿತಮಂದಿರದಿಂದೆ । ತರುಣಿಮಜ್ಜನಗೆಯ್ದು ತಳರ್ವಲ್ಲಿ ॥
ತೆರೆ ಮಸಗಿದ ಪಾಲ್ಗಡಲಿಂದೆ ಪೊರಮಟ್ಟ । ಸಿರಿಯಂತೆ ಕಣ್ಗೆರಾಜಿಸಿದಳು ॥ (37)

ಬಿಸಜಮುಖಿಗೆ ಮಂಗಳಮಜ್ಜನವನೊಲಿ । ದೆಸಗಿ ಸಿಂಗರಗೆಯ್ಯವೇಳ್ಕೆಂದು ॥
ಪೊಸ ಜಾಣೆವೆಂಗಳೆಯ್ದಿದರ ನುಲೇಪನ । ಕುಸುಮಾದಿವಸ್ತು ಚಯವನಾಂತು ॥ (38)

ಸಿಂಗರಿಪುದನದನೇನೆಂಬೆ ಕನಕಲ । ತಾಂಗಿಯ ಸುಗುಣ ತರಂಗಿಯ ॥
ಹೆಂಗಳ ಮಣಿ ಸಂಕಲೆ ನಾಚಿಯ ನುರೆ । ತುಂಗಕಲಾಮೃತವಾಚಿಯ ॥ (39)

ಪುಳಿನದೊಪ್ಪಳ ಕಪ್ಪುರವಾಳಿಗಳಸಿಂಧು । ವೆಳೆದೆರೆಯಿಂದೆ ಮುಸುಕುವಂತೆ ॥
ಎಳೆಯಳ ಪೀನನಿತಂಬೋರುಗಳ ವಸ್ತ್ರ । ದೊಳು ಮುಸುಕಿದಳೊರ್ವ ಲಲಿತಾಂಗಿ ॥ (40)

ಕೂರುಗುರ್ಗದಿರು ಮುಸುಕೆ ಬೆಳ್ಪುವಡೆದ ಕಸ್ತೂರಿಯ ಪುಡಿಯ ತಾಳದಳೊರ್ವ. ॥
ನಾರಿ ತನ್ವಿಯ ಕೇಶದೊಳು ಪೊರೆಯುವರು ಕ । ರ್ಪೂರದರಜವೆಂದು ತಿಳಿವಂತೆ ॥ (41)

ಪಿಡಿವೊಡೆ ಕೈಸಾಲವು ತಕ್ಕೆಗೆಯ್ದುವು । ನಿಡಿದೋಳ್ಗಳೆಗೆಯ್ವೆ ನೆನುತೊರ್ವ ॥
ಮಡದಿ ಬಲ್ಪಿನೊಳಬಲೆಗೆ ಮುಡಿ ಗಟ್ಟಿದ । ಳ್ಮುಡಿಗಟ್ಟುವಂತೆ ನೋಡುವರೆರ್ದೆ ॥ (42)

ನಗೆಗಣ್ಣ ನೀರೆಯೋರ್ವಳು ಪಡೆದಿಟ್ಟಳು । ಮೃಗಮದ ತಿಲಕವನಬಲೆಗೆ ॥
ಸೊಗಯಿಪ ಕರೆಯಾಂತು ಮೆರೆವಿಂದು ಲೇಖೆಯೋ । ರಗೆಯಾಗಿ ಸುಣ್ಣೊಸಲೆಸೆವಂತೆ ॥ (43)

ಮದನ ನಂಡಲೆಯಾಗದಂದದೆ ಮುದದೆ । ಸೇರಿಸುವಂತೆ ನೊಸಲೊಳು ॥
ಪದೆದಮರಿಸಿದಳು ಬೆಯ್ತಾಲ ಮಣಿಯ ನೊರ್ವ । ಕೆಳದಿಯೋರ್ವಳೆಳೆ ವೆಂಗಳರಸಿಗೆ ॥
[(44)

ಜನಪತಿ ಕೇಳು ಮುನಿಯದಂತೆ ಕುಮುದಕೆ । ತನಿಗತ್ತಲೆಗಾಪ ನಿಡುವಂತೆ ॥
ವನಿತೆಯಾಯತನೇತ್ರ ಕುಮುದಕಿಟ್ಟಳು ಸಖಿ । ವಿನಯದೊಳೊಲ್ದು ಕಜ್ಜಲವನು ॥ (45)

ಪೊಂದಾವರೆಯರಲೆಡೆಯೊಳೆಗರಸಂ ಚೆ । ಬಂದು ಮಿರುಪ ತತ್ತಿಯಿಡುವಂತೆ ॥
ತಂದೊರ್ವಳಬುಜ ಮುಖಿಯ ನಾಸಿಕಾಗ್ರ ದೊ । ಳೊಂದಿಸಿದಳು ಮುಕುತಿಯ ಮುತ್ತ ॥
[(46)

ಸುರೆಯೊಡನೊಗೆದು ದೋಷಾಕರನಾಗಿ ಚಂ । ದಿರನಿರ್ಪನೆಂದು ರೋಹಿಣಿ ಬಿಟ್ಟು ॥
ತರಳೆಯ ಮೊಗಸಸಿಗಳ್ತಂದು ರಂಜಿಪ । ಪರಿವಡೆದುದು ಮುಗುತಿಯ ಮುತ್ತು ॥ (47)

ಅರಲಂಬನ ಪೊಸ ಪೂದೇರ್ಗೆ ಚೆನ್ನೆಯ್ದಿ । ಲರಲಗಳಿಗಳ ಸೇರಿಸುವಂತೆ ॥
ತರಳೆಯ ಕಿವಿಗಮರಿಸಿದಳೋರ್ವಳು ಚಾರು । ಕಿರಣಾವೆಸೆವರನ್ನದೋಲೆಯ ॥ (48)

ಕಂತು ವಶೀಕರಣದ ಯಂತ್ರವ ಬರವಂತೆ । ಕಪೋಲ ತಳದೊಳೆಯ್ದಿ ।
ಕಾಂತೆಗೆ ಮಕರಿಕ ಪತ್ರವ ಬರೆದರೋ । ರಂತೆ ಕುಂಕುಮದಿಂದೆ ಸತಿಯರು ॥ (49)

ಅನುಜಾತವಾದೆರಡರೊಳಾನ ನೇಂದಿರೆ । ಯನು ಸಾರಿ ಮೌಕ್ತಿಕಗಳೆವುದು ॥
ನಿನಗನುಚಿತವೆಂದು ಕಂಬುಕಂಧರಕೆ ಮು । ತ್ತಿನ ಹತ್ತೆ ಸರವ ಕಟ್ಟಿದರಾಗ ॥ (50)

ಹರುಷದೊಳು ಭಯುಲಿಂಗವ ದುಂಡ ಮಲ್ಲಿಗೆ । ಯುರಲ ಮಾಲೆಯೊಳು ಪೂಜಿಸುವಂತೆ ॥
ತರಳೆಯ ಮೊಗ್ಗೆ ಮೇಲೆಯ ಮುಸುಕಿದಳೋರ್ವ । ತರುಣಿ ಮುತ್ತಿನ ಪಂಚಸರದಿಂದೆ ॥ (51)

ತರಳೆಯತೋಳ್ವಳ್ಳಿಗೆ [ಪಂಚ] ಯಾಲವಾಲವ । ವಿರಚಿಸುವಂತೆಮಾಣಿಕದಿಂದೆ ॥
ಸುರುಚಿರ ಮಣಿಬಾಹುಪೂರವ ತೊಡಿಸಿದ । ರರಸಕೇಳಬಲೆಯರೊಲವಿಂದೆ ॥ (52)

ಸಿರಸದ ಬಾಸಿಗಗಳ ಬಳಸಿದ ಮಧು । ಕರತತಿಯಂತೆ ಕಣ್ಣಿನಿದಾಗೆ ॥
ಮರಕತರತ್ನವಲಯುಗಳ ತೊಡಿಸಿದ । ರರಸಿಯ ಚೆಲ್ವ ಮುಂಗೈಗಳ್ಗೆ ॥ (53)

ಅಸಮಾಸ್ತ್ರನರಸಿ ನಾನಾರತ್ನತತಿಯಿಂದೆ । ಕುಸುಮಸಾರನನರ್ಚಿಸುವಂತೆ ॥
ಪೊಸರನ್ನದುಂಗುರಗಳ ಸೇರಿಸಿದಳೋರ್ವ । ಳಸಿಯಳ ಕೋಮಲಾಂಗುಳಗಳ್ಗೆ ॥ (54)

ಕಾವನ ಪಟ್ಟದಾನೆಯ ಕುಂಭಯುಗ್ಮದೊಳು । ತೀವುವ ತೆರದೆ ಸಿಂದೂರವ ॥
ತಾವರೆಗಣ್ಣಳ ಮೊಲೆಗೆ ಬಾಳದಳೋರ್ವ । ಭಾವೆ ಗೋರೋಚನ ಪತ್ರವ ॥ (55)

ಕಂದರ್ಪನ ಶೋಭನ ನಿಲಯಕೆ ಮಣಿ । ಮಂಡನವಮಾಲೆಯನಾವೆಣ್ಣ ॥
ಸೌಂದರದಂಬುನಿಧಿಗೆ ಸೇತುಗಟ್ಟುವಂ । ತೊಂದಿಸಿದರು ಕಟಿಸೂತ್ರವ ॥ (56)

ಉಡೆನೂಲ ಪಚ್ಚೆವರಲ ಕಿರಣದೆ ಪಸು । ರ್ವಡೆದೆಸೆದುದು ವಸ್ತ್ರವಾ ಪೆಣ್ಣ ॥
ತೊಡೆವಾಳೆಗಂಭದ ಕೋಮಲದಳವಂತೆ । ಪೊಡವಿಯೆರೆಯ ಬಣ್ಣಿಪೆನೇನ ॥ (57)

ನಾರಿಯ ಚರಣದ ನಖಚಂದ್ರಮಾಲೆಗೆ । ತಾರಾಮಾಲೆಯ ನೊಲವಿಂದೆ ॥
ಸೇರಿಸುವಂತೋರ್ವ ವನಿತೆ ಮೌಕ್ತಿಕದ ಮಂ । ಜೀರವ ಪದಕಮರಿಸಿದಳು ॥ (58)

ಉಗುರ್ವೆಳಗಿಂದೆ ತಾರಾಳಿಯ ಸೊಬಗನು । ಮಿಗುವ ಮೇಗಾಲಿಂದೆ ಕೂರ್ಮನ ॥
ನಗುವ ಪಾದಾಂಗುಲಿಗಳ ಮುದ್ರಿಕೆಗಳ । ಮೃಗನೇತ್ರೆಯರಿಟ್ಟ ರೊಲವಿಂದೆ ॥ (59)

ಸಿಂಗರದಿಂಗದಿರೆನೆ ಮಿಗೆ ಪಸದನ । ದಿಂಗಡಲೆನೆ ಕೈಮಾಟವ ॥
ಮಂಗಲಪಂಚಾವಿಕೆಯೆನೆ ಸಂಕಿಲೆ । ಕಂಗೊಳಿಸಿದಳತಿ ಶಯವಾಗಿ ॥ (60)

ಗಿರಿಜೆಯ ಮೆಯ್ಗಂಪಿಗೆರಗುವ ತುಂಬಿಯಿಂ । ಚರವಶ್ವತರಗಾನ ರಸದೊಳು ॥
ಬೆರೆದು ಕಿವಿಗೆ ರಂಜಿಸೆ ತಲೆಯೊಲೆವ ಶಂ । ಕರಶಾಂತ ಮಲ್ಲಿಕಾರ್ಜುನ ಜಯ ॥ (61)

ಚರಮಶರಣಾಗ್ರಣಿಯ ಕೃತಿಯ । ವಿಸ್ತಾರವ ಮಾಳ್ಪರಾದರಿಪರ ॥
ತಾರಕರ್ಗರುಳ್ವನ್ನವರ ಮಲ್ಲಿಕಾರ್ಜುನ । ನೋರಂತೆಪಾಲಿಪ ನೊಲವಿಂದೆ ॥ (62)

ಅಂತು ಸಂಧಿ 22 ಕ್ಕೆ ಪದನು 1254 ಕ್ಕಂ ಮಂಗಳಂ ಮಹಾಶ್ರೀ

(ಇಪ್ಪತ್ತೆರಡನೆಯ ಸಂಧಿ ಸಮಾಪ್ತಂ.)

ಇಪ್ಪತ್ತಮೂರನೆಯ ಸಂಧಿ.

ತೋರಮುಡಿಯ ಕೆಂಜೆಡೆಯ ರತ್ನದಕರ್ಣ । ಪೂರವ ಫಣಿಕುಂಡಲಗಳ ॥
ಚಾರುಕುಂಕುಮ ಗಂಧ ಭಸಿತಲೇಪನದರ್ಪ । ಸಾರೀಶಜಯ ಮಲ್ಲಿಕಾರ್ಜುನ ॥ (1)

ಶೃಂಗಾರದುಬ್ಬು ವೀರದ ಗುಬ್ಬು ಶಾಂತಿಯ । ತ್ತುಂಗತೆ ಕರುಣಾರಸದ ಪೆಂಪು ॥
ಸಂಗಡಿಸಿದೆ ನಿನ್ನ ಕೃತಿಯೊಳೆ ಸುಗುಣಾತ । ರಂಗ ಹೊನ್ನೊರೆಯ ವಿರೂಪ ಭೂಪ ॥ (2)

ಕುಟಿಲ ಕುಂತಳೆ ಕೈರವ ನೇತ್ರೆ ಕಾಂಚನ । ಪುಟಯುಗ ಸದೃಶಪಯೋಧರೆ ।
ವಟಫಳ ರಾಗಾಧರೆ ಲಾಲಿಸರಸಗೆ । ನಿಟಿಲಾಕ್ಷನೊರೆದ ಮೆಲ್ಗಥೆಯನು ॥ (3)

ಇನಿತತಿಶಯ ಸಂಭ್ರಮದೆಸಕದೆ ಪಸ । ದನವಾಂತು ಮಿರುಗುವ ಕುವರಿಯ ॥
ವಿನಯದೊಳಾ ಲೋಕನಗೆಯ್ದು ಶಿವದೇವಿ । ವನಿತೆಯೊರ್ವಳೊಳಂತೆಂದಳು ॥ (4)

ಈಗಳಮೃತವೇಳೆ ಬಂದುದು ತಳುವದೆ । ಬೇಗದೆ ಬರೆವೇಳ್ದು ನೃಪತಿಯ ॥
ಪೋಗೆನಲಾ ಕಮಲೋಪಮ ಮುಖಿಯನು । ರಾಗದೊಳಲ್ಲಿ ಗೆಳ್ತಂದಳು ॥ (5)

ಜನಪತಿ ಸೌಂದರ ಗಣನಾಥಗೆರಗಿನೂ । ತನಫಲಗಳ ಕಾಣಿಕೆಯಿತ್ತು ॥
ವಿನಯೋಕ್ತಿಯೊಳಾಸನ್ನ ಮುಹೂರ್ತವ । ವನಿತೆ ಬಿನ್ನೈಸಿದಳೊಲವಿಂದೆ ॥ (6)

ಕಿವಿಗಿನಿದಾದ ನುಡಿಯಕೇಳ್ದು ಕಳದಿಗೆ । ನವರತ್ನ ಭೂಷಣಗಳನಿತ್ತು ॥
ಅವಳ ಬೀಳ್ಕೊಟ್ಟಯ್ದು ತೆರದ ಸಿಂಗರಗೆಯ್ಯೆ । ಲವನೀಶನನುವಾದ ನೊಲವಿಂದ ॥ (7)

ಮಂಗಲ ಮಜ್ಜನಗೆಯ್ದು ಮೌಕ್ತಿಕ ಭೂಷಣಂಗಳ ನವಕುಸುಮಂಗಳ ॥
ಕಂಗೊಳಿಪ ನೀಲಾಂಬರ ಲೇಪನಗಳ । ನಂಗದೊಳಾಂತವ ಪೊರಮಟ್ಟ ॥ (8)

ಇಂದುಮಂಡಲ ಮೆಲ್ಲನೆ ಧನುರಾಶಿಯೊ । ಳೊಂದುವ ತೆರದೆ ಸೌಂದರಭೂಪ ॥
ಬಂದೊಯ್ಯನೆ ಪದದೇರಿದ ಮಣಿಮಯ । ದಾಂದೋಳನವ ಗಾಡಿಯೆಸಕದೆ ॥ (9)

ಪರಿಜನ ಪುರಜನ ಬಾಂಧವ ಜನನವ । ತರುಣಿಜನ ಮಿತ್ರ ಜನಗೂಡಿ ॥
ಪರಸುವ ಭೂಸುರ ಮಂತ್ರಾಕ್ಷತೆಗಳ । ಧರಿಸುತೆ ಸೌಂದರ ನಡೆತಂದ ॥ (10)

ಧರೆಗಿದು ಪೊಸತು ನಂಬಿಯ ವಿವಾಹವನಿದ । ನಿರದೆ ದೇಶಾಧಿಪರೆಳ್ತಂದು ॥
ಪಿರಿದೀಕ್ಷಿಪುದೆಂದು ಸಾರುವರವಮೆನೆ । ಮೊರೆದಖಿಳವಾದ್ಯ ತತಿಯಾಗ ॥ (11)

ಅರಸಕೇಳಾ ವಾದ್ಯರವಕುಲ ಗೋತ್ರಕಂ । ಧರಗಳಪೊಗೆ ಮಾರ್ದನಿಯುಣ್ಮೆ ॥
ಪರೆದುದವನ ಪರಸಿದವೋಲ್ ಗೋತ್ರದ । ಹೊರಳಿಗೆ ಪರಕೆಯು ಚಿತವಲ್ತೆ ॥ (12)

ಕುವಲಯ ಸೇವ್ಯಮೆ ಸದ್ವಂಶಯುತಮೆ ರಾ । ಜವಿಭವ ಯೋಗ್ಯಮೆಯೆನ್ನಂತೆ ॥
ನವಪುಂಡರೀಕ ಮೆಂದದ ನಗುವಂತಿರ್ದು । ದವನೀಶನ ಪುಂಡರೀಕಾಂಶು ॥ (13)

ಕರಕಮಲದ ಮಕರಂದ ಜಲಂಬೊಲು । ಪರಿಯೆ ನಖದ್ಯುತಿ ದಶನಾಂಶು ॥
ಸಿರಿಮೊಗ ನಸಿಗದಿರೆನೆ ತೀವೆ ನೃಪಗೆ ಚಾ । ಮರ ಮಿಕ್ಕು ಪೆಳೆವೆಂಗಳೆಸೆದರು ॥ (14)

ಅಲರ ಬಿಜ್ಜಣಿಗೆಯಿಡುವ ಮುದ್ದುವೆಂಗಳು । ನಳಿತೋಳು ಜನದ ಕಣ್ಮಗಗಳ ॥
ತೊಲಗದಂದದೆ ಬಿಗಿದಸಮ ಶರನಪಾಶ । ಗಳ ಪೋಲ್ತುವೇನ ಬಣ್ಣಿಪೆರಾಯ ॥ (15)

ಬೆಳತಿಗೆ ಮುತ್ತಿ ನಕ್ಷತೆಗಳ ನೃಪತಿಗೆ । ತಳಿವ ತೆರದೆ ಚೆಲ್ಲೆಗಂಗಳ ॥
ಬೆಳಗ ಸೂಸುತೆ ಸಿಗುರಿಯಾಂತು ನಡೆತರ್ಪು । ಕೆಳದಿಯ ರಿರವುರಂಜಿಸಿದುದು ॥ (16)

ಅಲರಬಾಸಿಗಪಕ್ಷ್ಮ ದಂಡೆಗಳಾಂತುಬ । ರ್ಪೆಳೆವೆಂಡಿರ ಸಮುಕಳಂಬನ ॥
ಅಲರಂಬು ಕರ್ಬು ವಿಲ್ಲ್ಗಳನಾಂತು ನಡೆತರ್ಪ । ದಳದಂತೆ ಕಣ್ಗೆರಂಜಿಸಿದುದು ॥ (17)

ಉಗುರ್ಗಳಕಾಂತಿ ತಾಳ್ದ ಕೆಂಪುಪಾಸಿದ । ದುಗುಲವ ಚೆಂಬಣ್ಣವಟ್ಟೆಯು ॥
ದ್ವಿಗುಣಿಸೆ ಕಳಸಕನ್ನಡಿಯನಾಂತು ನಡೆದರು । ನಗೆಮೊಗದೇರುಂ ಜವ್ವನೆಯರು ॥ (18)

ಮಂಗಲ ಜಂಬೀರಪೂಗ ಕದಳಿಮಾತು । ಳುಂಗ ನಾರಂಗ ಫಲವನಾಂತು ॥
ಹೆಂಗಳು ಕಳಕಂಠರವದಿಂದೆ ಪಾಡುತೆ । ಜಂಗಮವನದಂತೆ ನಡೆದರು ॥ (19)

ಕಂಗಳಬೆಳಗಿ ನೊಬ್ಬುಳಿ ದೆಸೆ ಗೂಡೆ ಮು । ಖಂಗಳರಸವುರ್ಕೆ ತುಳುಕಾಡೆ ॥
ಪೊಂಗಿಪ ತನುಗಳ ನರುಗಂಪು ತೀಡೆಬ । ರ್ಪಂಗನೆಯರ್ಗೂಡಿ ನಡೆತಂದ ॥ (20)

ಬಳಸಿದಂಬುಜಮುಖಿಯರ ಮೈಯ್ಯೆಳಗೆಂಬ । ಪೊಳೆಯೊಳು ಕುಚ ರುಂಬಿಕೆಯಿಂದ ॥
ತಳರ್ವ ತೆರದೆ ನಡೆತಂದ ಸೌಂದರ ಭೂಪ । ಪೊಳಲಸಿಂಗರವ ನೀಕ್ಷಿಸುತಾಗ ॥ (21)

ಸೌಂದರ ನೃಪನ ವಿವಾಹಕೆ ಸುರನದಿ । ಬಂದು ಪುರದೊಳೆಡೆ ಗೊಂಡಂತೆ ॥
ಸಂದಣಿಸಿದ ದುಗುಲದ ಗುಡಿಗಳ ಪೊತ್ತ । ಪಂದವಡೆದು ದತಿಶಯವಾಗಿ ॥ (22)

ಗಗನ ಚುಂಬಿತ ಪಾಳಕೆಯೊಳು ಬರೆದ ಚಿತ್ರ । ಗಳ ನಿಕಾಯ ರಂಜಿಸಿದುದು ॥
ಮುಗಿಲೆಡೆಗಳ ಸಾರ್ದು ವಿವಿಧ ವಿವಾಹದೊ । ಸಗೆಯ ನೀಕ್ಷಿಪಸುರರುಗಳಂತೆ ॥ (23)

ಪೊಂಗುವ ತೋರಣಗಳ ಮುಕುರಗಳೊಳು । ಕಂಗೊಳಿಸುವ ಪರಿಜನಬಿಂಬ ॥
ಸಿಂಗರವಡೆದ ಪುರೇಶ್ವರ ನೋಡಲ ಜ । ಗಂಗಳ ತೆರದೆ ರೆಂಜಿಸಿದುದು ॥ (24)

ಉಡುಗಣಯುತ ನಭವೆಂತಂತೆ ತೆರೆಗಳ । ಗಡಣವೆಸೆವ ಸೊದೆಗಡಲಂತೆ ॥
ಜಡಿವಪತಾಕೆಯೆತ್ತರದಿಂದೆ ಮುತ್ತಿನ । ಕಡೆಯಿಂದೆ ಪುರವೀಥಿಯೆಸೆದುದು ॥ (25)

ನಾಕವೆನಿಸಿ ಪುಷ್ಪನಿಚಯದೆ ಫಣಿ । ಲೋಕವೆನಿಸಿ ಭೋಗಿ ನಿಕರದೆ ॥
ಆಕೃತಿವಡೆದು ತೊಳಪ ರಾಜವೀಥಿಯ । ಭೂಕಾಂತ ನೀಕ್ಷಿಸುತೆಯ್ದಂದ ॥ (26)

ಜಂತ್ರದ ಹಾಹೆಗಳಲರರಸದಪನಿ । ಯಂತೂರಿ ಕೆಯ್ಯಡ್ಡ ಮಾಡುತೆ ॥
ತುಂತುರೆಸೆವ ಕೊಳ ದೊಳಗಿಸುವ ಹಂಸ । ನಂತೆ ಸೌಂದರ ಭೂಪ ನಡೆತಂದ ॥ (27)

ಕರುಣಾರಸಾಂಬು ನಿಧಾನವ ಕಂಡು ಸಿಂ । ಗರಗಡಲಿದಿರೆಯ್ದುವಂದದೆ ॥
ವರಮಣಿ ಮೌಕ್ತಿಕ ದಾರತಿಗಳನಾಂತು । ತರುಣಿಯರಿ ದಿರ್ವಂದರರಸಗೆ ॥ (28)

ರಾಜಕುಲಾಗ್ರಣಿ ಯೆನಿಸುವ ಸೌಂದರ । ರಾಜಗೆ ತಾರೆಗಳದಿರೆಯ್ದಿ ॥
ರಾಜಿಸುವಂತೆಳೆ ವೆಂಡಿರು ಪಿಡಿದ ನೀ । ರಾಜನ ದೀಪಗಳೆಸೆದವು ॥ (29)

ಇದು ಚಿತ್ರವೆರಡಲರಣೆಗಳೆ ರನ್ನವೊಂ । ದಿದ ಪೆಡೆಯೊಂದು ತೋರಿಸಿತೆನೆ ॥
ಸುದತಿಯೋರ್ವಳ ಕರಯುಗ ದೊಳು ಮಣಿದೀ । ಪದ ಮಂಗಳಾರತಿಯೆಸೆದುದು ॥ (30)

ತರಳೆಯಲಾರಾತಿಗಳ ನೆತ್ತಿ ನೋಡಿ ಸೌಂ । ದರ ನೃಪ ಹರುಷದೊಳೋಲಾಡಿ ॥
ತರುಣಿಯ ಜನಗೂಡಿ ನಡೆದ ಕುರುಂಬ ತುಂ । ಬುರ ಮಂತ್ರಿಗಳ ನಾಡಿಯೆಸಕದೆ ॥ (31)

ಉಡುಪತಿ ಕೌಮುದಿ ಗೂಡಿ ನಭೋಗಣಾ । ದೆಡೆಗೆ ಮೆಲ್ಲನೆ ಬರ್ಪಂದದೆ ॥
ಮಡದಿಯರೆಳೆನಗೆ ವೆಳಗಿ ನೊಳಾನೆಂಬಿ । ನಡೆತಂದ ಪರಿಣಯನಿಳಯಕೆ ॥ (32)

ಬಾಜಿಪ ಬದ್ಧವಾಣದ ಪುಣ್ಯಾಪಾಠಕ । ರಾಜಿಯ ಕಳಕಳದೆಸಕದೆ ॥
ಯೋಜಿಪ ವಿಬುಧ ಪುಣ್ಯಾಹ ವಾಚನರವ । ರಾಜಿಸೆ ಸೌಂದರನೆಸೆದಿರ್ದ ॥ (33)

ತನ್ನಾಣ್ಮನ ಮನಮಂ ಪೊಗುವಂದದೊ । ಳುನ್ನತ ಪರಿಣಯ ಭವನವ ॥
ಕನ್ನೆ ಪೊಕ್ಕಳು ಗುರುಜನ ಪರಿಜನಗಳ । ಸನ್ನುತಾಶೀರ್ವಾದದೆಸಕದೆ ॥ (34)

ಅರಲಂಬನ ಮದವರ್ಕಳ ಕಣ್ಮಿಗ । ಪರಿಯದ ತೆರೆಸೀರೆಯ ॥
ವಿರಚಿಸಿದಂತವರೆಡೆಯೊಳು ಪಿಡಿದರು । ವರದುಗುಲಿದ ಕಾಂಡಪಟವನು ॥ (35)

ಪರಿತೋಷ ಮಾತೆಪಿತರಿಗೇರೆ ಪುಳಕದೊ । ತ್ತರ ಬಂಧುಗಳಿಗೇರೆ ಗಗನವ ॥
ಪರಿದೇರೆ ಮಂಗಲರವ ವಿನಯದೆ ವಧೂ । ವರರು ಪೆಟ್ಟಕ್ಕಿಯೇರಿದ ರೊಲ್ದು ॥ (36)

ಅಡಿಗಡಿಗೊಲ್ದು ಮಂಗಲ ವಚನಂಗಳ । ನೊಡನೆ ಮೌಹೂರ್ತಿಕ ರೋದಲು ॥
ತಡೆಯುದವರ ನೋಟಕೆಡೆ ಗೊಟ್ಟು ಪೋದಂತೆ । ಕಡೆಗೆ ಸಾರ್ದುದು ಕಾಂಡಪಟಲಾಗ ॥ (37)

ಹಗುಷದೊಳೀ ಶಾನ್ಯ ಸೆಟ್ಟಿಯು ರೊಲಿದು ಸೌಂ । ದರಗೆ ಸಿತಾಕ್ಷತೆ ಯೊಡಗೂಡಿ ॥
ಪರಸಿಕೈನೀರನೆರೆದ ನಾಗನವರಿರ್ವ ರ । ನಲ್ಮೆಯೆಗೆಗೆ ನೀರೆರೆದಂತೆ ॥ (38)

ಎಳೆಯಾಳ ಲಾವಣ್ಯರಸ ದಿನಿಗಡಲೊಳು । ಪೊಳೆವೆಳೆವಾಳೆ ಮೀನುಗಳಂತೆ ॥
ತಳತಳಸುತೆ ತೊಳ ತೊಳಗಿದು ವರಸನ । ಲಲಿತಕಟಾಕ್ಷ ರೋಚಿರ್ಮಾಲೆ ॥ (39)

ಧರೆಯೊಳು ಕುಸುಮ ಸಾಯಕ ಕಡುಚೆಲ್ವ ನೆಂ । ಬರು ಕಂಡು ದಿಲ್ಲವನೆಂತಿರ್ಕೆ ॥
ನರನಾಥರೊಳಗೆ ಮೈಯಾಂತ ಕಂದರ್ಪಸೌಂ । ದರನೆಂದು ಕಾಂತೆ ನೋಡಿದ ಳೊಲ್ದು ॥ (40)

ತರಳೆಯ ಮನದ ಸಾಕ್ಷಿಕವ ನಿರೀಕ್ಷಿಸಿ । ಧರಣಿಪನೆರ್ದೆಯುಲ್ಲಾಸವ ॥
ಧರಿಸಿ ಪೊಂಪುಳಯೋದುದ ಕಂಡು ಮನದೊಳು । ಪರಿತೋಷವ ತಳೆದೀಶಾನ್ಯ ॥ (41)

ಹರುಷದೆ ಮದವರ್ಕಳ ಕೈಗೂಡಿಸಿ । ಹರನ ಶೇಷಾನ್ನವ ನೂಡಿಸಿ ॥
ಪರಿವಿಡಿಯೊಳು ನಾಗವಾಲೆಯ ಮಾಡಿಸಿ । ಪುರದೊಳ ಗೋಕುಳಿ ಮಾಡಿಸಿ ॥ (42)

ಗಾಡಿಯೆಸಕ ದೊತ್ತರದೆ ವಿವಾಹವ । ಮಾಡೆ ಸೌಂದರ ಸಂಕಿಲೆಯರು ॥
ಕೂಡಿ ಸುಖದೊಳಿರ್ದ ರೆಂದರುಪಿದ ಶಿವ । ನಾಡೆರೆಯಗೆ ಮುದ್ದು ಮೊಗದಳೆ ॥ (43)

ಗಿರಿಜೆಯ ಮೆಯ್ಗಂಪಿಗೆರಗುವ ತುಂಬಿ । ಯಿಂ ಚರವಶ್ವತರಗಾನರಸದೊಳು ॥
ಬೆರೆದು ಕಿಂಗೆ ರಂಜಿಸೆ ತಲೆಯೊಲೆವ ಶಂ । ಕರಶಾಂತ ಮಲ್ಲಿಕಾರ್ಜುನ ಜಯ ॥ (44)

ಚರಮ ಶರಣಾಗ್ರಣಿಯ ಕೃತಿಯ । ವಿಸ್ತಾರವ ಮಾಳ್ಪರಾವರಿಪರ ॥
ತಾರರ್ಕರುಳ್ಳನ್ನವರ ಮಲ್ಲಿಕಾರ್ಜುನ । ನೋರಂತೆ ಪಾಲಿಪ ನೊಲವಿಂದೆ ॥ (45)

(ಅಂತು ಸಂಧಿ 23 ಕ್ಕಂ ಪದನ 1299 ಕ್ಕಂ ಮಂಗಳ ಮಹಾಶ್ರೀ.)

ಇಪ್ಪತ್ತನಾಲ್ಕನೆಯ ಸಂಧಿ-

ಬಗ್ಗದೊವಲ ನುಟ್ಟಿಗೆ ಪಳೆಮಾತಗೆ । ಮೊಗ್ಗಲ್ಲದ ಬಾಂದಲೆಯಗೆ ॥
ಸಗ್ಗಗರೆರೆಯಗೆ ತುಳಿಲ್ಗೆಯ್ವ ದೇವ ರೊ । ಳಗ್ಗಳ ಶಾಂತ ಮಲ್ಲೇಶಗೆ ॥ (1)

ಸರಿಮಿಂಡಿಯಜವ್ವ ನದುರ್ಬುತರಳೆಯ । ತುರುಗೆವೆಗಣ್ಣ ಬಣ್ಣನಸುಣ್ಬ ॥
ನೆರೆಜಾಣೆವೆಂಗಳ ನುಡಿಯಿಂಪ ಸೋಲಿಸಿ । ಮೆರೆದುದೀಕಬ್ಬವಿರುಪಭೂಪ ॥ (2)

ಪೊಂಗಳಸದಗಾಡಿಯು ಗಲ್ವಗುರುಕುಚೆ । ಭೃಂಗನಿಕರ ಸನ್ನಿಭಕಚೆ ॥
ತಿಂಗಳ ಬಟ್ಟನಗುವನಗೆ ಮೊಗದಳ । ಹೆಂಗಳ ರನ್ನೆ ಮುಂಗಥೆಗೇಳ ॥ (3)

ಪ್ರತಿಯಿಲ್ಲದ ಭೋಗ ದಿಯನ್ಯ ವಿಷಯದ । ರತಿಯಿಲ್ಲ ದಿಂದ್ರಿಯದೆಸಕದೆ ॥
ಮಿತಿಯಿಲ್ಲದ ನಿಜಸುಖ ದೊಳಗಾದಂ । ಪತಿಗಳೆಸೆದರೆಲೆನರನಾಥ ॥ (4)

ಬೇಟದ ಸವಿಯು ಸೋಲದೆ ಸೊರ್ಕೆ ಬೆರಗಾದ । ನೋಟದಿನಿದ ಮುದ್ದನುಡಿಯಿಪ ॥
ಕೂಟದ ಸೊಗಸಮನ ದೊಳ್ಪುಟ್ಟ ಕಲೆಗಂಡ । ಮಾಟದೊಳ್ ಮರ್ದರನುದಿನ ॥ (5)

ಬಿಗಿದಪ್ಪಿದಾ ಬಾಹುಗಳಿಂದೆ ಪರವಶ । ದೊಗುಮಿಗೆಯಾದ ನೇತ್ರಗಳಿಂದೆ ॥
ನೆಗೆದ ರೋಮಾಂಚನ ಗಾತ್ರಗಳಿಂದೆ ಕಾ । ಲಗಳಕಳೆದರವ ರೊಲವಿಂದೆ ॥ (6)

ಮೊಗಮೊಗದೊಳು ಫಣೆಫಣಿಯೊಳು ದಿಟ್ಟ ದಿ । ಟ್ಟಿಗಳೊಳುತನು ತನುವಿನೊಳೊಂದಿ ॥
*ಬಗೆಬಗೆ ಭಿನ್ನ ಮಿಲ್ಲದೆ ಬೆಚ್ಚ ಪಲ । ದಿವಸಗಳ ಕಳೆದರವರೆಲೆ ಭೂಪ ॥ (7)

ಪೆಱತರಿಯದೆ ರತಿಸುಖ ದೊಳ್ । ಮೆಯ್ಗಳ ಮರೆದು ಮೋಹಾರ್ಣವ ದೊಳಗಾಳ್ದು ॥
ಬರೆಯದೆ ಮಸದಾಟ ದಾತುರ ಮನದೊಳು । ಗರಿಗೊಂಡು ಮೂರು ವರುಷ
ಮಿರ್ದು (8)

ಒಂದು ದಿನದ ರಾತ್ರಿಯೊಳತಿ ಕಾತರ । ದಿಂದೆಸುಸಿಲ ನೊಡರಿಸಿಮೇಣೇ ॥
ಸೌಂದರ ಸಹೆಲೆಯುರು ನಿದ್ರೆಗೆಯ್ದರಾ । ನಂದರಸದ ಜುಮ್ಮುತಲೆಗೇರೆ ॥ (9)

ಮಲಗಿರ್ದು ನಿದ್ರೆ ತಿಳದು ಮೆ । ಯ್ಯಾಳ ದಕ್ಷಿತೆರೆದು ಮರೆದೊರಗಿರ್ಪ ॥
ಲಲನೆರವ ನೋಡಿ ನೋಡಲೆಸೆದಳ । ವಳು ಕಾಮ ಯೋಗಿಣಿ ಯೆಂಬಂತೆ ॥ (10)

ನಸುಮುಗಿ ದಕ್ಷಿಯುಳ ಕತತಿಸೂಸಿದ । ನೊಸಲೊರಗಿದ ಗೋಣಿ ನಿಡಿದಾದ ॥
ಉಸುರುಪ ಧಾನ ಬಾಹುಗಳಿಂದೆರಂಜಿಸು । ವಸಿಯಾಳರವ ನೀಕ್ಷಿಸುತ್ತಿರ್ದ ॥ (11)

ಎಳೆವೆರೆ ರಾಕೇಂದು ಮಂಡಲಮಾಗಿ ಕಂ । ಗೊಳಪಂತೆನಸುಮುಗಿ ದಕ್ಷಿಯು ॥
ಬೆಳಕಿಗೆ ನೆಪೆಪಿರಿ ದಾಗಿರಂಜಿಸದಿಕ್ಕ । ಬೆಳಗೆಮಾನಿನಿಯಕ್ಷಿದೆಪ್ಪಿದಳು ॥ (12)

ನಿಡುಗಣ್ಣೊಳಗಾನಂದಾಶ್ರು ಮೆಯ್ಯೊಳ । ಗಿಡಿದಿರ್ದ ರೋಮಾಂಚನದಿಂದೆ ॥
ಪೊಡವಿಯೊಱೆಯ ಸೌಂದರ ಭೂಪಗುಸುರ್ದಳು । ಮಡದಿತಾ ಕಂಡಕನಸನಾಗ ॥ (13)

ಹರಸನ್ನಿಭ ಮುನಿವರ ಬಂದುನೀ । ವಿರದೆಮ್ಮ ತಿರುವಾರೂರ್ಗೆ ॥
ಬರೆನಿಮ್ಮಭಿಮತವನುಸಲಿಸುವೆನೆಂ । ದೊಜೆದ ನೆಂದೆನೆ ನಂಬಿಯಿಂತೆಂದ ॥ (14)

ರಾಕೇಂದು ವದನೆ ಕೇಳಾ ಶಿವಯೋಗಿ । ವಲ್ಮೀಕ ಮಹಾಲಿಂಗ ನಿನಗೊಲ್ದು ॥
ಆಕರುಣಾಕರ ಕೃಪೆಯೊಳ್ ಗೆಳ್ತಂದ । ನೀಕನಸಿನ ಶುಭಫಲವೆಂದ ॥ (15)

ಆನುಡಿಗೇಳೀ ಮೃಗೇಕ್ಷಣೆ ಸೌಂದರ । ಗಾನತೆಯಾಗಿ ಪೊಂಪುಳಯಾಗಿ ॥
ನೀನೆನಗಾ ದೇವನ ತೋರಿಸು ನಡೆ । ನಾನಿನ್ನ ಕೂಡೆಬಂದಪೆನೆನೆ ॥ (16)

---

* ವಿ.ಸೂ. ಇದರ ಮಾತೃಕೆಯಲ್ಲಿ 111 ನೆಯ ಓಲೆಯು ನಷ್ಟವಾಗಿರುವುದರಿಂದ ಇಲ್ಲಿಂದನಂತರ 19 ನೆಯ ಪದ್ಯದ ವರೆಗೆ ಮುಂದಣ 965 ನೇ ನಂಬ್ರದ ಗ್ರಂಥದಿಂದ ಬರೆದುದಾಗಿದೆ.

ಬಂದಪೆಯಾ ಬಂದಪೆ ಪೋಪಪೆಂದು । ಪೋಗುವನಿಂದು ಪೋಗುವ ॥
ಸಂದೆಗಮಿಲ್ಲವೆ ನಿನಗೆ ನಿಶ್ಚಯು ಮೆಂ । ದೊರೆದಳು ಕಾಂತೆ ನೃಪನೊಳು ॥ (17)

ಅನಿತ್ರರೊಳಗೆ ಬೆಳಗಾದುದು ಬಂದು । ಮಾನಿನಿ ತಂದೆ ತಾಯೊಡನೀಮಾತ ॥
ವಿನಯದಿ ಪೋದಪೆವೆನಲಾ ಪೆಣ್ಗೆ । ಮನದಣಿಪ್ರೊಲು ಬಳುವಳಿಯಿತ್ತು ॥ (18)

ಸೌಂದರ ನೃಪಗುಡುಗೊಱೆಯಿತ್ತು ಸಂತಸ । ದಿಂದೆ ಬೀಳ್ಕೊಡೆತಿರುವಾರೂರ್ಗೆ ॥
ಬಂದನನಂತ ವಿಭವದೊಳಗಾ ನೀರೆ । ಯಂದಣ ಸಹಮಾಗಿ ಭರದಿಂದೆ ॥ (19)

ಪೊರಬನದೊಳು ಬೀಡಿಕೆಗೆಯ್ದು ನೃಪನುಡು । ಗೊಱೆಗಳಪೊನ್ನ ಜಾಳಿಗೆಗಳ ॥
ಪೊಱೆಗಳ ಪೊರಿಸಿ ಮಂತ್ರಿಯು ಕೂಡೆಕಳುಪಿದ । ತುರುಗೆವೆಗಣ್ಣ ಪರವೆಗೊಲ್ದು ॥ (20)

ಬಂದನಮಾತ್ಯನಂಗನೆ ನಾಚಿಯು ನಿಜ । ಮಂದಿರಕಾ ಪೊನ್ನಪೊರೆಗೂಡಿ ॥
ಮುಂದಣ ಪೊಸಮಣಿವಾಗಿಲತಾನೆಂದಿ । ನಂದದೆ ಪೊಕ್ಕುಬರ್ಪುದ ಕಂಡು ॥ (21)

ಪರಿತಂದು ತುಂಬುರ ನೆಳ್ತಂದವಿವರವ । ಪರವೆಯೊಡನೆ ಸಖಿಯರು ಪೇಳೆ ॥
ಪಿರಿದು ಕೋಪದೆ ಭಂಗಿಸಿ ಪೊರಮಡಿ ಸೆಂ । ದೊರೆಯಲವರು ಬಂದು ಮುಳಿಸಿಂದೆ ॥ (22)

ಪೆಟ್ಟಗೆಗಳನೊಡೆದರು ಪೊನಪೊರೆಗಳ । ಕಟ್ಟಪರಿದು ಬೀದಿಯೊಳು ಚೆಲ್ಲಿ ॥
ಹೆಟ್ಟಗೆಯುರು ತುಂಬುರು ಮಂತ್ರಿಸು ನೆರೆ । ಯಟ್ಟದರಲ್ಲಿರಲೀಸದೆ ॥ (23)

ಬಂದರುಪಿದ ಮಂತ್ರಿಪ ನೀ ವಿವರವ । ನೊಂದಿನಿಸುಳಯದೆ ನೃಪನೊಳು ॥
ಕಂದರ್ಪನನಿತರೊಳಗೆ ಮುಳಿದಲರ್ಗಣೆ । ಯಿಂದಚ್ಚ ನವನಥಟಳವಂತೆ ॥ (24)

ನಡುಗಿದ ಒಲವಡಗಿದನಿಮಿಷಾರ್ಥಕೆ । ಬಡವಾದ ಮಿಗೆಡಿಳ್ಳರ್ದೆಪ್ರೋದ ॥
ಜಡತೆಮನದೆ ಪೂತುದು ಬಿಂಕ ಬೀತುದು । ಧೃಢಗೆಟ್ಟನತಿಶಯ ಭಯವಟ್ಟ ॥ (25)

ಆಗಳಾನಂಬಿ ವಲ್ಮೀಕನಾಥನ ವಿಪ್ರ । ಳಾ ಗಾರದೆಡೆಗೆ ಬೇಗದೆ ಬಂದು ॥
ನಾಗಾಧಿ ರಾಜ ಚರ್ಮಾವೃತ ನಿರ್ಮಲ । ಭೋಗಭವಾಂತಕ ಜಯಯೆಂದು ॥ (26)

ನೂತ್ನಭುಜಂಗ ಕಂಕಣ ನಾನಾ ಶಾಸ್ತ್ರ । ಯತ್ನವಿದೂರ ನಿರ್ಮಲಗಾತ್ರ ॥
ರತ್ನ ಕಟಕವಾಸನಿಲಯುತ ಸ್ತನ । ಯಿತ್ತುಕಂಧರ ಜಯಜಯಯೆಂದ ॥ (27)

ಈ ತೆರದಿಂದೆ ಪೊಂದಾಳವಿಡಿದುಪಾಡ । ಲಾತಗೆಪಡಿಪ್ರೊನ್ನನೊಲಿದಿತ್ತೆ ॥
ಭೂತಳಾಧಿಪ ಕೇಳು ಸೌಂದರರಾಜ ಮ । ತ್ತಾತುರದಿಂದೆ ಬಿನ್ನಪಗೆಯ್ದ ॥ (28)

ಎಲೆ ದೇವ ಪರವೆಯು ಮುನಿಸಪೇಳುವರೆಯೆ । ನ್ನಳವಲ್ಲ ನೀನೆ ಕಾರುಣ್ಯದೆ ॥
ತಿಳುಪಿಕೊಡೆಂದು ಸೌಂದರ ಮುಕುಟವನೆನ್ನ । ನಳನಾಂಘ್ರಿಗೆ ಸಾರ್ಚಿದರಾಯ ॥ (29)

ಆ ನುಡಿಗೇಳ್ದಂತೆಂದೆನಂದಿನ ವಿಪಾ । ಹಾನುರಾಗದೊಳೀ ಪರವೆಯ ॥
ನೀನೊಲ್ಲೆನೆಂದೆ ಮಗಳೆ ಬೇಕೆಂಬುದಿ । ದೇನುಚಿತವೆತನುಜಾಗ್ರಣಿ ॥ (30)

ಕಾಂಚನ ಗಿರಿನಡೆದಾಡಿ ದೊಡಂಬುಜ । ಸಂಚಯ ಶಿಲೆಯೊಳರಲ್ದೊಡೆ ॥
ಪಂಚಮುಖನ ಶರಣರ ನುಡಿಗಳಿಗನ್ಯ । ತಾಂಚಿತವಿಲ್ಲ ನಂದನೆ ಕೇಳು ॥ (31)

ಪರಿಣಯರತಿಜೀವಾಂತ್ಯ ಸದ್ಧನಹತಿ । ಪರಹಿತ ನೆಂಬೆಯ್ದಿಡೆಯೊಳು ॥
ಪಿರಿದು ಪುಸಿಯು ನಡೆದೋಷಸಂಭವಿಸ ದೆಂ । ದೊರೆದವು ನಿನ್ನವಾಕ್ಯಗಳಂತು ॥ (32)

ಆ ಮಾತುಗೇಳ್ದು ಸಂತಸವಟ್ಟು ಸೌಂದರ । ಭೂಮಿಪನಂತರಂಗದ ನೋವ ॥
ಪ್ರೇಮದಿಕಳೆದು ಮೈದಡವಿ ಮುಂಡಾಡಿದೆ । ಕೋಮಲಾಂಗಿಯ ತಿಳುಪುವೆನೆಂದು ॥ (33)

ಹರುಷದೆ ನಂಬಿ ಸಂಕಿಲೆಯರ ನಮ್ಮ ಮಂ । ದಿರದೊಳಗಿರಿಸಿಗಿರಿಜೆಗೂಡಿ ॥
ಪರವೆಯ ಮನೆಗೆ ತಪೋಧನವೇಷವ । ಧರಿಸಿ ನಾನೆಳ್ತಂದೆನೊಲವಿಂದೆ ॥ (34)

ಇದಿರೆಯ್ದಿ ಮಂಗಲೆನಾಚಿ ಭಕ್ತಿಯೊಳೆಮ್ಮ । ಪದದೊಳು ನೊಸಲಿಟ್ಟು ವಂದಿಸಿ ॥
ಮೃದುತಲ್ಪದಮಣಿ ವಸೆಯಿಟ್ಟು ಕುಳ್ಳಿರಿ । ಸಿದಳತಿಶಯ ಸಂಭ್ರಮದಿಂದೆ ॥ (35)

ಬಂದಳು ಪರವೆ ಮುಗಿಲ ಮರೆಯೊಳು ತೋರಿ । ದಿಂದು ಮಂಡಲದಂತೆ ಕಳೆಗುಂದಿ ॥
ಕಂದಿದ ಮುದ್ದು ಮೊಗದೆ ಮಲಿನಾಂಬರ । ದಿಂದಸಿದಾದಂಗಲತೆಯಿಂದೆ ॥ (36)

ಅಂಜನ ವಿಲ್ಲದಕ್ಷಿಗಳಿಂದೆ ನವಪುಷ್ಪ । ಮಂಜರಿಯಿಲ್ಲದ ಮುಡಿಯಿಂದೆ ॥
ಮಂಜುಳಮಣಿ ಭೂಷಣವಿಲ್ಲದಂಗದೆ । ಕಂಜದಳಾಕ್ಷಿ ಕಣ್ಗೆಸೆದಳು ॥ (37)

ಮಾಸಿದ ಮೈಸಿರಿ ಬಣ್ಣಗುಂದಿದ ತುಟಿ । ಪೂಸದ ಕಸ್ತೂರಿನೊಸಲೊಳು ॥
ಪೂಸರದ್ದುಪಟಳದಿಂ ಬಸವಳಿದಿರ್ಪ । ಆ ಶಶಿ ಮುಖಿಯಿರವಕಂಡೆ ॥ (38)

ತೊಡಕಿದಳಕ ಬೆಳುತಿಗೆವಲ್ಲ ಬಲುಗುಂ ದಿ । ದೊಡಲೆಯ್ದೆ ನಿರಿಯಿಲ್ಲದಂಬರ ॥
ಸಡಗರತೊಲಗಿದ ಬಗೆಮಿಗೆ ರಂಜಿಸೆ । ನಡೆತರ್ಪಪರವೆಯನುವ ಕಂಡೆ ॥ (39)

ಬಂದೆಮ್ಮ ಪದಕೆರಗಲು ಕರುಣದೊಳಂ । ತೆಂದೆನವಳ ಶಿರಪಿಡಿದೆತ್ತಿ ॥
ಕಂದನೀ ಪಲಕಾಲ ವಿರವೇದನೆಯಿಂದೆ । ಕಂದಿದೆ ಪಗಲಿಂದುಕಲೆಯಂತೆ ॥ (40)

ಉರಿತಾಗಿದ ಕೋಮಲವಲ್ಲಿ ಯಂತೆ ಮೆ । ಯ್ಯುರಿಗೆಟ್ಟು ದಿನವಕಳೆಯಲೇಕೆ ॥
ತರಳಲೋಚನೆ ತಳುವದೆ ಸಂತವಾಗು ಸೌಂ । ದರನೊಡನೆನೆ ಲೆಂದವಳಂತೆಂದು ॥ (41)

ದೇವ ಸೌಂದರ ನಾನೆಂತು ನೋಡುವೆ ಮಾತ । ನಾವ ತೆರದೊಳಾಡುವೆನಿನ್ನು ॥
ಭಾವಿಸಲಿಂದಿಗೆ ಮೂರು ವರುಷದಿಂ । ದೀವಿಧದಿಂದೆ ನಾನಿರುತಿರ್ದು ॥ (42)

ಬಾರದೆ ಬಹುದಿನ ತಡೆದಿರ್ದುದಲ್ಲದೆ । ನಾರಿಯೊಳೊರ್ವಳ ಪರಿಣಯವಾಗಿ ॥
ಮೇರೆದಪ್ಪಿದವನ ದವನೊಳು ಸಂತಸೇಂ । ಕಾರಣವೆನಗೆ ಕೃಪಾನಿಧಿ ॥ (43)

ಅಲರಂಬಿಗೆನ್ನನುಣಿಸನಿತ್ತು ಪೋದ ಹೆಂ । ಗೊಲೆ ಕಳುಕದೆಕೆಡುಕನೊಳು ॥
ಎಲೆ ದೇವ ನೀಸಂತವಾಗೆಂಬ ನುಡಿಯೆನ । ಗಳೆವಡೆದೆಂದುಸುರ್ದಳು ಕಾಂತೆ ॥ (44)

ಮೋಸವಾದೆನ್ನಯ ಜವ್ವನಸಿರಿಮ ವಿ । ಲಾಸದೇಳ್ಗೆಯ ಸೂರೆಯಕೊಂಡು ॥
ಲೇಸಬಾಯಾರಿ ತೊಲಗಿ ಸುಖವಡೆದ । ನ್ಯಾಸಕ್ತನೊಳುನಲ್ಪುಸಲ್ವುದೆ ॥ (45)

ಮರುಗದಿರೆಲೆ ನಿನಗೆ ಸಂಕಿಲೆನಾಚಿ । ಪೆರತೊರ್ವಳೆ ಪೂರ್ವಕಥನವ ॥
ಮರೆದೆಯ ಕೇಳು ಪೇಳುವೆನೆನುತಾಕಂತೆ । ಗರುಪಿದನದನಿನಿತುಳಿಯದೆ ॥ (46)

ಅ ನುಡಿಯಗೇಳ ಸಂತಸತಾಳ್ದಿನ್ನಡಿ । ಗಾಸತೆಯಾಗಿ ಪೊಡೆಂಬಟ್ಟು ॥
ಭೂನಾಥ ಸಂಕಿಲೆಯರ ಕರಸೆಂದೆನೆ । ತಾನೊಲ್ದು ಕರೆಸಿದ ನೊಲವಿಂದೆ ॥ (47)

ಇದಿರೆಯ್ದಿ ಸೂಜಿಯಯಸ್ಕಾಂತ ಶಿಲೆಯೊಳು । ಪುದಿದಂತೆ ಪರವೆಸಂಕಿಲೆಯನು ॥
ಪದೆದಪ್ಪಿ ದಳದಿರ್ಪಂದೆಳೆಲತೆಯ । ಪ್ಪಿದುದೆನೆ ಬಾವನ್ನದೆಳೆಗೊಂಬ ॥ (48)

ನಮಿಸಿದರೆನ್ನಪದಕೆ ಗಿರಿಜಾಪದ । ಕಮಲಕೆಪರವೆ ಸಂಕಿಲೆಯುದ ॥
ರಮಣ ಸಹಿತಲದ ಕಂಡರೆ ಕರುಣದೊ । ಳುಮೆಲ್ಲನಿಂತೆಂದಳವರೊಳು ॥ (49)

ಕೊಡಿರಿ ಸವತಿಮತ್ಸರಮಿಂದು ಮೊದಲಾಗಿ । ಬೇಡನಿಮ್ಮೊಳುಹೆಚ್ಚುಕುಂದನು ॥
ನೋಡದೆನಂಬಿಗೆ ಸುಮಶರತಾಪವ । ಮಾಡವಿಳೆಯೊಳರಿ ನೀವೆಂದು ॥ (50)

ಪರವೆಯನಾ ಸಂಕಿಲೆನಾಚಿಯ ಸೌಂ । ದರನೃಪತಿಯ ಕೈಯ್ಯಡೆಗೊಟ್ಟು ॥
ಇರಿಸಿದೆನಾತಿರುವಾರೂರೊಳೊಂದು ಮಂ । ದಿರದೊಳನೇಕ ಭಾಗ್ಯವನಿತ್ತು ॥ (51)

ಇಂದಿನ ದಿನವದು ಕಾರಣ ತಳುವಾಗಿ । ಬಂದೆಸುಮ್ಮನೆ ತಳುವಿದುದಿಲ್ಲ ॥
ಸಂದೆಗಮಿಲ್ಲ ನಿನ್ನಾಣೆಯೆಂದರುಪಿದ । ಕಂದನೊಳಗಜೇಶನೆಲೆ ಕಾಂತೆ ॥ (52)

ಗಿರಿಜೆಯು ಮೆಯ್ಗಂಪಿಗೆರಗುವ ತುಂಬಿಯಿಂ । ಚರವಶ್ವೇತರಗಾನ ರಸದೊಳು ॥
ಬೆರೆದುಕಿವಿಗೆ ರಂಜಸೆತಲೆಯೊಲೆವ ಶಂ । ಕರ ಶಾಂತ ಮಲ್ಲಿಕಾರ್ಜುನ ಜಯ ॥ (53)

ಚೇರಮಕರಣಾಗ್ರಣಿಯಕೃತಿಯ ವಿ । ಸ್ತಾರವ ಮಾಳ್ಪರಾದರಿಪರ ॥
ತಾರರ್ಕ ರುಳ್ಳನ್ನವರ ಮಲ್ಲಿಕಾರ್ಜುನ । ನೋರಂತೆ ಪಾಲಿಪನೊಲವಿಂದೆ ॥ (54)

ಅಂತು ಸಂಧಿ 24 ಕ್ಕಂ ಪದ 1353 ಕ್ಕಂ ಮಂಗಳಂ ಮಹಾಶ್ರೀ.

ಇಪ್ಪತ್ತೈದನೆಯ ಸಂಧಿ-

ಅಬ್ಜೋದರವಾಸವಪೂಜಿತ ಪಾ । ದಾಬ್ಜ ಪನ್ನಗ ಪತಿಭೂಷಣ ॥
ಅಬ್ಜಸಂಭವ ಶಿರೋಹಸ್ತ ಭಕ್ತೌಘ ಕಂ । ಜಾಬ್ಜ ಜಯಮಲ್ಲಿಕಾರ್ಜುನ ॥ (1)

ಕವಿಗಳ ಕೈಗನ್ನಡಿ ಕೇಳ್ವರಸಿಕರ । ಕಿವಿಗಮರ್ದುಣಿಸಗಲ್ದಿನಿಯರ ॥
ಜವಳಗೊಳಿಪ ಮೋಹನ ಮಂತ್ರ ನಿನ್ನಯ । ಸವಿನುಡಿಹೊನ್ನೊರೆವಿರುಪೇಂದ್ರ ॥ (2)

ಕಂದಿಲ್ಲದೆಸೆವಕಳಾನಿಧಿವಿರಹದೊ । ಳೊಂದದರತಿ ಸಂಚರಿಸಿದ ॥
ಇಂದಿರೆಪುಸಿಪೊರ್ದದ ವಾಣಿ । ಲಾಲಿಸುಮುಂದಣಕಥೆಯ ಮನ್ಮನದಂಚೆ ॥ (3)

ತಿರುವಂಜಿಕಳನಾಥನ ಮಾತಚೇರಮ । ಧರಣಿಪಕೇಳ್ದು ಪೊಂಪುಳದಾಳ್ದು ॥
ಕರವ ಮುಗಿದು ಬಿನ್ನಪಗೆಯ್ದು ನಂಬಿಯ । ಪುರಕೆಂದು ತೆರಳಪೋದಪೆನೆಂದು ॥ (4)

ಕಾಮಮೋಹಂಗಳೆಳ್ಳನಿತುಳ್ಳರೆಯು ಮೋಕ್ಷ । ಕಾಮಿನಿಯಿಲ್ಲೆಂಬನಿಗಮದ ॥
ಸೋಮನೊರೆವನಿನ್ನನೆ ಕುಂಟಣಿಯ ಮಾಡಿ । ದಾಮಹಿಮನನೊಡವೇಳ್ಕೊಂದ ॥ (5)

ಪೋದಪೆನಾ ತಿರುವಾರೂರ್ಗೆನಂಬಿಯ । ಪಾದಕಮಲದರುಶನಮಪ್ಪೆ ॥
ವೇದದರಸಿಕಾಣದನಿನ್ನಪದಸಾಧ್ಯ । ನಾದ ಮಹಾತ್ಮನಿಗಾನತನಪ್ಪೆ ॥ (6)

ಮುಕ್ತನ ಪರಮವಿರಕ್ತನ ಸಂಸಾರ । ನಕ್ತದಿನಾಧಿಪ ನೆನಿಸುವ ॥
ಶಕ್ತನ ಸದ್ಗುಣ ಮುಕ್ತನ ನಿಜ ಶಿವ । ಭಕ್ತನಡಿಯ ಕಾಣಬೇಕೆಂದು ॥ (7)

ಪೊರಮಟ್ಟ ನವನೀಶರಗಡಣದೆಸೆ । ದುರುಗೆ ಭೇರಿ ಸನ್ನಾಹ ಭೇರಿರವ ॥
ಕರಿಕೊರಳನ ಬೀಳ್ಕೊಂಡು ಕೇರಳದೇಶ । ದೆರೆಯನದೇನಬಣ್ಣಿಪೆ ಕಾಂತೆ ॥ (8)

ಮಸಳಸೆನ ಭರಥ ಪದರಜದಿಂದುರೆ । ಕೆಸರೊಳೆನೆಲಗಜಮದದಿಂದೆ ॥
ದೆಸೆದನಿಗುಡೆಹಯರವದಿಂದೆ ಭಟರಕೂ । ರಸಿರುಚಿಯಿಂ ಬಟ್ಟೆಬೆಳಗಾಗೆ ॥ (9)

ನಡೆದರಘೇಭ ಚತುರಂಗ ಪದಾತಿಯ । ಗಡಣದೆ ಚೇರಮಹೀರಮ ॥
ಜಡಿವ ವಿಪುಳಕೇತನಗಳ ಮುತ್ತಿನ । ಕೊಡೆಗಳಗಾಡಿಕಣ್ಗೆನಿದಾಗೆ ॥ (10)

ಪಡಿಯರರುಲುಪು ದೆಸೆಯರೇವೆ ಪೊಸ ಪೊನ್ನ । ದಡಿಗಳನಾಂತನನಿಬರ ॥
ಗಡಣದೆಮದವಾರಣಯಾನದೆ ನೃಪ । ನಡೆದನನೇಕ ವಿಭವದಿಂದೆ ॥ (11)

ಬರುತೆ ಬರುತೆ ಕಂಡನು ತಿರುವಾರೂರ । ಸರಣಿಯೊಳ್ ಸೆವದೇಶದ ಪೆಂಪ ॥
ಪರಿಮಳದಿಂಪ ಬೀರುವಕಂಪ ಪಸರಿಪ । ತರುಲತೆಗಳ ಕೆರೆತೊರೆಗಳ ॥ (12)

ವಸುದೆವೆಣ್ಣಿಟ್ಟ ಮುಸುಕನಿಟ್ಟಪಸುರ್ವಜ್ಚೆ । ಮಿಸುನಿವಣ್ಣದ ಪಟ್ಟೆಯೆಂಬಂತೆ ॥
ಎಸೆದುದು ಸಾಳವನ ನಳನಳಸುವ । ಸಸಿಯಿಂದೆ ಧಾನ್ಯಮಂಜರಿಯಿಂದೆ ॥ (13)

ಕಂಪಿಗೆಳಸಿ ಮುಸುರುವ ತುಂಬಿಗಳ ಮಾಲೆ । ಕಂಪಿಗೆಳಸಿ ಸೇರಿದರಸಂಚೆ ॥
ಇಂಪಿಗೆಳಸಿ ಕವಿವರಗಿಳಿವಿಂಡವು । ಪೆಂಪುವಡೆದವರಸನ ಕಣ್ಗೆ ॥ (14)

ಎಳೆವಱತೆಯುದಪಾಮರಿಗಳಕಡೆಗಣ್ಣ । ಬೆಳಗೆಱಗುವ ಶಕುನಿ ಚಯವ ॥
ಬಳಸೆ ಬೆದರಿಪೋದವು ತಮ್ಮಮುಸುಕುವ । ಬೆಳುವಲೆಯುಲೆಯಿಂ ಅಂಚೆನಡೆಯುಳ ॥ (15)

ಸುರಭೂಜದಿನಿವಣ್ಣನಿತ್ತು ಮೆಯ್ದುಡವಿನಿ । ರ್ಜರರೆರೆಯುಲುಕಮ್ಮಗಳವೆಯು ॥
ಸುರಲೋಕಕವರತೆನೆಯು ಕರ್ಚಿಪಾರುವ ವಂ । ತರಗಿಳಿಪೊರ್ದವಾಗಸಕಾಗಿ ॥ (16)

ಎಳೆಗಳಪೆಯು ಹರಿತಪ್ರಭೆಯಾಗಸ । ದೊಳಗುರೆ ಮಾರ್ಪೊಳೆವಂದದೆ ॥
ಪೊಳೆದುದು ಪೊಸನೆಲ್ಲತೆನೆಗರ್ಚಿಸಾಱು ವಂ । ತರೆಗಿಳಿಗಳ ಪಸುರ್ವಣ್ಣದಕಾಂತಿ ॥ (17)

ಕಳವೆಗೆಱಪ ಶುಕಗಳನೊರ್ವ ಪಾಮರಿ । ಪಳುಕಿನ ಕೈಗಲ್ಲೊಳಿಡಲದು ॥
ತೊಳಗಿದುದವರ ಪಸುರ್ವಣ್ಣ ಮೆಯ್ಯೊಂದು ಗಿಳಿಯೆನಲಾ ಗಿಳಿಯೆಡೆಯೊಳ್ ॥ (18)

ಓಪಳೆ ಕೇಳ್ವಾಮರಿಯರ ನೋಡುತೆ । ಭೂಪತಿಮೆಲ್ಲನೆ ನಡೆತರ್ಪ ॥
ಆಪಥದೊಳರವಟ್ಟಿಗೆಗಳು ನಾ । ನಾಪುಷ್ಪರಚನೆಯಿಂದೆಸೆದವು ॥ (19)

ಎಳೆಮಾವಿನ ಪಂದರ ಬಾಳನೆಱಕೆಯಿ । ಪಳುಕುಕೊಡುತಿಳನೀರ್ಗಳ ॥
ನಲಿದೇಱ ವೇಱಜವ್ವನ ಪೆಂಗಳಗಾಡಿ । ಯುಳವಡೆ ನೃಪನೋಡುತೆಳ್ತಂದ ॥ (20)

ನಿಡುಪುರ್ಬುಗಳನಿಡುಗಂಗಳ ನೆಡಿದಾದ । ಮುಡಿಗಳ ಮುದ್ದುಮೊಗಂಗಳ ॥
ಮಡದಿಯುರಮಳೋದಕ ಕಳಶಂಗಳ । ಪಿಡಿದೆರೆವಿರವನೋಡಿದನಾಗ ॥ (21)

ಎಳೆಪೆಂಗಳ ಮುಡಿನೆಳಲಿಂದೆ ಪೊರವಾರ । ಪುಳಿನದ ಮೂಡುವೆಟ್ಟಗಳಿಂದೆ ॥
ಬೆಳತಿಗೆ ಗಣ್ಣಜೊನ್ನದೆ ಪಾಂಥರೆರ್ದೆಗೊಂಡ । ಬಳಲಿಕೆಗಳ ತವಿಪುದಕಂಡ ॥ (22)

ಅಂಬುಜವ:ಖಿಜಳವೆರೆಯುಲು ಪಥಿಕಕ । ರಾಂಬುಜಾಂಬುವಿನೊಳವಳವೊಗ ॥
ಬಿಂಬಿಸೆ ಸವಿದೀಂಟಿದನವಸಾ ಪೆಣ್ಣ । ಬಿಂಬಾಧರರಸವುಂಬಂತೆ ॥ (23)

ಪಾನೀಯನೆಱತೆವೇಱಜವ್ವನೆಯ ಚಾರು । ಪೀನಕುಚದಿ ನೆಟ್ಟದಿಟ್ಟಿಯು ॥
ಏನೆಂಬೆ ಬಾರದೊಡಲು ನೀಕೇಳ್ವಂತಿರ್ದು । ದಾನಸಾಂದೋಳನ ಪಾಂಥರ ॥ (24)

ನೋಡುತೆ ಮೆಲ್ಲಮೆಲ್ಲನೆ ಬಂದನಾ ಚೋಳ । ನಾಡಸೊಂಪಿನ ಪೆಂಪಪೊಗಳುತೆ ॥
ಗಾಡಿಯೊಳಾ ಚೇರಮನೃಪನಂಬಿಯು । ಬೀಡಿಗೆ ಸಕಲ ವೈಭವದಿಂದೆ ॥ (25)

ಅರಸಿಕೇಳೆ ಚೇರಮನೃಪನಿದಿರೆಯ್ದಿದ । ಪುರಜನ ಗೂಡಿಸೌಂದರಭೂಪ ॥
ಪರಿತರ್ಪಸುವನೋನದಿಗಮೃತಾಬ್ಧಿಯು । ಭರತನಿದಿರ್ಗೊಂಬತೆರನಂತೆ ॥ (26)

ಎತ್ತಿದ ವೃಷಭಕೇತನಗಳ ಪಲ್ಲವ । ಸತ್ತಿಗೆಗಳ ಚಾಮರಂಗಳ ॥
ಮುತ್ತಿನಾರತಿಗಳ ನಾಂತೆಳೆವೆಂಗಳ । ಮೊತ್ತಸಹಿತನಂಬಿನಡೆ ತಂದ ॥ (27)

ಉರುತರ ಕುಚಗಳಸಗಳ ಕಪೋಲಮು । ಕುರಗಳನುಂಪಿಗೆ ಪೆಂಪಿಗೆ ॥
ಸರಿಯಿಡೆ ಪಿಡಿದಂತೆಕಳಸ ಗನ್ನಡಿಗಳ । ತರಳೆಯರಾಂತುನಡೆತಂದರಾಗ ॥ (28)

ಬೆಳುದಿಂಗಳನುಗುಳುತ ಕಡೆಗಂಗಳ । ಮೊಳೆನಗೆ ಯಿರುಪಮೊಗಂಗಳ ॥
ಎಳೆವರೆಯುದ ಪೆಂಗಳ ಗಾಡಿಯಿರ್ಕುಳ । ಗೊಳಸಿತು ಜನದಮನಂಗಳ ॥ (29)

ಮೊಳೆಯುಲೊಲ್ಲದೆ ಕೆಸರೊಳು ಪೆಂಗಳೆರ್ದೆಯೊಳು । ಬೆಳೆದುದು ಕಲಮೃಗಪದಪಂಕ॥
ಬಳಸಿ ದೆಂದಾಸ್ಯವೆಳೆಯುಬ್ಬದಂತೆ ಕಂ । ಗೊಳಸಿದುದವರುರಸಿಜ ಕಂಪ ॥ (30)

ಪಾಡುವಧವಳ ಶೋಭನಗಳ ಬಿರುದ ಕೊಂ । ಡಾಡುವಕಕಳೆಯಿಂಚರಗಳ ॥
ಆಡುವರಾಯ ಪಾತ್ರಗಳ ವೈಸಿರಿಯಸ । ಘಾಡದೆಬರ್ಪನಂಬಿಯುಕಂಡ ॥ (31)

ನಳನಶರನಕಂಡು ತಳತರಸಾಲವ । ಗಿಳದುಬಸಂತನೆಳ್ತರ್ಪಂತೆ ॥
ಪಳಯಿಗೆ ತಳ್ಕೆಸೆವಾನೆಯು ಚೇರಮ । ನಿಳದು ಸೌಂದರನೆಡೆಗೆಳ್ತಂದ ॥ (32)

ಮಣಿಮಕುಟವ ಚೇರಮನೃಪಸಾಂದರ । ಗಣನಾಥನಂಘ್ರಿಗೆಸಾರ್ಚಿದ ॥
ಮಣಿದನುಲ್ಲಾಸದೊಳಾನಂಬಿ ಭೂ ವರಾ । ಗ್ರಣಿಯಡಿದಾವರೆಗೆಲೆಶಾಂತೆ ॥ (33)

ವಂದಿಸಿ ಬಿಗಿಯಪ್ಪಿದಾನೃಪನಾಥನ । ಸೌಂದರ ನಾಲಿಂಗನ ಗೆಯ್ದು ॥
ನಿಂದುನೋಡಿದರೆವೆಯಿಡದತಿ ಸಂತಸ । ದಿಂದೆ ಮೈಮರೆದೊರ್ವರೊರ್ವರ ॥ (34)

ಎವೆಯೊಳಡಿದಸಂತಸ ಗಂಬನಿ ಸುಯ್ಯ । ನ ವಿರುರ್ಬುನಸು ನಡುಗುವಜಾನು ॥
ಸವಿಯಡಸಿದ ನೋಟಸೆರೆಯೋದ । ಮೆಲ್ಲೆರ್ದೆ ಯವರಿರ್ವರೊಳಗೊಪ್ಪವಡೆದುದು ॥ (35)

ಪವಣಿಲ್ಲದಾನಂದ ಪೆರ್ದೆಗೊಂಡು ನೋಡುವ । ತವಕಮುಪ್ಪರಿಯೋಗಿನುಡಿಯೊಳು ॥
ತವೆತೊದಳೊಂದಿ ಬಗೆಯುಸೊಗಸಿನ ಜುಮ್ಮ । ಕವಿದಿರ್ದರವನಂಚೆನಡೆಯುಳೆ ॥ (36)

ಭೂರಮಣಾನಂಬಿಯುಶಿವನಪರಾವ । ತಾರವೆಂದೆರ್ದೆಯೊಳುತ್ಸವದೊಳು ॥
ಮಾರಾರಿಯ ವಿಗ್ರಹವೆಂದು ಸಾಂದರ । ನಾರಾಜಮಣಿಯ ಮನದೊಳೆಂದ ॥ (37)

ಇವನಂತೆ ಪಡೆದವರಾರಭವನ ರೂ । ಪವನೊಲಿ ದೀಕ್ಷಿಪಕಂಗಳ ॥
ಇವನಂತೆ ಶಿವಪದದಂದು ಗೆಧ್ವನಿ ಗೇಳ್ವ ಕಿಃಗೇಳ್ವ । ಕಿವಿಗಳ ಪಡೆದವರಾರೆಂದು ॥ (38)

ಚೇರಮನೃಪಸೌಂದರಭೂಪನ ನಂಬಿ । ಕೇರಳದೇಶಾಧಿನಾಥನ ॥
ಚಾರುಮಹತ್ವವ ಮನದೊಳುಪೊಗಳುತ । ಲೋರೋರ್ವರೆದೆ ಯೊಳಚ್ಚರಿವಟ್ಟು ॥ (39)

ಬಂದರಧಿಕ ವಿಭವದೆಗುಡಿ ತೋರಣ । ದಿಂದೆಸೊಬಗುವೆತ್ತನಗರಕೆ ॥
ಇಂದುಧರನ ಕಾಣಿಸಿನೃಪತಿಯುಕರ । ತಂದಸೌಂದರನಿಜ ನಿಳಯಕೆ ॥ (40)

ಪರವೆಸಂಕಿಲೆನಾಚಿಯುಂದಿರೆಯ್ದಿ ಭೂ । ವರಗೆ ಮಾಣಿಕದಾರತಿಯ ನೆತ್ತಿ ॥
ಚರಣವ ಪರಿಪುಳ ಜಲದೆತೊಳೆದು ಮಣಿ । ಭರಿತ ಮೃಗೇಂದ್ರ ವಿಷ್ಟರದೊಳು ॥ (41)

ಚೇರಮ ನೃಪನಕುಳ್ಳಿರಿಸಿ ಸಮಸ್ತೋಪ । ಚಾರವನೊಡರಿಚೆ ನಯದಿಂದೆ ॥
ಆರಾಜ ಸಾಂದರಭೂಪನಕರೆದು ತನ್ನ । ಸಾರೆಕುಳ್ಳಿರಿಸಿದನೆಲೆಕಾಂತೆ ॥ (42)

ಯುವತಿಕೇಳಾ ಸಮಯದೊಳೆ ತುಂಬುರು ಮಂತ್ರಿ । ಶಿವಪೂಜೆಗೆಡೆಯಾಡು ತೆಂದೆಯ್ದಿ ॥
ಅವನಿಪಾಲರಿಗೆ ಬಿನ್ನಪಗೆಯ್ಯೆ ಬಂದರು । ತ್ವವದಿಂದೆ ಭೋಜನ ನಿಳಯಕೆ ॥ (43)
ಮೃಡಪೂಜೆಯ ಮಾಡಲೊಡನೆ ನೈವೇದ್ಯವ । ನೆಡೆಮಾಡುವಾಗ ಪಾಯಸಗಳ ॥
ಬಡಿಸೆ ಚೇರನೃಪ ನೊಲ್ಲೆನೆಂದೆನೆ ನಂಬಿ । ನುಡಿದನದೇನು ಕಾರಣವೆಂದು ॥ (44)

ಪರಮಾನ್ನವನುಣಲಿಲ್ಲ ಪೊನ್ನಾಂಬಲ । ಪುರವರತಾಂಡವ ಮೂರ್ತಿಯ ॥
ಇರವನೀಕ್ಷಿಸಿದಲ್ಲದೆ ನಾನೆನ । ಲರಸನೊಳಂತೆಂದನಾನಂಬಿ ॥ (45)
ಅಲ್ಲಿಗೆ ನೀವೇತಕೆ ಪೋಗವೇಳ್ಕು ನಾ । ನಿಲ್ಲಿಗಾತಾಂಡವ ಮೂರ್ತಿಯ ॥
ಎಲ್ಲರರಿವತೆರದೊಳು ತೋರಿಸುವೆನೆಂದು । ಸೊಲ್ಲಿಸಿ ಸೌಂದರಗಣನಾಥ ॥ (46)

ಪೊಂದಳ ವಿಡಿದು ಪಾಡಿದೊಡೆ ಪೊನ್ನಾಂಬಲ । ದಿಂದಗಜಾಪತಿ ನಡೆತಂದು ॥
ನಿಂದಚೇರಮ ನೃಪನಿದಿರೊಳು ಸುಮನೋ । ವೃಂದಸಹಿತ ಕಾಂತಿಮಯನಾಗಿ ॥ (47)
ನಿಂದತಿಶಯ ವಿಭವದೊಳಿರ್ಪ ದೇವನ । ಸೌಂದರ ಗಣನಾಥನುತಿಗೆಯ್ದು ।
ಅಂದು ನೀನಾಡಿದ ನಾಟ್ಯನಾಟಕಗಳ । ನಿಂದುತೋರೊಮ್ಮೆ ಚೇರಮಗೆನೆ ॥ (48)

ಆ ಮಾತುಗೇಳ್ದು ಸಂತೋಷರಸವೊಳಾಳ್ದು । ಕಾಮಾರಿನಟಿಸಲುದ್ಯತನಾಗೆ ॥
ತಾಮರಸೋದರ ನಾವುಜವಾಂತು ಪಿ । ತಾಮಹಕಾವಳ ವಿಡಿದುನಿಂದ ॥ (49)
ನಂದಿಕೇಶ್ವರ ಮುರಜವನಾಂತು ಹರುಷದೆ । ಗಂಧರ್ವರೊಲಿದು ವಂಡಿಗೆಯನಾಂತು ॥
ವೃಂದಾರಕರುಳಿದಾದ ವಾದ್ಯಗಳನಾಂತು । ನಿಂದರೀಶನ ಬಳಸಿನೊಳಾಗ ॥ (50)

ಆಡಿದನೀಶ ಭರತಶಾಸ್ತ್ರ ಮಾತೃಕೆ । ಯಾಡುವ ನಾಟಕವೆಂದೆಯ್ದಿ ॥
ನೋಡುವಚ್ಚರಿವಡೆವಂತೆ ನೃತ್ಯದ ಗಾಡಿಯ । ನೇನ ಬಣ್ಣಿಪೆಕಾಂತೆ ॥ (51)
ಮಂದಾಕಿನಿತುಳುಕಾಡೆ ಜಡೆಯೊಳಟ್ಟ । ಚಂದಿರಕಳೆ ಮೆಲ್ಲನಲುಗಾಡೆ ॥
ಚಂದದೆ ಕರ್ಣಕುಂಡಲಪಾಡೆಮಕುಟವ । ನಾಂದೋಳಸಿನರ್ತಿಸಿ ನಡೆ ॥ (52)

ಹರುಷ ದೊಳೊಂದುಪಾದವನಿಡಿ ಗರ್ರನೆ । ತಿರುಗೆದಿಕ್ಪತಿಗಳ ಪದಗೂಡಿ ॥
ತಿರುಗಿದರೇನ ಬಣ್ಣಿಪೆಕಾಂತೆ ಶಿವನಂಘ್ರಿ । ಪರಿವೃತಮಾದ ಹಾಹೆಗಳಂತೆ ॥ (53)
ಗಾಡಿಯೊಳಾಗಸದೆಡೆ ಗೊಂಡುಪಾದವ । ನೀಡೆಕಂಡಜನಂಘ್ರಿ ಪೂಜೆಯ ॥
ಮಾಡಿದ ಬೆಳ್ಳಲರೆನೆ ತಾರೆರಂಜಿಸ । ಲಾಡಿದನೀಶನಕ್ಕರುಮಿಗೆ ॥ (54)

ರಮಣಿಕೇಳ ಖರಪತಾಕ ಹಂಸಾನನ । ಕಮಲಪಲ್ಲವ ಮುಷ್ಟಿಶುಕತುಂಡ ॥
ಭ್ರಮರ ಮುಕುಳ ಪರ್ಧಚಂದ್ರಹಸ್ತಗಳಿಂದೆ । ಸಮುಚಿತವಾಗೆ ನರ್ತನಗೆಯ್ದು ॥ (55)
ಯತಿರಸಭಾವ ಚಮತ್ಕಾರ ಚಿತ್ರಸಂ । ಗತಪದರೂಪಕಾಲಂಕಾರ ॥
ಅತಿಶಯವಾಗಿ ರಂಜಿಸದೇವನೆಸೆದ ಸ । ತ್ಕೃತಿಯಂತೆ ಸಭೆಯೊಳಂಗಜನಂಜೆ ॥ (56)

ಉರುಪಿನೊಯ್ಯರನೆರಿವೆನೆರ ಬಹುವಿಧ । ಕರಣದ ಪೆಂಪುಕಂಪನದಿಂಪು ॥
ತಿರುಪಿನನೆವಣೆಬಗೆಯ ಭಜಾವಣೆ । ಪಿರಿದಾಗೆ ದೇವನರ್ತನಗೆಯ್ದು ॥ (57)
ಸುರತತಿಪೂಮಳೆಗರೆದುದು ಭೋರೆಂದು । ವಮುರಭೇರಿಸಂತಸಗೊಂಡು ॥
ಪರೆಯಿಟ್ಟರು ನೃಪತಿಗಳಾಗಸಂಕಿಲೆ । ಪರವೆಯರಚ್ಚರಿವಟ್ಟರು ॥ (58)

ಕೊಂಡಾಡುತಲಡಿಗೆರಗಿದ ಭೂಪರ । ಮಂಡೆವಿಡಿದು ವಿನಯದೊಳೆತ್ತಿ ॥
ಮೊಂಡಾಡಿ ಮುದ್ದಿಸಿ ಬಿಗಿಯಪ್ಪಿ ಮುದದೆ ಬೀ । ಳ್ಕೊಂಡೀಶ ಪೊನ್ನಂಬಲಕೆಪೋದ ॥ (59)
ರಾಜನ ನೇಮವಸಲಿಸಿ ಸೌಂದರಗಣ । ನಾಯಕನೊಲವಿಂದೆ ಚೆಲುಪಾಲ ॥
ಪಾಯಸಾನ್ನವ ನುಣಿಸಿದ ನಾಗಕೇಳ ಬು । ಜಾಯತನೇತ್ರೆ ಸದ್ಗುಣಪಾತ್ರೆ ॥ (60)
ಗಿರಿಜೆಯ ಮೆಯ್ಗಂಪಿಗೆರಗುವ ತುಂಬಿಯಿಂ । ಚರವಶ್ವತರಗಾನ ರಸದೊಳು ॥
ಬೆರೆದು ಕಿವಿಗೆ ರಂಜಿಸೆತಲೆಯೊಲೆವ ಶಂ । ಕರಶಾಂತ ಮಲ್ಲಿಕಾರ್ಜುನ ಜಯ ॥ (61)
ಚೇರಮಶರಣಾಗ್ರಣಿಯ ಕೃತಿಯ ವಿ । ಸ್ತಾರವ ಮಾಳ್ಪರಾದರಿಪರ ॥
ತಾರರ್ಕರುಳ್ಳನ್ನವರ ಮಲ್ಲಿಕಾರ್ಜುನ । ನೊರಂತೆ ಪಾಲಿಪನೊಲವಿಂದೆ ॥ (62)

ಅಂತು ಸಂಧಿ ಇಪ್ಪತ್ತನಾಲ್ಕಕ್ಕೆ ಪದ 1415

(ಇಪ್ಪತ್ತೈದನೆಯ ಸಂಧಿ ಸಮಾಪ್ತಂ.)

ಇಪ್ಪತ್ತಾರನೆಯ ಸಂಧಿ

ಕರದ ಗಂಟೆಯ ಬಾಜಿಸುವ ಪಾಣಿತಳದೊಳಿ । ದುರ್ಗಳಿಯ ಬೆಳಗುದೋರಿಬಲ್ಲಾಂತು ॥
ಸರಲವಿಡಿದು ಕೈಯ್ಯೆ ಮಿಗದತ್ತ ನೋಳ್ಪ ಶ । ಬರರುದ್ರ ಮಲ್ಲಿಕಾರ್ಜುನ ಜಯ ॥ (1)
ಕಂದದ ನೂಕಂದದ ಕುಂದದ ಮಕ । ರಂದದ ಸಿಂಗರದೊರೆಯಂತೆ ॥
ಅಂದವಡೆದುದಿಳೆಯೊಳು ನಿನ್ನ ಜಾಣ್ನುಡಿ । ಕಂದರ್ಪರೂಪ ವಿರುಪ ಭೂಪ ॥ (2)

ರಾಜಮರಾಳಗಮನೆ ಚಂದ್ರವದನೆ ಸ । ರೋಜಲೋಚನೆ ಮೃಗಮದಗಂಧಿ ॥
ಮೂಜಗವೆಂಗಳರಸಿ ಗುಣಮಣಿ ಸೌಖ್ಯ । ಭಾಜನೆ ಕೇಳು ಮೆಲ್ಲಗೆಯನು ॥ (3)
ಉಮೆಯರಸನ ಸನ್ನಿಧಿಯೊಳು ನಂಬಿ ಚೇ । ರಮನೃಪರೆಯ್ದಿ ಕೆಲವು ದಿನ ॥
ಸಮಸುಖವಡೆದಿರು ತಿರ್ದರತ್ಯಂತ ಸಂ । ಭ್ರಮದಿಂದೆ ತಿರುವಾರೂರೊಳು ॥ (4)

ತರುಣಿ ಕೇಳರುತಿರುತೊಂದು ವಾಸರದೊಳ । ಗರಸ ಸೌಂದರಗೆ ಬಿನ್ನಪಗೆಯ್ದು ॥
ಪರವೆ ಸಂಕಿಲೆ ನಾಚಿಯರು ಗೂಡಿ ನೀವೆನ್ನ । ಪುರಕೆ ವಿಜಯಮಾಡವೇಳ್ಕೆಂದು ॥ (5)
ಹರುಷದೊಳಾ ಚೇರ ನೃಪನಾ ಬಿನ್ನಪವನವ । ಧರಿಸಿ ಸಗಾಢದೊಳಾ ನಂಬಿ ॥
ಪರವೆ ಸಂಕಿಲೆಯರಂದಣಗೂಡಿ ಪೊರಮಡೆ । ತೆರಳ್ದನಾ ಕೇರಳಧರಣೀಶ ॥ (6)

ನಡೆದನರಾತಿಲಯನಲ ಚೇರಮ । ಸಡಗರದಿಂದೆ ಸೌಂದರಗೂಡಿ ॥
ಪೊಡೆವ ನಿಸ್ಸಾಳ ಭೇರೀರವ ಘೂರ್ಮಿಸೆ । ವಡೆಗೂಡಿ ತನ್ನ ಪಟ್ಟಣದತ್ತ ॥ (7)
ಬರುತೆ ಬರುತೆ ಕಂಡರೊಲ್ದು ಪೊಕ್ಕುಳಿಯೆಂಬ । ಪುರವ ತಾವೆಳ್ತರ್ಪ ಪಥದೊಳು ॥
ಅರಸಿಕೇಳದರೊಳಗವಿನಾಶಿಯೆಂಬ ಪೆ । ಸರನಾಂತ ಶಿವಲಿಂಗ ವೆಸೆದಿರೆ ॥ (8)

ಸೌಂದರಗೂಡಿ ಚೇರಮಭೂಪ ನಲ್ಲಿಗೆ । ಳ್ತಂದು ಶಿವಗೆ ಕಾಣಿಕೆಯಿತ್ತು ॥
ವಂದನೆಗೆಯ್ದು ಸಂತಸದೊಳಗಾ ಶಿವ । ಮಂದಿರದಗ್ರಮಂಟಪದೊಳು ॥ (9)
ಮಂಡಿಸಿದನು ಸೌಂದರಗೂಡಿ ಕೇರಳ । ಮಂಡಲಾಧೀಶ ಲಕ್ಷ್ಮೀವಾಸ ॥
ಚಂಡಾಂಶುಕುಲರಕ್ಷರಿಪು ನೃಪಶಿಕ್ಷಣ ಭೂ । ಮಂಡಲಕಾಯ ಚೇರಮರಾಯ ॥ (10)

ಅವಿನಾಶಲಿಂಗ ಮಹತ್ವಾವನಕ್ಷೇತ್ರ । ದವಿಶೇಷ ದೆಳೆಯನಲ್ಲಿರ್ದ ॥
ಶಿವಶಾಸ್ತ್ರವಿದರಿಂದೆ ಕೇಳುತೆ ನಂಬಿಭೂ । ಧವರಿರ್ದರಾ ಶಿವಾಲಯದೊಳು ॥ (11)
ಅನಿತರೊಳಗೆ ನಂಬಿ ನಂಬಿ ಹಾಯೆಂದು ಗೋ । ದನಗೆಯ್ದಿ ವಿಪ್ರದಂಪತಿಗಳು ॥
ಜನಪಕರೆಸಿ ನೀಮರಳಲೇನು ಕಾರಣ । ವೆನೆ ಬಿನ್ನಪಗೆಯ್ದರಿಂತೆಂದು ॥ (12)

ವಸುಧೇಶ ಕೇಳಿನ್ನ ತನಯು ನೀ ನಂಬಿಯು । ಪೆಸರಿಟ್ಟು ಸಲಹಿದೆವಾತನ ॥
ಮೊಸಳೆ ನುಂಗಿದುದಿಂದೆಗೆ ಮೂರುವರುಷದೊ । ಳುಸುರ್ವೆನದೇನನಾ ವ್ಯಥೆಯನು ॥ (13)

ನಾಡಾಡಿ ಮಕ್ಕಳ ತೆರನಲ್ಲವೆಮ್ಮ ಕೈ । ಗೂಡಿದ ಪುಣ್ಯಪುಂಜವಿದೆಂದು ॥
ನೋಡುವ ಕಣ್ಗೆ ಸಂತಸವೀವ ತನಯನ । ಗಾಡಿಯ ಮರೆದು ಸೈರಿಪೆನೆಂತು ॥ (14)

ನೋಡಿ ದಣಿಯದ ಬಾಲನ ಲೀಲೆಯ ಕೊಂ । ಡಾಡಿ ದಣಿಯೆ ಒಪ್ಪತಾನ್ನವ ॥
ಊಡಿಪಣಿಯದೋವಿದೆವೆಂತು ಕುವರನ । ಕೇಡ ಕಂಡೆಂತೊಡಲ್ಪಿಡಿವೆವು ॥ (15)

ಸಲಹಿದೆ ಪತಿಸಂತೋಷದಿಂದಕ್ಕರ । ಗಲಿಸಿದೆವೊಲ್ದವನಸ್ಸ್ತಯು ॥
ಸಲಸಿದೆವೆಮ್ಮ ಕಣ್ಬೊಲನಪ್ಪ ನಂದನ । ನಳಿದ ಕಂಡೆಂತು ಜೀವಿಸುವೆನು ॥ (16)

ಇಂದಿನ ದಿನವುಪನಯನವಾದಪುದೆಂದು । ಕಂದನೋರೆಗೆಯುವಗದರಿಂದೆ ॥
ಸೌಂದತ್ತೆವೆನಲದ ಕೇಳ ಸೌಂದರ ಭೂಪ । ನೆಂದ ಕುಪಿತಮಾನಸನಾಗಿ ॥ (17)

ಪಂಕಜಾಕ್ಷನ ಕಡಲೊಳಗಿರೆ ರಾಜಹಂ । ಸಾಂಕನ ಸತ್ಯ ಲೋಕದೊಳರೆ ॥
ಮುಂಕೊಂಡು ನಿಮ್ಮ ಪುತ್ರನ ತರ್ಪೆನೆಂದು ನಿ । ಶ್ಶಂಕೆಯೊಳುಸುರ್ದ ಸೌಂದರ ನೃಪ ॥ (18)

ಕೇಳ ನೀವಿಂದಾತ ನುಪನಯನವ ಮಾಳ್ಪ । ವೇಳೆಯೊಳೆಸಗೆ ಮುಂಜಿಯ ನಿಮ್ಮ ॥
ಬಾಲಕಗೆಂದು ನಂಬುಗೆಯಿತ್ತು ಚೇರ ಭೂ । ಪಾಲಸಹಿತ ನಂಬಿ ಪೊರಮಟ್ಟ ॥ (19)

ಇದು ಚಿತ್ರ ಪೂರ್ಣ ಚಂದ್ರಾದಿತ್ಯರೊಡಗೂಡಿ । ಉದಯ ನಗವನೇರಿ ನಡೆವಂತೆ ॥
ನದಿಯ ತಡಿಗೆ ನಂಬಿ ಚೇರಮನೃಪರೊಂದು । ಮದಗಜಸಿರವೇರಿ ನಡೆದರು ॥ (20)

ಎಳೆವೆರೆ ದುಟಿಯ ನಲ್ಲಳೆ ಕೇಳು ನಂಬಿ ಕೇ । ರಳ ಭೂಮಿಪಾಲರೀಕ್ಷಿಸಿದರು ॥
ಸುಳನೊರೆ ತೆರೆ ಬೊಬ್ಬುಳಿ ತುಂತುರಿಂದೆ ಕಂ । ಗೊಳಿಸಿ ನಿರ್ಮಲತರಂಗಿಣಿಯನು ॥ (21)

ಮೃದುಕಾಂಚನಪದ್ಮ ಕೋಶಾಗ್ರಕೆರಪಪ । ಟ್ಪದವೆಸದಿರೆ ಕಂಡು ಮುದದಿಂದೆ ॥
ಮದನನ ಪದ್ಮಕೋಶದ ಜತುಮುದ್ರೆಯಂ । ಕದೆ ನಂಬಿ ನೊಡೆಂದ ನವನೀಶ ॥ (22)

ಎಳೆವಾಳೆ ಮೀನ್ಗಳೆರಡು ಸೆಳಸಿರಿದೆ ಸಂ । ಚರಿಸುತೆ ಬೆಳ್ಪೊಂದಿ ಮರೆತವು ॥
ಜಳದೇವಿಯ ಚಾರುತರಲೋಲ ಲೋಚನ । ಗಳ ತೆರದಂತೆ ಗಣ್ಗಿದಿರಾಗಿ ॥ (23)

ಮುಳುಗಿ ಮೇಲಕೆ ಪಾರೆ ಪಕ್ಕದೊಳಗೆ ಬರ್ಪ । ಜಳಧಾರೆಗಂಬದೆ ಮುಖದಿಂದೆ ॥
ಕಳೆದ ಮೀನಾಂಕ ನೆಗಳ್ದ ಮದನನ । ಪಳಯಿಗೆಯಂತೆ ಮಿಂಗುಲಿಯೊಂದು ॥ (24)

ಎಳೆವೆಣ್ಣಸುಳವೊಕ್ಕುಳಂತೆ ಕಂಗೆಸೆವಪೊ । ಕ್ಕುಳಿಯೂರ ಸನ್ನಿಧಿಯೊಳಗಿರ್ಪ ॥
ಪೊಳೆರಂಜಿಸಿದುದು ಮೀನ್ಗಳ ಕಂಗಳ । ಬೆಳಗಿಂದೆ ರತ್ನ ಮೇಖಲೆಯಂತೆ ॥ (25)

ಇಂತೆಸೆದಿರ್ಪ ನದಿಯಕಂಡು ಚೇರ ಭೂ । ಕಾಂತನೊಡನೆ ಸೌಂದರೇಶ್ವರ ॥
ಸಂತಸದಿಂದ ಕುವರನ ಮುನ್ನಿ । ರ್ದಂತೀಗ ತೋರ್ಪೆನೆಂದುಸುರ್ದನು ॥ (26)

ಕರೆದ ಶಿಶುವ ನುಂಗಿದ ಮೊಸಳೆಯನದು । ಪರಿತಂದು ನಿಂದುದಾತನ ಮುಂದೆ ॥
ಶರನಿಧಿಯೊಳಗಿರ್ದು ನಡೆತರ್ಪ ಮೈನಾಕ । ಗಿರಿಯಂತೆ ಕಣ್ಗೆ ಕೌತುಕವಾಗಿ ॥ (27)

ಉಗುಳೆನ್ನ ಪೆಸರ ಬಾಲಕನೆನುತೆ ನಂಬಿ । ಭುಗಿಲೆನೆ ಪೇಳ ಭೀತಿಯೊಳಾಗ ॥
ಉಗುಳ್ದುದು ರಾಹು ನುಂಗಿದ ಚಂದ್ರಬಿಂಬವ । ನುಗುಳ್ವಂತೆ ಮೊಸಳೆಯುತರಳನ ॥ (28)

ಅನಿತಾಭ್ರದಗರ್ಭ ತೊಲಗಿ ತಟಿಲ್ಲತೆ । ಯೊಸೆವಂತೆ ಕಣ್ಗೆ ಮಂಗಳವಾಗಿ ॥
ಮೊಸಳೆಯಣಲ ಕಳದುಳದು ಮಿರುಗುತಿರ್ಪ । ಶಿಶುವಿದಿರೆಯ್ತರು ತಿರಲಾಗ ॥ (29)

ಕಂಡಿದಿರ್ಪಂದಪ್ಪಿ ಮುದ್ದಿಸಿ ಪಿಡಿದೆತ್ತಿ । ಮುಂಡಾಡಿ ಮೋಹನರಸದೊಳಾಲ್ದು ॥
ಮಂಡೆವಡವಿ ತನಯನ ಸಾನಂದಾಶ್ರು । ಮಂಡಲದಿಂದೆ ನಾಂದಿದರಾಗ ॥ (30)

ತೊರೆದ ಮೊಲೆಯ ನರಕುತೆ ಚೆಲ್ಲೆ ಕಣ್ಣೊಳು । ಸುರಿವ ಸಂತಸಗಂಬನಿಗಳ ॥
ಒರಸುತೆ ಪುಳಕದೊತ್ತರದಿಂದೆ ನಡುಗುತೆ । ತರಳನ ಬಿಗಿಯಪ್ಪಿದಳು ಮಾತೆ ॥ (31)

ಅಡಿಗೆರಗಲು ವಿಪ್ರದಂಪತಿಗಳ । ಸಿರವಿಡಿದೆತ್ತಿ ನಂದನ ಸಹವಾಗಿ ॥
ಉಡುಗೊರೆಗಳ ಪೊಂಗಳ ನವರತ್ನದೆ । ತೊಡವಿತ್ತು ಬೀಳ್ಕೊಟ್ಟರವರಾಗ ॥ (32)

ಶಿವಭಕ್ತ ಜನದ ಶಿಖಾಮಣಿ ಕರುಣಾ । ರ್ಣವ ಬೇಡಿದಿಷ್ಟ ಪ್ರದಾಯಕ ॥
ಪವಣಿಸಬಾರದ ಪ್ರತಿಮ ನೀನೆಂದು ಭೂ । ವರ ನುತಿಸಿದ ಸೌಂದರೇಶನ ॥ (33)

ಆ ವಿಪ್ರ ದಂಪತಿಗಳನತ್ರ ಬೀಳ್ಕೊಟ್ಟು । ಭೂವರನಿತ್ತ ಸೌಂದರಗೂಡಿ ॥
ಆವರಿಸಿದ ಸೇನೆ ಸಹವಾಗಿ ದಾನದಂ । ತಾವಳ ಶಿರವೇರಿ ತೆರಳಿದ ॥ (34)

ನಡೆತರುತಿದಿರೊಳು ಕಂಡನುತ್ಸವದಿಂದೆ । ವೃಡನಾ ನಗದೆ ಭೂವರಾಗ್ರಣಿ ॥
ಕಡುಗಲಿ ಚೇರ ಭೂವರ ಗಗನವ ತುಡು । ಕುವ ಚಾರು ಮಹೀಧ್ರವ ॥ (35)

ಜಳಧಾರಾಗ ಮದಂತೆ ಬಹಳ ಘನಾಘನ । ಕಳಕಳರವದಿಂದೆ ವ್ಯಾಧರ ॥
ಉಳಿತ ಚಮೂರವ ಸಂಚಾರದಿಂದ ಕಂ । ಗೊಳಿಸಿತು ನಗವದ ನೇನೆಂಬೆ ॥ (36)

ಅಂಬರ ತಳೆದಂತೆ ಖಗರಾಜಧರೆ ಲವ । ಣಾಂಬುಧಿಯಂತೆ ವಿದ್ರುಮಧರ ॥
ತ್ರ್ಯಂಬಕನಂತೆ ವಿಶ್ವಂಭರ ಧರವಾಗಿ । ತಾಂ ಬಗೆವಡೆದು ದುನ್ನತ ನಗ ॥ (37)

ಸರಿಬಲಸಂಧಿ ಜಾರರೆ ಗವಿ ಕೊಡು ಬಾ । ಸರಗಂಡ ಶೈಲವೊ ಸರ್ದಾಣ ॥
ತೊರೆ ಬೀಳ್ದೊರೆ ಕೊಳ ಪುಲ್ವಜ್ಜೆ ಮೇಖಲೆ । ನೆರೆ ಮೆರೆದುದು ಕುಧರದಸುತ್ತು ॥ (38)

ಬಿಳುವಬ್ಜರ ಶೀಕರದಿಂದೆ ರವಿಕರ । ಣಾಳಿಯಿಂದುರಿವರ್ಕ ಕಾಂತದೆ ॥
ಮಿಗೆ ಕವಿವ ಮುಗಿಲಿಂ ಹಿಮ ಘರ್ಮಾಬ್ಜ । ಕಾಲಗಳರ್ಪವೀ ನಗದೊಳು ॥ (39)

ಮಿಗವಗೆಯರ ಮೆಯ್ಗರಿಪಿಂದೆ ಗಗನಕೆ । ನೆಗೆದಿತ್ತ ಮರಗತ್ತಲೆ ಕೊರ್ವಿ ॥
ಖಗಗೆ ಚಂದಿರಗೆ ಮಾರ್ಮಲೆದು ತೊಲಗದಿರ್ಪೆ । ರಗದೊಳು ಕಾಲಾಬ್ದಗ ವಿದಂತೆ ॥ (40)

ಗಿರಿಯತಪ್ಪ ಲೊಳೆಡೆಯಾಡುವ ಬಿಯದಿಯ । ರರಲ ತ್ರಿರಿವತಾಣ ದೆುಳೆಂದು ॥
ತರಳತಾರಗೆಯ ಪೂರ್ವೇಂದುಕೈ ನೀಡಲಿ । ನೊರೆವರಾರದರುನ್ನತಿಯ ನೊಲ್ದು ॥ (41)

ಪವಿಪಾತದೆ ಸೀಳ್ದ ವಣೆಯುಣ್ಗೆ ಜಗುಳೆ ಇ । ಟ್ಟವಲೊಯ್ದ ಧಾತುಕಂಧರ ದೊಳು ॥
ಪವನಾಶನಂಗಳು ಪೊರಮಟ್ಟು ಕಾಯ್ದು ತಿ । ರ್ದವು ನಸುವಿಸಿಲ ಪಾಸರೆಯೊಳು ॥ (42)

ಮುನಿದಿನಿಯಳ ತಿಳುಪುವ ಶರವಂತೆ ವೊ ಲ್ಬನ ಕುಶರ ಶತದಿಂದೆಯ್ದ ॥
ವಿನುತ ನಾಕನಿವಾಸದಂತೆ ಪಸುರ್ವ ವಂ । ಶನವೀನ ವೆನಿಪುದುನ್ನತ ನಗ ॥ (43)

ತರುಣಿ ಜನಮಣಿ ಕೇಳ ರಾಜಿಪ । ಗಿರಿಯ ತಪ್ಪಲಿ ಮಲೆಯೆಡೆ ಯೊಳು ॥
ತಿರುಮೂರು ಘಂಡಿಯೆನಿಪ ಶಿವಪುರಮಿರ್ಪು । ದುರುತರವಾಗಿ ಸಿಂಗರದಿಂದೆ ॥ (44)

ಆ ಪೊಳಲಲ್ಲಿರ್ಪುದನರಿಯದೆ ಧರಣೀಪತಿ । ಸೌಂದರ ನೃಪಗೂಡಿ ॥
ಪೊಂಪುದ ಕಂಡು ತತ್ಪುರ ದೊಳಗೆ ಸೆವಗ । ಚಾಪತಿ ಮನದೊಳಗಿಂತೆಂದ ॥ (45)

ನೋಡಿವನೆನ್ನ ಕಾರಣದೆ ಪಾಡಿ ಪಡಿವೊನ್ನ । ಬೇಡದೆ ಮುದದಿಂದೆ ನೃಪತಿಯ ॥
ಕೂಡೆನ್ನ ಮರೆದು ಮುಂಪೋದಪನಿವ ನಸಾ । ಕಾಡದೆ ಜಿಡೆನೆನು ತನುವಾದ ॥ (46)

ನಡೆದ ಕಿರಾತವೇಷವನಾಂತು ರುದ್ರರ । ಪಡೆಗೂಡಿ ಬೇಂಟೆಯ ನೆವದಿಂದೆ ॥
ಅಡವಿಗೆ ವೇದ ಚತುಷ್ಟಾದಿಗಳು ಕೂಡಿ । ಮೃಡನದನೇನ ಬಣ್ಣಿಪೆ ಕಾಂತೆ ॥ (47)

ಸಣ್ಣ ಮಲ್ಲಿಗೆಯ ಚೆಲ್ವನು ತಿರಸ್ಕರಿಸುವ । ಬಣ್ಣಮಿಗುವ ಮೆಯ್ವೊಣ ರಕ್ತಾಬ್ಜವನಿಳ ಕೆಯ್ವ ॥
ಕಣ್ಣೊಳ್ ಮುತ್ತನೆಗುವ ವಲ್ಗಳಿಸೆಯೆ ಮುಕ್ಕಣ್ಣ । ಬಿಲ್ಸರಳಾಂತು ನಡೆತಂದು ॥ (48)

ಎಳೆದಳಿರುಡಿಗೆ ರಂಜಿಸೆ ಗುಂಜಿ ಮುಂಜಾಡಿ । ಗಳ ಮಣಿಮಾಲೆ ಕಣ್ಗಿನಿದಾಗೆ ॥
ಪೊಳೆವ ಕತ್ತರಿಸೀಲಿ ನಯದೆ ಮೆರೆಯೆ ನೀಲ । ರಳ ಬಂದನೆಗಚಾತೆ ಸಹವಾಗಿ ॥ (49)

ನಡೆತಂದುದು ರುದ್ರಗಣ ಶಬರಾಕೃತಿ । ವಡೆದು ಮಹಾದೇವ ನೊಡಗೂಡಿ ॥
ಗಿಡಿಗೆಲ ದಗಡು ವೋರಣ ವೆಸರ ಜಾ । ವಡಸೆಳೆ ಗಪ್ಪಿಗೆಗಳಾಂತು ॥ (50)

ಕೆಳರ್ದಡೆ ನಿಂಗಕೆ ವಡಿಮಿಗುವಜ್ಜಯಿಂ । ತಳರ್ದಡೆ ಕಾಳ್ಗಿಚ್ಚಿಗೆ ಸಮ ॥
ಮಿಳರ್ದು ಪಿಡಿಯೆ ಮಾವಿಗೆ ಸಮವೆನಿಪ ಜಾ । ಯಿಲಗಳ ವಿಡಿದು ನಡೆದರಾಗ ॥ (51)

ನಿಡುಜೆಡೆ ಪಸುರ್ಗುಪ್ಪಸ ಪಂದಿ ಕೋಡಿನ । ಕಡಗವಾನೆಯ ಮುತ್ತಿನೊಳ್ಕ್ಮರ ॥
ಬಿಡುಕೋಲು ಕಲ್ಲಿಯಂಚಿನ ಕಣೆಗಳನಾಂತು । ನಡೆದುದು ಬಿಯದವೆಂಗಳತಂಡ ॥ (52)

ಕಡೆಗಣ್ಣಕಾಂತಿ ಗೋರಗೆಯಾದ ಪಲ್ಗದಿ । ರಡಿಗೆಂಪ ಮೀರಿದಧರ ಕಾಂತಿ ॥
ಮುಡಿಗಪ್ಪ ಕೇಳ್ಮಾಡುವ ಮೈಯ ಪೊಗರಿಂದೆ । ನಡೆದುದು ಬಿಯದವೆಂಗಳತಂಡ ॥ (53)

ನಿಡಿಗಂಗಳೆಳೆವಾವುಗಳ ಮತ್ತೆ ಗಜಗಳ । ನಿಡುಬೆಡೆ ನವಿಲ್ಗಳ ನಗುವೊಗ ॥
ಮಡದಿ ಕೇಳ್ಜೊನ್ನ ವಕ್ಕಿಗಳ ನೋಡಿಸೆ ತಮ್ಮ । ಕಡೆಗೆ ಬರಿಸೆ ಬಂದರವರೊಲ್ದು ॥ (54)

ಎಳೆಮಿಂಚುಗಂಗಳ ನಿಬಿಡಪಯೋಧರ । ಗಳ ಕಾಡ ಬೇಡಿತಿಯರ ಕಂಡು ॥
ಮಳೆಗಾಲಮೆಂದು ಮೈಮರೆದು ನರ್ತಿಸುವ । ನವಿಲನೋರ್ವ ನೊದಗಿಪಿಡಿವನಾಗ ॥ (55)

ಉಲಿಯನಾಲಿಸಿ ಪಚ್ಚೆ ವಿಡಿದಿದೆ ಪುಲಿಪೋದ । ನೆಲನಿದೆ ಸಿಂಗ ಪೋದೊವರಿ ॥
ಬಳವಿಡಿದಿರೆ ಕರಿಕರದಿಂದೆ ನೀರ್ವನಿ । ಯೊಳೆಯೊಳೆಂದೆಯ್ದಿದರವರಾಗ ॥ (56)

ನಿಡುದಾಡೆಯಿಂದೆ ಬಿದಿರ ಹೊದೆ ಕಿತ್ತುಕೆ । ಕೆಡವುತೆ ಭೂಜಾತಿಗಳನೆಲ್ಲ ॥
ಕಡಿದು ಗೆಣಸುಗಳ ತಿಂದು ಕಲ್ಲೊರೆಸುತೆ । ನಡೆದುದು ಪಡೆಯೊಳೆಕ್ಕಲನೊಂದು ॥ (57)

ಇದಿರೆಯ್ದುವ ಪಂದಿಯ ನಿಡಲಿಟ್ಟ ಕೊರಲೊಳು । ಪುದುಕಿ ಕೇಲಿಸಿ ನೆಲನಂ ಕರ್ಚಿ ॥
ಒದವಿಕಂಭಕೆ ಮಲಿಯಾನೆಯ ಕಟ್ಟಿದಂ । ದದಿ ನೀರೆ ಶಬರಿ ಮೆಚ್ಚಿದಳೊಲ್ದು ॥ (58)

ಕೇಸುರಿ ಸೂಸೆ ಕಣ್ಣೊಳು ಕೇಸಡಿಯಿಂದೆ । ಕೇಸರಿಪೊಯ್ಯೆ ಬೇಡಿತಿ ಷಷ್ಟಿ ॥
ಓಸರಿಸುತ್ತ ಬೆಂಗೆ ವಾಯ್ದರಿ ದೊಪ್ಪಿದಳಾ । ಸಮರದ ದುರ್ಗಿಯೆಂಬಂತೆ ॥ (59)

ಮಡದಿಕೇಳೀ ವಿವರದೆಮ್ಮ ಗಂಗಳ । ಕೆಡೆವುತೆ ಬಂದು ಪುಳಿಂದರ ॥
ಪಡೆ ಕವಿದುದು ಬೊಬ್ಬೆಯಬ್ಬರ ವೆಣ್ದೆಸೆ । ಗಡರೆ ಭೂಪರತಳ ತಂತ್ರವ ॥ (60)

ವಾರಿನಿಧಿಯ ಕಾರ್ಮುಗಿಲೊಡ್ಡು ಘೋರಾಂಧ । ಕಾರ ವಿಲಯ ಕವಿದಂದದೆ ।
ಚೇರವ ಸೌಂದರ ಬಲಕೆಯ್ದಿ ಕವಿದುದು । ಭೋರನೆ ಕಾಡಬೇಡರ ಪಡೆ ॥ (61)

ಕಡುಘನೊಳು ಭೂಪ ಪರಸೆನೆ ಬೇಡರ । ಪಡೆಯ ನೆಣೆಸದದಿ ವಿಭವದೆ ॥
ನಡೆಯೆ ಕಿರಾತ ನಾಯಕನೊಂದು ಬಾಣವೆ । ತೊಡಚಿ ಭಾರಚಿ ಬೊಬ್ಬಿರಿದೆಚ್ಚ ॥ (62)

ಶಿಡಿಗೆದರುತೆ ಮೊರೆವುತೆ ಬಾಣ ಪರಿದು ಪೆ । ರ್ಬಡೆಯ ನುಂಗಿದು ದೊಂದು ನಿಮಿಷದೆ ॥
ಕಡಲಕಳಸ ಸಂಭವನೆಂದು ಕೋಪದೆ । ಕುಡಿದಂತೆ ಚಾರು ಚಂದನ ಗಂಧಿ ॥ (63)

ಪೋದುದು ಶಬರ ನಿಚಯ ತಮ್ಮ ಬೀಡಿಗೆ । ಮಾದೇವ ನೊಡನತಿ ವಿಭವದೆ ॥
ಆದುದೆ ಮನದೆ ವಿಸ್ಮಯ ತಮ್ಮ ಬಲಬಯ । ಲಾದುದ ಕಂಡು ಭೂವತಿಗಳ್ಗೆ ॥ (64)

ಹರನಲ್ಲದೀ ವ್ಯಾಧನಾಯಕ ನಾಡಾಡಿ । ನರನಲ್ಲ ಶಬರ ವೇಷವನಂದು ॥
ಧರಿಸಿದಿರವನಂದು ನಮಗೊಲ್ದು ತೋರಿದ । ಪರಿಯೆಂದು ಬಗೆದ ಸೌಂದರ ಭೂಪ ॥ (65)

ಶಿವಶಿವ ಶಂಭುವೆಂದರಿಯದೆ ಪುಲುವೇಡ । ನಿವನೆಂದು ಬಗೆದೆವಕಟನಾವು ॥
ಭವನಡಿಗಳ ಕಾಣ್ಬೆನೆಂದೆಯ್ದಿದ ಭೂ । ಧವಗೂಡಿ ಪಜ್ಜೆವಿಡಿದು ನಂಬಿ ॥ (66)

ಅರಸಿಕೇಳಾ ಶಬರರ ಪಜ್ಜೆಪೋದವಾ । ತಿರುವೂರು ಘಾಂಡಿಗ ಬಳಯೊಳು ॥
ಧರಣಿಪರೆಯ್ದಿ ಕಂಡರು ತತ್ಪುರದೊಳಪ್ಪ । ಹರಭವ ನವನಿಡಿರೊಳಾಗ ॥ (67)

ಬಂದರಸವ ನೇತ್ರನ ಫಣಿಸೂತ್ರನ । ವೃಂದಾರಕ ನುತಿ ಪಾತ್ರನ ॥
ಇಂದುಕಳಾ ಮಕುಟನ ಭೂಮಿ ಸಕಟನ । ಮಂದಿರ ಕೆಳೆಯಂಚೆ ನಡೆಯಳ ॥ (68)

ಕಂಡರ ಜಾಚ್ಯುತ ಬಲರಿಪು ಮುಖಸುರ । ಮಂಡಲ ರಕ್ಷಕಟಾಕ್ಷನ ॥
ಪಾಂಡುರವರ್ಣ ಸಮೇತಾಂಗನ ಫಣಿ । ಮಂಡನ ಮಹಿಮೋತ್ತುಂಗನ ॥ (69)

ಪೊಗಳ್ದರನಂತ ವಿಭೂಷನ ನೀಶನ । ನಿಗಮವಾಸನ ಜಗದೀಶನ ॥
ತ್ರಿಗುಣ ವಿನಾಶನ ನೀಶನ ನಗಣಿತ । ಜಗದೀಶನ ನೀಶನ ನೊಲ್ದು ॥ (70)

ನಮಿಸಿದರಗಜೇಶಗೆ ಭವನಾಶಗೆ । ರಮಣೀಯಗೆ ಜಿತಮಾಯಗೆ ।
ಅಮರಾಚಲ ಚಾಪಗೆ ವಿಶ್ವರೂಪಗೆ । ಸಮರ ಹಿತಗೆ ಕಾಲನ ಹಿತಗೆ ॥ (71)

ಭೂಪತ್ರಿತಾಳ ವಿಡಿದು ಪಾಡಿದನಗ । ಚಾಪತಿಯ ಮಳ ಪಾದಂಗಳ ॥
ತಾಪಸರಾತ್ಮಾಭಿರಾಮ ಪಾದಂಗಳ । ಮಾಪತಿ ವಿನುತ ಪದಂಗಳ ॥ (72)

ಶ್ರೀಪತಿ ಬಾಣ ಮಹಾಕಾಳ ಸುರಗಿರಿ । ಚಾಪ ಶುಭಾಂಗ ಮದನಾರಿ ॥
ತಾಪಸ ಹೃದ್ವಿ ಪಿನಾಲಯ ರುದ್ರ ಕಾ । ಳೀಪತಿಯೆಂದು ಪಾಡಿದ ನಂಬಿ ॥ (73)

ಪಡಿವೊನ್ನನಿತ್ತ ನಂಬಿಗೆ ನೀಲಲೋಹಿತ । ಜಡ ದುಷ್ಕೃ ಪಾಪಕರ್ಮರಹಿತ ॥
ಉಡುಪತಿಮಿಹಿ ರಾಶ್ರಯಾಶನ ಲೋಚನ । ಮೃಡ ಶರಣಾಬ್ಜ ವಿರೋಚನ ॥ (74)

ಅರುಪಿದ ನಿಂತೆಂದು ಸೌಂದರ ಭೂಪತಿ । ಪೆರೆದಲೆಯಗೆ ಸರ್ಪದಲೆಯಗೆ ॥
ಕರಿಮಿಗ ಗೈಯಗೆ ಪೆಣ್ಮೆಯ್ಯಗೆ ಮನ । ದೆರೆಯಗೆ ಬಾಂಬೊಳೆ ಯೆರಯಗೆ ॥ (75)

ಮೀನಾಂಕಹರ ನಿಮ್ಮಯ ಬಾಣವೆಮ್ಮಯ । ಸೇನಾ ನಿಕುರಂಬವನೀಗ ॥
ಏನೆಂಬೆ ನಾಹುತಿ ಗೊಂಡುದು ಪಾಲಿಸಂ । ದಾನಂಬಿ ಚಿನ್ನಪ ಗೆಯ್ದನು ॥ (76)

ನಿನ್ನ ಸೇನೆಯು ನುಂಗಿದುದಿಲ್ಲ ಬೇಕಾದೊ । ಡೆನ್ನಂಬ ನೋಡೆಂದು ತೋರದ ॥
ಮುನ್ನ ಗುಳ್ಕ್ದುದು ವಾಹಿನೆಯು ನಾಕ್ಷಣ ಜಹ್ನು । ಜಾಹ್ನವಿದೊರೆಯು ನುಗುಳುವಂತೆ ॥ (77)

ಹರಹರ ಶಿವಭಕ್ತರ ಮಹಿಮೆಯು ಬಿ । ತ್ತರಿಪರೆ ಪಲವು ನಾಲಗೆ ಯುಳ್ಳ ॥
ಉರಗೇಂದ್ರಗೆ ಪವಣಿಲ್ಲೆಂದು ನಂಬಿಗೆ । ಧರಣೀಶ ನಮಿಸಿ ಸನ್ನುತಿಗೆಯ್ದ ॥ (78)

ಅಂಗಾಜಾರಿಯು ನಾಟ್ಯದೆಳಕವ ಘನನಕ್ರ । ನುಂಗಿದ ಶಿಶುವ ನಾಯುಕದಿಂದೆ ॥
ಪಿರಿಗಿದ ಬಲವ ಪಡೆದ ನಿಜಮಹಿಮೋ । ತ್ತುಂಗ ನೆನುತ ಪೊಗಳಿದರಾಯ ॥ (79)

ಮೃಡನ ಬೀಳ್ಕೊಂಡತಿ ವಿಭವದೆ ಬಂದನಾ । ಪೊರವಿಯೆರೆಯ ಸೌಂದರ ಗೂಡಿ ॥
ಗುಡಿಗಳ ಮಕರ ತೋರಣ ಕೇತುಗಳ ನೆಳ । ಲೆಡೆಯೊಳು ನಿಜಪುರ ಕೊಲವಿಂದೆ ॥ (80)

ಕರಿತುರಗಾದಿ ಸೇನಾ ಸಮೂಹವನವ । ಧರಿಸಿಕಳುಪಿ ನಂಬಿಸಹವಾಗಿ ॥
ಅರಮನೆಗೆಯ್ದಿದ ನೊಲವಿಂದ ಕೇರಳ । ಧರಣೀಶನೆಲೆ ಕಂಜದಳ ನೇತ್ರ ॥ (81)

ಗಿರಿಜೆಯುಮೆಯ್ಗಂಪಿಗೆರಗುವ ತುಂಬಿಯಿಂ । ಚರವಶ್ವತರ ಗಾನರಸದೊಳು ॥
ಬೆರೆದುಕಿವಿಗೆ ರಂಜಿಸೆ ತಲೆಯೊಲೆವ ಶಂ । ಕರಕಾಂತ ಮಲ್ಲಿಕಾರ್ಜುನಜಯ ॥ (82)

ಚರಮ ಶರಣಾಗ್ರಣಿಯ ಕೃತಿಯ । ವಿಸ್ತಾರವ ಮಾಳ್ಪರಾದರಿಪರ ॥
ತಾರಕರ್ರುಳ್ಳನ್ನವರ ಮಲ್ಲಿಕಾರ್ಜುನ । ನೋರಂತೆ ಪಾಲಿಪನೊಲವಿಂದೆ ॥ (83)

(ಅಂತು ಸಂಧಿ 26 ಕ್ಕಂ ಪದನು 1498 ಕ್ಕಂ ಮಂಗಳಂ ಮಹಾಶ್ರೀ.)

ಇಪ್ಪತ್ತೇಳನೆಯ ಸಂಧಿ.

ನಾಕಪದವನಮರರಿಗಿತ್ತು ಸತ್ಯ । ಲೋಕಪದವನಬ್ಜ ತನಯಗೆ ॥
ಶ್ರೀಕಾಂತಗೆ ವೈಕುಂಠ ಪದವನಿತ್ತ । ಲೋಕೇಶಜಯ ಮಲ್ಲಿಕಾರ್ಜುನ ॥ (1)

ಪೊಸಜೇನ ಮಳೆಯೊ ಸುಧೆಯ ಸೋನೆಯೊ ನವ । ರಸತರಂಗಿಣಿ ಪರಿದುದೊಯೆನೆ ॥
ರಸಿಕರಾಜೇಂದ್ರ ಹೊನ್ನುರ ವಿರುಪೇಂದ್ರ ನೀ । ನುಸುರ್ದ ಕಾವ್ಯದ ರಸವೆಸೆದುದು ॥ (2)

ತಳರಡಿಯಳೆ ಗಿಳಿನುಡಿಯಳೆ ಪೊಸಪೊನ್ನ । ಕಳಶಸ್ತನೆ ಚತುರಾನನೆ ॥
ಎಳೆವೆಂಗಳರಸು ವಿವಿಧ ಗುಣಂಗಳರಸಿಪೊಂ । ಜಳೆಮೆಯ್ಯ ನೀರೆಮೇಲ್ಗಳೆಗೇಳ ॥ (3)

ಮಾನವ ಮದನ ಸೌಂದರ ನೃಪತಿಗೆ ಚೇರ । ಭೂನಾಥನಾಪೇಳ್ದ ಕಾವ್ಯವ ॥
ನಾನಾಬುಧರ ನೆರಪಿ ಕೇಳಿಸಿದ ನೊಲಿ । ದೇನೆಂಬೆ ನಾಕಬ್ಬದೆಸಕವ ॥ (4)

ಪೊಸಬಗೆಯಿಕ್ಕೆ ಭಾವದ ಪಕ್ಕೆ ರೆಂಜಿಕ । ದೆಸಕದ ಭಿಡುಗಾಡಿಯ ನಾಡು ॥
ರಸದುರ್ಬು ನೀತಿಯ ಗುರ್ಬು ತಾನೆನಿಸಿರಾ । ಜಿಸಿದುದು ಕಾವ್ಯ ಸಜ್ಜನ ಸೇವ್ಯ ॥ (5)

ಲಕ್ಕಣದಾಡುಂಬೊಲ ದೇಶೀಯದ । ಪಕ್ಕೆ ತದ್ಭವದ ತವರ್ಮನೆ ॥
ಸಕ್ಕದದಾವಾಸವಾದುದು ಶಿವಭಕ್ತಿ । ಯಿಕ್ಕೆಯೆನಿಸಿ ನೃಪತಿಕಬ್ಬ ॥ (6)

ಇಂತು ಮನೋಹರ ವಾಗಿರ್ಪ ಕಾವ್ಯದ । ದಾದ್ಯಂತವ ಕೇಳ್ದು ಸೌಂದರ ಭೂಪ ॥
ಸಂತಸವಟ್ಟು ಚಿತ್ತವನಿಟ್ಟು ನೃಪನೊಡ । ನಿಂತೆಂದನೆಳೆನಗೆ ಪೊಗದಿಂದೆ ॥ (7)

ರಸದೆಸಕವ ನೋಡಲು ನಾಳಿಕೇರದ । ಪೊಸ ಪಳದಂತೆ ಸವಿನೋಡೆ ॥
ಬಿಸುಪಡಗಿದ ಸೋಗೆಯಂತೆ ಮೆಲ್ಲಿತ ನೋಡೆ । ಕೆಸಲಿಯದಂತಿದೆ ಕೃತಿಯೊಂದ ॥ (8)

ಈ ಕಾವ್ಯವನಗಜೇಶಗೆ ಕೇಳಿಸ । ಬೇಕಲ್ಲದಿದರ ವೃತ್ತಾಂತದ ॥
ನಾ ಕೇಳಲಳವೆ ಮಹಾದೇವಿಯ ಸುತಲ । ನೇಕ ವಿಧದೆ ಪೊಗಳಿದನಂಬಿ ॥ (9)

ಶಿವನೆರಡನೆಯವತಾರ ನೀ ಲಾಲಿಸೆ । ಶಿವ ಕೇಳ್ದುದಲ್ತೆಯೆಂದೆನೆ ನಿನ್ನ ॥
ಶಿವಕಾವ್ಯವ ಶಿವಗರ್ಪಿಸ ಬೇಳ್ಕೆಂದ । ನವನೀಶನೊಡನೆ ಸೌಂದರಭೂಪ ॥ (10)

ತರುಣಿ ಕೇಳಾ ಮಾತು ಕೇಳಿ ಕೇರಳ ದೇಶ । ದರಸನಾನಂದ ಜಲದೊಳಾಳಿ ॥
ಹರುಷವ ತಾಳಿ ಮುದದೆ ಶಿವ ಶರಣಾಳಿ । ವೆರಸಿ ವೈಭವದೆ ರಂಜಿಸುತಿರ್ದ ॥ (11)

ಇಂತಿರು ತೊಂದು ದಿವಸದೊಳು ಚೇರ ಭೂ । ಕಾಂತಮಜ್ಜನಗೆಯ್ಯ ವೇಳ್ಕೆಂದು ॥
ಸಂತಸ ಪಿಗೆ ತೈಲಾಭ್ಯಂಗವ ನೋ । ರಂತೆ ಮಾಡುತೆ ಸುಖವಡೆದಿರ್ದ ॥ (12)

ಆ ಸಮಯದೊಳೆಳ್ತಂದು ತುಂಬುರ ಶಚಿ । ವೇಶನ ನೃಪತಿಗೆ ಬಿನ್ನಪಗೆಯ್ದ ॥
ಈ ಶನ ರಜತಾದ್ರಿಯು ನೈಯ್ದಿದ ನಂಬಿ । ನಾ ಶುಚಿಸ ಬಂದೆ ನದನೆಂದು ॥ (13)

ಕೇಳಿ ನೃಪತಿ ವಿಸ್ಮಯಪಟ್ಟು ಮರವಟ್ಟು । ಬೇಳುವಟ್ಟತಿಶಯ ಭಯವಟ್ಟು ॥
ಕೇಳಲದರ ವೃತ್ತಾಂತವನೊಲವಿಂದೆ । ಪೇಳಲುದ್ಯತನಾದನಾ ಮಂತ್ರಿ ॥ (14)

ಅರಸಕೇಳೆಂದು ಸೌಂದರಭೂಪ ಸಂಕಿಲೆ । ಪರವೆ ಕುರುಂಬರು ಸಹವಾಗಿ ॥
ತಿರುವಂಜಿಕಳೆವನೆಯ್ದಿದನೊಲಪಿಂದೆನ್ನ । ಕರವಿಡಿದಧಿಕ ಸಂಭ್ರಮದಿಂದೆ ॥ (15)

ಪೊಂಗಿ ನಿಸ್ವಾತ್ಮಾಭಿರಾಮಗೆ ಭೀಮಗೆ । ನಾಗ ಭೂಷಗೆ ಜಗದೀಶಗೆ ॥
ಶ್ರೀಗಿರಿಜಾರಮಣಿಗೆ ನಲಿದಾನತನಾಗಿ ಪಾಡಿದ ನಂಬಿ ತಿರುಪಾಟು ॥ (16)

ಧಾತ್ರೀಶಕೇಳತ್ತ ಪಡಿವೊನ್ನ ಪಾವಕ । ನೇತ್ರ ಸೌಂದರ ಗೆಂದಿನಂದದೆ ॥
ಗಾತ್ರದೋರದೆ ಪಡಿಯೊನ್ನೊಡೆ ಯೊಳಗೊಂದು । ಪತ್ರಕರಂಡ ವಿರಲು ಕಂಡ ॥ (17)

ಕರಡಗೆಯಿಂದ ತೆಗೆದು ಸಂದೇಶವ । ಶಿರದೊಳಗಿಟ್ಟು ಕಂಗಳಿಗೊತ್ತಿ ॥
ಶರಣೇಂದು ಚಂದ್ರಿಕೆಗಳೆದೋದಿ ನೋಡಿ ಸೌಂ । ದರ ನೃಪನಸುನಗುತಿಂತೆಂದ ॥ (18)

ಬಂದಿದೆ ನಮಗೆ ರಜತಗಿರಿವಾಸನ । ಸಂದೇಶ ಶೀಘ್ರದೆ ಬರಹೇಳಿ ॥
ಬಂದಪುದೀಗಳೈರಾವತ ಗಡ ನಮ । ಗೆಂದೆನ್ನೊಳೊರೆದನಾಕ್ಷಣದೊಳು ॥ (19)

ಇಳತಂದುದು ನಿರ್ಜರದಂತಾವಳ । ಘಳಿಲನಾಗಸದಿಂದೆ ಪೂರ್ಣೇಂದು ॥
ಇಳತಂದು ನಿಂದಂತೆ ನಿಂದಿರ್ದುದಿದಿರೊಳು । ಧಳಧಳಿಸುತೆ ಕಾಂತಿವಾಯವಾಗಿ ॥ (20)

ಪೊರಜೆಯೆ ಪರಿವೇಶವೆಂದಂತೆ ಕೆನ್ನೆಯೊ । ಳಿಳದ ಮದವೆ ಲಕ್ಷಣದಂತೆ ॥
ಕರದ ತುಷಾರಾಂಬು ಚಂದ್ರಿಕೆಯಂತೆಸೆ । ದಿರೆ ಶಶಿಯಂತಿರ್ದುದಾ ಗಜ ॥ (21)

ಆ ಕರಿಯೊಡನೆಳ್ತಂದುದು ವಿಬುಧಾ । ನೀಕ ಸಹಿತೆ ರುದ್ರಕನ್ಯಾಳಿ ॥
ನಾಕದುಂದುಭಿಗಳ ನಿರ್ಘೋಷ ಮುಣ್ಮಲ । ನೇಕ ವಿನೂನಯಾನಗಳಿಂದೆ ॥ (22)

ಕರೆದರವರು ನಂಬಿಯನಗಜಾಪತಿ । ಬರವೇಳ್ದ ನಿಮ್ಮನೀಕ್ಷಣದೊಳು ॥
ಕರಿಯ ನಡರುತಳುವದಿರೇಳು ಪೋಪ ವಿ । ಳ್ಲಿರದೆಂದು ಸಂತಸದೆಸಕದೆ ॥ (23)

ಅದಕೇಳಿ ನೃಪನನುರಾಗ ಚಿಂತಾನ್ವಿತ । ಹೃದಯನೆನಿಸಿ ನಂಬಿ ಬೀಳ್ಕೊಟ್ಟ ॥
ಮುದದಿಂದೆ ತಾರರಜತದ ಗಿರಿಗೆಯ್ದಿದ । ರದನುಸುರ್ಬಿಂತಿದೆನಾ ನಿಮ್ಮೊಳು ॥ (24)

ಪೊಡವಿಯೊಡೆಯ ಬೀಳ್ಕೊಟ್ಟು ಎನ್ನನ್ನು ತಾ । ನಡರ್ದವರ ಕುಂಭಿ ಕುಂಭವ ॥
ಮಡದಿ ಪರವೆಗೂಡಿ ಪೋದನು ರಜತದ । ಪೊಡವಿಧರಕೆಯೆಂದನಾ ಮಂತ್ರಿ ॥ (25)

ಏವೇಳ್ವೆನರಸ ಬಂದುದಾವಾಗ ಸುರಿದುದು ಪೂವಿನ ಮಳೆ ಸುರತತಿಗೂಡಿ ॥
ಭೂವರ ಕೇಳ್ಸೌಂದರನೆಯ್ದಿದ ವಾಮ । ದೇವನಾ ರಜತಾದ್ರಿಯನಾಗ ॥ (26)

ಮಡದಿ ಕೇಳಾ ಮಾತು ಕೇಳ್ದು ತುಂಬುರನೊಳು । ನುಡಿದಾತನೆನ್ನನುಳದು ಪೋಗೆ ॥
ಬಿಡೆ ತನ್ನ ಪದವನೆನುತಲೆಣ್ಣೆಯೊಳ್ಕೊತ್ತದ । ಮುಡಿಗಟ್ಟ ಚೇರಮಹೀಪಾಲ ॥ (27)

ನೆರಪಿ ಬಲಿವ ತನ್ನ ಸಖ ಚೋಳ ಪಾಂಡ್ಯರು । ವೆರಸಿ ತಾ ಪೇಳ್ದಂ ಕೃತಿಯನಾಂತು ॥
ತೆರಳ್ದನಾಗಸವಟ್ಟೆಯೊಳು ವಾಯು ವೇಗದ । ತುರಗವನಡರಿ ತುಂಬುರಗೂಡಿ ॥ (28)

ರಾಜಿಪ ಪಕ್ಕರಿಕೆಯ ರುದ್ರಾಕ್ಷೆಯ । ವಾಜಿಗಳಮಲ ಭಸಿತದಿಂದೆ ॥
ತೇಜವಡೆದ ಸಾಮಜತತಿ ಸಹವಾಗಿ । ರಾಜನಂಬರದೊಳಗಡಿಯಿಟ್ಟ ॥ (29)

ಸುರಗಜವೊಂದಿ ನಶ್ವಗಳೇಳು ಖೇ । ಚರವೆಂಬರ್ಸೈಸೆ ಕಂಡವರಿಲ್ಲ ॥
ಕರಿಹಯ ತತಿನಡೆದುದು ಗಗನದೊಳ । ಚ್ಚರಿಯೆನೆ ಚೇರನೃಪನಕೂಡೆ ॥ (30)

ತಾರಗೆಗಳ ಪೂಗಳೆಂದು ಕೈಯಿಡುತಿಂದು । ಸೂರರ ಫಳವೆಂದು ಪಡು...ವೆಡೆಯ ।
ಆರವೆಯೆಂದು ಕಾರ್ಮುಗಿಲಸಲೆವ ಮತ್ತ । ವಾರಣಗೂಡಿ ನಡೆದ ಭೂಪ ॥ (31)

ಸುರಸಿಂಧು ಸಂಗವುವಾಗೆ ಕಡೆವಾಯು । ನೊರೆವೊಕ್ಕು ಪರಿದು ಬೆಳ್ವನಲಾಗೆ ॥
ಖುರಹತಿಯಿಂದೆ ತಾರಗೆ ಸೂಸೆ ನಡೆತರ್ಪ । ತುರಗನಿಚಯ ಸಹಿತಡಿಯಿಟ್ಟ ॥ (32)

ಸಾಮಜ ಶುಂಡಾಗ್ರದಿನಶ್ವನಾಸಿಕ । ಸೀಮೆಗಳಿಂದೆ ಕೇತನದಿಂದೆ ॥
ಚಾಮರದಿಂದೊಗೆದ ನೀಲಘನಾಂತದೊಳು ಮ । ಹಾಮೇಘನಡೆಯೆ ನಡೆದ ಭೂಪ ॥ (33)

ಗಗನದೊಳರ್ಕೇಂದು ಮಂಡಲಮಗಣಿತ । ಮೊಗೆದಂತೆ ಕಣ್ಗೆ ರಂಜಿಕವಾಗೆ ॥
ನೆಗಪಿದ ಮಣಿಮೌಕ್ತಿಕಮಯವಾದ ಸ । ತ್ತಿಗೆಗಳಡಿಯೆ ನೃಪನಡೆಯಿಟ್ಟ ॥ (34)

ವಾರಣಗಳ ಬೃಂಹಿತ ನಿಸ್ಸಾಳ ಭೇ । ರೀರವ ಕಹಳೆಗಳಿಂಚರ ॥
ವಾರುವಗಳ ಬಲ್ದನಿಯುಘೆ ಯೆಂಬ ಮ । ಹಾರವ ಮುಸುಕೆ ನಡೆದರಾಯ ॥ (35)

ಸಂದಣಿಸಿದ ಭೂಮಿಪಾಲರ ಮುಕುಟಗ । ಳೊಂದೊಂದನೊರಸೆ ರನ್ನದ ಪುಡಿ ॥
ಕೆಂದಳಿಯಂತೆ ಮುಸುಕೆ ನಡೆದನು ರಾಯ । ಅಂದದೆ ರಜತಪರ್ವತಕಾಗಿ ॥ (36)

ಬರುತೆ ಬರುತೆ ಕಂಡನು ದೂರದೊಳು ಸುರ । ಕರಿಯ ನಡೆಂವೋಪ ನಂಬಿಗು ॥
ಭರದಿಂದೆ ಪೊರ್ದಿ ಸಂದಣಿಸಿದ ಪುಳಕದೆ । ಚರಣತಳಕೆ ಮಣಿದನು ಪ್ರಿಯ ॥ (37)

ಧರಣೀಶ್ವರ ನಂಬಿಯ ನಾರಾಜಕು । ವರ ಚರಮಧರಣಿಪ ಸಾರ್ದ ॥
ನಾರಿ ಕೇಳ್ಸುಗುಣದ ಬೆಳೆ ಬೆಳೆವಂತೆ ಕ । ರಾರವಿಂದವ ಪಿಡಿದೊಡಗೊಂಡು ॥ (38)

ಮಿತ್ರನ ಕಾಣುತೆ ಸೌಂದರ ಮುಖಶತ । ಪತ್ರವಲರೆ ಚೇರನರನಾಥ ॥
ಸ್ತೋತ್ರಗೆಯ್ಯುತಲಾ ರಾಜಗೆ ಕರಶತ । ಪತ್ರವ ಮುಗಿದನಂಬುಜನೇತ್ರ ॥ (39)

ನಡೆದ ನರೇಂದ್ರ ಶಿಖಾಮಣಿ ಸೌಂದರ । ನೊಡನನುರಾಗ ದೊತ್ತರದಿಂದೆ ॥
ಪೊಡವಿಯೆರೆಯರಗ್ರೇಶಚೇರಮ ಮೃಡ । ಪದಗಳ ಕಾಣ್ಪತವಕದಿಂದೆ ॥ (40)

ಕಂಡರು ಕೈಲಾಸವ ಮುಕ್ತಿವನಿತೆಯ । ಮಂಡನ ಶಿವನ ನಿವೇಶವ ॥
ಚಂಡಪ್ರಭಸಂಕಾಶನ ಮಹಿಮ । ಮಂಡಲ ಪುದಿದ ಸುದೇಶವ ॥ (41)

ಹರನಂಗರೋಚಿ ನಂದಿಯ ಮೈಯ ದೀಧಿತಿ । ಗಿರಿಜೆಯ ನಗೆಗಂಗಳ ಕಾಂತಿ ॥
ತರುಣೇಂದುಕಿರಣ ಮಂದಾಕಿನಿಯಮಲಾಂಶು । ವೆರೆದೊಪ್ಪವಡೆದುದುರಜತಾದ್ರಿ ॥ (42)

ಪರುಷದ ಕೋಡುಗಲ್ಗಳ ದಿವ್ಯರತ್ನದ । ಮೊರಡಿಯ ಮೋಕ್ಷಮಾರ್ಗಗಳಾದ ॥
ದರಿಗಳ ಪೀಯೂಷದ ಸೋಣೆಗಳ ಸುರ । ತರುಗಳ ಗಾಡಿಯೊಪ್ಪಿದುದಲ್ಲಿ ॥ (43)

ಸಿದ್ಧರ ಸದನ ನಿರ್ಝರದಿಂದೆ ಶಿವಪದ । ಸಿದ್ಧತತಿಯ ಗಹ್ವರದಿಂದೆ ॥
ವೃದ್ಧ ತಪೋಧನರಾಶ್ರಯದಿಂದಭಿ । ವೃದ್ಧಿವಡೆದು ಮೆರೆದುದು ಶೈಲ ॥ (44)

ಸ್ಥೂಲವೆ ಭುವನಂಗಳ ಕೊಂಡೀಶ । ನಾಲಯ ಮೂರ್ಧವೆ ರವಿಯಿಂದೆ ॥
ಮೇಲಾದುದಾಗಿರಿಯಿರವ ಬಣ್ಣಿಪರೊಂದು । ನಾಲಗೆಗಳವಲ್ಲವೆಲೆಕಾಂತೆ ॥ (45)

ಈಪರಿಯೊಳಗೊಪ್ಪುವ ರೌಪ್ಯನಗದ ಸ । ಮೀಪಕೆ ನಂಬಿ ಚರಮರೆಯ್ದೆ ॥
ಓಪಳೆ ಕೇಳ್ದಂದಿರ್ವಂದುದು ಶಿವಗಣ । ವೆ ಪೇಳೆ ನಂದೀಶನೊಡಗೂಡಿ ॥ (46)

ಉರ್ವಶಿಯಧಿಕವರ್ತನದಿಂದೆ । ಗರುಡಗಾಂಧರ್ವರ ದಿವ್ಯಗಾನಗಳಿಂದೆ ॥
ನಿರ್ವಾಣದುಂದುಭಿ ರವದಿಂದೆ ಬಂದ ಸು । ಪರ್ವ ನಿಚಯ ಗೂಡಿ ನಂದೀಶ ॥ (47)

ಕನ್ನಡಿ ಕಳಸವಿಡಿದುರಂ ಜಿಪ । ಕನ್ನೆಯರಾ ರಾತಿಗಳನಾಂತ ॥
ಪನ್ನಗ ತತಿಯರು ಸಹವಾಗಿ ನಡೆತಂದ । ರುನ್ನತ ವಿಭವದೊಳಾ ನಂಬಿ ॥ (48)

ಇಳಿದರಾ ನಂಬಿ ಚೇರಮನೃಪರಿಭವಾಜಿ । ಗಳ ನಂದಿಕೇಶ್ವರ ಬರೆಕಂಡು ॥
ತುಳ್ಳಿಗೆಯ್ದರಡಿದಾವರೆಗಳಗತಿಭಕ್ತಿಯೊಳು । ನಾಂದಿದಂತರಂಗಿಗಳಾಗಿ ॥ (49)

ಒಡನೆ ನಮಿಸೆ ವೃಷಭೇಶ್ವರನಾದತಿ । ವಿನುತ ಕೈವಿಡಿದು ವಿನಯದಿಂದೆ ॥
ನಡೆಗರ ಮಿಗೆ ಕರದೊಯ್ದನು ಮೂವರ । ನೆಡೆಗೆ ನೃಪಾಲರನೆಲೆ ಕಾಂತೆ ॥ (50)

ಕಂಡರು ತಾಮಸರಾಜಸ ಸಾತ್ವಿಕ । ಮಂಡಿತ ಸಿಂಹವಿಷ್ಟರದಲ್ಲಿ ॥
ಮಂಡಿಸಿದನ ಭಾನು ಶತಕೋಟಿ ತೇಜನ । ಖಂಡೇಂದುಧರನ ಶಂಕರನನು ॥ (51)

ಎಡದೊಳಗಗಣಿತ ವಿಷ್ಣುಗಳಾ ಬಲ । ಗಡೆಯೊಳು ಕಮಲಜತತಿಯೊಪ್ಪೆ ॥
ನಡುವೆ ನಿರ್ಮಲಚಂದ್ರ ಕಾಂತ ತೇಜೋಮೂರ್ತಿ । ಮೃಡನೆಸೆದಿರ್ದ ನಂಬುಜಮುಖ ॥
(52)

ಪಿಂಗಡೆಯೊಳು ರುದ್ರಗಣಶಕ್ತಿ ಸಂಕುಳ । ಮುಂಗಡೆಯೊಳು ವೀರಕವಿವರ ॥
ಭೃಂಗೀಶ ಗುಹ ನಂದಿ ಮಹಾಕಾಳ ಮುಖ್ಯಗ । ಣಂಗಳೆಡೆಯೊಳೀಶ್ವರನಿರ್ದ ॥ (53)

ಮನುಗಳ ಗಾಂಧರ್ವರ ವಿದ್ಯಾಧರ । ರನಿಮಿಷರಪ್ಸರ ಪ್ರತತಿಯ ॥
ದನುಜರ ಕಿಂಪುರುಷರ ಗರುಡರಮಣಿ । ಜನದೆಡೆಯೊಳಗೀಶ್ವರನಿರ್ದ ॥ (54)

ಸುರಪತಿ ಶಿಖಿಯಮ ನಿರುತಿರತ್ನಾಧಿಪ । ಮರುತಯಕ್ಷೇಶ್ವರನೀಶಾನ್ಯ ॥
ಹರಿದಶ್ವಕವಿಗುರು ಮುಖ್ಯರಿರ್ದರು ಕಾಲ । ಹರನೋಲಗದೊಳಂಚೆ ನಡೆಯಳೆ ॥ (55)

ನುತಿಸುವಾಮ್ನಾಯ ಕೋಟಿಗಳಿಂದೆ ವರಮಂತ್ರ । ವಿತತಿಯಿಂದಖಿಲಶಾಸ್ತ್ರಗಳಿಂದೆ ॥
ಧೃತಿನುತಿ ರುದ್ರಕನ್ಯಾಳಿಯಿಂದಂಬಿಕಾ । ಪತಿಯ ಸಭಾ ಸದ್ಮವೆಸೆದುದು ॥ (56)

ಅಸಿತಾಂಗರುರು ಚಂಡ ಭೈರವ ಮೊದಲಾದ । ಪ್ರಸರದಿ ನಧಿಕಯೋಗಿಗಳಿಂದ ॥
ಎಸೆದುದು ವೇದಾಂತವೇದ್ಯಸಾಸ್ಥಾನ ಕೆ । ಳಸಿಯಳಿ ಕಣ್ಗೆ ಕೌತುಕವಾಗಿ ॥ (57)

ತೊರೆರೆಂಜಿಪ ತಲೆಯುನ ಫಣಿ ವಲಯುನ । ಪೆರನೇಸರು ರುಚಿಮುಕ್ಕಣ್ಣನ ॥
ಮಿರುಗುವ ಕಪ್ಪುರವಣ್ಣದ ಮೈಯುನ । ಕರೆಗೊರಲನ ಕಂಡರವರಾಗ ॥ (58)

ಅಸಮಾಕ್ಷನೆನಗ ಜಾನ್ವಿತವಕ್ಷನ ನ । ಸಮಾಸ್ಯನ ಲೋಕವಶ್ಯನ ॥
ದಶಭುಜದಭವನ ಭವನ ಶಿವನ ನೀ । ಕ್ಷಿಸಿ ಬೇಗಿ ಬೆರಗಾದರವರಾಗ ॥ (59)

ಪಾಡುವ ನವಕುಂಡಲಗಳ ತಲೆಯೊಲೆ । ದಾಡುವ ಮಣಿಭೂಷಣಂಗಳ ॥
ನೋಡುವ ಹಾರಂಗಳ ತಳೆದಭವನ । ಗಾಡಿಯು ಕಂಡು ವಂದಿಸಿದರು ॥ (60)

ಪಾಡಿದ ತಾಳವಿಡಿದು ನಂಬಿ ಮಿಗೆ ಕೊಂ । ಡಾಡಿದ ಚೇರಮ ನರನಾಥ ॥
ನೋಡಿದ ಭವಪಾದಾಂಬುಜಗಳ ನೆವೆ । ಯಾಡದೆ ಬೆರಗಂಗಳೊಂದಿ ॥ (61)

ನೋಡಿದ ಕರುಣದೊತ್ತರದಿಂದೆ ಶಿವ ಕೊಂ । ಡಾಡಿದ ನಜಹರಿಗಳ ಮುಂದೆ ॥
ಸಾಡೆರೆಯುರು ಚಿತ್ತ ಶುದ್ಧದಿ ತನಗೊಲ್ದು । ಮಾಡಿದ ಭಕುತಿಯ ನೊಲವಿಂದೆ ॥ (62)

ಕರುಣದೆ ಮೈಯ್ದಡವಿದ ಮುಂಡಾಡಿದ । ಪರಿರಂಭಿಸಿ ಪದಪಿನೊಳಾಗ ॥
ಕರವ ಪಿಡಿದು ಗದ್ದುಗೆಯೊತ್ತಿನೊಳಗೆ ಕು । ಳ್ಳಿರಿಸಿದನಾ ಭಕ್ತಮಣಿಗಳ ॥ (63)

ನಂಬಿಗೆ ಮುನ್ನಿನ ಪದವಿತ್ತೆ ನೊಲ್ದು ಕು । ರುಂಬ ತುಂಬುರ ಸಚಿವರಿಗಾಗ ॥
ತ್ರ್ಯಂಬಕ ಪ್ರಮಥಪದವನಿತ್ತು ಗಣ ನಿಕು । ರುಂಬದೊಳಿರಿಸಿದ ನೊಲವಿಂದೆ ॥ (64)

ಕನಕಲತೆಗೆ ಕಾಂತಿಮತಿಗೆ ಹಿಮಾಚಲ । ತನುಜಾತೆಮುನ್ನಿನ ಪದವಿತ್ತು ॥
ವಿನಯದೆ ರುದ್ರಕನ್ನೆಯರೊಳಗಿರಿಸಿದ । ಳನುಪಮ ಸೌಭಾಗ್ಯ ಪದವಿತ್ತು ॥ (65)

ಗಣನಾಯಕ ಪದವಿಯನಿತ್ತು ಶರಣಾ । ಗ್ರಣಿ ಚೇರಮಧರಣೀಶಗೆ ॥
ಅಣಿಮಾದಿ ಪದಸಿದ್ಧಿಯ ಕೊಟ್ಟು ಸಲಹಿದ । ಫಣಿಭೂಷಗುರುಶಾಂತಮಲ್ಲೇಶ ॥ (66)

ಶಿವಗೆ ತಾ ಪೇಳ್ದ ಕಾವ್ಯವ ಕೇಳಿಸುತೆ । ಪರ ಶಿವನ ಕೊಂಡಾಡುತೆ ಪಾಡುತೆ ॥
ಶಿವಸಾಮ್ರಾಜ್ಯಪದವ ಪಡೆದಿರ್ದ ಭೂ । ಧವ ತನ್ನ ಸೇನೆ ಸಹಿತಕಾಂತೆ ॥ (67)

ರಸವೆಂಬ ತಂಪ ನೆರ್ಥವೋದದೊಳಗೆ । ಬೆರೆಸಿ ಮೃದುಪದ ರಮ್ಯ ಗತಿಯಿಂದೆ ॥
ಎಸೆದುದು ಮಂದ ಮಾರುತನಂತೆ ವಿರುಪ ನೀ । ನುಸುರ್ದ ಸತ್ಕೃತಿಧರಾಲಂಕೃತಿ ॥ (68)

ಸಿಂಗರಿಗರಸಿರಿ ಸುಪ್ರತಾಪಿಗಳ ಮೀ । ರಾಂಗ ಕೋವಿದರರಿವಿನ ಪೂಜ್ಯ ॥
ಅಂಗಜ ಜನವಶ್ಯಮೆನೆ ಮೆರೆದುದು ಗುಣೋ । ತ್ತುಂಗ ವಿರುಪ ನಿನ್ನ ಸತ್ಕೃತಿ ॥ (69)

ಚಾರು ಚಂದ್ರಿಕೆಯ ಕರೆದ ಪೂರ್ಣ ಚಂದ್ರ ಚ । ಕೋರಿಗೊಳ್ಪಣೆಸ ನೀವಂದೆ ॥
ಈ ರಸ ಕಾವ್ಯವನೊರೆದೆನ್ನಭೀಷ್ಟವ । ನೋರಂತೆ ಸಲಿಸಿದೆ ವಿರುಪೇಂದ್ರ ॥ (70)

ಹರಭಕ್ತಿರಸತುಳುಂಕಲಿ ಮಹೇಶಾಗ ಮೋ । ತ್ಕರ ವಾರ್ಧಿ ಮೇರೆಯ ಮೀರಲಿ ॥
ಸುರುಚಿರಸುಫಲವಾಗಲಿ ಧಾತ್ರಿ ವಿರುಪ ನೀ । ನೊರೆದ ನಿರ್ಮಲಕಾವ್ಯ ಕಥನಕೆ ॥ (71)

ಚತುರಚಕೋರಿ ಜೀವಿಸೆ ಸೂರಿ ನೀಲಾಬ್ಜ । ವಿತತಿಗಿಂಬಾಗೆ ರಾಗೋತ್ಕರ ॥
ಕ್ಷಿತಿಪತಿ ಹೊನ್ನೊರೆ ವಿರುಪ ರಾಜೇಂದ್ರನ । ಕೃತಿಚಂದ್ರ ಬೆಳಗುಗೆ ಭುವನವ ॥ (72)

ಶಿವಗಣನಾಯಕ ಚೇರಮಭೂಪನ । ಸವಿಗಬ್ಬದೊಳಗಕ್ಕರವೊಂದ ॥
ಭುವನದೊಳಾರೋದಿದರವರಿಗೆ ಕಾಮ್ಯಾ । ರ್ಥವ ನೀವ ಶಾಂತ ಮಲ್ಲಿಕಾರ್ಜುನ ॥ (73)

ಗಿರಿಜೆಯು ಮೆಯ್ಗಂಪಿಗೆರಗುವ ತುಂಬಿಯಿಂ । ಚರವಶ್ವತರಗಾನ ರಸದೊಳು ॥
ಬೆರೆದು ಕಿವಿಗೆ ರಂಜಿಪೆ ತಲೆಯೊಲೆವ ಶಂ । ಕರಶಾಂತ ಮಲ್ಲಿಕಾರ್ಜುನ ಜಯ ॥ (74)

ಚರಮ ಶರಣಾಗ್ರಣಿಯಕೃತಿಯು : ಪಿಸ್ತಾರವ ಮಾಳ್ಪರಾದರಿಪರ ॥
ಶಾರ್ಕರುಳ್ಳನ್ನವರ ಮಲ್ಲಿಕಾರ್ಜುನ । ನೋರಂತೆ ಪಾಲಿಪನೊಲವಿಂದೆ ॥ (75)

(ಇಪ್ಪತ್ತೇಳನೆಯ ಸಂಧಿ ಸಮಾಪ್ತಂ.)

ಕಂದ ॥ ಈ ನವ ಕೃತಿಯೊಳ್ಸಾಸಿರ ।
ದೈನೂರೆಪ್ಪತ್ತು ಮತ್ತೆ ಮೇಲೈದು ಪದಂತಾ ॥
ಡಾಪೆನಿಪವು ವಿಜೆತಾರಿ ಮ ।
ಹೀನಾಥನ ವಿಪುಳ ವಿರುಪ ಭೂಮೀಶ್ವರನ ॥ (1)

ವೃತ್ತ ॥ ವಿದಿತಂ ಶಾಕಾಬ್ದದೊಳ್ಸಾಸಿರದೊದವಿದನಾ ನೂರನಾಲ್ವತ್ತರ ಗ್ರೈ ।
ಕದ ಸುಪ್ರಮಾಥಿ ಸಂವತ್ಸರದ ಘನಶುಭ ಶ್ಶುದ್ಧಪಂಚಮ್ಯುಷಃ ಕಾ ॥
ಲದೊಳುದ್ಯತ್ಕಾವ್ಯ ಬಂಧಂ ನೆಗಳ್ದುದು ವಿರುಪಕ್ಷ್ಮಾಪನಿಂ ಸತ್ಕಲಾಕೋ ।
ವಿದರಾಹಾಯೆಂದೆನಲ್ಕೀ ತ್ರಿಭುವನ ತಿಲಕಂ ನವ್ಯಮಾಚಂದ್ರಸೇವ್ಯಂ ॥

ರಾಕ್ಷಸ ಸಂವತ್ಸರದ ಮಾರ್ಗಶಿರ ಶು. 15 ರಲ್ಲು ಕಲ್ಯಾಣದಯ್ಯ ಅರಸೀವರಿಗೆ ಆಯು ರಾರೋಗ್ಯ ರೂಪು ಯೌವನ ಲಾವಣ್ಯ ಲಕ್ಷಣ ಸತ್ಕುಲಸಾಹಸ ವನಿತಾವಿಲಾಸ ಪುತ್ರಪೌತ್ರ ಬಂಧು ಬಾಂಧವ ಧನಧಾನ್ಯ ಬಲಪರಾಕ್ರಮವಿದ್ಯಾ ವಿತರಣ ನಯವಿನಯಾದಿ ಸಕಲಸೌಭಾಗ್ಯ ಸಮಗ್ರತೆ ಸಹಿತವಾಗಿ ಸಪ್ತ ಸಮುದ್ರ ಮುದ್ರಿತ ವಸುಧಾಧಿಪತ್ಯ ಸಂತೋಷ ಸಂಜನಿತ ಸುಖಮಂ ಕ್ಷೇಮದಿಂದಿಹದೊಳನುಭವಿಸಿ ಮೇಲೆ ಸರ್ವೋತ್ಕರ್ಷವಾದ ಶ್ರೀ ಗುರು ಶಂಭುಲಿಂಗ ದೊಡಗೂಡಿ, ಸರ್ವಜ್ಞತ್ವ ಸರ್ವಕರ್ತೃತ್ವದಿಂ ಸತ್ಯಾನಂದ ಸ್ವರೂಪರಾಗಿ ಯಿರ ಬೇಕೆಂದು ಕಣಿಯಕಲ್ಲು ಅಪ್ಪಯ್ಯನವರ ಕುಮಾರ ಕೃಷ್ಣಯ್ಯ ಉಪಾಧ್ಯರು ತಿಭುವನ ತಿಲಕವನ್ನು ಬರೆದುಕೊಟ್ಟರು (ನು) ಜಯಮಂಗಳ ಮಹಾ ಶ್ರೀ ಶ್ರೀ ಶ್ರೀ.

LIST OF AGENTS FOR THE MADRAS GOVERNMENT PUBLICATIONS.

IN CITY.

Account Test Institute, Egmore, Madras.
City Book Company, Post Box No. 605, Madras-4.
Higginbothams, Madras.
P. Varadachari & Co., Madras.
The South India Saiva Siddhantha Works Publishing Society, Limited, Madras.
Venkatarama & Co., Madras.
V. Perumal Chetty and Sons, Madras.
V. Ramaswamy Sastrulu & Sons, Madras.
Ottrumai Office, Madras-17.
M. Doraiswamy Mudaliar & Co., Madras.
Free India Co-operators' Agency, Madras-4.
South India Traders, Royapetta, Madras.

IN MUFASSAL.

M. C. Krishniah Chetty, Madanapalle, Chittoor district.
The Educational Supplies Company, R.S. Puram, Coimbatore district.
D. Sreekrishnamurthy, Ongole, Guntur district.
M. Seshachalam & Co., Masulipatnam, Krishna district.
Triveni Publishers, Masulipatnam, Krishna district.
Hindustan Diary Publishers, Vijayavada, Krishna district.
The Commercial Links, Governorpet, Vijayavada, Krishna district.
The Manager, Gramodharana, Buckinghampet, Vijayavada, Krishna district.
E. M. Gopalakrishna Kone, Madurai, Madurai district.
K. P. Ahmed Kunhi & Bros., Cannanore, Malabar district.
Kerala Polytechnic Co-operative Society, Ltd., Kozhikode-5 (South Malabar).
P. K. Brothers, Kozhikode (South Malabar).
V. D. Moorthy, Nellore, Nellore district.
A. Venkatasubban, Vellore, North Arcot district.
Times Modern Mart, Salem, Salem district.
K. Bhoja Rao & Co., Mangalore, South Kanara district.
U. R. Shenoy & Sons, Mangalore, South Kanara district.
Srinivas & Co., Kumbakonam, Tanjore district.
P. N. Swaminatha Sivan & Co., Pudukkottai, Tiruchirappalli district.
S. Krishnaswami & Co., Tiruchirappalli, Tiruchirappalli, district.
Palaniappa Brothers, Teppakulam, Tiruchirappalli, Tiruchirappalli district.
V. S. Vasan & Co., Tirunelveli, Tirunelveli district.
S. R. Subramania Pillai, Tirunelveli, Tirunelveli district.
Arivu Noolagam, Market Street, Ootacamund.

IN OTHER STATES.

Bhanvarilal Jain, Motikatra, Agra.
Sree Abhirava Vaidya Sharada Book Depot, Bangalore-2.
The Bangalore Book Centre, Bangalore-2.
The Standard Book Depot, Bangalore-2.
Hari Govind Book Stall, Baroda.
New Book Company, Bombay.
The Popular Book Depot, Lamington Road, Bombay-7.
The Book Company, Calcutta.
Thacker Spink & Co., Calcutta.
Bharat Stores, Ernakulam.
Charotar Book Stall, Anand (Gujerat).
Osmania University Students' Co-operative Book Depot, Lallaguda P.O., Hyderabad (Deccan).
S. [illegible] Jaganathan, Nagercoil.
S. V. Kamat, Kumta (North Kanara).
Jain Book Agency, New Delhi.
International Book Service, Poona.
International Book House, Trivandrum.